prajavani.net prajavani | ಮಂಗಳವಾರ, ಡಿಸೆಂಬರ್ 2, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 332 | ಪುಟ 14 | www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಲೆವ್ರೊನ್‌ಗೆ ಗೌರವ

ಅಮೆರಿಕದ ಓಟಗಾರ್ತಿ ಸಿಡ್ನಿ ಮೆಕ್‌ಲಾಫ್ಲಿನ್ ಲೆವ್ರೊನ್ ಅವರು ವಿಶ್ವ ಅಥ್ಲೆಟಿಕ್ಸ್ ನೀಡುವ 2025ನೇ ಸಾಲಿನ 'ವರ್ಷದ ಮಹಿಳಾ ಅಥ್ಲೀಟ್' ಗೌರವಕ್ಕೆ ಪಾತ್ರರಾಗಿದ್ದಾರೆ

₹92 ಕೋಟಿ ಸಂಗ್ರಹ

ಶಬರಿಮಲೆ ಅಯ್ಯಪ್ಪ ದೇಗುಲದಲ್ಲಿ ಮಂಡಲ ಮಕರವಿಳಕ್ಕು ಋತುವಿನ ಮೊದಲ 15 ದಿನಗಳಲ್ಲೇ ₹92 ಕೋಟಿ ಸಂಗ್ರಹವಾಗಿದೆ

ಸೆನ್ಸೆಕ್ಸ್ 85,641 | ನಿಫ್ಟಿ 26,175 | $/₹ 89.53 | ಚಿನ್ನ (Std. 10g) ₹1,34,400 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,89,500 (ಬೆಂಗಳೂರು)

ಮೊಬೈಲ್‌ನಲ್ಲಿ 'ಸಂಚಾರ ಸಾಥಿ' ಆ್ಯಪ್ ಅಳವಡಿಕೆ ಕಡ್ಡಾಯ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಅನ್ಯರ ಆಧಾರ್ ಕಾರ್ಡ್ ಬಳಸಿ ಅಕ್ರಮವಾಗಿ ಸಿಮ್ ಖರೀದಿಸುವುದು, ಮೊಬೈಲ್ ಕಳ್ಳತನ ಆಗುವುದು, ಪ್ರತಿ ಮೊಬೈಲ್‌ಗೂ ನೀಡಲಾಗುವ ಅಂತರ-ರಾಷ್ಟ್ರೀಯ ಮೊಬೈಲ್ ಗುರುತಿನ ಸಂಖ್ಯೆ (ಐಎಂಇಐ) ನಕಲು ಮಾಡುವುದು ಸೇರಿದಂತೆ ಹಲವು ವಂಚನೆಗಳಿಂದ ಜನರನ್ನು ರಕ್ಷಿಸುವ ಸಲುವಾಗಿ ಎಲ್ಲ ಮೊಬೈಲ್‌ಗಳಲ್ಲಿಯೂ 'ಸಂಚಾರ ಸಾಥಿ' ಆ್ಯಪ್ ಅಳವಡಿಕೆ (ಇನ್‌ಸ್ಟಾಲ್) ಮಾಡುವುದನ್ನು ಕೇಂದ್ರ ಸರ್ಕಾರ ಕಡ್ಡಾಯ ಮಾಡಿದೆ.

ಈ ಸಂಬಂಧ ಭಾರತದ ಎಲ್ಲ ಮೊಬೈಲ್ ತಯಾರಕರಿಗೆ, ಮೊಬೈಲ್ ಸೆಟ್‌ಗಳನ್ನು ಆಮದು ಮಾಡಿಕೊಳ್ಳುವ ಕಂಪನಿಗಳಿಗೆ ದೂರಸಂಪರ್ಕ ಸಚಿವಾಲಯವು ನ.28ರಂದು ಕೆಲವು ನಿರ್ದೇಶನ-ಗಳನ್ನು ನೀಡಿ ಆದೇಶ ಹೊರಡಿಸಿದೆ.

'ಭಾರತದಲ್ಲಿ ತಯಾರಾಗುವ ಅಥವಾ ಆಮದು ಮಾಡಿಕೊಳ್ಳಲಾಗುವ ಎಲ್ಲ ಮೊಬೈಲ್ ಗಳಲ್ಲಿಯೂ 'ಸಂಚಾರ ಸಾಥಿ' ಆ್ಯಪ್ ಅನ್ನು ಮೊದಲೇ ಇನ್‌ಸ್ಟಾಲ್ ಮಾಡಿರಬೇಕು. ಈಗಾಗಲೇ ಮಾರುಕಟ್ಟೆ-ಯಲ್ಲಿರುವ (ಇನ್ನೂ ಖರೀದಿಯಾಗದ) ಮೊಬೈಲ್‌ಗಳಲ್ಲಿ ಮೊದಲ ಸಾಫ್ಟ್‌ವೇರ್ ಅಪ್‌ಡೇಟ್ ವೇಳೆ ಈ ಆ್ಯಪ್ ಅನ್ನು ಬಳಕೆದಾರರಿಗೆ ನೀಡಬೇಕು' ಎಂದು ಸಚಿವಾಲಯ ಹೇಳಿದೆ.

'ಈ ಆ್ಯಪ್ ಅನ್ನು ಮೊದಲೇ 'ಇನ್‌ಸ್ಟಾಲ್' ಮಾಡಿರುವ ಹೊಸ ಮೊಬೈಲ್‌ಗಳನ್ನು 'ಸೆಟ್ಟಿಂಗ್' ಮಾಡಿಕೊಳ್ಳುವಾಗಲೇ ಬಳಕೆದಾರರಿಗೆ ಈ ಆ್ಯಪ್ ಇರುವುದು ಸುಲಭವಾಗಿ ಕಾಣುವಂತೆ ಮಾಡಬೇಕು. ಈ ಆ್ಯಪ್‌ನ ಕಾರ್ಯಾಚರಣೆಯನ್ನು ಡಿಸೇಬಲ್ ಮಾಡುವುದಾಗಲೀ ಅಥವಾ ನಿರ್ಬಂಧಿಸುವುದಾಗಲೀ ಮಾಡುವಂತಿಲ್ಲ' ಎಂದು ಆದೇಶದಲ್ಲಿ ಹೇಳಲಾಗಿದೆ.

'ತಯಾರಿಕಾ ಕಂಪನಿಗಳು ಮತ್ತು ಮೊಬೈಲ್‌ಗಳನ್ನು ಆಮದು ಮಾಡಿಕೊಳ್ಳುವ ಕಂಪನಿಗಳು ಆದೇಶ ಪ್ರಕಟವಾದ 120 ದಿನಗಳ ಒಳಗೆ ಆ್ಯಪ್ ಇನ್‌ಸ್ಟಾಲ್ ಆದ ಕುರಿತು ವರದಿ ನೀಡಬೇಕು' ಎಂದೂ ಹೇಳಿದೆ.

ಆದೇಶ ಪಾಲಿಸದಿದ್ದರೆ ಕ್ರಮ: ಈ ಆದೇಶವನ್ನು ಪಾಲಿಸದಿದ್ದರೆ ದೂರಸಂಪರ್ಕ ಕಾಯ್ದೆ –2023 ಮತ್ತು ದೂರಸಂಪರ್ಕ ಸೈಬರ್ ಭದ್ರತಾ ನಿಯಮಗಳು – 2024 ಮತ್ತು ಇತರೆ ಕಾಯ್ದೆಗಳ ಅನ್ವಯ ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಕೇಂದ್ರ ಸರ್ಕಾರ ಎಚ್ಚರಿಸಿದೆ.

ಏನಿದು 'ಸಂಚಾರ ಸಾಥಿ'?

2023ರಲ್ಲಿ 'ಸಂಚಾರ ಸಾಥಿ' ಆ್ಯಪ್ ಅನ್ನು ಬಿಡುಗಡೆ ಮಾಡಲಾಗಿದೆ. ಮೊಬೈಲ್ ಕಳ್ಳತನದ ಮೂಲಕವೊ ಅಥವಾ ಡುಪ್ಲಿಕೇಟ್ ಸಿಮ್ ಬಳಸಿಕೊಳ್ಳುವ ಮೂಲಕವೊ, ಐಎಂಇಐ ಸಂಖ್ಯೆ ನಕಲು ಮಾಡಿಕೊಂಡು ಎಸಗುವ ವಂಚನೆಯನ್ನು ಪತ್ತೆ ಮಾಡಲು ಈ ಆ್ಯಪ್ ಸಹಕಾರಿಯಾಗಲಿದೆ. 'ಸಂಚಾರ ಸಾಥಿ' ಎಂಬ ವೆಬ್‌ಸೈಟ್ ಕೂಡ ಇದೆ.

- ಕಳ್ಳತನವಾದ ಮೊಬೈಲ್‌ನ ಐಎಂಇಐ ಸಂಖ್ಯೆ ಬಳಸಿಕೊಂಡು ಆ ಮೊಬೈಲ್ ಅನ್ನು ಈ ಆ್ಯಪ್ ಮೂಲಕ ನಿಷ್ಕ್ರಿಯಗೊಳಿಸಬಹುದು
- ಐಎಂಇಐ ಸಂಖ್ಯೆಯನ್ನು ನಕಲು ಮಾಡಿಕೊಂಡು, ಬೇರೆ ದೇಶದಲ್ಲಿ ಕೂತು ಸೈಬರ್ ಅಪರಾಧ, ಬ್ಯಾಂಕ್ ಖಾತೆ ಬಳಕೆ ಸೇರಿದಂತೆ ಹಲವು ಅಕ್ರಮ ಎಸಗಲಾಗುತ್ತದೆ. ಮೊಬೈಲ್ ಖರೀದಿಸುವವರು, ಖರೀದಿಗೂ ಮುನ್ನ ಈ ಆ್ಯಪ್ ಮೂಲಕ ತಾವು ಖರೀದಿಸುವ ಐಎಂಇಐ ಸಂಖ್ಯೆಯನ್ನು ಪರಿಶೀಲಿಸಿಕೊಳ್ಳಬಹುದು
- ತಮ್ಮ ಆಧಾರ್ ಕಾರ್ಡ್ ಅಥವಾ ಪಾಸ್‌ಪೋರ್ಟ್ ಬಳಸಿಕೊಂಡು ಅಕ್ರಮವಾಗಿ ಸಿಮ್ ಖರೀದಿ ಮಾಡಲಾಗಿದ್ದರೆ, ಈ ಆ್ಯಪ್ ಮೂಲಕ ಅಂಥ ಅಕ್ರಮ ಸಂಪರ್ಕವನ್ನು ನಿಷ್ಕ್ರಿಯ ಮಾಡಬಹುದು

ಸಿಬಿಐ ತನಿಖೆಗೆ ಸೈಬರ್ ವಂಚನೆ

ಡಿಜಿಟಲ್ ಅರೆಸ್ಟ್: ತನಿಖೆಗೆ ಒಪ್ಪಿಗೆ ನೀಡಲು ಕರ್ನಾಟಕ ಸೇರಿ ವಿವಿಧ ರಾಜ್ಯಗಳಿಗೆ 'ಸುಪ್ರೀಂ' ತಾಕೀತು

ನವದೆಹಲಿ (ಪಿಟಿಐ): ದೇಶದಾದ್ಯಂತ ದಾಖಲಾಗಿರುವ 'ಡಿಜಿಟಲ್ ಅರೆಸ್ಟ್' ವಂಚನೆ ಪ್ರಕರಣಗಳ ತನಿಖೆಯನ್ನು ಒಟ್ಟುಗೂಡಿಸಿ ನಡೆಸಬೇಕೆಂದು ಸಿಬಿಐಗೆ ನಿರ್ದೇಶನ ನೀಡಿರುವ ಸುಪ್ರೀಂ ಕೋರ್ಟ್, ಸೈಬರ್ ವಂಚನೆಗೆ ಬಳಸಲಾದ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲು ಎ.ಐ ತಂತ್ರಜ್ಞಾನ ಏಕೆ ಬಳಸುತ್ತಿಲ್ಲ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅನ್ನು ಪ್ರಶ್ನಿಸಿದೆ.

ಟೆಲಿಕಾಂ ಸೇವಾ ಸಂಸ್ಥೆಗಳು ಯಾವುದೇ ಒಬ್ಬ ವ್ಯಕ್ತಿ ಅಥವಾ ಒಂದು ಸಂಸ್ಥೆಗೆ ಹಲವು ಸಿಮ್‌ಗಳನ್ನು ನೀಡದಂತೆ ನಿಗಾ ವಹಿಸಬೇಕು ಎಂದು ಟೆಲಿಕಾಂ ಸಚಿವಾಲಯಕ್ಕೂ ಕೋರ್ಟ್ ನಿರ್ದೇಶನ ನೀಡಿದೆ.

ಪೊಲೀಸ್, ಜಾರಿ ನಿರ್ದೇಶನಾಲಯ ಇಲ್ಲವೆ ನ್ಯಾಯಾಲಯದ ಅಧಿಕಾರಿಗಳ ಸೋಗಿನಲ್ಲಿ ಆಡಿಯೊ ಅಥವಾ ವಿಡಿಯೊ ಕರೆಗಳ ಮೂಲಕ ಜನಸಾಮಾನ್ಯರನ್ನು ವಂಚಿಸುತ್ತಿರುವ ಸೈಬರ್ ವಂಚನೆ ಪ್ರವೃತ್ತಿ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿದೆ. 'ಡಿಜಿಟಲ್ ಅರೆಸ್ಟ್' ಮೂಲಕ ಈ ರೀತಿ ಅಮಾಯಕರು ವಂಚನೆಗೆ ಒಳಗಾಗುತ್ತಿರುವ ಕುರಿತು ಕೋರ್ಟ್ ಕಳವಳ ವ್ಯಕ್ತಪಡಿಸಿದೆ.

ಹರಿಯಾಣದ ವೃದ್ಧ ದಂಪತಿ ತಾವು 'ಡಿಜಿಟಲ್ ಅರೆಸ್ಟ್'ನಲ್ಲಿ ₹1.5 ಕೋಟಿ ಕಳೆದುಕೊಂಡಿರುವ ಬಗ್ಗೆ ನಿಕಟಪೂರ್ವ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರಿಗೆ ಪತ್ರ ಬರೆದಿದ್ದರು. ಇದನ್ನು ಆಧರಿಸಿ ಕೋರ್ಟ್ ಸ್ವಯಂಪ್ರೇರಿತವಾಗಿ ವಿಚಾರಣೆ ನಡೆಸುತ್ತಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿ ಜಾಯ್‌ಮಾಲ್ಯಾ ಬಾಗ್ಚಿ ಅವರಿದ್ದ ಪೀಠವು, 'ಬಿಜೆಪಿಯೇತರ ಪಕ್ಷಗಳ ಆಡಳಿತವಿರುವ ಪಶ್ಚಿಮ ಬಂಗಾಳ, ತಮಿಳುನಾಡು, ಕರ್ನಾಟಕ, ತೆಲಂಗಾಣ ಸೇರಿದಂತೆ ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ತಮ್ಮ ವ್ಯಾಪ್ತಿಯ ಇಂತಹ ಪ್ರಕರಣಗಳನ್ನು ಸಿಬಿಐ ತನಿಖೆಗೆ ಒಪ್ಪಿಗೆ ನೀಡಬೇಕು' ಎಂದು ಸೂಚಿಸಿದೆ.

ಸೈಬರ್ ವಂಚನೆಗೆ ಬಳಸಿದ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲು ಎ.ಐ ಹಾಗೂ ಮಷಿನ್ ಲರ್ನಿಂಗ್ ತಂತ್ರಜ್ಞಾನವನ್ನು ಏಕೆ ಬಳಸುತ್ತಿರಲಿಲ್ಲ ಎಂಬ ವಿಷಯವಾಗಿ ಉತ್ತರ ನೀಡುವಂತೆಯೂ ಆರ್‌ಬಿಐಗೆ ನೋಟಿಸ್ ನೀಡಿದೆ.

ಹಿರಿಯ ನಾಗರಿಕರು ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಸೈಬರ್ ವಂಚಕರು ದೋಚುತ್ತಿರುವುದನ್ನು ಗಮನಿಸಿರುವುದಾಗಿ ಕೋರ್ಟ್ ಹೇಳಿದೆ. ಇಂತಹ ಪ್ರಕರಣಗಳಲ್ಲಿ ಸಿಬಿಐಗೆ ಅಗತ್ಯ ಮಾಹಿತಿ ಹಾಗೂ ಸಹಕಾರ ನೀಡುವಂತೆ ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆಗೆ ಸೂಚನೆ ನೀಡಿದೆ.

'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ದೇಶದ ಜನರನ್ನು ಬೆದರಿಸಿ ₹3,000 ಕೋಟಿಗೂ ಹೆಚ್ಚು ಮೊತ್ತವನ್ನು ಸುಲಿಗೆ ಮಾಡಲಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ಮತ್ತು ಸಿಬಿಐ ನವೆಂಬರ್ 3ರಂದು ಸುಪ್ರೀಂ ಕೋರ್ಟ್‌ಗೆ ತಿಳಿಸಿದ್ದವು. 'ಈ ಪಿಡುಗು ನಿಯಂತ್ರಣಕ್ಕೆ ಕಠಿಣ ಕ್ರಮ ಅಗತ್ಯ' ಎಂದು ಕೋರ್ಟ್ ಹೇಳಿತ್ತು.

ಎಲ್ಲ ಕೇಂದ್ರಾಡಳಿತ ಪ್ರದೇಶಗಳು ಮತ್ತು ರಾಜ್ಯಗಳು ತಮ್ಮ ವ್ಯಾಪ್ತಿಯಲ್ಲಿ ನಡೆದ ಇಂಥ ಪ್ರಕರಣಗಳ ಮಾಹಿತಿ ನೀಡುವಂತೆ ಸುಪ್ರೀಂ ಕೋರ್ಟ್ ಅ.27ರಂದು ನಡೆದ ವಿಚಾರಣೆ ವೇಳೆ ಸೂಚನೆ ನೀಡಿತ್ತು. ಇದರಂತೆ, ಕೇಂದ್ರ ಗೃಹ ಸಚಿವಾಲಯ ಮತ್ತು ಸಿಬಿಐ ಮುಚ್ಚಿದ ಲಕೋಟೆಯಲ್ಲಿ ವರದಿ ನೀಡಿದ್ದವು.

ಸಮನ್ವಯ ಕೇಂದ್ರ ಸ್ಥಾಪಿಸಲು ಆದೇಶ

ಸಿಬಿಐ ಜೊತೆಗೆ ಉತ್ತಮ ಸಮನ್ವಯ ಖಾತರಿಪಡಿಸಿಕೊಳ್ಳಲು ಎಲ್ಲ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಪ್ರಾದೇಶಿಕ ಅಥವಾ ರಾಜ್ಯ ಸೈಬರ್ ಅಪರಾಧ ಸಮನ್ವಯ ಕೇಂದ್ರಗಳನ್ನು ಸ್ಥಾಪಿಸಬೇಕು ಎಂದು ಸುಪ್ರೀಂ ಕೋರ್ಟ್ ತನ್ನ ಆದೇಶದಲ್ಲಿ ತಿಳಿಸಿದೆ.

'ಸೈಬರ್ ವಂಚನೆ ಪ್ರಕರಣಗಳನ್ನು ಪರಿಣಾಮಕಾರಿಯಾಗಿ ನಿಗ್ರಹಿಸುವ ನಿಟ್ಟಿನಲ್ಲಿ ಗೃಹ ಸಚಿವಾಲಯ, ಟೆಲಿಕಾಂ ಸಚಿವಾಲಯ, ಹಣಕಾಸು ಸಚಿವಾಲಯ, ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಇಲಾಖೆ ಸೇರಿದಂತೆ ಹಲವು ಇಲಾಖೆಗಳ ಅಭಿಪ್ರಾಯಗಳನ್ನು ತನ್ನ ಮುಂದೆ ಇಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವಂತೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಸೂಚಿಸಿದೆ. ಜನರನ್ನು ವಂಚಿಸಲು ಬಳಸುವ ಬ್ಯಾಂಕ್ ಖಾತೆಗಳನ್ನು ಎಲ್ಲ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಸಿಬಿಐ ಜೊತೆ ಸೇರಿಕೊಂಡು ಸ್ಥಗಿತಗೊಳಿಸಲು ಸ್ವತಂತ್ರವಾಗಿವೆ' ಎಂದು ಆದೇಶದಲ್ಲಿ ಸ್ಪಷ್ಟಪಡಿಸಿದೆ.

ಸಿಬಿಐಗೆ ಕೋರ್ಟ್ ಹೇಳಿದ್ದೇನು?

- ನಾಗರಿಕರು ವಂಚನೆಗೆ ಒಳಗಾಗುವುದನ್ನು ತಪ್ಪಿಸುವುದಕ್ಕಾಗಿ ವಂಚಕರ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲು ಪೊಲೀಸ್ ಇಲಾಖೆ ಮತ್ತು ಸಿಬಿಐಗೆ ಮುಕ್ತ ಅವಕಾಶವಿದೆ
- ಶಂಕಾಸ್ಪದ ವಹಿವಾಟು ನಡೆಸುವ ಬ್ಯಾಂಕ್ ಖಾತೆಗಳನ್ನು ನಿರ್ವಹಿಸಲು ವಂಚಕರ ಜೊತೆ ಕೈ ಜೋಡಿಸಿರುವ ಬ್ಯಾಂಕ್ ಅಧಿಕಾರಿಗಳ ಬಗ್ಗೆ ತನಿಖೆ ನಡೆಸಬೇಕು
- ಹೊರದೇಶಗಳಿಂದ ಕಾರ್ಯನಿರ್ವಹಿಸುತ್ತಿರುವ ಸೈಬರ್ ವಂಚಕರನ್ನು ಪತ್ತೆಹಚ್ಚಲು ಇಂಟರ್‌ಪೋಲ್ ನೆರವು ಪಡೆಯಬೇಕು
- ತನಿಖಾ ತಂಡದ ಸದಸ್ಯರನ್ನಾಗಿ ರಾಜ್ಯಗಳ ಯಾವುದೇ ಅಧಿಕಾರಿ ಅಥವಾ ತಂತ್ರಜ್ಞಾನ ಪರಿಣತರನ್ನು ಬಳಸಿಕೊಳ್ಳಬಹುದು
- ಪಶ್ಚಿಮ ಬಂಗಾಳ, ತಮಿಳುನಾಡು, ಕರ್ನಾಟಕ, ತೆಲಂಗಾಣ ರಾಜ್ಯಗಳೂ ತಮ್ಮಲ್ಲಿ ದಾಖಲಾದ ಪ್ರಕರಣಗಳನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು

17.82 ಲಕ್ಷ ಸೈಬರ್ ಅಪರಾಧ ಕುರಿತು ದಾಖಲಾದ ದೂರಿನ ಸಂಖ್ಯೆ

9.45 ಲಕ್ಷ ವಂಚನೆಗೆ ಬಳಸಿದ್ದ, ದೂರಿನ ಬಳಿಕ ರದ್ದು ಮಾಡಲಾದ ಸಿಮ್ ಕಾರ್ಡ್‌ಗಳ ಸಂಖ್ಯೆ



ಪ್ರತಿಭಟನೆ

ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಬೇಡಿಕೆಗಳನ್ನು ಈಡೇರಿಸುವಂತೆ ಅಗ್ರಹಿಸಿ ಅಂಗನವಾಡಿ, ಆಶಾ ಹಾಗೂ ಬಿಸಿಯೂಟ ನೌಕರರು ಸಿಐಟಿಯು ನೇತೃತ್ವದಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಧರಣಿಯನ್ನು ಸೋಮವಾರ ಆರಂಭಿಸಿದರು

ಇಂದಿರಾ ಕಿಟ್‌ಗೆ ಕ್ಯೂಆರ್ ಕೋಡ್

ಆಹಾರ ಕಿಟ್ ಯೋಜನೆ– ಅಧಿಕಾರಿಗಳಿಗೆ ಸಿ.ಎಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲ ನ್ಯಾಯಬೆಲೆ ಅಂಗಡಿಗಳಲ್ಲಿಯೂ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಬಹುದಾದ ತಂತ್ರಾಂಶ ಅಳವಡಿಸಿ, ಅದರ ಆಧಾರದಲ್ಲಿ ಪಡಿತರ ಚೀಟಿದಾರರಿಗೆ 'ಇಂದಿರಾ' ಆಹಾರ ಕಿಟ್ ವಿತರಿಸಲು ಕ್ರಮ ತೆಗೆದುಕೊಳ್ಳ-ಬೇಕು' ಎಂದು ಆಹಾರ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿ 5 ಕಿಲೋ ಅಕ್ಕಿಯ ಬದಲು 'ಇಂದಿರಾ' (ಐಎನ್‌ಡಿಐಆರ್‌ಎ – ಇಂಟೆಗ್ರೇಟೆಡ್ ನ್ಯೂಟ್ರಿಷಿಯನ್ ಆ್ಯಂಡ್ ಡಯೆಟರಿ ಇನಿಷಿಯೇಟಿವ್ ಫಾರ್ ರಿವೈಟಲೈಷಿಂಗ್ ಅನ್ನಭಾಗ್ಯ ಬೆನಿಫಿಷರೀಸ್– ಅನ್ನಭಾಗ್ಯ ಫಲಾನುಭವಿಗಳನ್ನು ಪುನರುಜ್ಜೀವನಗೊಳಿಸುವ ಸಮಗ್ರ ಪೋಷಣೆ ಮತ್ತು ಆಹಾರ ಉಪಕ್ರಮ) ಆಹಾರ ಕಿಟ್ ಯೋಜನೆಯ ಅನುಷ್ಠಾನದ ಕುರಿತು ಮುಖ್ಯಮಂತ್ರಿ ಸೋಮವಾರ ಸಭೆ ನಡೆಸಿದರು.

'ಕಿಟ್‌ನಲ್ಲಿ ಉತ್ತಮ ಗುಣಮಟ್ಟದ ಆಹಾರ ಸಾಮಗ್ರಿಗಳನ್ನು ಪೂರೈಸಬೇಕು. ಗುಣಮಟ್ಟದಲ್ಲಿ ರಾಜಿ ಆಗಬಾರದು. ಅಳತೆಯಲ್ಲಿ ಹೆಚ್ಚು ಕಡಿಮೆ ಆಗದಂತೆಯೂ ಎಚ್ಚರಿಕೆ ವಹಿಸಬೇಕು' ಎಂದು ಹೇಳಿದರು.

▶10

ಪ್ರತಿ ತಿಂಗಳು ₹466 ಕೋಟಿ ವೆಚ್ಚ

'ಇಂದಿರಾ' ಕಿಟ್‌ನಲ್ಲಿ ಕುಟುಂಬದ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಐದು ಕಿಲೋ ಅಕ್ಕಿಯ ಬದಲು ತೊಗರಿ ಬೇಳೆ, ಸೂರ್ಯಕಾಂತಿ ಎಣ್ಣೆ, ಸಕ್ಕರೆ, ಉಪ್ಪು ನೀಡಲಾಗುವುದು. ಯೋಜನೆಗೆ ಪ್ರತಿ ತಿಂಗಳು ಒಟ್ಟು 18,628 ಟನ್ ತೊಗರಿ ಬೇಳೆ, ತಲಾ 12,419 ಟನ್ ಸೂರ್ಯಕಾಂತಿ ಎಣ್ಣೆ, ಸಕ್ಕರೆ ಮತ್ತು ಉಪ್ಪು ಬೇಕಾಗಬಹುದು ಎಂದು ಅಂದಾಜಿಸಲಾಗಿದೆ.

ಪ್ರತಿ ತಿಂಗಳು ಪ್ರಸ್ತುತ 1.25 ಕೋಟಿ ಇಂದಿರಾ ಆಹಾರ ಕಿಟ್ ಅಗತ್ಯವಿದೆ. ಇದಕ್ಕೆ ಪ್ರತಿ ತಿಂಗಳು ₹466 ಕೋಟಿ ವೆಚ್ಚ ತಗಲುಬಹುದು ಎಂದು ಇಲಾಖೆ ಅಂದಾಜು ಮಾಡಿದೆ.

'ಭೀಮ ನಡೆ' ಯಶಸ್ವಿ, ಶಾಂತಿಯುತ

ಪ್ರಜಾವಾಣಿ ವಾರ್ತೆ

ಚಿತ್ತಾಪುರ (ಕಲಬುರಗಿ ಜಿಲ್ಲೆ): ಸಂವಿಧಾನ ಸಂರಕ್ಷಣಾ ಸಮಿತಿ ನೇತೃತ್ವದಲ್ಲಿ ಸೋಮವಾರ ಇಲ್ಲಿ ನಡೆದ 'ಭೀಮನಡೆ' ಮೆರವಣಿಗೆ ಹಾಗೂ ಸಂವಿಧಾನ ಸಮಾವೇಶ ಶಾಂತಿಯುತವಾಗಿ ಜರುಗಿತು.

ನ.16ರಂದು ಆರ್‌ಎಸ್‌ಎಸ್ ನಡೆಸಿದ್ದ ಪಥಸಂಚಲನಕ್ಕೆ ಪರ್ಯಾಯ ಎಂಬಂತೆ ನಡೆದ ಈ 'ಭೀಮ ನಡೆ'ಯು 'ಸರ್ವಧರ್ಮ ಸಮನ್ವಯ'ದ ಸಂದೇಶವನ್ನೂ ಸಾರಿತು.

ಪಟ್ಟಣದ ಚಿತ್ತಾವಲಿ ಚೌಕ್‌ನಿಂದ ಶುರುವಾದ ಮೆರವಣಿಗೆ ಪ್ರಮುಖ ರಸ್ತೆ, ಚೌಕಗಳ ಮೂಲಕ ಒಂದೂವರೆ ಕಿ.ಮೀ. ನಷ್ಟು ಸಾಗಿ ಸಮಾವೇಶ ನಡೆದ ಬಜಾಜ್ ಕಲ್ಯಾಣ ಮಂಟಪ ತಲುಪಿತು.

ಬಿಳಿ ಅಂಗಿ, ಖಾಕಿ ಪ್ಯಾಂಟು, ನೀಲಿ ಟೊಪ್ಪಿಗೆ ಧರಿಸಿದ್ದ ಸಮತಾ ಸೈನಿಕದಳದ 500ಕ್ಕೂ ಅಧಿಕ ಕಾರ್ಯಕರ್ತರು ಶಿಸ್ತಿನಿಂದ ಹೆಜ್ಜೆ ಹಾಕಿದರು. ಮಹಿಳೆಯರು ಸೇರಿದಂತೆ ಸಾರ್ವಜನಿಕರು ಪುಷ್ಪವೃಷ್ಟಿಗೈದು ಗೌರವಿಸಿದರು. 45 ನಿಮಿಷಗಳಲ್ಲಿ ಮೆರವಣಿಗೆ ಸಂಪನ್ನಗೊಂಡಿತು.

ಚಿತ್ತಾಪುರ ಪಟ್ಟಣದಲ್ಲಿ ಸಂವಿಧಾನ ಸಂರಕ್ಷಣಾ ಸಮಿತಿ ಸೋಮವಾರ ಹಮ್ಮಿಕೊಂಡಿದ್ದ 'ಭೀಮ ನಡೆ' ಮತ್ತು ಸಂವಿಧಾನ ಸಮಾವೇಶದಲ್ಲಿ ಸಮತಾ ಸೈನಿಕ ದಳದವರು ಭಾಗವಹಿಸಿದ್ದರು –ಚಿತ್ರ: ತಾಜುದ್ದೀನ್ ಆಜಾದ್

ಮುಂದೆ ಸಾಗಿದ ಬ್ಯಾಂಡ್ ಅನ್ನು ಸಮತಾ ಸೈನಿಕದಳದ ಕಾರ್ಯಕರ್ತರು ಹಿಂಬಾಲಿಸಿದರು. ಸಂವಿಧಾನದ ಮಹತ್ವವನ್ನು ಸಾರುವ ಯತ್ನವು ಮೆರವಣಿಗೆಯುದ್ದಕ್ಕೂ ನಡೆಯಿತು.

▶5

ಉಪಾಹಾರ: ಡಿಕೆಶಿ ಮನೆಗೆ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಮಧ್ಯೆ ಯಾವುದೇ ಭಿನ್ನಮತ ಇಲ್ಲ ಎಂದು ಬಿಂಬಿಸಲು ಉಪಾಹಾರ ಕೂಟ ನಡೆಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮತ್ತೊಂದು ಉಪಾಹಾರ ಕೂಟದಲ್ಲಿ ಜತೆ ಸೇರಲಿದ್ದಾರೆ.

ಶಿವಕುಮಾರ್ ಅವರು ಸಿದ್ದರಾಮಯ್ಯ ಅವರನ್ನು ಸದಾಶಿವನಗರದಲ್ಲಿರುವ ತಮ್ಮ ಮನೆಗೆ ಮಂಗಳವಾರ ಬೆಳಗ್ಗೆ 9.30ಕ್ಕೆ ಉಪಾಹಾರಕ್ಕೆ ಕರೆದಿದ್ದಾರೆ.

ರಾಜ್ಯದಲ್ಲಿ ಸರ್ಕಾರದ 'ನಾಯಕತ್ವ'ಕ್ಕಾಗಿ ಗುದ್ದಾಟ, 'ಕೊಟ್ಟ ಮಾತು' ಕುರಿತ ವಾಗ್ವಾದಗಳಿಂದಾಗಿ ಕಾವೇರಿದ್ದ ರಾಜಕಾರಣವನ್ನು ಮುಖ್ಯಮಂತ್ರಿ ಅಧಿಕೃತ ಸರ್ಕಾರಿ ನಿವಾಸ ಕಾವೇರಿಯಲ್ಲಿ ನಡೆದಿದ್ದ ಮುಖ್ಯಮಂತ್ರಿ–ಉಪಮುಖ್ಯಮಂತ್ರಿ ಉಪಾಹಾರ ಕೂಟ ಸ್ವಲ್ಪಮಟ್ಟಿಗೆ ಶಮನ ಮಾಡಿತ್ತು. ಈಗ ಶಿವಕುಮಾರ್ ಮತ್ತೊಂದು ಹೆಜ್ಜೆ ಮುಂದಡಿ ಇಟ್ಟಿದ್ದಾರೆ.

ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಎರಡೂವರೆ ವರ್ಷ ಪೂರ್ಣಗೊಳಿಸುತ್ತಿದ್ದಂತೆ 'ಅಧಿಕಾರ ಹಂಚಿಕೆಯ ಸೂತ್ರ'ದ ವಿಷಯ ಮುನ್ನೆಲೆಗೆ ಬಂದಿತ್ತು. ಇಬ್ಬರೂ ಸೇರಿದಂತೆ ಕೆಲ ಸಚಿವರು–ಶಾಸಕರು, ಕಾಂಗ್ರೆಸ್ ನಾಯಕರ ಹೇಳಿಕೆ–ಪ್ರತಿ ಹೇಳಿಕೆಗಳು ಪಕ್ಷ ಹಾಗೂ ಸರ್ಕಾರದ ವರ್ಚಸ್ಸಿಗೆ ಧಕ್ಕೆ ತಂದಿದ್ದವು. ಸಮುದಾಯದ ಮಠಾಧೀಶರು, ಜಾತಿ ಸಂಘಗಳ ಹೇಳಿಕೆಗಳು ಬೀದಿರಂಪವಾಗಿಸಿದ್ದವು.

ಸುದೀರ್ಘ ಅವಧಿ ಮೌನಕ್ಕೆ ಶರಣಾಗಿದ್ದ ಕಾಂಗ್ರೆಸ್ ಹೈಕಮಾಂಡ್, ದಿಢೀರ್ ಮಧ್ಯ ಪ್ರವೇಶಿಸಿ 'ಉಪಾಹಾರ ಕೂಟ' ನಡೆಸಿ ಭಿನ್ನಮತ ಶಮನ ಮಾಡಿಕೊಳ್ಳಿ ಎಂದು ಉಭಯ ನಾಯಕರಿಗೂ ಸೂಚಿಸಿತ್ತು.

▶10

> **ದೆಹಲಿಯಲ್ಲಿನ ನನ್ನ ಖಾಸಗಿ ಭೇಟಿಯ ಬಗ್ಗೆ ಎಲ್ಲವನ್ನೂ ಬಹಿರಂಗವಾಗಿ ಹೇಳಲಾಗದು. ಎಲ್ಲವೂ ಸುಸೂತ್ರವಾಗಿ ಆಗುತ್ತಿದ್ದು, ಒಂದು ಹಂತಕ್ಕೆ ಬರಲಿದೆ. ಹೈಕಮಾಂಡ್ ಸರಿಯಾದ ಸಮಯದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಿದೆ**
>
> **ಡಿ.ಕೆ. ಸುರೇಶ್,** ಬಮೂಲ್ ಅಧ್ಯಕ್ಷ

ಚಳಿಗಾಲದ ಅಧಿವೇಶನ ಭದ್ರತೆಗೆ ಪೊಲೀಸ್ ಇಲಾಖೆಯಿಂದ ₹5 ಕೋಟಿ ಅಂದಾಜು ವೆಚ್ಚ

ಪೊಲೀಸರಿಗೆ ಬಿಸಿನೀರು, ಬೆಚ್ಚಗಿನ ಹೊದಿಕೆ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಈ ಬಾರಿ ಚಳಿಗಾಲದ ಅಧಿವೇಶನಕ್ಕೆ ಭದ್ರತೆ ಒದಗಿಸಲು 6 ಸಾವಿರ ಪೊಲೀಸರನ್ನು ನಿಯೋಜಿಸಿದ್ದು, ಪೊಲೀಸರ ಆರೋಗ್ಯ ರಕ್ಷಣೆಗೂ ನಿಗಾ ವಹಿಸಲಾಗಿದೆ. ಸುರಕ್ಷಿತ ವಸತಿ, ಗುಣಮಟ್ಟದ ಊಟ, ಜತೆಗೆ ಸ್ನಾನಕ್ಕೆ ಬಿಸಿನೀರು ವ್ಯವಸ್ಥೆ ಮಾಡಲಾಗಿದೆ.

ಸುವರ್ಣ ವಿಧಾನಸೌಧದಲ್ಲಿ ಡಿಸೆಂಬರ್ 8 ರಿಂದ 19ರವರೆಗೆ ನಡೆಯುವ ಅಧಿವೇಶನ ಭದ್ರತೆಗೆ ಎಲ್ಲ ಜಿಲ್ಲೆಗಳಿಂದಲೂ ಸಿಬ್ಬಂದಿ ಕರೆಸುವುದು ರೂಢಿ. ಸದ್ಯ ಬೆಳಗಾವಿಯಲ್ಲಿ ಕನಿಷ್ಠ ಉಷ್ಣಾಂಶ 14 ಡಿಗ್ರಿ ಸೆಲ್ಸಿಯಸ್‌ಗೆ ಇಳಿದಿದೆ. ಅಧಿವೇಶನ ವೇಳೆಗೆ ಕನಿಷ್ಠ 12 ಡಿಗ್ರಿಯವರೆಗೆ ಇಳಿಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮೈ ಕೊರೆಯುವ ಚಳಿಯಿಂದ ಪೊಲೀಸ್ ಸಿಬ್ಬಂದಿ ಕಷ್ಟ ಎದುರಿಸುವುದು ಸಹಜ. ಇದರಿಂದ ಅವರ ಆರೋಗ್ಯದಲ್ಲೂ ಏರುಪೇರಾಗುವ ತಕರಾರು ಪ್ರತಿ ವರ್ಷ ಕೇಳಿಬರುತ್ತವೆ. ಹೀಗಾಗಿ, ಈ ವರ್ಷ ಅವರ ಆರೋಗ್ಯಕ್ಕೂ ಕಾಳಜಿ ವಹಿಸಲಾಗಿದೆ.

'ಪೊಲೀಸ್ ವಸತಿ ಗೃಹಗಳು, ಚೈತನ್ಯ ಬ್ಯಾರಕ್, ಕಾರ್ಮಿಕ ಭವನ ಸೇರಿ ಆರು ಕಡೆ ವಸತಿ ವ್ಯವಸ್ಥೆ ಇದೆ. ಮುಖ್ಯವಾಗಿ, ಸುವರ್ಣ ವಿಧಾನಸೌಧ ಬಳಿಯ ಶಿಂಧೊಳ್ಳಿ ಗ್ರಾಮದ ಗುಡ್ಡದಲ್ಲಿ 'ಟೆಂಟ್ ಸಿಟಿ' ನಿರ್ಮಿಸಲಾಗುತ್ತಿದೆ. ಇಲ್ಲಿ 2,500 ಸಿಬ್ಬಂದಿಗೆ ವಸತಿ ಕಲ್ಪಿಸಲಾ-ಗುತ್ತದೆ. ಗುಡ್ಡದ ಮೇಲೆ ಬೆಳಿಗ್ಗೆ, ರಾತ್ರಿ ಶೀತಗಾಳಿ ಬೀಸುವ ಕಾರಣ ಮಂಚ, ಗಾದಿ, ಬೆಡ್‌ಶೀಟ್ ಕೊಡಲಾಗುವುದು. ಸೊಳ್ಳೆಗಳ ಕಾಟ ತಪ್ಪಿಸಲು ಸೊಳ್ಳೆಬತ್ತಿ ನೀಡಲಾಗುವುದು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶುದ್ಧ ಕುಡಿಯುವ ನೀರಿನ ಘಟಕ ವ್ಯವಸ್ಥೆ ಮಾಡಲಾಗುತ್ತಿದೆ. ಸ್ನಾನಕ್ಕೆ ಬಿಸಿನೀರು ಕಾಯಿಸಲು ಸಿಲಿಂಡರ್ ಒಲೆಗಳು ಹಾಗೂ ದೊಡ್ಡ ಪಾತ್ರೆಗಳನ್ನು ತರಿಸಲಾಗಿದೆ. ಮನರಂಜನೆಗೆ ಸಂಗೀತ ಪರಿಕರ, ಟಿ.ವಿ ಸೌಲಭ್ಯದ ಜತೆಗೆ ಮೊಬೈಲ್ ಚಾರ್ಜರ್, ಫ್ಯಾನ್ ವ್ಯವಸ್ಥೆ ಇರುತ್ತದೆ.

11 ಡ್ರೋನ್ ಬಳಕೆ: '6 ಐಪಿಎಸ್ ಅಧಿಕಾರಿಗಳು ಸೇರಿ 16 ಅಧಿಕಾರಿಗಳು ಭದ್ರತೆ ಮೇಲುಸ್ತುವಾರಿ ವಹಿಸಲಿದ್ದು, ಶ್ವಾನದಳ, ಬಾಂಬ್ ಪತ್ತೆ ತಂಡಗಳು ಸೇವೆ ಸಜ್ಜಾಗಿರಲಿವೆ. ಇದೇ ಮೊದಲ ಬಾರಿಗೆ ಭದ್ರತಾ ಕಣ್ಗಾವಲಿಗೆ 11 ಡ್ರೋನ್ ಬಳಕೆಯಾಗಲಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

> **ನವದೆಹಲಿಯಲ್ಲಿ ಈಚೆಗೆ ಸಂಭವಿಸಿದ ಬಾಂಬ್ ಸ್ಫೋಟ ಕೃತ್ಯದ ಕಾರಣದಿಂದ ಭದ್ರತೆ ಬಿಗಿಗೊಳಿಸಲಾಗಿದೆ. ಇದಕ್ಕೆ ₹5 ಕೋಟಿ ವೆಚ್ಚವಾಗಬಹುದು**
>
> **ಮೊಹಮ್ಮದ್ ರೋಷನ್** ಜಿಲ್ಲಾಧಿಕಾರಿ, ಬೆಳಗಾವಿ

> **ಪೊಲೀಸ್ ಸಿಬ್ಬಂದಿಯ ವಸತಿ, ಊಟ, ನೀರು, ಭದ್ರತೆ, ಆರೋಗ್ಯ, ಸಾರಿಗೆ ಎಲ್ಲದರ ಬಗ್ಗೆ ವೆಚ್ಚ ಅಂದಾಜಿಸಿ ಸಲ್ಲಿಸಲಾಗಿದೆ**
>
> **ಭೂಷಣ ಬೊರಸೆ** ಪೊಲೀಸ್ ಕಮಿಷನರ್, ಬೆಳಗಾವಿ

> **ಶಿಸ್ತು, ದಕ್ಷತೆಯಿಂದ ಕಾರ್ಯನಿರ್ವಹಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಗುಣಮಟ್ಟದ ಊಟ, ನೆಮ್ಮದಿಯ ನಿದ್ದೆಗೆ ಬೇಕಾದ ಸೌಲಭ್ಯ ನೀಡಲಾಗುವುದು**
>
> **ನಾರಾಯಣ ಭರಮನಿ,** ಡಿಸಿಪಿ, ಬೆಳಗಾವಿ



ಚಿನಕುರುಳಿ ಪ್ರಕಾಶ್ ಶೆಟ್ಟಿ



'ನಾಟಕ'ದ ಮಾತು: ಜಟಾಪಟಿ ಜೋರು

ನವದೆಹಲಿ (ಪಿಟಿಐ): ಸಂಸತ್ತಿನ ಅಧಿವೇಶನದ ಮೊದಲ ದಿನವು ಹಲವು ನಾಟಕೀಯ ಸನ್ನಿವೇಶಗಳಿಗೆ ಸಾಕ್ಷಿಯಾಯಿತು. ಕಲಾಪ ಆರಂಭಕ್ಕೂ ಮೊದಲು, 'ಸಂಸತ್ತು ನಾಟಕದ ವೇದಿಕೆ ಅಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಹರಿಹಾಯ್ದರೆ, 'ಮೋದಿ ಅವರೇ ದೊಡ್ಡ ನಾಟಕಕಾರ' ಎಂದು ಕಾಂಗ್ರೆಸ್ ಕುಟುಕಿತು. ಈ ಮಧ್ಯೆ ಎಸ್‌ಐಆರ್ ಕುರಿತ ಚರ್ಚೆ ವಿಚಾರವಾಗಿ ಆಡಳಿತ–ವಿಪಕ್ಷಗಳ ನಡುವೆ ತೀವ್ರ ಜಟಾಪಟಿ ನಡೆದು ಕಲಾಪವು ಮಂಗಳವಾರಕ್ಕೆ ಮುಂದೂಡಿಕೆಯಾಯಿತು

ಪ್ರಧಾನಿ ವಾಗ್ದಾಳಿ: 'ಸಂಸತ್ತು ನಾಟಕಕ್ಕೆ ಇರುವ ವೇದಿಕೆ ಅಲ್ಲ, ರಚನಾತ್ಮಕ ಮತ್ತು ಫಲಿತಾಂಶ ಆಧಾರಿತ ಚರ್ಚೆಗೆ ಇರುವ ವೇದಿಕೆ' ಎಂದು ಪ್ರಧಾನಿ ಮೋದಿ ವಿರೋಧ ಪಕ್ಷಗಳ ವಿರುದ್ಧ ಸೋಮವಾರ ವಾಗ್ದಾಳಿ ನಡೆಸಿದರು.

'ವಿಪಕ್ಷಗಳು ಸಂಸತ್ತನ್ನು ಚುನಾವಣಾ ಸಿದ್ಧತೆಯ ಅಖಾಡವಾಗಿ ಅಥವಾ ಸೋಲಿನ ನಂತರ ಹತಾಶೆಯನ್ನು ಹೊರ ಹಾಕುವ ವೇದಿಕೆಯಾಗಿ ಬಳಸಿಕೊಳ್ಳುತ್ತಿವೆ' ಎಂದು ಅವರು ಆರೋಪಿಸಿದರು.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ಅಧಿವೇಶನದಲ್ಲಿ ಚರ್ಚೆ ನಡೆಸದಿದ್ದರೆ ಕಲಾಪಕ್ಕೆ ಅಡ್ಡಿಪಡಿಸು-ವುದಾಗಿ ವಿರೋಧ ಪಕ್ಷಗಳು ಬೆದರಿಕೆ ಹಾಕಿದ ಬೆನ್ನಲ್ಲೇ ಅವರು ಹರಿಹಾಯ್ದರು.

ಅಧಿವೇಶನ ಆರಂಭಕ್ಕೂ ಮೊದಲು ಸಂಸತ್ತಿನ ಹೊರಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜಕೀಯ ನಾಟಕಕ್ಕೆ ಅಧಿವೇಶನವು ವೇದಿಕೆಯಾಗಬಾರದು. ರಾಜಕೀಯದಲ್ಲಿ ಸಕಾರಾತ್ಮಕತೆಯನ್ನು ಅಳವಡಿಸಿಕೊಳ್ಳಬೇಕು. ಜವಾಬ್ದಾರಿಯ ಅರಿವಿನೊಂದಿಗೆ ನಾವು ಕೆಲಸ ಮಾಡಬೇಕು' ಎಂದು ಹೇಳಿದರು.

▶11

> **ಸಂಸತ್ತಿನಲ್ಲಿ ಜನಸಾಮಾನ್ಯರಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತುವುದು ನಾಟಕವಲ್ಲ; ಪ್ರಜಾಸತ್ತಾತ್ಮಕ ಚರ್ಚೆಗೆ ಅವಕಾಶ ನೀಡದಿರುವುದೇ ನಾಟಕ**
>
> **ಪ್ರಿಯಾಂಕಾ ಗಾಂಧಿ,** ಕಾಂಗ್ರೆಸ್ ನಾಯಕಿ

ಕರ್ನಾಟಕ ರಾಜ್ಯದ ಹೆಸರಾಂತ, ಜನಾನುರಾಗಿ,
ಸ್ನೇಹಮಯಿ, ಯೂತ್ಸ್ ಐಕಾನ್, ನೇರ ನಡೆ–ನುಡಿ,
ಅಧ್ಯಕ್ಷರು ಕಿಯೋನಿಕ್ಸ್,
ಹೊಸಕೋಟೆ ವಿಧಾನಸಭಾ ಕ್ಷೇತ್ರದ
ಜನಪ್ರಿಯ ಶಾಸಕರಾದ ಸನ್ಮಾನ್ಯ
ಶ್ರೀ ಶರತ್‌ಬಚ್ಚೇಗೌಡ
ರವರಿಗೆ
ಜನ್ಮದಿನದ ಶುಭಾಶಯಗಳು
Nandini
Bamul
ಶುಭ ಕೋರುವವರು:–
ಬಿ.ವಿ. ಸತೀಶ್‌ಗೌಡರು
ನಿರ್ದೇಶಕರು ಬೆಂಗಳೂರು ಹಾಲು ಒಕ್ಕೂಟ (ಬಮುಲ್)
ಹಾಗೂ ಶರತ್ ಬಚ್ಚೇಗೌಡ ಅಭಿಮಾನಿಗಳ ಬಳಗ

‘ಕಸದ ರಾಶಿ ಪತ್ತೆಗೆ ಪೌರಕಾರ್ಮಿಕರು’

33 ಪ್ಯಾಕೇಜ್‌ಗೆ ನ್ಯಾಯಾಲಯ ಸಮ್ಮತಿ, ಶೀಘ್ರವೇ ಕಾರ್ಯರೂಪಕ್ಕೆ: ಡಿಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಿಬಿಎ ವತಿಯಿಂದ 8-10 ಪೌರಕಾರ್ಮಿಕರ ತಂಡವನ್ನು ರಚಿಸಲಾಗುತ್ತದೆ. ಈ ತಂಡವು ನಗರ ಪ್ರದಕ್ಷಿಣೆ ಮಾಡಿ ಎಲ್ಲೆಲ್ಲಿ ಕಸ ಇದೆ ಎಂಬುದನ್ನು ಗುರುತಿಸಿ, ಅದನ್ನು ವಿಲೇವಾರಿ ಮಾಡಲಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಮಾಗಡಿ ಮುಖ್ಯ ರಸ್ತೆಯ ಕನ್ನಹಳ್ಳಿಯಲ್ಲಿ ಹಸಿರು ದಳದ ಸಮಗ್ರ ಘನ ತ್ಯಾಜ್ಯ ವಿಂಗಡಣಾ ಘಟಕದ ಒಂದನೇ ಹಂತಕ್ಕೆ ಸೋಮವಾರ ಶಿಲಾನ್ಯಾಸ ನೆರವೇರಿಸಿದ ಅವರು ಮಾತನಾಡಿದರು.

‘ಕಸದ ಲಾರಿಗಳು ನಿಗದಿತ ಸ್ಥಳಕ್ಕೆ ತಲುಪಲು ದೂರ ಹೋಗಬೇಕಾಗುತ್ತದೆ ಎಂದು ಎಲ್ಲೆಂದರಲ್ಲಿ ಕಸ ಸುರಿಯುತ್ತಾರೆ. ರಸ್ತೆ ಬದಿ ಕಸ ಎಸೆಯುವವರ ಮೇಲೆ ನಿಗಾ ವಹಿಸಲು ಕ್ಯಾಮೆರಾ ಅಳವಡಿಸಿ ದಂಡ ಹಾಕುತ್ತಿದ್ದೇವೆ. ಕಸ ಎಸೆಯುವ ವಾಹನಗಳಿಗೆ ದಂಡ ಹಾಕಲಾಗುತ್ತಿದೆ. ಬೆಂಗಳೂರು ನಗರವನ್ನು ಸ್ವಚ್ಛವಾಗಿಟ್ಟುಕೊಳ್ಳಲು ಜನರ ಸಹಕಾರವೂ ಅಗತ್ಯ. ಜನರು ಎಲ್ಲೆಂದರಲ್ಲಿ ಕಸ ಎಸೆಯಬಾರದು’ ಎಂದು ಮನವಿ ಮಾಡಿದರು.

ಮುಖ್ಯಾಂಶಗಳು

- ‘ಕಸದಿಂದ ರಸ ತೆಗೆಯಲು ಹೊರಟಿದ್ದೇನೆ’
- ಕಸದ ಮಾಫಿಯಾಗೆ ಬಗ್ಗಲ್ಲ: ಡಿಕೆಶಿ

‘ಕಸದ ಮಾಫಿಯಾದವರು ನನ್ನ ಮೇಲೆ ಏನೇ ಗೂಬೆ ಕೂರಿಸಿದರೂ ಅದಕ್ಕೆ ಬಗ್ಗುವುದಿಲ್ಲ, ಹೆದರುವುದಿಲ್ಲ. ನ್ಯಾಯಾಲಯ ಸಮ್ಮತಿ ನೀಡಿರುವ 33 ಪ್ಯಾಕೇಜ್ ಟೆಂಡರ್ ಪ್ರಕ್ರಿಯೆ ಮೂಲಕ ಕಸ ವಿಲೇವಾರಿಗೆ ತೀರ್ಮಾನಿಸಲಾಗಿದೆ. ಕಸದಿಂದ ರಸ ತೆಗೆಯಲು ಹೊರಟಿದ್ದೇನೆ’ ಎಂದರು.

‘ಕಸದಿಂದ ಅನಿಲ ತಯಾರಿಕೆಗೆ ನಾಲ್ಕು ಸ್ಥಳಗಳಲ್ಲಿ ಘಟಕ ಸ್ಥಾಪಿಸಲು ಉದ್ದೇಶಿಸಲಾಗಿತ್ತು. ಜಾಗದ ಸಮಸ್ಯೆಯಿಂದ ಈಗ ಎರಡು ಸ್ಥಳಗಳಲ್ಲಿ ಅವಕಾಶ ನೀಡಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ. ಈ ಹಿಂದೆ 10-12ಕ್ಕೂ ಹೆಚ್ಚು ಸಂಸ್ಥೆಗಳು ಕಸದಿಂದ ವಿದ್ಯುತ್ ಉತ್ಪಾದನೆ ಮಾಡುವುದಾಗಿ ಬಂದು ವಿಫಲರಾಗಿದ್ದಾರೆ. 24 ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡುವ ತಂತ್ರಜ್ಞಾನದಿಂದ ಯಶಸ್ವಿಯಾಗಬಹುದು. ಜೊತೆಗೆ ದೆಹಲಿ, ಚೆನ್ನೈ, ಹೈದರಾಬಾದ್ ನಗರಗಳಲ್ಲಿ ಇದನ್ನು ನಾನು ನೋಡಿದ್ದೇನೆ’ ಎಂದು ಹೇಳಿದರು.

‘ಕಸದಿಂದ ಅನಿಲ ಉತ್ಪಾದನೆಯಲ್ಲಿ ತೊಡಗಿರುವ ಅಭಿಷೇಕ್ ಅವರ ಸಂಸ್ಥೆ ಪ್ರಾಥಮಿಕವಾಗಿ ₹100 ಕೋಟಿ ಬಂಡವಾಳ ಹೂಡಲಿದೆ. ಒಟ್ಟು ₹300 ಕೋಟಿ ಹೂಡಿಕೆ ಮಾಡಲಿದ್ದಾರೆ. ಈ ಪ್ರಯೋಗ ಯಶಸ್ವಿಯಾದರೆ ರಾಜ್ಯದಲ್ಲಿ ಇನ್ನೂ ಒಂದಷ್ಟು ಕಡೆ ಘಟಕ ಸ್ಥಾಪಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಇದು ಸ್ವಲ್ಪ ಸ್ಪರ್ಧಾತ್ಮಕ ಕೆಲಸ. ಹಲವು ಸವಾಲುಗಳನ್ನು ಎದುರಿಸಬೇಕಾಗುತ್ತದೆ’ ಎಂದರು.

ವ್ಯವಸ್ಥಾಪಕ ನಿರ್ದೇಶಕರಾಗಿ ಅಧಿಕಾರ ಸ್ವೀಕರಿಸಿದ ಐಆರ್‌ಎಸ್‌ಇ ಅಧಿಕಾರಿ

ಕೆ–ರೈಡ್ ಹಳಿಗೆ ತರುತ್ತೇನೆ: ಲಕ್ಷ್ಮಣ್ ಸಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ರೈಲು ಮೂಲಸೌಕರ್ಯ ಅಭಿವೃದ್ಧಿ ಎಂಟರ್‌ಪ್ರೈಸಸ್ (ಕೆ- ರೈಡ್) ಅನ್ನು ಹಳಿಗೆ ತರುತ್ತೇನೆ. ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಆರ್‌ಪಿ) ಕಾಮಗಾರಿಗಳಿಗೆ ವೇಗ ನೀಡುತ್ತೇನೆ’ ಎಂದು ಕೆ- ರೈಡ್ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಣ್ ಸಿಂಗ್ ಹೇಳಿದರು.

ಸೋಮವಾರ ಅಧಿಕಾರ ಸ್ವೀಕರಿಸಿದ ಬಳಿಕ ಮಾತನಾಡಿದ ಅವರು, ‘ಬಿಎಸ್‌ಆರ್‌ಪಿಯ ನಾಡಿಮಿಡಿತ ಮತ್ತು ಅದರ ಮಹತ್ವ, ಎದುರಿಸುತ್ತಿರುವ ಸವಾಲುಗಳನ್ನು ಅರ್ಥ ಮಾಡಿಕೊಂಡಿದ್ದೇನೆ. ನಮ್ಮ ಮುಂದಿರುವ ಕೆಲಸ ಎಷ್ಟು ಎಂಬುದು ಗೊತ್ತು. ಅದನ್ನು ಸಾಧಿಸಲು ಕೆ-ರೈಡ್ ಸಮರ್ಥವಾಗಿದೆ’ ಎಂದು ತಿಳಿಸಿದರು.

‘ಕಠಿಣ ಸಮಸ್ಯೆಗಳು ಎಂಜಿನಿಯರ್‌ಗಳಿಗೆ ಹೊಸದಲ್ಲ. ವಾಸ್ತವವಾಗಿ, ಸಮಸ್ಯೆಗಳು ಇರುವುದರಿಂದ ಎಂಜಿನಿಯರಿಂಗ್ ಅಸ್ತಿತ್ವದಲ್ಲಿದೆ. ಅಡೆತಡೆಗಳಿಂದ ವಿಚಲಿತರಾಗುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಈ ಯೋಜನೆಯು ಕಠಿಣ ಪರಿಶ್ರಮ ಮತ್ತು ಸ್ಮಾರ್ಟ್ ಕೆಲಸವನ್ನು ಬಯಸುತ್ತದೆ.

ಲಕ್ಷ್ಮಣ್ ಸಿಂಗ್ ಅವರನ್ನು ಗೋವಿಂದ ರೆಡ್ಡಿ ಅವರು ಹೂಗುಚ್ಛ ನೀಡಿ ಸ್ವಾಗತಿಸಿದರು

ಎಲ್ಲರೂ ಒಟ್ಟಾಗಿ ಕೆಲಸ ಮಾಡಿ ಕೆ-ರೈಡ್ ಅನ್ನು ಹಳಿಗೆ ತರೋಣ. ಸ್ಪಷ್ಟ ಮತ್ತು ತ್ವರಿತ ಪ್ರತಿಕ್ರಿಯೆ, ಸರಿಯಾದ ನಿರ್ಧಾರ ಮತ್ತು ಸಂಯೋಜನೆಗಳೊಂದಿಗೆ ಕೆಲಸ ಮಾಡುವ ಮೂಲಕ ಗುರಿ ಸಾಧಿಸೋಣ’ ಎಂದು ಹೇಳಿದರು.

ಅಧಿಕಾರ ಹಸ್ತಾಂತರಿಸಿದ ನಿರ್ಗಮಿತ ವ್ಯವಸ್ಥಾಪಕ ನಿರ್ದೇಶಕ ಗೋವಿಂದ ರೆಡ್ಡಿ ಮಾತನಾಡಿ, ‘ಲಕ್ಷ್ಮಣ್ ಸಿಂಗ್ ಅವರು ಭಾರತೀಯ ರೈಲ್ವೆಯಲ್ಲಿ ಮೂರು ದಶಕಗಳಿಂದ ಕೆಲಸ ಮಾಡುತ್ತಿದ್ದಾರೆ. ಅಸಾಧಾರಣ ತಾಂತ್ರಿಕ ಪರಿಣತಿ, ದೂರದೃಷ್ಟಿಯ ನಾಯಕತ್ವ ಇರುವ ಅವರು ನುರಿತ ತಂತ್ರಜ್ಞರಾಗಿದ್ದಾರೆ. ದೇಶದ ವಿವಿಧೆಡೆ ಸಂಕೀರ್ಣವಾದ ಮತ್ತು ಪ್ರಮುಖ ಯೋಜನೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಇಲ್ಲಿಯೂ ಬಿಎಸ್‌ಆರ್‌ಪಿಯಂಥ ಮೂಲಸೌಕರ್ಯ ಯೋಜನೆಗೆ ವೇಗ ನೀಡಲಿದ್ದಾರೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಮುಖ ಯೋಜನೆಗಳ ರೂವಾರಿ

ಭಾರತೀಯ ರೈಲ್ವೆ ಎಂಜಿನಿಯರಿಂಗ್ ಸೇವೆಯ (ಐಆರ್‌ಎಸ್‌ಇ) 1994ರ ಬ್ಯಾಚ್‌ನ ಲಕ್ಷ್ಮಣ್ ಸಿಂಗ್ ಅವರು ಭಾರತೀಯ ರೈಲ್ವೆಯಲ್ಲಿ ವಿಭಾಗೀಯ ರೈಲ್ವೆ ಹೆಚ್ಚುವರಿ ವ್ಯವಸ್ಥಾಪಕರಾಗಿ, ವ್ಯವಸ್ಥಾಪಕರಾಗಿ, ಮುಖ್ಯ ಎಂಜಿನಿಯರ್ ಆಗಿ ಕಾರ್ಯನಿರ್ವಹಿಸಿದ್ದಾರೆ.

ಒಡಂಬಡಿಕೆಗಳು, ಮೂಲಸೌಕರ್ಯ ಅಭಿವೃದ್ಧಿ, ಕಾನೂನು ವ್ಯವಹಾರಗಳು, ಅತಿಕ್ರಮಣ ನಿರ್ವಹಣೆ, ಮಾನವ ಸಂಪನ್ಮೂಲ, ಬಜೆಟ್, ದಾಸ್ತಾನು ನಿಯಂತ್ರಣ ಮತ್ತು ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡು ಸರ್ಕಾರಗಳೊಂದಿಗೆ ಅಂತರ-ಸಚಿವಾಲಯ ಸಮನ್ವಯದಲ್ಲಿ ಜವಾಬ್ದಾರಿಗಳನ್ನು ನಿರ್ವಹಿಸಿದ್ದರು.

ವಿಜಯಪುರ–ಸೋಲಾಪುರ ಸಂಪರ್ಕಿಸುವ ನೈಋತ್ಯ ರೈಲ್ವೆಯ ಅತಿ ಉದ್ದದ (676 ಮೀಟರ್) 25ಟಿ ಆಕ್ಸಲ್-ಲೋಡ್‌ನ ಭೀಮಾ ರೈಲು ಸೇತುವೆ ಕಾಮಗಾರಿ, ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನಲ್ಲಿ ಮೊದಲ ಹವಾನಿಯಂತ್ರಿತ ರೈಲು ನಿಲ್ದಾಣ ನಿರ್ಮಾಣ, ಭಾರತೀಯ ರೈಲ್ವೆಯಾದ್ಯಂತ ಲೆವೆಲ್ ಕ್ರಾಸಿಂಗ್‌ಗಳನ್ನು ತೆಗೆದುಹಾಕಲು ಸುಮಾರು 250 ರಸ್ತೆ ಕೆಳ ಸೇತುವೆಗಳು ಮತ್ತು ಮೇಲ್ಸೇತುವೆಗಳ ಯೋಜನೆ ಮತ್ತು ನಿರ್ಮಾಣ, ಜಲವಿದ್ಯುತ್ ಸುರಂಗ, ಸರ್ಜ್ ಶಾಫ್ಟ್, ಪವರ್‌ಹೌಸ್‌ಗಳ ವಿನ್ಯಾಸ ಮತ್ತು ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ದೆಹಲಿಯವರಾದ ಲಕ್ಷ್ಮಣ್ ಸಿಂಗ್ ಅವರು 2023ರಿಂದ ಬಿಎಂಆರ್‌ಸಿಎಲ್‌ನಲ್ಲಿ ಮುಖ್ಯ ಪ್ರಧಾನ ವ್ಯವಸ್ಥಾಪಕರಾಗಿ (ಸಿವಿಲ್) ಕಾರ್ಯನಿರ್ವಹಿಸುತ್ತಿದ್ದರು.

ಕಾನೂನು ಇಲಾಖೆಗೆ ಎಚ್ಚರಿಕೆ

ಕಾಯ್ದೆ ತಿದ್ದುಪಡಿ: ವಕೀಲರ ಗುಮಾಸ್ತರ ಮನವಿ ಅಲಕ್ಷ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಕೀಲರ ಕಚೇರಿಗಳಲ್ಲಿ ದುಡಿಯುವ ಗುಮಾಸ್ತರ ಕುಟುಂಬಗಳ ಕಲ್ಯಾಣಕ್ಕಾಗಿ, ವಕೀಲರ ಕಲ್ಯಾಣ ನಿಧಿ ಕಾಯ್ದೆಯ ಕಲಂ 27ಕ್ಕೆ ತಿದ್ದುಪಡಿ ಮಾಡಲು ಮೂರು ವಾರಗಳ ಗಡುವು ವಿಧಿಸಿರುವ ಹೈಕೋರ್ಟ್, ಇಲ್ಲವಾದಲ್ಲಿ ರಾಜ್ಯ ಕಾನೂನು ಇಲಾಖೆ ಕಾರ್ಯದರ್ಶಿ ಖುದ್ದು ವಿಚಾರಣೆಗೆ ಹಾಜರಾಗಬೇಕು ಎಂದು ಸರ್ಕಾರಕ್ಕೆ ಕಟ್ಟುನಿಟ್ಟಿನ ತಾಕೀತು ಮಾಡಿದೆ.

ಈ ಸಂಬಂಧ, ‘ಕರ್ನಾಟಕ ರಾಜ್ಯ ವಕೀಲರ ಗುಮಾಸ್ತರ ಸಂಘ’ದ ಅಧ್ಯಕ್ಷ ಡಿ.ಶಿವಣ್ಣ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಪ್ರಕರಣದ ಅಮಿಕಸ್ ಕ್ಯೂರಿ ಎಸ್.ಬಸವರಾಜು, ‘ಇತರೆ ಹೈಕೋರ್ಟ್‌ಗಳಲ್ಲಿರುವ ಸ್ಟ್ಯಾಂಪ್ ಮೂಲಕ ಹಣ ಸಂಗ್ರಹಿಸಿ ಅದರಲ್ಲಿ ಇಂತಿಷ್ಟು ಪ್ರಮಾಣದ ಹಣವನ್ನು ಗುಮಾಸ್ತರ ಕ್ಷೇಮಾಭಿವೃದ್ಧಿಗೆ ನೀಡುವ ಪದ್ಧತಿಯನ್ನು ಕರ್ನಾಟಕದಲ್ಲೂ ಅನುಸರಿಸುವ ಅಗತ್ಯವಿದೆ. ಈ ಕುರಿತಂತೆ ಕಾಯ್ದೆಗೆ ಅಗತ್ಯ ತಿದ್ದುಪಡಿ ಮಾಡುವಲ್ಲಿ ರಾಜ್ಯ ಸರ್ಕಾರ ವಿಳಂಬ ಧೋರಣೆ ಅನುಸರಿಸುತ್ತಿದೆ’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

‘ವಕೀಲರ ಕಲ್ಯಾಣ ಕಾಯ್ದೆ–1986ರ ಕಲಂ 27ಕ್ಕೆ ತಿದ್ದುಪಡಿ ತಂದು, ಗುಮಾಸ್ತರ ಕಲ್ಯಾಣಕ್ಕೆಂದೇ ತೆಲಂಗಾಣ, ಆಂಧ್ರಪ್ರದೇಶ ರಾಜ್ಯಗಳಲ್ಲಿ ಪ್ರತ್ಯೇಕ ₹5 ಅಥವಾ ₹10 ಮೌಲ್ಯದ ಸ್ಟ್ಯಾಂಪ್ ಬಳಕೆಯನ್ನು ಜಾರಿಗೆ ತರಲಾಗಿದೆ. ಈ ಅಭ್ಯುದಯದ ಪದ್ಧತಿ ರಾಜ್ಯದಲ್ಲೂ ಅನುಷ್ಠಾನಗೊಳ್ಳಬೇಕು. ಇದಕ್ಕಾಗಿ ಸರ್ಕಾರ ನಿಗದಿತ ಅವಧಿಯಲ್ಲಿ ಆದಷ್ಟು ಬೇಗ ನಿರ್ಧಾರ ಕೈಗೊಳ್ಳುವಂತಾಗಬೇಕು’ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಈ ಅರ್ಜಿಯನ್ನು ಇತ್ಯರ್ಥಪಡಿಸಿದರೆ ಸರ್ಕಾರ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ. ತೀರ್ಪನ್ನು ಶೈತ್ಯಾಗಾರದಲ್ಲಿ ಇರಿಸಿಬಿಡಬಹುದು. ಇದರಿಂದ ಗುಮಾಸ್ತರ ಹೋರಾಟದ ಉದ್ದೇಶ ಈಡೇರುವುದಿಲ್ಲ. ಹಾಗಾಗಿ, ಕೊನೆಯ ಬಾರಿಗೆ ಸರ್ಕಾರಕ್ಕೆ ಮೂರು ವಾರಗಳ ಕಾಲಾವಕಾಶ ನೀಡಲಾಗುತ್ತಿದೆ. ಯಾವುದೇ ಕ್ರಮ ಕೈಗೊಳ್ಳದೇ ಹೋದಲ್ಲಿ ರಾಜ್ಯ ಕಾನೂನು ಇಲಾಖೆ ಕಾರ್ಯದರ್ಶಿ ಕೋರ್ಟ್‌ಗೆ ಖುದ್ದು ಹಾಜರಾಗಬೇಕು’ ಎಂದು ಎಚ್ಚರಿಸಿ ವಿಚಾರಣೆಯನ್ನು 2026ರ 9ಕ್ಕೆ ಮುಂದೂಡಿತು. ಅರ್ಜಿದಾರರ ಪರ ಜಿ.ಮಹೇಂದ್ರ ಹಾಗೂ ರಾಜ್ಯ ವಕೀಲರ ಪರಿಷತ್ ಪರ ಜಿ.ನಟರಾಜ್ ಹಾಜರಿದ್ದರು.

ಮಾಜಿ ಶಾಸಕ ಆರ್.ವಿ.ದೇವರಾಜ್ ನಿಧನ

ದೇವರಾಜು

ಮೈಸೂರು: ಬೆಂಗಳೂರಿನ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ, ಕಾಂಗ್ರೆಸ್ ಮುಖಂಡ ಆರ್. ವಿ.ದೇವರಾಜ್ (67) ಸೋಮವಾರ ಹೃದಯಾಘಾತದಿಂದ ನಿಧನರಾದರು.

ಚಾಮುಂಡಿ ಬೆಟ್ಟದಲ್ಲಿ ತೀವ್ರ ಹೃದಯಾಘಾತಕ್ಕೆ ಒಳಗಾದ ಅವರನ್ನು ತಕ್ಷಣವೇ ಅಪೋಲೊ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ನೀಡಿದ ನಂತರ ಇಲ್ಲಿನ ಜಯದೇವ ಹೃದ್ರೋಗ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಮೃತಪಟ್ಟರು.

ಮಂಗಳವಾರ ದೇವರಾಜ್ ಅವರ ಜನ್ಮದಿನ. ಆ ಕಾರಣಕ್ಕಾಗಿಯೇ ಅವರು ಮೈಸೂರಿನ ಚಾಮುಂಡೇಶ್ವರಿ ದೇವರ ದರ್ಶನಕ್ಕಾಗಿ ಬಂದಿದ್ದರು. ಆಗಲೇ ಹೃದಯಾಘಾತದಿಂದ ಕೊನೆಯುಸಿರೆಳೆದಿದ್ದಾರೆ.

ದೇವರಾಜು ಅವರು, 1989 ಮತ್ತು 1999ರ ವಿಧಾನಸಭಾ ಚುನಾವಣೆಯಲ್ಲಿ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಆಯ್ಕೆಯಾಗಿದ್ದರು. 2004ರಿಂದ 2010ರವರೆಗೆ ವಿಧಾನ ಪರಿಷತ್ ಸದಸ್ಯರಾಗಿದ್ದರು. 2013ರಿಂದ 2018ರವರೆಗೆ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದರು.

ಎಸ್.ಕೆ.ಬಡಾವಣೆ: ಶೇ 50ರಷ್ಟು ನಿವೇಶನಗಳ ಹಂಚಿಕೆಗೆ ಆಗ್ರಹ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ಮಿಸಿರುವ ಡಾ.ಕೆ.ಶಿವರಾಮ ಕಾರಂತ ಬಡಾವಣೆಗೆ ಜಮೀನು ನೀಡಿದ ರೈತರಿಗೆ ಅಭಿವೃದ್ಧಿಪಡಿಸಿದ ಶೇಕಡ 50ರಷ್ಟು ನಿವೇಶನ ಹಂಚಿಕೆ ಮಾಡಬೇಕು ಎಂದು ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಯೋಜಕ ರಾಮಗೊಂಡನಹಳ್ಳಿ ಎಂ. ರಮೇಶ್ ಆಗ್ರಹಿಸಿದ್ದಾರೆ.

ಬಿಡದಿ ಟೌನ್‌ಶಿಪ್ ಯೋಜನೆ, ದೊಡ್ಡಬಳ್ಳಾಪುರದಲ್ಲಿ ಕೆಐಎಡಿಬಿ ಯೋಜನೆಗಳನ್ನು ಶೇಕಡ 50:50ರ ಅನುಪಾತದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಶಿವರಾಮ ಕಾರಂತ ಬಡಾವಣೆ ಯೋಜನೆಯಲ್ಲಿ ರೈತರಿಗೆ ಇನ್ನೂ ನಿವೇಶನ ಹಂಚಿಕೆ ಮಾಡಿಲ್ಲ. ಹಾಗಾಗಿ ಅಭಿವೃದ್ಧಿಪಡಿಸಿದ 100, 80 ಹಾಗೂ 60 ಅಡಿ ರಸ್ತೆಗಳಿಗೆ ಹೊಂದಿಕೊಂಡಂತೆ ವಾಣಿಜ್ಯ ಹಾಗೂ ಮೂಲೆ ನಿವೇಶನಗಳನ್ನು ಹಂಚಿಕೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಪ್ರಾಧಿಕಾರವು ಪುರೋಭಿವೃದ್ಧಿ ತೆರಿಗೆಯನ್ನು (ಅಭಿವೃದ್ಧಿ ತೆರಿಗೆ) ಅವೈಜ್ಞಾನಿಕವಾಗಿ 17 ಗ್ರಾಮಗಳಿಗೆ ವಿಧಿಸಿದೆ. ಕೂಡಲೇ ತೆರಿಗೆಯನ್ನು ರದ್ದುಗೊಳಿಸಬೇಕು ಎಂದು ಮನವಿ ಮಾಡಿದ್ದಾರೆ.

ನಗರದಲ್ಲಿ ಇಂದು

ಹನುಮ ಜಯಂತಿ ಮಹೋತ್ಸವ: ಬೆಳಿಗ್ಗೆ 6ಕ್ಕೆ ಅಭಿಷೇಕ, ನವನೀತ ಅಲಂಕಾರ, ಸಂಜೆ 5.30ಕ್ಕೆ ಸಂಗೀತ, ನೃತ್ಯ ಪ್ರದರ್ಶನ: ಭಾರತೀಯ ಸಂಗೀತ ಹಾಗೂ ನೃತ್ಯ ಕಲಾವಿದರ ಒಕ್ಕೂಟ, ಆಯೋಜನೆ ಮತ್ತು ಸ್ಥಳ: ಹನುಮ ಸೇನೆ, ದಾರಿ ಆಂಜನೇಯಸ್ವಾಮಿ ಚಾರಿಟಬಲ್ ಟ್ರಸ್ಟ್, ಯಶವಂತಪುರ

ಹನುಮ ಜಯಂತ್ಯೋತ್ಸವ: ಬೆಳಿಗ್ಗೆ 6ರಿಂದ ಅಭಿಷೇಕ, ರಾಮತಾರಕ ಹೋಮ ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ನಾಗಸಂದ್ರ ಆಂಜನೇಯ ಸ್ವಾಮಿ ದೇವಸ್ಥಾನ

ಹನುಮ ಜಯಂತಿ: ಅಭಿಷೇಕ, ಮಹಾಮಂಗಳಾರತಿ, ಆಯೋಜನೆ ಮತ್ತು ಸ್ಥಳ: ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಕೃಷ್ಣರಾಜೇಂದ್ರ ರಸ್ತೆ, ಬೆಳಿಗ್ಗೆ 7.30ರಿಂದ

ಹನುಮ ಜಯಂತಿ, ಯಲಹಂಕ ಬಾಗಿಲು ಆಂಜನೇಯಸ್ವಾಮಿಗೆ ವಿಶೇಷ ಪೂಜೆ, ಪ್ರಸಾದ ವಿನಿಯೋಗ: ಭಾಗವಹಿಸುವವರು: ದಿನೇಶ್ ಗುಂಡೂರಾವ್, ರಾಮಲಿಂಗಾರೆಡ್ಡಿ, ಸುಧೀರ್ ಹೆಗ್ಗಡೆ, ಪ್ರಿಯದರ್ಶಿನಿ ಈ. ಸಾಣೆಕೊಪ್ಪ, ಸಾ.ರಾ. ಗೋವಿಂದು, ಪಾಲನೇತ್ರ, ದಯಾನಂದ್, ಆಯೋಜನೆ: ಅಖಿಲ ಕರ್ನಾಟಕ ಕನ್ನಡ ಕಣ್ಮಣಿ ಡಾ. ರಾಜ್ ಸಾಂಸ್ಕೃತಿಕ ಸಂಸ್ಥೆ, ಸ್ಥಳ: ಮೈಸೂರು ಬ್ಯಾಂಕ್ ಚೌಕ, ಕೆಂಪೇಗೌಡ ರಸ್ತೆ, ಮಧ್ಯಾಹ್ನ 12

ರಂಗ ಸಂಭ್ರಮ: ಉದ್ಘಾಟನೆ: ಶ್ರೀನಿವಾಸ್ ಮೇಷ್ಟ್ರು, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಅತಿಥಿ: ವೀಣಾ ಶರ್ಮಾ ಭೂಸನೂರಮಠ, ರಂಗಗೌರವ ಸ್ವೀಕರಿಸುವವರು: ಜೆ. ಲೋಕೇಶ್, ಬಂಗಾರಪ್ಪ ಕುದಾನಪುರ್, ‘ನಟಧರ್ಮ’ ನಾಟಕ ಪ್ರದರ್ಶನ, ನಿರ್ದೇಶನ: ಗಣೇಶ್ ಮಂದಾರ್ತಿ, ಆಯೋಜನೆ: ನಾಟಕ ಬೆಂಗ್ಳೂರು, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6

ನೂತನ ಪ್ರಸಂಗ: ಆಯೋಜನೆ: ನಂದಿಕೇಶ್ವರ ಪ್ರಸಾದಿತ ಯಕ್ಷಗಾನ ಮಂಡಳಿ, ಸ್ಥಳ: ಚಾಮುಂಡೇಶ್ವರಿ ಆಟದ ಮೈದಾನ, ನಾಲ್ಕನೇ ಟಿ. ಹಂತ, ಜಯನಗರ, ಸಂಜೆ 6

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಬಿಎಂಎಸ್‌ನಲ್ಲಿ ಹ್ಯಾಕಥಾನ್

ಬಿಎಂಎಸ್ ತಾಂತ್ರಿಕ ಮತ್ತು ವ್ಯವಸ್ಥಾಪನಾ ಮಹಾವಿದ್ಯಾಲಯವು ಆಯೋಜಿಸಿದ್ದ ಹ್ಯಾಕಥಾನ್‌ನಲ್ಲಿ ಗೆದ್ದ ತಂಡಕ್ಕೆ ಬಹುಮಾನ ವಿತರಿಸಲಾಯಿತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಎಸ್ ತಾಂತ್ರಿಕ ಮತ್ತು ವ್ಯವಸ್ಥಾಪನಾ ಮಹಾವಿದ್ಯಾಲಯವು ಬೋಧಕ ಸಿಬ್ಬಂದಿಗೆ ‘ರೀಬೂಟ್ 2025’ ಹ್ಯಾಕಥಾನ್ ಆಯೋಜಿಸಿತ್ತು.

ಸ್ಪರ್ಧೆಯಲ್ಲಿ 54 ತಂಡಗಳು ತಮ್ಮ ವಿಚಾರವನ್ನು ಪ್ರಸ್ತುತ ಪಡಿಸಿದವು. ಅಂತಿಮ ಸುತ್ತಿಗೂ ಮೊದಲು ಎಲ್ಲ ತಂಡಗಳು ಎರಡು ಸುತ್ತುಗಳನ್ನು ಪೂರ್ಣಗೊಳಿಸಿದ್ದವು. ಉತ್ಪನ್ನ ಅಭಿವೃದ್ಧಿ ಮತ್ತು ಉದ್ಯಮಶೀಲತೆಗೆ ಕಾರಣವಾಗುವ ಅತ್ಯುತ್ತಮ ವಿಚಾರಗಳನ್ನು ಮಂಡಿಸಿದ ತಂಡಗಳಿಗೆ ₹1.8 ಲಕ್ಷ ಬಹುಮಾನ ವಿತರಿಸಲಾಯಿತು.

ಯೂನಿಸಿಸ್‌ನ ಎನ್.ಎಸ್. ಶ್ರೀವತ್ಸ, ಎಸ್‌ಎಪಿ ಲ್ಯಾಬ್ಸ್‌ನ ಹಿರಿಯ ನಿರ್ದೇಶಕ ಪ್ರಸನ್ನ ಮಾವಿನಕುಳಿ, ಸ್ಯಾಮ್‌ಸಂಗ್ ಎಲೆಕ್ಟ್ರಾನಿಕ್ಸ್‌ನ ಪ್ರಶಾಂತ್ ಕಮ್ಮಂಪತಿ, ಒರಾಕಲ್‌ನ ಅನುಪ್ ಮಿಶ್ರಾ ಅವರು ತೀರ್ಪುಗಾರರಾಗಿದ್ದರು. ಅಭಿಲಾಷ್ ಚಕ್ಕನ್, ಜಯಕರ ಕಿನಿ, ಸೀಮಾ ಕೊಹ್ಲಿ, ಜಯಸುಧಾ ಮತ್ತು ಹೇಮಂತ್ ಬನ್ಸಾಲ್ ಅವರು ತಂಡಗಳಿಗೆ ಮಾರ್ಗದರ್ಶನ ನೀಡಿದರು.

ಯೂನಿಸಿಸ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಲಲಿತಾನಂದ ಮೋಸೆಸ್, ಬಿಎಂಎಸ್‌ಐಟಿಯ ಅವಿರಾಮ ಶರ್ಮಾ, ಪ್ರಾಂಶುಪಾಲ ಎಚ್.ಎ. ಸಂಜಯ್, ಉಪ ಪ್ರಾಂಶುಪಾಲ ಅನಿಲ್ ಜಿ.ಎನ್, ಮುಖ್ಯ ಸಂಯೋಜಕ ಸನೀಶ್ ಕ್ಲಿಟಸ್ ಭಾಗವಹಿಸಿದ್ದರು.

ಯುವಿಸಿಇ: ಅತ್ಯಾಧುನಿಕವಾದ ಹೊಸ ಬ್ಲಾಕ್ ನಿರ್ಮಾಣ

ಸಂಶೋಧನೆಗೆ ನೆರವಾಗಲು 'ಸೆಂಟರ್ ಆಫ್ ಎಕ್ಸಲೆನ್ಸ್' ಆರಂಭಿಸಲು ನಿರ್ಧಾರ

• ಎ.ಎಂ.ಸುರೇಶ

ಬೆಂಗಳೂರು: ಎರಡೂವರೆ ವರ್ಷಗಳ ಹಿಂದೆ ಸ್ವಾಯತ್ತ ಸಂಸ್ಥೆಯಾಗಿ ರೂಪುಗೊಂಡಿರುವ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯಕ್ಕೆ (ಯುವಿಸಿಇ) ಅಗತ್ಯವಿರುವ ಅತ್ಯಾಧುನಿಕವಾದ ಹೊಸ ಬ್ಲಾಕ್ ನಿರ್ಮಾಣ ಕಾರ್ಯ ಭರದಿಂದ ಸಾಗಿದ್ದು, ಮುಂದಿನ ವರ್ಷ ಪೂರ್ಣಗೊಳ್ಳಲಿದೆ.

ರಾಜಧಾನಿಯ ಹೃದಯ ಭಾಗದಲ್ಲಿರುವ ಯುವಿಸಿಇಯ ಪದವಿ ವಿಭಾಗದ ಎಂಟು ಹಾಗೂ ಸ್ನಾತಕೋತ್ತರ ವಿಭಾಗದ 24 ವಿಷಯಗಳಲ್ಲಿ ಸುಮಾರು 3,600 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ₹85 ಕೋಟಿ ವೆಚ್ಚದಲ್ಲಿ ನೂತನ ಬ್ಲಾಕ್ ನಿರ್ಮಿಸಲಾಗುತ್ತಿದೆ.

ಯುವಿಸಿಇ ಕ್ಯಾಂಪಸ್ ಒಟ್ಟು 12.5 ಎಕರೆ ಜಾಗವನ್ನು ಹೊಂದಿದೆ. ಈ ಪೈಕಿ 2.21 ಎಕರೆ ಜಾಗದಲ್ಲಿ ನೆಲಮಹಡಿ ಹೊರತುಪಡಿಸಿ ಒಟ್ಟು ಎಂಟು ಮಹಡಿಗಳನ್ನು ನಿರ್ಮಿಸಲಾಗುತ್ತಿದೆ. ಕೆಳಗೆ ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಇರಲಿದೆ. 2022-23ರಲ್ಲಿ ಕಾಮಗಾರಿ ಆರಂಭವಾಗಿದ್ದು, ಮೊದಲ ಎರಡು ಮಹಡಿಯನ್ನು 2026ರ ಜನವರಿಗೆ ಹಾಗೂ ಉಳಿದ ಮಹಡಿಗಳ ನಿರ್ಮಾಣ ಕಾರ್ಯವನ್ನು 2026ರ ಜೂನ್‌ಗೆ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

ರಾಜ್ಯ ಸರ್ಕಾರದ ಆರ್ಥಿಕ ನೆರವಿನಿಂದ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡಿದ್ದು, ಈಗಾಗಲೇ ₹51 ಕೋಟಿ ಬಿಡುಗಡೆಯಾಗಿದೆ. ಉಳಿದ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಈ ಕಟ್ಟಡ ನಿರ್ಮಾಣವಾದ ಬಳಿಕ ಸಂಶೋಧನೆ, ಶೈಕ್ಷಣಿಕ ಚಟುವಟಿಕೆಗಳಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಯುವಿಸಿಇ ಕುಲಸಚಿವ ಎ.ವಿ.ಶ್ರೀರಾಮ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಸೆಂಟರ್ ಆಫ್ ಎಕ್ಸಲೆನ್ಸ್: ನೂತನ ಬ್ಲಾಕ್‌ನಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಆರಂಭಿಸಲಾಗುತ್ತದೆ. ತ್ಯಾಜ್ಯ ನಿರ್ವಹಣೆ, ನಗರಗಳಲ್ಲಿ ಪ್ರವಾಹ ತಡೆಗಟ್ಟುವುದು, ಸಂಚಾರ ನಿರ್ವಹಣೆ ಇತ್ಯಾದಿ ಕ್ಷೇತ್ರಗಳಲ್ಲಿ ಸಂಶೋಧನೆ ಮಾಡಿ ಸರ್ಕಾರಕ್ಕೆ ಮತ್ತು ಸಂಬಂಧಪಟ್ಟ ಇಲಾಖೆಗಳಿಗೆ ಅಗತ್ಯ ಸಲಹೆಗಳನ್ನು ನೀಡುವ ಕೆಲಸವನ್ನು ಸೆಂಟರ್ ಆಫ್ ಎಕ್ಸ್‌ಲೆನ್ಸ್ ಮೂಲಕ ಮಾಡಲಾಗುತ್ತದೆ.

'ನಗರಗಳು ವೇಗವಾಗಿ ಬೆಳೆಯುತ್ತಿದ್ದು, ಜನಸಂಖ್ಯೆ ಹೆಚ್ಚಿದಂತೆಲ್ಲ ಹೊಸ ಹೊಸ ಸಮಸ್ಯೆಗಳು ಸೃಷ್ಟಿಯಾಗುತ್ತಿವೆ. ಅವುಗಳಿಗೆ ಪರಿಹಾರ ಕಂಡುಕೊಳ್ಳುವ ಕೆಲಸವನ್ನು ಸಂಶೋಧನಾ ಕ್ಷೇತ್ರದಲ್ಲಿ ತೊಡಗಿರುವವರು, ಅವರಿಗೆ ಮಾರ್ಗದರ್ಶನ ಮಾಡುತ್ತಿರುವವರು ಮಾಡಲಿದ್ದಾರೆ. ಇದರಿಂದ ಅವರಿಗೂ ತಮ್ಮ ಪ್ರತಿಭಾ ಪ್ರದರ್ಶನಕ್ಕೆ ಅವಕಾಶ ಸಿಗಲಿದೆ' ಎಂದು ಅವರು ವಿಶ್ಲೇಷಿಸಿದರು.

'ಮೆಕ್ಯಾನಿಕಲ್ ವಿಭಾಗದ ಪ್ರಯೋಗಾಲಯಗಳು, ತರಗತಿ ಕೊಠಡಿಗಳು, ಆಡಳಿತ ಮಂಡಳಿ ಕೊಠಡಿ, ಸಿಬ್ಬಂದಿ ಕೊಠಡಿ, ಸಭಾಂಗಣ, ಆಡಳಿತ ವಿಭಾಗ ಸೇರಿದಂತೆ ಎಲ್ಲದಕ್ಕೂ ಅವಕಾಶ ಕಲ್ಪಿಸಲಾಗುತ್ತದೆ. ಅಲ್ಲದೆ ಸಾಕಷ್ಟು ಸ್ಥಳಾವಕಾಶ ಇರುವುದರಿಂದ ಹೊಸ ಹೊಸ ಕೋರ್ಸ್‌ಗಳನ್ನು ಆರಂಭಿಸಲು ಅನುಕೂಲವಾಗಲಿದೆ. ಇದಾದ ಬಳಿಕ ಕೊಠಡಿಗಳ ಕೊರತೆಯ ಪ್ರಶ್ನೆ ಉದ್ಭವಿಸುವುದಿಲ್ಲ' ಎನ್ನುತ್ತಾರೆ ಶ್ರೀರಾಮ್.

ಯುವಿಸಿಇ ಅನ್ನು ಐಐಟಿ ಮಾದರಿಯಲ್ಲಿ ಅಭಿವೃದ್ಧಿಪಡಿಸಬೇಕು ಎಂಬ ಉದ್ದೇಶದಿಂದ ರಾಜ್ಯ ಸರ್ಕಾರವು ಇದನ್ನು ಬೆಂಗಳೂರು ವಿಶ್ವವಿದ್ಯಾಲಯದಿಂದ ಪ್ರತ್ಯೇಕಗೊಳಿಸಿದ್ದು, 2023ರ ಏಪ್ರಿಲ್ 1ರಿಂದ ಸ್ವಾಯತ್ತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ.

ಮೈಸೂರಿನ ದಿವಾನರಾಗಿದ್ದ ಸರ್ ಎಂ.ವಿಶ್ವೇಶ್ವರಯ್ಯ ಅವರು 1917ರಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಿದ್ದು, ಇಲ್ಲಿ ವ್ಯಾಸಂಗ ಮಾಡಿದವರು ದೇಶ-ವಿದೇಶಗಳಲ್ಲಿ ಉನ್ನತ ಹುದ್ದೆಗಳಲ್ಲಿ ಇದ್ದಾರೆ. ಹಳೆಯ ವಿದ್ಯಾರ್ಥಿಗಳು ಕೂಡ ಯುವಿಸಿಇಯ ಅಭಿವೃದ್ಧಿ ಕಾರ್ಯಗಳಿಗೆ ಕೈಜೋಡಿಸುತ್ತಿದ್ದು, ಸಣ್ಣಪುಟ್ಟ ನೆರವನ್ನೂ ನೀಡುತ್ತಿದ್ದಾರೆ.



ಯುವಿಸಿಇಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಬ್ಲಾಕ್ ಪ್ರಜಾವಾಣಿ ಚಿತ್ರ: ರಂಜು ಪಿ

ಮುಖ್ಯಾಂಶಗಳು

- ಯುವಿಸಿಇಗೆ 108 ವರ್ಷಗಳ ಇತಿಹಾಸ
- ನೂತನ ಬ್ಲಾಕ್‌ಗೆ ₹85 ಕೋಟಿ ವೆಚ್ಚ
- ಹಂತ ಹಂತವಾಗಿ ಅನುದಾನ ಬಿಡುಗಡೆ

ಯುವಿಸಿಇ ಬಗ್ಗೆ ಸರ್ಕಾರಕ್ಕೆ ಕಾಳಜಿ ಇದೆ. ನಮ್ಮ ಮನವಿಗಳಿಗೆ ಅಧಿಕಾರಿಗಳು, ಸಚಿವರು ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಐಐಟಿ ಮಾದರಿಯಲ್ಲಿ ಅಭಿವೃದ್ಧಿಯಾಗುವ ವಿಶ್ವಾಸವಿದೆ

ಎ.ವಿ.ಶ್ರೀರಾಮ್
ಕುಲಸಚಿವರು, ಯುವಿಸಿಇ

ಹೊಸ ಕ್ಯಾಂಪಸ್ ನಿರ್ಮಾಣ

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಹೊಸ ಕ್ಯಾಂಪಸ್ ನಿರ್ಮಾಣಕ್ಕೆ ಸರ್ಕಾರ 52 ಎಕರೆ ಜಾಗ ಮಂಜೂರು ಮಾಡಿದೆ. ಇದರ ನೀಲನಕ್ಷೆ, ಕಟ್ಟಡದ ನಕ್ಷೆ ಸಿದ್ಧಪಡಿಸುವ ಕೆಲಸಕ್ಕೆ ಸರ್ಕಾರ ₹6.5 ಕೋಟಿ ಮಂಜೂರು ಮಾಡಿದೆ. ಐಐಟಿ ಮಾದರಿಯಲ್ಲಿ ಯುವಿಸಿಇಯನ್ನು ಅಭಿವೃದ್ಧಿಪಡಿಸಲು ₹500 ಕೋಟಿ ಅನುದಾನ ನೀಡುವುದಾಗಿ ಸರ್ಕಾರ ಈಗಾಗಲೇ ಘೋಷಿಸಿದೆ.

'ಸರ್ಕಾರ ಘೋಷಿಸಿದ ಅನುದಾನ ಸಿಗುವ ವಿಶ್ವಾಸವಿದೆ. ಜ್ಞಾನಭಾರತಿಯಲ್ಲಿ ಹೊಸ ಕ್ಯಾಂಪಸ್ ನಿರ್ಮಾಣವಾದರೆ, ಈಗಿರುವ ಸಿವಿಲ್, ವಾಸ್ತುಶಿಲ್ಪ ವಿಭಾಗದ ವಿಸ್ತರಣೆಗೆ ಅನುಕೂಲವಾಗವಾಗಲಿದೆ. ಅಲ್ಲದೆ, ಅಲ್ಲೂ ಇನ್ನಷ್ಟು ಕೋರ್ಸ್‌ಗಳನ್ನು ಆರಂಭಿಸಬಹುದು' ಎಂದು ಶ್ರೀರಾಮ್ ಅಭಿಪ್ರಾಯಪಟ್ಟರು.

ಹಲವು ವರ್ಷಗಳ ಪ್ರಯತ್ನ

ಪ್ರೊ.ಕೆ.ಆರ್.ವೇಣುಗೋಪಾಲ್ ಅವರು ಯುವಿಸಿಇ ಪ್ರಾಂಶುಪಾಲರಾಗಿದ್ದಾಗ ಹೊಸ ಬ್ಲಾಕ್ ನಿರ್ಮಾಣಕ್ಕೆ ಪ್ರಯತ್ನ ಆರಂಭಿಸಿದ್ದರು. ಆ ನಂತರ ಅವರು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಯಾದಾಗ ಇದಕ್ಕೊಂದು ಸ್ಪಷ್ಟರೂಪ ಸಿಕ್ಕಿತ್ತು.

ಒಟ್ಟು ಹತ್ತು ಮಹಡಿಗಳ ಬ್ಲಾಕ್ ನಿರ್ಮಾಣಕ್ಕೆ ಅವರ ಅವಧಿಯಲ್ಲಿ ನೀಲನಕ್ಷೆ ಸಿದ್ಧವಾಗಿತ್ತು. ಬಳಿಕ ಅದನ್ನು ಎಂಟು ಮಹಡಿಗೆ ಸೀಮಿತಗೊಳಿಸಲಾಯಿತು. ನನ್ನ ಅವಧಿಯಲ್ಲಿ ಕಟ್ಟಡ ನಿರ್ಮಾಣಕ್ಕೆ ಶಂಕು ಸ್ಥಾಪನೆ ಮಾಡಲಾಯಿತು. ಈಗ ಪೂರ್ಣಗೊಳ್ಳುವ ಹಂತಕ್ಕೆ ಬಂದಿರುವುದು ಸಂತಸದ ವಿಷಯ ಎಂದು ವೇಣುಗೋಪಾಲ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಸುಧಾ, ಮಯೂರ ಓದಿರಿ

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
Notice is hereby given to the Public that my Client **Sri. Anok Melvin Marshall** S/o Smt.Uma Rani.G.S, R/o K.S.Town, Bengaluru (THE PURCHASER) intended to purchase the schedule property described below from its owner namely Ms. Umadevi, D/o. Chennabasappa Bhogi, R/o of Jayanagar 5th Block, Bengaluru (THE OWNER) have been acquired through the Registered Sale Deed dated 08.10.2001, registered as No. BNG (U) ANKL.S.R/D.NO. 4226/2001-02, Book No. I, and stored in CD No. ANKL. S.R 04/2001-02, in the office of the Sub-Registrar, Anekal, (Basavanagudi district), Bengaluru.
Any person, who has/have claim/right/title or interest on the schedule property, may lodge such claim with the undersigned within 7 days from the date of this notice, failing which, the claim(s) or objections if any, of such person or persons will be considered to have been waived and my client will proceed to complete the sale transaction with the owner of the schedule property by execution of registered sale deed.
SCHEDULE PROPERTY
All that piece and parcel of Site No. 24, Old No. 178:96:24 (Janjar Katha No-210:96:24) Current Katha No. 236/210/24/1 with eAASTHI-PID No: 9040970245, at Denmar Avenue Situated at Survey No. 93/2 of Kamasandra Village, Hebagodi CMC, Attibele Hobli, Anekal Taluk, Bangalore Urban District 560100.
Measuring East to West 30ft, North to South 40ft, Total 1200sqft Bounded on: East by: Property Belongs to Shanthamalagi previously (currently bifurcated: belonging to Sri.N.Vadiraja and to Sir.Radhakrishna B.N) West by: Site No. 23 North by: Site No.25 South by: Road
Sd/- PRAVEEN M.R
Advocate
No.188, 3rd Floor, 2nd Cross Road, 5th Phase, Sachidanandha Nagara Layout, R.R Nagara, Bangalore-560098
M: 9449104230 / 9343833326

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

BUSINESS

Business to Business

Finance

ALL LOANS AVAILABLE @4% YEARLY INTEREST PERSONAL BUSINESS PROJECT TAKEOVER MORTGAGE MINIMUM DOCUMENTATION QUICK DISBURSEMENT MAHALAKSHMI FINANCE 9984823862

PERSONAL

Change of Name

CHANGE OF NAME
I, **VAJEEHA BANU @ VAJIHABANU @ VAJEEHA,** residing at # 1757, Santhe Field, Malebennur, Harihara Taluk, Davanagere Dist., declare that the above names pertain to me only. Henceforth I shall be known as **VAJEEHA BANU**, vide affidavit 13.05.2025 before notary M.Prathaparudra, Davanagere.

CHANGE OF NAME
I, **Naveena M** and **Honakeri Naveena** residing at No. 6, Chowdeshwari Nilaya R.T. Nagar Public School, Yehahanka Taluk, Singanayakanahalli, Bengaluru North-560064, declare that the above names pertain to me only & henceforth I shall be known as **NAVEENA M** vide affidavit dated 27.11.2025 before notary S.R. Ravikumar, Bengaluru.

CHANGE OF NAME
I, **FATHIMA BATOOL MOHAMMED FAHIM,** residing at No.S-1, Vastav Regency 1st Cross, 9th A Main, 1st Stage, BTM Layout, Bengaluru - 560029 have changed my name to **FATIMA BATOOL** vide affidavit dtd: 01-12-2025 before notary K.N.Ramadevi, Bengaluru, Henceforth I shall be called as **FATIMA BATOOL** only.

CHANGE OF NAME
I, **Shabana @ Shabana Taj @ S Shabana Musheer,** residing at No. 09, D Street, Opposite to Sharma Transport, Kalasipalyam, Bengaluru-560002, declare that the above names pertain to me only & henceforth I shall be known as **S SHABANA MUSHEER** vide affidavit dated 01.12.2025 before notary M Prabhakar, Bengaluru.

CHANGE OF NAME
I, **SUNIL S NEERALAGI,** residing at No.3375, Sri Vishweshwaraiah Layout, 1st Block, Kengeri Satellite Town, Bengaluru - 560060, have changed my name to **SUNIL VIRUPAKSHAPPA SHYADAGUPPI** vide affidavit dtd: 23-11-2025 before notary P. Anuradha, Bengaluru, Henceforth I shall be called as **SUNIL VIRUPAKSHAPPA SHYADAGUPPI** only.

I,SHRADDHA WAINGANKAR Residing`at Prestige_North Point No.2031,B_Wing HRBR`Layout 3rd`Block, Kalyan_Nagar, Bengaluru-560043 have`changed my`Name`to SHRADDHA SATYAVAN WAINGANKAR vide`Affidavit Dtd:29.11.2025 Sworn`Before Notary H.S.Sakalesh Aradhya, Bangalore

EXH-10
ಪ್ರಕಟಣೆ
ಕೌಟುಂಬಿಕ ನ್ಯಾಯಾಲಯ ನಂ. 6, ಮುಂಬೈ – ಬಾಂದ್ರಾ
ಅರ್ಜಿ ನಂ. ಡಿ–21/2025
ಶ್ರೀಮತಿ. ಜಾನಕಿ ಶಿವಕುಮಾರ್ ಸುಬ್ರಮಣಿಯನ್ ...ಅರ್ಜಿದಾರರು
ವಿರುದ್ಧ
ಶ್ರೀ. ಶಿವಕುಮಾರ್ ಸುಬ್ರಮಣಿಯನ್ ...ಎದುರುದಾರರು
ಗೆ,
ಶ್ರೀ. ಶಿವಕುಮಾರ್ ಸುಬ್ರಮಣಿಯನ್ ...ಎದುರುದಾರರು
ವಿಳಾಸ: 203, ಅಂಕುಶ ಮ್ಯಾಪಲ್, ಬೆಥೆಲ್ ನಗರ, 2ನೇ ಮುಖ್ಯರಸ್ತೆ, ಕೆ. ಆರ್. ಪುರಂ, ಬೆಂಗಳೂರು, ಕರ್ನಾಟಕ, 560036. (ಮೊಬೈಲ್ ನಂ. 7738763069)
ಇದನ್ನು ಗಮನಿಸಿ, ಮೇಲೆ ಹೆಸರಿಸಲಾಗಿರುವ ಅರ್ಜಿದಾರರು, ಕೌಟುಂಬಿಕ ನ್ಯಾಯಾಲಯ ಕಾಯ್ದೆಯ 7(1)(ಜಿ) ಸಂಬಂಧಿತ ಗಾರ್ಡಿಯನ್ ಅಂಡ್ ವಾರ್ಡ್ಸ್ ಆಕ್ಟ್‌ನ ಸೆಕ್ಷನ್ 7(1) (ಎ) (ಬಿ) ಅಡಿಯಲ್ಲಿ ಕಸ್ಟಡಿಗಾಗಿ ನಿಮ್ಮ ವಿರುದ್ಧ ದಾವೆ ಸಲ್ಲಿಸಿರುತ್ತಾರೆ.
ಮುಂದುವರಿದಂತೆ, **ಸದರಿ ಅರ್ಜಿಯ ವಿಚಾರಣೆಯು ದಿನಾಂಕ 8ನೇ ಜನವರಿ, 2026 ರಂದು ಬೆಳಗ್ಗೆ 11:00 ಗಂಟೆಗೆ** (ಕರಾರುವಾಕ್ಕಾಗಿ) **ಕೌಟುಂಬಿಕ ನ್ಯಾಯಾಲಯ ನಂ. 6, ಮುಂಬೈ–ಬಾಂದ್ರಾ** ಅಥವಾ ಕೌಟುಂಬಿಕ ನ್ಯಾಯಾಲಯ ಮುಂಬೈ–ಬಾಂದ್ರಾ ಇಲ್ಲಿನ, ಸದರಿ ನ್ಯಾಯಾಲಯ ನಂ. 6ರ ಕಾರ್ಯಾಧಿಕಾರ ಹೊಂದಿರುವ ಯಾವುದೇ ಮಾನ್ಯ ನ್ಯಾಯಾಧೀಶರ ಸಮ್ಮುಖದಲ್ಲಿ ನೀವು ಖುದ್ದಾಗಿ ಹಾಜರಾಗಬೇಕು ಮತ್ತು ನಿಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಬೇಕು, ಇದಕ್ಕೆ ತಪ್ಪಿದಲ್ಲಿ, ಕೌಟುಂಬಿಕ ನ್ಯಾಯಾಲಯ ನಂ. 6ರ ನ್ಯಾಯಾಧೀಶರು, ಸದರಿ ಅರ್ಜಿಯ ವಿಚಾರಣೆಯನ್ನು ಮುಂದುವರಿಸುತ್ತಾರೆ ಮತ್ತು ನಿಮ್ಮ ವಿರುದ್ಧ ಏಕಪಕ್ಷೀಯವಾಗಿ ತೀರ್ಪು ಘೋಷಿಸಬಹುದಾಗಿರುತ್ತದೆ;
ಕೌಟುಂಬಿಕ ನ್ಯಾಯಾಲಯ ನಂ. 6ರ ನ್ಯಾಯಾಧೀಶರಾದ ಶ್ರೀಮತಿ. ಆರ್. ಎನ್. ಖಾನ್ ಇವರಿಂದ ಸದರಿ ಪ್ರಕಟಣೆಯನ್ನು ಆದೇಶಿಸಲಾಗಿದೆ.
12ನೇ ನವಂಬರ್, 2025 ರಂದು ನನ್ನ ಕೈಯಾರೆ ಸದರಿ ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.
ಸಹಿ/– ಸಹಾಯಕ ರಿಜಿಸ್ಟ್ರಾರ್
ಕೌಟುಂಬಿಕ ನ್ಯಾಯಾಲಯ, ಮುಂಬೈ,
ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಪೂರ್ವ), ಮುಂಬೈ–400051

Announcements

WITH GREAT joy, I,Rakesh KR happy to share that my wife, Dr. Varshini SK conferred her PhD in Management at the 8th Annual Convocation of Presidency University on 29/11/2025. Her thesis, "The Impact of Individual Investors' Behaviour on Investment Decision Making," was guided by Dr.Srinivasan P.

Lost

DOCUMENT LOST
I, **K. Ramesh**, R/a Shakambari Layout, Attibele, Anekal Taluk have lost Sale deed document in name K. Ramesh S/o Late Kenchappa and Shobha W/o K. Ramesh bearing **Sy. No. 295, Site No. 113, Size 30 x 40,** Attibele Anekal Tq **Document No ABL-1-00522-2011-12 CD No. ABLD64** dated 13-05-2011 registered at office Attibele, Anekal Taluk on 25-11-2025 at Attibele.
Finders please contact : 9443687998 or inform near by Police

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

CHANGE OF NAME
I, **REMYA RETHY @ REMYA RAJAMMAL,** residing at Jai Bharathi Signature, Dodda Kempaiah Layout, Kalkere, Horamavu, Bengaluru - 560043, declare that the above names pertain to me only.
I have changed my name **Remya Rajammal** to **Remya Rethy** in Passport. Henceforth I shall be known as **REMYA RETHY**, vide affidavit 24.10.2025 before notary Uday Kumar K, Bengaluru

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ನೈರುತ್ಯ ರೈಲ್ವೆ
ಇ–ಟೆಂಡರ್ ಸೂಚನೆ ಸಂಖ್ಯೆ ಪ್ರಕಟಣೆ
ಜಿಇಎಂ/2025/ಬಿ/6927257 ದಿನಾಂಕ: 27.11.2025
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ–ಟೆಂಡರ್ ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದ ಟಿಆರ್‌ಡಿ ಡಿಪೋಗಳಿಗೆ 2 ವರ್ಷಗಳ ಅವಧಿಗೆ ಜನ ಮತ್ತು ಸಾಮಗ್ರಿಗಳನ್ನು ಸಾಗಿಸಲು ಎಂಯುವಿ ಪಿಕ್ ಅಪ್ ವ್ಯಾನ್‌ಗಳನ್ನು ಪಡೆಯುವುದು.	ರೂ. 2,77,43,592/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16–12–2025 ರಂದು 19.30 ಗಂಟೆಗಳವರೆಗೆ
ಹೆಚ್ಚಿನ ಮಾಹಿತಿಗಳಿಗಾಗಿ: www.gem.gov.in ಲಾಗಿನ್ ಮಾಡಿ
ಹಿರಿಯ ವಿಭಾಗೀಯ ವಿದ್ಯುತ್ ಅಭಿಯಂತರರು/ಟಿಆರ್‌ಡಿ, ಬೆಂಗಳೂರು
ಪಿಯುಬಿ/697/ಎಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2025-26
ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway - SWR SWRRLY @SWRAILWAYHQ @sw_railways

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, 18ನೇ ಮಹಡಿ,
ಸುಭಾಷ್ ಚಂದ್ರ ಬೋಸ್ ಕಟ್ಟಡ, ಎಂ.ಜಿ. ರಸ್ತೆ, ಬೆಂಗಳೂರು–560001.
ಸಂ. ಕಾಅ/ನ.ವಿ.ಕೋ/ಪಿ.ಆರ್/01/2025–26 ದಿನಾಂಕ : 01.12.2025
ಪ್ರಕಟಣೆ
ವಿಷಯ : ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಅಡಿಯಲ್ಲಿ ನಗರ ವಿನ್ಯಾಸ ಕೋಶಕ್ಕಾಗಿ ಗುತ್ತಿಗೆ ಆಧಾರದ ಮೇಲೆ ನಗರ ಯೋಜಕರು, ನಗರ ವಿನ್ಯಾಸಕರು ಮತ್ತು ನಗರ ಸಾರಿಗೆ ಯೋಜನಾ ತಜ್ಞರನ್ನು ನೇಮಿಸಿಕೊಳ್ಳುವುದು.
ಬೆಂಗಳೂರು ಕೇಂದ್ರ ನಗರ ಪಾಲಿಕೆಯ ನಗರ ವಿನ್ಯಾಸ ಕೋಶದಲ್ಲಿ ಒಂದು (1) ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನಗರ ಯೋಜಕರು– 1 ಹುದ್ದೆ, ನಗರ ವಿನ್ಯಾಸಕರು–1 ಹುದ್ದೆ ಮತ್ತು ನಗರ ಸಾರಿಗೆ ಯೋಜನಾ ತಜ್ಞರು–1 ಹುದ್ದೆಗಳಿಗೆ ಅರ್ಹ ಮತ್ತು ಅನುಭವಿ ವೃತ್ತಿಪರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗಳ ವಿವರಗಳು ಮತ್ತು ಆಯ್ಕೆಗೆ ಮಾನದಂಡಗಳು ಮತ್ತು ಇತರ ಸಂಬಂಧಿತ ವಿವರಗಳು ಜಿಬಿಎ ವೆಬ್‌ಸೈಟ್ **https://bbmp.gov.in/urban-design** ನಲ್ಲಿ ಲಭ್ಯವಿದೆ.
ಅರ್ಜಿ ಸಲ್ಲಿಸುವ ವಿಧಾನ :–
1. ಆಸಕ್ತ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಈ ಕೆಳಗಿನವುಗಳೊಂದಿಗೆ **https://bbmp.gov.in/urban-design** ನಲ್ಲಿ ಸಲ್ಲಿಸಬೇಕು.
(ಎ) ಸ್ವ–ವಿವರ (ಸಿವಿ) (ಬಿ) ಶೈಕ್ಷಣಿಕ ಅರ್ಹತಾ ಪ್ರಮಾಣ ಪತ್ರಗಳು ಮತ್ತು ಅನುಭವ ಪ್ರಮಾಣ ಪತ್ರಗಳ ಪ್ರತಿಗಳು (ಸಿ) ಸಂಬಂಧಿತ ಕೆಲಸ / ಯೋಜನೆಗಳ ವಿವರ.
2. ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಬೇಕು.
3. ಅಪೂರ್ಣ ಅರ್ಜಿಗಳನ್ನು ಮತ್ತು ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
4. ಯಾವುದೇ ಕ್ವೈರಿಗಳನ್ನು ಕಾರ್ಯಪಾಲಕ ಅಭಿಯಂತರರು, 18ನೇ ಮಹಡಿ, ಸುಭಾಷ್‌ಚಂದ್ರ ಬೋಸ್ ಕಟ್ಟಡ, ಎಂ.ಜಿ. ರಸ್ತೆ, ಬೆಂಗಳೂರು – 560001, ದೂ ಸಂಖ್ಯೆ : 9844732311 ಅಥವಾ **bcccqcz1@gmail.com** ಗೆ ಇಮೇಲ್ ಮಾಡಿ.
5. ಅರ್ಜಿಗಳನ್ನು ಸಲ್ಲಿಸಲು ಕೊನೆಯ **ದಿನಾಂಕ : 15.12.2025**
ಸಹಿ/– ಕಾರ್ಯಪಾಲಕ ಅಭಿಯಂತರರು
ನಗರ ವಿನ್ಯಾಸ ಕೋಶ, ಬೆಂ.ಕೇ.ನ.ಪಾ

ನಗರಸಭಾ ಕಾರ್ಯಾಲಯ, ರಾಮನಗರ
ಬೆಂಗಳೂರು ದಕ್ಷಿಣ ಜಿಲ್ಲೆ – 562159
ದೂರವಾಣಿ ಸಂ. : 080–27271286 e-mail: itstaff_ulb_ramanagaram@yahoo.com
ಸಂ.: ನಸರಾ/ತಾ.ವಿ./ಟೆಂ./ಸಿ.ಆರ್./58/2025–26 ದಿನಾಂಕ: 29.11.2025
ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ)
(ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ರಾಮನಗರ ನಗರಸಭೆಯ ಸ್ವಂತ ನಿಧಿಯಡಿಯಲ್ಲಿ ಈ ಕೆಳಕಂಡ ಸೇವೆಗಳ ಟೆಂಡರ್‌ಗಳನ್ನು ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ತರಬೇತಿ ನೀಡುವ ಸಂಸ್ಥೆಗಳು ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮುಖಾಂತರ ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ (Technical qualification criteria) ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ಅಭಿಯಂತರರ ಶಾಖೆಯಿಂದ ಪಡೆಯಬಹುದು. ಈ ಕೆಳಕಂಡಂತೆ ನಿಗಧಿಪಡಿಸಿದ ಇ.ಎಂ.ಡಿ.ಯನ್ನು ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು. ಇ.ಎಂ.ಡಿ.ಯು ಟೆಂಡರ್‌ನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) 90 ದಿನಗಳವರೆಗೆ ಮಾನ್ಯತೆ ಇರತಕ್ಕದ್ದು.

ಕ್ರ. ಸಂ.	ಇಂಡೆಂಟ್ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ ಗಳಲ್ಲಿ)	ಟೆಂಡರ್ ಫಾರಂ ಶುಲ್ಕ (ರೂ. ಗಳಲ್ಲಿ)
1	DMA/2025-26/SE6625/Call-2	4.90	12,250/-	As per KPPP
2	DMA/2025-26/SE6629/Call-2	4.90	12,250/-	

1) ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 08.12.2025 ರಂದು ಸಂಜೆ 4:00 ಗಂಟೆವರೆಗೆ.** 2) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 09.12.2025 ರಂದು ಸಂಜೆ 5:00 ಗಂಟೆಗೆ.** 3) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 11.12.2025 ರಂದು ಬೆಳಿಗ್ಗೆ 11.00 ಗಂಟೆಗೆ.**
ಸಹಿ/–
ಪೌರಾಯುಕ್ತರು
ನಗರಸಭೆ, ರಾಮನಗರ
DIPR/BSD/471/SA/2025-26

'ಭಗವದ್ಗೀತೆ ಇದ್ದರೆ ಸಮಾಲೋಚಕರು ಬೇಕಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಗವದ್ಗೀತೆ ಮನೆಯಲ್ಲಿದ್ದರೆ ಬೇರೆ ಸಮಾಲೋಚಕರ ಅಗತ್ಯವಿಲ್ಲ' ಎಂದು ಹೈಕೋರ್ಟ್ ನ್ಯಾಯಮೂರ್ತಿ ವಿ.ಶ್ರೀಶಾನಂದ ಹೇಳಿದರು.

ಮಲ್ಲೇಶ್ವರ ಬ್ರಾಹ್ಮಣ ಸಭಾ ಟ್ರಸ್ಟ್, ಮಲ್ಲೇಶ್ವರ ಸಿವಿಕ್ ಮ್ಯಾನೇಜ್‌ಮೆಂಟ್ ಕಮಿಟಿ ಸೋಮವಾರ ಆಯೋಜಿಸಿದ್ದ ಗೀತಾ ಜಯಂತ್ಯುತ್ಸವದಲ್ಲಿ ಅವರು ಮಾತನಾಡಿದರು.

ಭಗವದ್ಗೀತೆ ಭಗವಂತನಿಂದ ಉಕ್ತವಾದದ್ದು. ಅದನ್ನು ಓದಿ ಅರ್ಥೈಸಿಕೊಂಡರೆ ಸಾಕು. ಪ್ರತಿಯೊಬ್ಬರ ದ್ವಂದ್ವಗಳಿಗೆ ಪರಿಹಾರ ಇದರಲ್ಲಿದೆ. ಇಂದಿಗೂ ಶ್ರೀಕೃಷ್ಣ ಅತ್ಯುತ್ತಮ ಆಪ್ತ ಸಲಹೆಗಾರ ಎಂದರು.

ಇಂದಿನ ಜನಾಂಗ ಖಿನ್ನತೆ ಎಂದು ಮಾತ್ರೆಗಳನ್ನು ತೆಗೆದುಕೊಳ್ಳುವುದು, ಆತ್ಮಹತ್ಯೆಗೆ ಮುಂದಾಗುವುದನ್ನು ಕಾಣುತ್ತಿದ್ದೇವೆ. ಯಾವುದೇ ಕಾರಣಕ್ಕೂ ವಿಪರೀತ ಕ್ರಮಗಳಿಗೆ ಮುಂದಾಗದೆ ಭಗವದ್ಗೀತೆ ಪಠಣವನ್ನು ಮಾಡಬೇಕು ಎಂದು ಸಲಹೆ ನೀಡಿದರು.

ಹೊರನಾಡು ಅನ್ನಪೂರ್ಣೇಶ್ವರಿ ದೇವಸ್ಥಾನದ ಧರ್ಮದರ್ಶಿ ಜಿ. ಭೀಮೇಶ್ವರ ಜೋಶಿ ಮಾತನಾಡಿ, 'ಭಗವದ್ಗೀತೆಯನ್ನು ಮನೆಯಲ್ಲಿ ಪೂಜೆಗೆ ಸೀಮಿತವಾಗಿರಿಸದೆ, ಪಠಿಸಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ದುಃಖ ಮತ್ತು ಸಂತೋಷದಲ್ಲೂ ಭಗವದ್ಗೀತೆ ಬದುಕಿನ ಗೀತೆಯಾಗಬೇಕು' ಎಂದು ಆಶಿಸಿದರು.

ನಿವೃತ್ತ ನ್ಯಾಯಮೂರ್ತಿ ಕೆ.ವಿ. ನರಸಿಂಹನ್, ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವೂಡೇ ಪಿ. ಕೃಷ್ಣ, ಜ್ಯೋತಿಷಿ ಬಿ.ಎಸ್. ದ್ವಾರಕಾನಾಥ್, ಮಲ್ಲೇಶ್ವರ ಬ್ರಾಹ್ಮಣ ಮಹಾಸಭಾ ಟ್ರಸ್ಟ್ ಅಧ್ಯಕ್ಷ ಪಾವಗಡ ಪ್ರಕಾಶ್ ರಾವ್ ಉಪಸ್ಥಿತರಿದ್ದರು.



ಗೀತಾ ಜಯಂತ್ಯುತ್ಸವದಲ್ಲಿ ಜಿ. ಭೀಮೇಶ್ವರ ಜೋಷಿ ಅವರನ್ನು ಗೌರವಿಸಲಾಯಿತು. ಪಾವಗಡ ಪ್ರಕಾಶ್ ರಾವ್, ಕೆ.ವಿ. ನರಸಿಂಹನ್, ವಿ.ಶ್ರೀಶಾನಂದ, ಬಿ.ಎಸ್. ದ್ವಾರಕನಾಥ್, ವಲ್ಲಭ ಕೆ.ಎಸ್, ದುರ್ಗೇಶ್ ವಿ. ಪೈ, ಎಸ್.ಕೆ. ಕೌಶಿಕ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಡಿ.7ಕ್ಕೆ ಹೋರಿ ಹಬ್ಬ

ಬೆಂಗಳೂರು: ಮಲೆನಾಡು ಗಿಡ್ಡ ತಳಿಯ ಸಂರಕ್ಷಣಾ ಮತ್ತು ಸಂವರ್ಧನಾ ಅಭಿಯಾನದ ವತಿಯಿಂದ ಡಿ. 7ರಂದು ಚನ್ನರಾಯಪಟ್ಟಣ ತಾಲ್ಲೂಕಿನ ಹಿರೀಸಾವೆಯ ಮಲ್ಲಿಗಮ್ಮ ದೇವಸ್ಥಾನದ ಆವರಣದಲ್ಲಿ ಹೋರಿ ಹಬ್ಬ ನಡೆಯಲಿದೆ.

ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಭಿಯಾನದ ಸಂಘಟಕ ಅಕ್ಷಯ್ ಆಳ್ವ, 'ಮಲೆನಾಡು ಗಿಡ್ಡ ತಳಿ ಅಳಿವಿನಂಚಿನಲ್ಲಿದೆ. ಹೈನುಗಾರಿಕೆ ಕ್ರಾಂತಿಯಿಂದ ಮಲೆನಾಡು ಗಿಡ್ಡ ತಳಿಯನ್ನು ಸಾಕುವವರ ಸಂಖ್ಯೆ ಕಡಿಮೆ ಆಗಿದೆ. ಈ ತಳಿಯ ಜಾನುವಾರುಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಹೋರಿ ಹಬ್ಬವನ್ನು ಆಯೋಜಿಸಲಾಗುತ್ತಿದ್ದು, ಇದರಲ್ಲಿ ಮಲೆನಾಡು ಗಿಡ್ಡ ತಳಿಯ ಹೋರಿಗಳನ್ನು 50 ರೈತರಿಗೆ ಉಚಿತವಾಗಿ ನೀಡಲಾಗುತ್ತದೆ' ಎಂದು ಮಾಹಿತಿ ನೀಡಿದರು.

'ರಾಷ್ಟ್ರೀಯ ಗೋ ಸೇವಾ ಸಂಸ್ಥಾನದ ಅಧ್ಯಕ್ಷ ಭಕ್ತಿ ಭೂಷಣ್ ದಾಸ್ ಹಬ್ಬವನ್ನು ಉದ್ಘಾಟಿಸಲಿದ್ದಾರೆ. ವಿಶ್ವ ಒಕ್ಕಲಿಗರ ಸಂಸ್ಥಾನ ಮಠದ ನಿಶ್ಚಲಾನಂದ ಸ್ವಾಮೀಜಿ ಅವರು ಸಮಾರಂಭದ ಸಾನ್ನಿಧ್ಯ ವಹಿಸಲಿದ್ದು, ಶ್ರವಣಬೆಳಗೊಳದ ಶಾಸಕ ಸಿ.ಎನ್. ಬಾಲಕೃಷ್ಣ ಅಧ್ಯಕ್ಷತೆ ವಹಿಸಲಿದ್ದಾರೆ' ಎಂದರು.

ಗರ್ಭಾಶಯ ಕ್ಯಾನ್ಸರ್ ಜಾಗೃತಿಗೆ ಕ್ರಿಕೆಟ್ ಟೂರ್ನಮೆಂಟ್

ಬೆಂಗಳೂರು: ಗರ್ಭಾಶಯ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸುವುದು ಹಾಗೂ ತಡೆಗಟ್ಟುವ ಉದ್ದೇಶದಿಂದ 2026ರ ಜನವರಿಯಲ್ಲಿ ಹೈಪರ್ ಸ್ಪೋರ್ಟ್ಸ್ ಆ್ಯಂಡ್ ವೆಲ್ಫೇರ್ ಟ್ರಸ್ಟ್ ಕರ್ನಾಟಕ ಮೀಡಿಯಾ ಚಾಂಪಿಯನ್ಸ್ ಲೀಗ್ ಕ್ರಿಕೆಟ್ ಟೂರ್ನಿ ಆಯೋಜಿಸಿದೆ.

ಕಿರಣ್ ಶೆಟ್ಟಿ

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್ ಅಧ್ಯಕ್ಷ ಕಿರಣ್ ಶೆಟ್ಟಿ, 'ಮಾಧ್ಯಮ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೃತ್ತಿಪರರಿಗೆ ಮಾತ್ರ ಪಂದ್ಯಾವಳಿ ಮೀಸಲಾಗಿದೆ. ಮಹಿಳೆಯರಲ್ಲಿ ಗರ್ಭಾಶಯ ಕ್ಯಾನ್ಸರ್ ಗಂಭೀರ ಆರೋಗ್ಯ ಸಮಸ್ಯೆಯಾಗಿ ಉಳಿದಿದೆ. ಇದರ ಬಗ್ಗೆ ಮುಂಚಿತವಾಗಿ ತಪಾಸಣೆ ಹಾಗೂ ಎಚ್‌ಪಿವಿ ಲಸಿಕೆ ಕುರಿತು ಜಾಗೃತಿ ಮೂಡಿಸುವುದು ಇದರ ಉದ್ದೇಶವಾಗಿದೆ' ಎಂದು ವಿವರಿಸಿದರು.

'ಟೂರ್ನಿಯಲ್ಲಿ ಪ್ರಥಮ ಸ್ಥಾನ ಪಡೆಯುವ ತಂಡಕ್ಕೆ ₹10 ಲಕ್ಷ, ಎರಡನೇ ಸ್ಥಾನ ಪಡೆಯುವ ತಂಡಕ್ಕೆ ₹5 ಲಕ್ಷ ಹಾಗೂ ಸೆಮಿ ಫೈನಲ್‌ನಲ್ಲಿ ಭಾಗವಹಿಸುವ ತಂಡಗಳಿಗೆ ತಲಾ ₹2.50 ಲಕ್ಷ ನಗದು ಬಹುಮಾನವಾಗಿ ನೀಡಲಾಗುತ್ತದೆ. ತಂಡಗಳ ನೋಂದಣಿ, ಪಂದ್ಯಗಳ ವೇಳಾಪಟ್ಟಿಯನ್ನು ಶೀಘ್ರದಲ್ಲಿಯೇ ಪ್ರಕಟಿಸಲಾಗುವುದು' ಎಂದು ತಿಳಿಸಿದರು.

ಸ್ವದೇಶಿ ಉದ್ಯಮ ಜಾಗೃತಿಗೆ ಸೈಕಲ್ ಜಾಥಾ

ಬೆಂಗಳೂರು: ಯೂತ್ ಫಾರ್ ನೇಷನ್, ಸ್ವದೇಶಿ ಜಾಗರಣ ಸಹಯೋಗದಲ್ಲಿ ಇದೇ 13ರಿಂದ ಆರಂಭವಾಗುವ 3,500 ಕಿ.ಮೀ. ಸೈಕಲ್ ಜಾಥಾದಲ್ಲಿ ದೇಶೀಯ ಉದ್ಯಮಶೀಲತೆ, ಆತ್ಮನಿರ್ಭರತೆ ಮತ್ತು ಗ್ರಾಮ, ನಗರ ಪ್ರದೇಶದ ಆರ್ಥಿಕ ಬಲವರ್ಧನೆಯ ಕುರಿತು ಜಾಗೃತಿ ಮೂಡಿಸಲಾಗುತ್ತದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್, ನಿವೃತ್ತ ಬ್ರಿಗೇಡಿಯರ್ ರವಿ ಮುನಿಸ್ವಾಮಿ, 'ಸ್ವದೇಶಿ ಚಳವಳಿಯಲ್ಲಿ ಯುವಕರ ಪಾತ್ರ ಹೆಚ್ಚಿಸಲು ಮತ್ತು ಸ್ವದೇಶಿ ಆರ್ಥಿಕತೆಯ ಬಲವರ್ಧನೆ ಮಾಡಲು ಈ ಜಾಥಾ ಸಹಾಯಕವಾಗಲಿದೆ. ಇದರಲ್ಲಿ ನಿವೃತ್ತ ಯೋಧರು, ಮಹಿಳೆಯರು, ವಿದ್ಯಾರ್ಥಿಗಳು, ಹಾಗೂ ವಿವಿಧ ಕ್ಷೇತ್ರಗಳ ಯುವಕರು ಸಹ ಭಾಗವಹಿಸಲಿದ್ದು, ರಾಜ್ಯದ ಪ್ರತಿಯೊಂದು ಜಿಲ್ಲೆಯನ್ನು ಸಂಪರ್ಕಿಸಿ, ಸ್ವದೇಶಿ ಉತ್ಪಾದನೆ, ಕಲೆಗಾರಿಕೆ, ಕೃಷಿ–ಕೈಗಾರಿಕೆ ಮತ್ತು ಸ್ಥಳೀಯ ಉದ್ಯಮಗಳಿಗೆ ಬೆಂಬಲದ ಸಂದೇಶವನ್ನು ತಲುಪಿಸಲಿದ್ದಾರೆ. ಡಿ. 13ರಂದು ಬೆಂಗಳೂರು ಹೊರವಲಯದ ಅರ್ಜುನ್ ಬೆಟ್ಟಹಳ್ಳಿಯಿಂದ ಜಾಥಾಕ್ಕೆ ಚಾಲನೆ ನೀಡಲಾಗುತ್ತದೆ' ಎಂದರು.

ಕನ್ನಡ ನಡೆ–ನುಡಿ ಸೊಗಸಾಗಿಸುವ ಆತ್ಮಶಕ್ತಿ: ರಹಮತ್ ತರೀಕೆರೆ

ಬೆಂಗಳೂರು: 'ಕನ್ನಡ ಎಂಬುದು ಕೇವಲ ಒಂದು ಭಾಷೆಯಲ್ಲ ಅದು ನಮ್ಮ ನಡೆ ನುಡಿಗಳನ್ನು ಸೊಗಸಾಗಿಸುವ ಆತ್ಮಶಕ್ತಿ' ಎಂದು ಸಾಹಿತಿ ರಹಮತ್ ತರೀಕೆರೆ ಹೇಳಿದರು.



ರಹಮತ್ ತರೀಕೆರೆ

ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯದಲ್ಲಿ ಸೋಮವಾರ ನಡೆದ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

'ಕುವೆಂಪು, ಪಂಪ, ರನ್ನ ಹಾಗೂ ಕಾರಂತರ ಕಾವ್ಯದಿಂದ, ಬಸವಣ್ಣ ಮತ್ತು ಅಕ್ಕಮಹಾದೇವಿ ವಚನಗಳಿಂದ, ಬೇಂದ್ರೆ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಚಿಂತನೆಗಳಿಂದ ಕನ್ನಡವು ಇನ್ನೂ ನಮ್ಮೊಳಗೆ ಜೀವಂತವಾಗಿದೆ. ಕರ್ನಾಟಕ ರಾಜ್ಯೋತ್ಸವ ಕೇವಲ ಆಚರಣೆ ಅಲ್ಲ, ಇದು ವೈವಿಧ್ಯದಲ್ಲಿ ಏಕತೆ ಎಂಬ ನಂಬಿಕೆಗೆ ಸಾಕ್ಷಿ. ಹಲವಾರು ಜಾತಿ, ಧರ್ಮ, ಅಭಿರುಚಿ ಹಾಗೂ ಆಚರಣೆಗಳು ಇದ್ದರೂ ಈ ನಾಡಿನ ಮೇಲೆ ಇರುವ ಪ್ರೀತಿ ನಮ್ಮೆಲ್ಲರನ್ನು ಒಗ್ಗೂಡಿಸುತ್ತದೆ' ಎಂದು ತಿಳಿಸಿದರು.

ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ಮಾತನಾಡಿ, 'ಕನ್ನಡ ಎಂದರೆ ಆತ್ಮಾಭಿಮಾನದ ಸಂಕೇತವಾಗಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ನಿರಂತರವಾಗಿ ಕನ್ನಡ ಅಭಿವೃದ್ಧಿಗೆ ಆದ್ಯತೆ ನೀಡುತ್ತಿದೆ. ಪ್ರಾಥಮಿಕ ಶಿಕ್ಷಣವನ್ನು ಕನ್ನಡದಲ್ಲಿಯೇ ಕಡ್ಡಾಯವಾಗಿ ನೀಡಬೇಕು. ಕನ್ನಡ ಅಭಿವೃದ್ಧಿ ಕೇವಲ ವಿಶ್ವವಿದ್ಯಾಲಯಗಳಿಗೆ ಸೀಮಿತವಾಗದೇ ರಾಜ್ಯದ ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಬೇಕು. ಕನ್ನಡ ಭಾಷೆಯ ಬಗ್ಗೆ ಇರುವ ಕೀಳರಿಮೆಯನ್ನು ಬಿಟ್ಟು ಮಕ್ಕಳನ್ನು ಕನ್ನಡದಲ್ಲಿಯೇ ಮಾತನಾಡುವಂತೆ ಪ್ರೇರೇಪಿಸಬೇಕು' ಎಂದರು.

ಇದೇ ಸಂದರ್ಭದಲ್ಲಿ ಕನ್ನಡ ಪೋಟಿ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

'ಸಂತೋಷ್ ಹೆಗ್ಡೆ ಅವಹೇಳನ ಸಲ್ಲ'

ಕೆ.ಆರ್.ಪುರ: 'ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರ ವಿರುದ್ಧ ಅಪಪ್ರಚಾರ ಮಾಡುತ್ತಿರುವುದು ಸರಿಯಲ್ಲ' ಎಂದು ಭಾರತೀಯ ಸೇವಾ ಸಮಿತಿಯ ರಾಷ್ಟ್ರೀಯ ಅಧ್ಯಕ್ಷ ಹೂಡಿ ರಾಮಚಂದ್ರ ಹೇಳಿದ್ದಾರೆ.

ಹೂಡಿ ರಾಮಚಂದ್ರ

'ಖಾಸಗಿ ಕಾರ್ಯಕ್ರಮವೊಂದರಲ್ಲಿ ಹಿಂದೂ ಸಂಘಟನೆಯ ಕಾರ್ಯಕರ್ತ ಪುನೀತ್ ಕೆರೆಹಳ್ಳಿ ಅವರಿಗೆ ಸನ್ಮಾನ ಮಾಡಿರುವುದನ್ನೇ ದೊಡ್ಡದು ಮಾಡಿ ಅವರ ವಿರುದ್ಧ ಅಪಪ್ರಚಾರ ಮಾಡುವ ಮೂಲಕ ಕೆಟ್ಟ ಹೆಸರು ತರಲು ಯತ್ನಿಸುತ್ತಿರುವುದನ್ನು ಒಪ್ಪಲಾಗದು' ಎಂದು ತಿಳಿಸಿದ್ದಾರೆ. 'ಸಂತೋಷ್ ಹೆಗ್ಡೆ ಅವರು ಭ್ರಷ್ಟಾಚಾರದ ವಿರುದ್ಧ ಸಮರ ಸಾರಿದ್ದರು. ಭ್ರಷ್ಟ ಅಧಿಕಾರಿಗಳು ಮತ್ತು ರಾಜಕಾರಣಿಗಳನ್ನು ಜೈಲಿಗೆ ಹಾಕಿಸಿ ಭ್ರಷ್ಟರಿಗೆ ಸಿಂಹಸ್ವಪ್ನವಾಗಿದ್ದನ್ನು ನಾವು ಮರೆಯಬಾರದು' ಎಂದು ಹೇಳಿದ್ದಾರೆ.

ಬೀದರ್‌ಗೆ ಒಂದು ಟ್ರಿಪ್ ವಿಶೇಷ ರೈಲು

ಬೆಂಗಳೂರು: ಕ್ರಿಸ್‌ಮಸ್ ಹಬ್ಬದ ಸಂದರ್ಭದಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ನಿಭಾಯಿಸಲು, ನೈರುತ್ಯ ರೈಲ್ವೆಯು ಬೆಂಗಳೂರು ಕಂಟೋನ್ಮೆಂಟ್ ಮತ್ತು ಬೀದರ್ ನಡುವೆ ವಿಶೇಷ ಎಕ್ಸ್‌ಪ್ರೆಸ್ ರೈಲು ಓಡಿಸಲಿದೆ.

ಕಂಟೋನ್ಮೆಂಟ್‌ನಿಂದ ಡಿ.24ರಂದು ರಾತ್ರಿ 9.15ಕ್ಕೆ ರೈಲು ಹೊರಡಲಿದೆ. ಮರುದಿನ ಬೆಳಿಗ್ಗೆ 11.30ಕ್ಕೆ ಬೀದರ್ ತಲುಪಲಿದೆ. ಡಿ. 25ರಂದು ಮಧ್ಯಾಹ್ನ 1ಕ್ಕೆ ಬೀದರ್‌ನಿಂದ ಹೊರಡಲಿದೆ. ಮರುದಿನ ಬೆಳಿಗ್ಗೆ 4ಕ್ಕೆ ಕಂಟೋನ್ಮೆಂಟ್ ತಲುಪಲಿದೆ. ಯಲಹಂಕ, ಹಿಂದೂಪುರ, ಧರ್ಮಾವರಂ, ಅನಂತಪುರ, ಗುಂತಕಲ್, ಆದೋನಿ, ಮಂತ್ರಾಲಯ ರಸ್ತೆ, ರಾಯಚೂರು, ಕೃಷ್ಣಾ, ಯಾದಗಿರಿ, ವಾಡಿ, ಶಹಾಬಾದ್, ಕಲಬುರಗಿ ಮತ್ತು ಹುಮನಾಬಾದ್ ನಿಲ್ದಾಣ ಗಳಲ್ಲಿ ನಿಲುಗಡೆ ಹೊಂದಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ದಟ್ಟಣೆ: ಯುಪಿ ಸಂಸದ ಕಿಡಿ

ಬೆಂಗಳೂರಿನಲ್ಲಿ ಅತೀ ಕೆಟ್ಟ ಸಂಚಾರ ನಿರ್ವಹಣೆ: ರಾಜೀವ್ ರಾಯ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನಿತ್ಯವೂ ಉಂಟಾಗುತ್ತಿರುವ ವಾಹನ ದಟ್ಟಣೆ ಸಮಸ್ಯೆಯು ಉತ್ತರಪ್ರದೇಶದ ಸಮಾಜವಾದಿ ಪಕ್ಷದ ಸಂಸದ ರಾಜೀವ್ ರಾಯ್ ಅವರಿಗೂ ಭಾನುವಾರ ತಟ್ಟಿದ್ದು, ಅವರು ಸಾಮಾಜಿಕ ಮಾಧ್ಯಮವಾದ 'ಎಕ್ಸ್'ನಲ್ಲಿ ಬೆಂಗಳೂರು ಸಂಚಾರ ವ್ಯವಸ್ಥೆ, ಅದರ ನಿರ್ವಹಣೆ ಬಗ್ಗೆ ಆಕ್ರೋಶ ಹೊರಹಾಕಿದ್ದಾರೆ.

ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳು ಹಾಗೂ ವಾಹನ ದಟ್ಟಣೆ ಬಗ್ಗೆ ಇತ್ತೀಚೆಗಷ್ಟೇ ಉದ್ಯಮಿಗಳು ಹಾಗೂ ಟೆಕಿಗಳು ರಾಜ್ಯ ಸರ್ಕಾರವನ್ನು ಟೀಕಿಸಿದ್ದರು. ಇದೀಗ ಹೊರ ರಾಜ್ಯದ ಸಂಸದರೊಬ್ಬರು ರಸ್ತೆಯಲ್ಲಿ ಉಂಟಾದ ದಟ್ಟಣೆಯಲ್ಲಿ ದೀರ್ಘ ಸಮಯ ಸಿಲುಕಿಕೊಂಡಿದ್ದರು. ಅವರಿಗೆ ಆಗಿರುವ ಕೆಟ್ಟ ಅನುಭವವನ್ನು ಬರೆದುಕೊಂಡಿದ್ದಾರೆ.

'ಬೆಂಗಳೂರು ಅತೀ ಕೆಟ್ಟ ಸಂಚಾರ ನಿರ್ವಹಣೆ ಹೊಂದಿರುವ ನಗರವಾಗಿದೆ. ನಗರದ ಸಂಚಾರ ದಟ್ಟಣೆಯು ಅತ್ಯಂತ ಕುಖ್ಯಾತಿ ಗಳಿಸಿದೆ ಎಂಬುದರಲ್ಲಿ ಸಂದೇಹವಿಲ್ಲ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಬರಹದಲ್ಲಿ ಉಲ್ಲೇಖಿಸಿದ್ದಾರೆ.

'ಕರ್ನಾಟಕದ ಮುಖ್ಯಮಂತ್ರಿಗಳೇ ಕ್ಷಮಿಸಿ, ಬೆಂಗಳೂರಿನದ್ದು ಅತ್ಯಂತ ಕೆಟ್ಟ ಸಂಚಾರ ವ್ಯವಸ್ಥೆ, ಜವಾಬ್ದಾರಿ ಇಲ್ಲದ, ಪ್ರಯೋಜನಕ್ಕೆ ಬಾರದ ಸಂಚಾರ ಪೊಲೀಸರು. ಅವರು (ಪೊಲೀಸರು) ಕನಿಷ್ಠ ದೂರವಾಣಿ ಕರೆ ಸಹ ಸ್ವೀಕರಿಸುವುದಿಲ್ಲ. ನಾನು ಎಷ್ಟು ಬಾರಿ ಕರೆ ಮಾಡಿದ್ದೆ ಎಂಬುದಕ್ಕೆ ಸಂಬಂಧಿಸಿದ ದಾಖಲೆಗಳನ್ನೂ ಇಲ್ಲಿ ಲಗತ್ತಿಸಿದ್ದೇನೆ' ಎಂದು ಆಕ್ರೋಶ ಹೊರಹಾಕಿದ್ದಾರೆ.

'ರಾಜ್‌ಕುಮಾರ್ ಸಮಾಧಿ ಬಳಿಯ ರಸ್ತೆಯಲ್ಲಿ ಭಾನುವಾರ ಉಂಟಾದ ಸಂಚಾರ ದಟ್ಟಣೆಯಲ್ಲಿ ದೀರ್ಘ ಸಮಯ ಸಿಲುಕಿಕೊಂಡಿದ್ದೆ. ಇದರಿಂದ ವಿಮಾನ ಪ್ರಯಾಣ ತಪ್ಪುತ್ತಿತ್ತು. ಸಂಸತ್ ಅಧಿವೇಶನಕ್ಕೆ ಹಾಜರಾಗುವುದಕ್ಕೆ ಕೂಡ ಅಡ್ಡಿ ಆಗುವ ಸಾಧ್ಯತೆ ಇತ್ತು. ರಸ್ತೆಯಲ್ಲಿ ಅಷ್ಟೊಂದು ದಟ್ಟಣೆ ಉಂಟಾಗಿದ್ದರೂ ಆ ಸ್ಥಳದಲ್ಲಿ ಒಬ್ಬ ಪೊಲೀಸ್ ಸಹ ಇರಲಿಲ್ಲ. ಈ ಸುಂದರ ನಗರದ ಹೆಸರು ಹಾಳು ಮಾಡಲಾಗುತ್ತಿದೆ' ಎಂದು ಭಾನುವಾರ ಸಂಜೆ 'ಎಕ್ಸ್'ನಲ್ಲಿ ಉಲ್ಲೇಖಿಸಿದ್ದರು.

ದಟ್ಟಣೆಯಲ್ಲಿ ಸಿಲುಕಿದ್ದ ರಾಜೀವ್ ರಾಯ್ ಅವರು, ನಗರ ಪೊಲೀಸರ ದೂರವಾಣಿ ಸಂಖ್ಯೆಗಳನ್ನು ತೆಗೆದುಕೊಂಡು ಕರೆ ಮಾಡಿದ್ದರು. ಯಾವೆಲ್ಲ ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡಿದ್ದರು ಎಂಬುದರ ಸ್ಕ್ರೀನ್‌ಶಾಟ್ ಸಹ ಲಗತ್ತಿಸಿದ್ದಾರೆ.

'ನನ್ನ ಯಾವ ಕರೆಗೂ ಸಂಚಾರ ವಿಭಾಗದ ಪೊಲೀಸರು ಸ್ಪಂದಿಸಿಲ್ಲ' ಎಂದು ಆಪಾದಿಸಿದ್ದಾರೆ. 'ಎಕ್ಸ್' ಬರಹಕ್ಕೆ ಹಲವರು ಪ್ರತಿಕ್ರಿಯಿಸಿದ್ದು, ಬೆಂಗಳೂರಿನಲ್ಲಿ ಪ್ರತಿನಿತ್ಯ ಉಂಟಾಗುತ್ತಿರುವ ದಟ್ಟಣೆ ಸಮಸ್ಯೆ ಬಗ್ಗೆ ಅನೇಕರು ಬೆಳಕು ಚೆಲ್ಲಿದ್ದಾರೆ. ಇನ್ನೂ ಕೆಲವರು ಯಾವ ಕಾರಣಕ್ಕೆ ಈ ರೀತಿಯ ಸಮಸ್ಯೆ ಆಗಿದೆ ಎಂಬುದನ್ನು ತಿಳಿಸಿದ್ದಾರೆ.

ಜನಸಾಮಾನ್ಯರು ಪೊಲೀಸ್ ಸಹಾಯವಾಣಿ 112ಕ್ಕೆ ಕರೆ ಮಾಡಿ ಸಮಸ್ಯೆ ಬಗ್ಗೆ ತಿಳಿಸುತ್ತಾರೆ. ನಗರದ ಪೊಲೀಸರೂ ಸ್ಪಂದಿಸಿದ್ದಾರೆ ಎಂದು ಒಬ್ಬರು ಪ್ರತಿಕ್ರಿಯಿಸಿದ್ದಾರೆ.

ಉತ್ತರ ಭಾರತದ ರಾಜ್ಯಗಳು ಅದರಲ್ಲೂ ಬಿಜೆಪಿ ಆಡಳಿತವಿರುವ ರಾಜ್ಯಗಳು ಅಲ್ಲಿಯೇ ತಮ್ಮ ಜನರಿಗೆ ನೌಕರಿ ನೀಡಲಿ. ಅದರಿಂದ ಬೆಂಗಳೂರಿನತ್ತ ಉತ್ತರ ಭಾರತೀಯರ ಸಾಮೂಹಿಕ ವಲಸೆ ನಿಯಂತ್ರಣಗೊಂಡು ಬೆಂಗಳೂರು ಅತಿ ಜನಸಾಂದ್ರತೆಯ ಶಾಪದಿಂದ ಮುಕ್ತವಾಗಬಹುದು ಎಂದು ಎನ್. ಹರೀಶ್ ಎಂಬುವವರು ಪ್ರತಿಕ್ರಿಯಿಸಿದ್ದಾರೆ.

'ಉತ್ತರ ಪ್ರದೇಶದವರು ಕೂಡ ಬೆಂಗಳೂರಿನಲ್ಲಿ ಕೆಲಸ ಮಾಡಲು ವಲಸೆ ಬರುತ್ತಿದ್ದಾರೆ. ಅದನ್ನು ಅವರು ನಿಲ್ಲಿಸಿದರೆ ನಮ್ಮ ರಾಜ್ಯದ ಸಂಚಾರ ಸುಗಮ ಆಗಲಿದೆ' ಎಂದು ಎಬಿಕೆ ಬೆಂಗಳೂರು ಖಾತೆಯಿಂದ ಪ್ರತಿಕ್ರಿಯೆ ಬಂದಿದೆ.

ಹೊಸೂರು ರಸ್ತೆಯಲ್ಲಿ ಇತ್ತೀಚೆಗೆ ಉಂಟಾಗಿದ್ದ ವಾಹನ ದಟ್ಟಣೆ

ಬೆಂಗಳೂರಿನ ಮಹತ್ವ ತಿಳಿಸುತ್ತೇನೆ: ಡಿಕೆಶಿ

'ದೆಹಲಿಗೆ ಭೇಟಿ ನೀಡಿದಾಗ ರಾಜೀವ್ ರಾಯ್ ಅವರೊಂದಿಗೆ ಮಾತುಕತೆ ನಡೆಸುತ್ತೇನೆ. ಬೆಂಗಳೂರು ಏನು, ಅದರ ಮಹತ್ವ ಏನು ಎಂಬ ಬಗ್ಗೆ ತಿಳಿಸುತ್ತೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪ್ರತಿಕ್ರಿಯಿಸಿದ್ದಾರೆ.

ನಾಯಿ ಮೇಲೆ ಹಲ್ಲೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀದಿ ನಾಯಿಗೆ ದೊಣ್ಣೆಯಿಂದ ಹಲ್ಲೆ ನಡೆಸಿ, ಗಾಯಗೊಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಅಪರಿಚಿತ ವ್ಯಕ್ತಿಗಳ ವಿರುದ್ಧ ಬೊಮ್ಮನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೊಮ್ಮನಹಳ್ಳಿ ನಿವಾಸಿ ಮರಿಯಾ ನವ್ಯಾ ಪ್ರಿನ್ಸಿ ಅವರ ದೂರಿನ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ನ. 10ರಂದು ಮನೆ ಮುಂದಿನ ರಸ್ತೆಯಲ್ಲಿ ಬೀದಿ ನಾಯಿ ಜೋರಾಗಿ ಬೊಗಳಿದ ಶಬ್ದ ಕೇಳಿತು. ಹೋಗಿ ನೋಡಿದಾಗ ಅಪರಿಚಿತರಿಬ್ಬರು ದೊಣ್ಣೆಯಿಂದ ಹೊಡೆಯುತ್ತಿದ್ದರು. ಸ್ಥಳಕ್ಕೆ ತೆರಳುವಷ್ಟರಲ್ಲಿ ಇಬ್ಬರೂ ಪರಾರಿಯಾದರು. ನಾಯಿ ಮೂಗಿನಲ್ಲಿ ರಕ್ತಸ್ರಾವವಾಗಿ ಪ್ರಜ್ಞೆ ತಪ್ಪಿತ್ತು. ಪಶು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ನಾಯಿ ಮೇಲೆ ಹಲ್ಲೆ ನಡೆಸಿ ಗಾಯ ಮಾಡಿದ ಅಪರಿಚಿತ ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಮನವಿ ಮಾಡಿದ್ದಾರೆ.

ಖಿನ್ನತೆ: ಮಹಿಳೆ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಪೀಣ್ಯ-ದಾಸರಹಳ್ಳಿ: ಉತ್ತರ ತಾಲ್ಲೂಕಿನ ತೋಟದಗುಡ್ಡದಹಳ್ಳಿಯ ಸಾಯಿರಾಮ ಲೇಔಟ್‌ನಲ್ಲಿ ನೆಲಸಿದ್ದ ಗೃಹಿಣಿಯೊಬ್ಬರು ತಮ್ಮ ಮನೆಯಲ್ಲಿ ನೇಣುಹಾಕಿಕೊಂಡು ಸೋಮವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸೌಭಾಗ್ಯ

ಸೌಭಾಗ್ಯ (31) ಆತ್ಮಹತ್ಯೆ ಮಾಡಿಕೊಂಡವರು.

'ಎರಡು ವರ್ಷದ ಹಿಂದೆ ಕೈವಾರದ ಸೌಭಾಗ್ಯ ಅವರ ಪತಿ ಮೃತಪಟ್ಟಿದ್ದರು. ಅವರು ಬಾಡಿಗೆ ಮನೆಯಲ್ಲಿ ಇಬ್ಬರು ಮಕ್ಕಳೊಂದಿಗೆ ನೆಲಸಿದ್ದರು. ತೋಟದಗುಡ್ಡದಹಳ್ಳಿಯ ದೇವಸ್ಥಾನವೊಂದರಲ್ಲಿ ಕೆಲಸ ಮಾಡಿಕೊಂಡಿದ್ದರು. ಪತಿ ಮೃತಪಟ್ಟ ಬಳಿಕ ಮಾನಸಿಕ ಖಿನ್ನತೆಗೆ ಒಳಗಾಗಿದ್ದರು. ದೇವಸ್ಥಾನ ಬಿಟ್ಟರೆ ಬೇರೆಲ್ಲೂ ಹೋಗುತ್ತಿರಲಿಲ್ಲ' ಎಂದು ಮೂಲಗಳು ತಿಳಿಸಿವೆ.

'ಮಹಿಳೆ ಸಾವಿನಿಂದ ಪುಟ್ಟ ಮಕ್ಕಳು ಅನಾಥರಾಗಿದ್ದಾರೆ. ಮನೆಯಲ್ಲಿ ಮರಣ ಪತ್ರ ದೊರೆತಿದೆ. ಅದನ್ನು ಪರಿಶೀಲನೆ ನಡೆಸಲಾಗುತ್ತಿದೆ. ಕೈವಾರದಲ್ಲಿ ನೆಲಸಿರುವ ಸಂಬಂಧಿಕರಿಗೆ ಮಾಹಿತಿ ನೀಡಲಾಗಿದೆ' ಎಂದು ಪೊಲೀಸರು ಹೇಳಿದರು.

ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಳ್ಳತನಕ್ಕಿಳಿದ ಪದವೀಧರ: ಆರೋಪಿ ಸೆರೆ

ಬೆಂಗಳೂರು: ಕೆಲಸ ಸಿಕ್ಕಿಲ್ಲವೆಂದು ಕಳ್ಳತನಕ್ಕಿಳಿದಿದ್ದ ಪದವೀಧರನನ್ನು ಮೈಕೊ ಲೇಔಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಚಿತ್ತೂರಿನ ಗೋವರ್ಧನ್ ಬಂಧಿತ.

ಆರೋಪಿಯಿಂದ 21 ಲ್ಯಾಪ್‌ಟಾಪ್ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಕೆಲಸ ಹುಡುಕಿಕೊಂಡು ನಾಲ್ಕು ತಿಂಗಳ ಹಿಂದೆ ನಗರಕ್ಕೆ ಬಂದಿದ್ದ ಆರೋಪಿ, ಸ್ನೇಹಿತನ ಜತೆಗೆ ಪೇಯಿಂಗ್ ಗೆಸ್ಟ್‌ನಲ್ಲಿ ನೆಲಸಿದ್ದ. ಬಿ.ಎ ಪದವಿ ಪಡೆದಿದ್ದ ಆರೋಪಿ, ನಗರದ ವಿವಿಧೆಡೆ ಕೆಲಸಕ್ಕಾಗಿ ಹುಡುಕಾಟ ನಡೆಸಿದ್ದ. ಉತ್ತಮ ಕೆಲಸ ದೊರೆಯದೇ ನಿರಾಶೆಗೊಂಡಿದ್ದ ಆತ, ಸ್ನೇಹಿತನ ಲ್ಯಾಪ್‌ಟಾಪ್ ಕಳ್ಳತನ ಮಾಡಿ ಕಡಿಮೆ ಬೆಲೆಗೆ ಮಾರಾಟ ಮಾಡಿದ್ದ. ನಂತರ, ಇದನ್ನೇ ರೂಢಿಸಿಕೊಂಡಿದ್ದ ಆರೋಪಿ ವಿವಿಧ ಪಿ.ಜಿಗಳನ್ನು ಗುರಿಯಾಗಿಸಿಕೊಂಡು ಲ್ಯಾಪ್‌ಟಾಪ್ ಹಾಗೂ ಮೊಬೈಲ್ ಕಳ್ಳತನ ಮಾಡುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಮೈಕೊ ಲೇಔಟ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ವೇಳೆ ಆರೋಪಿಯ ಬಂಧನವಾಗಿದ್ದು, 21 ಲ್ಯಾಪ್‌ಟಾಪ್‌ಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ಹೇಳಿದರು.

ಚಾಮರಾಜನಗರ ದುರಂತ: ಕುನ್ಹ ಆಯೋಗದಿಂದ ವರದಿ ಸಲ್ಲಿಕೆ

ಬೆಂಗಳೂರು: ಕೋವಿಡ್ ಸಾಂಕ್ರಾಮಿಕ ರೋಗದ ಅವಧಿಯಲ್ಲಿ ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಸಂಭವಿಸಿದ ಸಾವು ನೋವುಗಳ ಕುರಿತು ತನಿಖೆ ನಡೆಸಲು ರಾಜ್ಯ ಸರ್ಕಾರ ರಚಿಸಿದ್ದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹ ನೇತೃತ್ವದ ಆಯೋಗವು ತನಿಖಾ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೋಮವಾರ ಸಲ್ಲಿಸಿದೆ.

ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಆಮ್ಲಜನಕ ಸಿಗದೆ 32 ಮಂದಿ ಮೃತಪಟ್ಟಿದ್ದರು. ಆಮ್ಲಜನಕ ಪೂರೈಕೆಯಲ್ಲಿ ವ್ಯತ್ಯಯವಾಗಲು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾಡಳಿತಗಳ ನಡುವಿನ ಸಮನ್ವಯದ ಕೊರತೆ ಕಾರಣವೇ ಎಂಬ ಬಗ್ಗೆ ವರದಿಯಲ್ಲಿ ಪ್ರಸ್ತಾಪಿಸಿರುವ ಸಾಧ್ಯತೆಯಿದೆ. ಈ ಘಟನೆಗೆ ಕಾರಣರಾದ ನಿರ್ದಿಷ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವಂತೆಯೂ ವರದಿಯಲ್ಲಿ ಶಿಫಾರಸು ಮಾಡಲಾಗಿದೆ ಎಂದು ಗೊತ್ತಾಗಿದೆ.

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದ ಈ ಘಟನೆಯ ತನಿಖೆಗೆ ನಿವೃತ್ತ ನ್ಯಾಯಮೂರ್ತಿ ಬಿ.ಎ. ಪಾಟೀಲ್ ನೇತೃತ್ವದ ಸಮಿತಿಯನ್ನು ರಚಿಸಲಾಗಿತ್ತು. ಆದರೆ, ಆ ಸಮಿತಿಯ ವರದಿಯು ಅಧಿಕಾರಿಗಳನ್ನು ರಕ್ಷಿಸುವಂತಿದೆ ಮತ್ತು ನೈಜ ಸಂಗತಿಗಳನ್ನು ಮರೆಮಾಚಿದೆ ಎಂದು ಅಂದು ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್ ಆಕ್ಷೇಪ ವ್ಯಕ್ತಪಡಿಸಿತ್ತು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ, ಈ ಪ್ರಕರಣದ ಮರು ತನಿಖೆ ನಡೆಸಲು ಕುನ್ಹ ಅವರ ನೇತೃತ್ವದಲ್ಲಿ ಆಯೋಗವನ್ನು ರಚಿಸಲಾಗಿತ್ತು.

ಕಾರು ಡಿಕ್ಕಿ: ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ದೇವನಹಳ್ಳಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಸತ್ವ ಅಪಾರ್ಟ್‌ಮೆಂಟ್ ಸಮೀಪದ ಭುವನಹಳ್ಳಿ ಸೇತುವೆಯ ಬಳಿ ರಸ್ತೆ ಬದಿಯಲ್ಲಿ ನಿಂತಿದ್ದ ಕಾರ್ಮಿಕರೊಬ್ಬರಿಗೆ ಇನೊವಾ ಕಾರು ಡಿಕ್ಕಿ ಹೊಡೆದ ಪರಿಣಾಮ ಅವರು ಮೃತಪಟ್ಟಿದ್ದಾರೆ.

ಪಿ.ಜೆ.ಪಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕ ಪಿಂಟು ಪಾಸ್ವಾನ್ (39) ಮೃತಪಟ್ಟವರು.

'ಒಂದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ವಿಕಾಸ್ ಮಾಂಜಿ, ಲಾರಿ ಚಾಲಕ ಲಿಂಗಣ್ಣ ಹಾಗೂ ಪಿಂಟು ಪಾಸ್ವಾನ್ ಅವರು ಭಾನುವಾರ ಸಂಜೆ 6.15ರ ಸುಮಾರಿಗೆ ಮಾತನಾಡುತ್ತಾ ನಿಂತಿದ್ದರು. ಬೆಂಗಳೂರು ಕಡೆಯಿಂದ ದೇವನಹಳ್ಳಿಗೆ ತೆರಳುತ್ತಿದ್ದ ಇನೊವಾ ಕಾರು, ವೇಗವಾಗಿ ಬಂದು ಡಿಕ್ಕಿ ಹೊಡೆದ ಪರಿಣಾಮ ಪಿಂಟು ಗಂಭೀರವಾಗಿ ಗಾಯಗೊಂಡಿದ್ದರು. ಸ್ಥಳೀಯರ ನೆರವಿನಿಂದ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು. ಪಿಂಟು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ' ಎಂದು ಮೂಲಗಳು ಹೇಳಿವೆ.

'ಕಾರು ಚಾಲಕನ ಅತಿವೇಗ ಹಾಗೂ ಅಜಾಗರೂಕತೆಯ ಚಾಲನೆಯೇ ಅಪಘಾತಕ್ಕೆ ಕಾರಣವಾಗಿದೆ. ಕಾರು ಜಪ್ತಿ ಮಾಡಲಾಗಿದೆ. ಚಾಲಕ ಮೋಹನ್‌ಕುಮಾರ್ ಎಂಬಾತನನ್ನು ವಶಕ್ಕೆ ಪಡೆಯಲಾಗಿದೆ' ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ದೇವನಹಳ್ಳಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರಾಗೃಹಗಳ ವ್ಯವಸ್ಥೆ ಸುಧಾರಣೆಗೆ ಕ್ರಮ: ಉನ್ನತ ಮಟ್ಟದ ಸಮಿತಿಯಿಂದ ಅಧ್ಯಯನ

ತಿಹಾರ್ ಜೈಲಿಗೆ ಸಮಿತಿ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ ಕೇಂದ್ರ ಕಾರಾಗೃಹ ಹಾಗೂ ಜಿಲ್ಲಾ ಕಾರಾಗೃಹಗಳ ಸುಧಾರಣೆಗೆ ಸರ್ಕಾರ ನೇಮಿಸಿರುವ ಉನ್ನತ ಮಟ್ಟದ ಸಮಿತಿಯ ಸದಸ್ಯರು, ದೆಹಲಿಯ ತಿಹಾರ್ ಜೈಲಿಗೆ ಭೇಟಿ ನೀಡಿ, ಅಲ್ಲಿನ ವ್ಯವಸ್ಥೆಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ.

ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಆರ್.ಹಿತೇಂದ್ರ, ಕೆಎಸ್‌ಆರ್‌ಪಿ ಐಜಿಪಿ ಸಂದೀಪ್ ಪಾಟೀಲ ನೇತೃತ್ವದ ಸಮಿತಿ, ಕಳೆದ ವಾರ ತಿಹಾರ್ ಜೈಲಿಗೆ ಭೇಟಿ ನೀಡಿ, ಮಾಹಿತಿ ಪಡೆದುಕೊಂಡಿತು ಎಂಬುದು ಗೊತ್ತಾಗಿದೆ.

ಅತ್ಯಾಚಾರ, ಸರಣಿ ಕೊಲೆಯ ಪಾತಕಿ ಉಮೇಶ್ ರೆಡ್ಡಿ, ಇಸ್ಲಾಮಿಕ್ ಸ್ಟೇಟ್ (ಐಎಸ್) ಭಯೋತ್ಪಾದಕ ಸಂಘಟನೆಯ ಉಗ್ರ ಜುಹಾದ್ ಹಮೀದ್ ಶಕೀಲ್ ಮನ್ನಾ, ದುಬೈನಿಂದ ಚಿನ್ನ ಕಳ್ಳ ಸಾಗಣೆ ಮಾಡಿದ ಪ್ರಕರಣದ ಆರೋಪಿ ತರುಣ್ ರಾಜ್ ತಾವಿರುವ ಬ್ಯಾರಕ್‌ನಲ್ಲಿ ಮೊಬೈಲ್‌ನಲ್ಲಿ ಮಾತನಾಡುತ್ತಿರುವ, ಟಿ.ವಿ ವೀಕ್ಷಣೆ ಮಾಡುತ್ತಿರುವ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಇತ್ತೀಚೆಗಷ್ಟೇ ಹರಿದಾಡಿದ್ದವು. ಅದರ ಬೆನ್ನಲ್ಲೇ, ಮಾಂಸ, ಮದ್ಯ ಸೇವಿಸಿ ಜೈಲಿನಲ್ಲಿ ವಿಚಾರಣಾಧೀನ ಕೈದಿಗಳು ನೃತ್ಯ ಮಾಡುತ್ತಿರುವ ವಿಡಿಯೊ ಸಹ ಜಾಲತಾಣದಲ್ಲಿ ಹರಿದಾಡಿತ್ತು.



ಬಳಿಕ ಗೃಹ ಸಚಿವ ಜಿ.ಪರಮೇಶ್ವರ ಅವರು ಕಾರಾಗೃಹ ಹಾಗೂ ಸುಧಾರಣೆಗಳ ಇಲಾಖೆ ಹಾಗೂ ಪೊಲೀಸರ ಸಭೆ ನಡೆಸಿದ್ದರು. ಸಭೆಯ ಬಳಿಕ ಜೈಲುಗಳಲ್ಲಿ ವ್ಯವಸ್ಥೆಯ ಸುಧಾರಣೆಗೆ ಉನ್ನತಮಟ್ಟದ ಸಮಿತಿ ರಚಿಸಿ ಆದೇಶಿಸಿದ್ದರು.

'ತಿಹಾರ್ ಜೈಲಿನ ಅಧಿಕಾರಿಗಳ ಜತೆಗೆ ಚರ್ಚಿಸಿ ಕೈದಿಗಳಿಗೆ ನೀಡಿರುವ ಸೌಲಭ್ಯಗಳು ಹಾಗೂ ಸುಧಾರಣಾತ್ಮಕ ಅಂಶಗಳ ಬಗ್ಗೆ ಅಧ್ಯಯನ ನಡೆಸಲಾಗಿದೆ. ಜೈಲಿನ ಕೈಪಿಡಿ ಪ್ರಕಾರ ಕೈದಿಗಳಿಗೆ ಯಾವೆಲ್ಲಾ ಸೌಲಭ್ಯ ನೀಡಲಾಗುತ್ತಿದೆ? ಜೈಲಿನ ಆಡಳಿತ ಜಾರಿಗೆ ತಂದಿರುವ ಅಂಶಗಳ ಬಗ್ಗೆ, ಬಂದಿಗಳಿಗೆ ರೂಪಿಸಿರುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಪಡೆಯಲಾಗಿದೆ. ಅಲ್ಲದೆ, ಮಂಗಳೂರು ಹಾಗೂ ಕಲಬುರಗಿ ಜೈಲಿಗೂ ಸಮಿತಿ ತೆರಳಿ ಪರಿಶೀಲಿಸಿದೆ' ಎಂದು ಮೂಲಗಳು ಹೇಳಿವೆ.

'ರಾಜ್ಯದಲ್ಲಿರುವ ಇತರೆ ಕೇಂದ್ರ ಕಾರಾಗೃಹಗಳು ಹಾಗೂ ಜಿಲ್ಲಾ ಕಾರಾಗೃಹಗಳಿಗೂ ಈ ಸಮಿತಿ ಭೇಟಿ ನೀಡಿ ಅಧ್ಯಯನ ನಡೆಸಲಿದೆ. ಬಳಿಕ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬೀಡಿ ಮಾರಾಟ ಬಂದ್: ಪ್ರತಿಭಟನೆ

ಪರಪ್ಪನ ಅಗ್ರಹಾರ ಜೈಲಿನಲ್ಲಿ ಬೀಡಿ ಹಾಗೂ ಸಿಗರೇಟ್ ಮಾರಾಟ ಬಂದ್ ಮಾಡಿರುವುದನ್ನು ಖಂಡಿಸಿ, ಕಳೆದ ಮೂರು ದಿನಗಳಿಂದ ವಿಚಾರಣಾಧೀನ ಹಾಗೂ ಸಜಾಬಂದಿಗಳು ಪ್ರತಿಭಟನೆ ನಡೆಸುತ್ತಿದ್ದಾರೆ.

ಕೆಲ ವರ್ಷಗಳಿಂದ ಜೈಲಿನ ಕ್ಯಾಂಟೀನ್‌ನಲ್ಲಿ ಬೀಡಿ ಹಾಗೂ ಸಿಗರೇಟ್ ಮಾರಾಟ ಮಾಡಲಾಗುತ್ತಿತ್ತು. ಜೈಲಿನಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಬಂದ್ ಮಾಡಲಾಗಿದೆ.

ನಿಷೇಧಿತ ವಸ್ತುಗಳು ಜೈಲಿಗೆ ಪೂರೈಕೆ ಆಗುತ್ತಿದ್ದವು. ಅದನ್ನು ನಿಯಂತ್ರಿಸಲು 20 ಮಂದಿ ಅಧಿಕಾರಿ ಹಾಗೂ ಸಿಬ್ಬಂದಿ ಒಳಗೊಂಡ ವಿಶೇಷ ಶೋಧನಾ ತಂಡವನ್ನು ರಚಿಸಲಾಗಿತ್ತು. ಆ ತಂಡವು ತಪಾಸಣೆ ನಡೆಸಿ, 50 ಮೊಬೈಲ್ ಫೋನ್ ವಶಕ್ಕೆ ಪಡೆದುಕೊಂಡಿತ್ತು. ಅಲ್ಲದೇ ಸಿಗರೇಟ್ ಪೂರೈಕೆಗೆ ಕಡಿವಾಣ ಹಾಕಿದೆ ಎಂದು ಗೊತ್ತಾಗಿದೆ.

ಇದರಿಂದ ಅಸಮಾಧಾನಗೊಂಡಿರುವ ಕೈದಿಗಳು ಊಟ ತ್ಯಜಿಸಿ ಪ್ರತಿಭಟನೆಗೆ ಇಳಿದಿದ್ದಾರೆ. ಬೀಡಿ, ಸಿಗರೇಟ್ ಮಾರಾಟಕ್ಕೆ ಅನುವು ಮಾಡಿಕೊಡಬೇಕೆಂದು ಒತ್ತಾಯಿಸಿ, ಪರಪ್ಪನ ಅಗ್ರಹಾರ ಜೈಲಿನ ಒಳಗಿರುವ ಆಡಳಿತ ಕಚೇರಿ ಎದುರು ಧರಣಿ ಮಾಡುತ್ತಿದ್ದಾರೆ.

ಕಳೆದ ವಾರ ನಡೆದ ದಿಢೀರ್ ದಾಳಿ ವೇಳೆ ವಿವಿಧ ಬ್ಯಾರಕ್‌ನಲ್ಲಿ 50 ಮೊಬೈಲ್ ಫೋನ್‌ಗಳು, 22 ಸಿಮ್ ಕಾರ್ಡ್‌ಗಳು, 5 ಚಾರ್ಜರ್‌ಗಳು, 4 ಇಯರ್ ಬಡ್ಸ್, ₹49 ಸಾವಿರ ನಗದು, ಚಾಕು ಪತ್ತೆ ಆಗಿದ್ದವು.

ಪಲ್ಸ್ ಪೋಲಿಯೊಗೆ 'ಮೈಕ್ರೋ ಪ್ಲ್ಯಾನ್'

21ರಿಂದ ನಾಲ್ಕು ದಿನ ನಗರದೆಲ್ಲೆಡೆ ಮಕ್ಕಳಿಗೆ ಪೋಲಿಯೊ ಹನಿ: ಮಹೇಶ್ವರ್ ರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಡಿ.21ರಿಂದ 24ರವರೆಗೆ 'ರಾಷ್ಟ್ರೀಯ ಪಲ್ಸ್ ಪೋಲಿಯೊ' ಕಾರ್ಯಕ್ರಮದ ಭಾಗವಾಗಿ 'ಮೈಕ್ರೋ ಪ್ಲ್ಯಾನ್' ಸಿದ್ಧಪಡಿಸಲು ಅಧಿಕಾರಿಗಳಿಗೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚಿಸಿದರು.

ಆರೋಗ್ಯ ವಿಭಾಗ ಹಾಗೂ ಕಲ್ಯಾಣ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ಪಲ್ಸ್ ಪೋಲಿಯೊ ಕುರಿತು ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ರೂಪಿಸಬೇಕು. ನರ್ಸಿಂಗ್ ಕಾಲೇಜುಗಳು, ವೈದ್ಯಕೀಯ ಕಾಲೇಜುಗಳು, ಪ್ಯಾರಾ ಮೆಡಿಕಲ್ ಕಾಲೇಜುಗಳ ವಿದ್ಯಾರ್ಥಿಗಳನ್ನು ಸ್ವಯಂಸೇವಕರನ್ನಾಗಿ ಬಳಸಿಕೊಂಡು ಪೋಲಿಯೊ ಹನಿ ಹಾಕಬೇಕು' ಎಂದು ಹೇಳಿದರು.

ಸಂಚಾರ ಲಸಿಕಾ ತಂಡಗಳನ್ನು ನಗರದ ಬಸ್ ನಿಲ್ದಾಣ, ಮಾರುಕಟ್ಟೆ, ರೈಲ್ವೆ ಮತ್ತು ಮೆಟ್ರೊ ನಿಲ್ದಾಣ, ಮಾಲ್, ಪ್ರಮುಖ ಉದ್ಯಾನಗಳು, ಕೊಳಚೆ ಪ್ರದೇಶಗಳು ಸೇರಿದಂತೆ ಜನನಿಬಿಡ ಪ್ರದೇಶಗಳಲ್ಲಿ ಪೋಲಿಯೊ ಹನಿ ಹಾಕುವಂತೆ ಸೂಚಿಸಿದರು.

ವಿಶೇಷ ಆಯುಕ್ತರ ಸುರೋಳ್ಕರ್ ವಿಕಾಸ್ ಕಿಶೋರ್ ಮಾತನಾಡಿ, 'ಡಿ.21ರಂದು ಬೆಳಿಗ್ಗೆ 8ರಿಂದ ಸಂಜೆ 5ರವರೆಗೆ ಬೂತ್‌ಗಳಲ್ಲಿ ಲಸಿಕೆ ಹಾಕಲಾಗುವುದು. 22ರಿಂದ 24ರವರೆಗೆ ಮನೆ-ಮನೆಗೆ ಭೇಟಿ ನೀಡಿ ಲಸಿಕೆ ಹಾಕಲಾಗುವುದು. ಇದಲ್ಲದೆ, 21ರಿಂದ 24ರವರೆಗೆ ಹೆಚ್ಚು ಜನದಟ್ಟಣೆ ಹೊಂದಿರುವ ಪ್ರದೇಶ, ಕೊಳೆಗೇರಿ, ವಲಸಿಗರ ಮೇಲೆ ಹೆಚ್ಚು ಗಮನ ನೀಡುವ ಕೆಲಸ ಮಾಡಲಾಗುವುದೆಂದು' ತಿಳಿಸಿದರು.

ನವಜಾತ ಶಿಶುವಿನಿಂದ ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೊ ಹನಿ ನೀಡಬೇಕು. ನಮ್ಮ ಕ್ಲಿನಿಕ್, ಪ್ರಾಥಮಿಕ ಆರೋಗ್ಯ ಕೇಂದ್ರ, ಹೆರಿಗೆ ಆಸ್ಪತ್ರೆ, ರೆಫರಲ್ ಆಸ್ಪತ್ರೆ, ಖಾಸಗಿ ಆಸ್ಪತ್ರೆಗಳಲ್ಲೂ ನೀಡಲಾಗುತ್ತದೆ ಎಂದು ಹೇಳಿದರು.

ಇ-ಖಾತಾಗೆ ದೂರವಾಣಿ: ಇ-ಖಾತಾ ವಿತರಣೆ, ಬಿ-ಖಾತಾದಿಂದ ಎ-ಖಾತಾ ಪರಿವರ್ತನೆ ಹಾಗೂ ಆಸ್ತಿ ತೆರಿಗೆಗೆ ಸಂಬಂಧಿಸಿದ ದೂರುಗಳಿಗಾಗಿ ಪ್ರತ್ಯೇಕ ದೂರವಾಣಿ 94806 83035 ಇದ್ದು, ಅದಕ್ಕೆ ಬರುವ ದೂರುಗಳನ್ನು ಕಾಲಮಿತಿಯೊಳಗಾಗಿ ಇತ್ಯರ್ಥಪಡಿಸಬೇಕು ಎಂದು ಮಹೇಶ್ವರ್ ರಾವ್ ಸೂಚಿಸಿದರು.

ಇ-ಖಾತಾ ಸಹಾಯವಾಣಿಗೆ ಬರುವ ದೂರುಗಳನ್ನು ಪ್ರತ್ಯೇಕವಾಗಿ ಮೇಲ್ವಿಚಾರಣೆ ಮಾಡಬೇಕು. ತಿರಸ್ಕೃತವಾಗಿರುವ ಇ-ಖಾತಾ ಅರ್ಜಿಗಳನ್ನು ಯಾವ ಕಾರಣಕ್ಕಾಗಿ ತಿರಸ್ಕರಿಸಲಾಗಿದೆ ಎಂಬುದನ್ನು ಪರಿಶೀಲಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಮಾತನಾಡಿ, 'ಇ-ಖಾತಾಗೆ ಸಂಬಂಧಿಸಿ ಪ್ರತಿನಿತ್ಯ ಸುಮಾರು 1,000 ಕರೆ ಬರುತ್ತಿದ್ದು, ಅವುಗಳನ್ನು ಟ್ರ್ಯಾಕ್ ಮಾಡಿ ಇರುವ ಸಮಸ್ಯೆ ಬಗೆಹರಿಸಿ ಆದ್ಯತೆ ಮೇರೆಗೆ ವಿಲೇವಾರಿ ಮಾಡುವ ಕೆಲಸ ಮಾಡಲಾಗುತ್ತಿದೆ' ಎಂದು ತಿಳಿಸಿದರು.

'ಸರಿಯಾದ ಕಾರಣಗಳಿಲ್ಲದೆ ಇ-ಖಾತಾ ಅರ್ಜಿಗಳನ್ನು ತಿರಸ್ಕರಿಸುವಂತಿಲ್ಲ. ಈ ಸಂಬಂಧ ಯಾವ ಕಾರಣಗಳಿಗಾಗಿ ತಿರಸ್ಕರಿಸಿದ್ದಾರೆ ಎಂಬುದನ್ನು ಪರಿಶೀಲಿಸಿ ಪಾಲಿಕೆವಾರು ಆ ಮಾಹಿತಿಯನ್ನು ನೀಡಲು ಕ್ರಮ ವಹಿಸಲಾಗುವುದು. ಅದರ ಅನುಸಾರ ಬಾಕಿಯಿರುವ ಇ-ಖಾತಾಗಳನ್ನು ತ್ವರಿತಗತಿಯಲ್ಲಿ ವಿಲೇವಾರಿಗೆ ಸಹಕಾರಿಯಾಗಲಿದೆ' ಎಂದು ಹೇಳಿದರು.

'ಪೌರಕಾರ್ಮಿಕರ ಸೌಲಭ್ಯದಲ್ಲಿ ರಾಜಿ ಇಲ್ಲ'

'ಸ್ವಚ್ಛತಾ ಸಿಬ್ಬಂದಿಗೆ ಕಾನೂನು ಪ್ರಕಾರ ಸಿಗಬೇಕಾದ ಸೌಲಭ್ಯಗಳಲ್ಲಿ ಯಾವುದೇ ರಾಜಿ ಇಲ್ಲ. ಪೌರಕಾರ್ಮಿಕರ ಹಲವು ಸಮಸ್ಯೆಗಳನ್ನು ಕೂಡಲೇ ಪರಿಹರಿಸಬೇಕು' ಎಂದು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಪಿ.ರಘು ಅವರು ಅಧಿಕಾರಿಗಳಿಗೆ ಸೂಚಿಸಿದರು. ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು, ಲೋಡರ್ಸ್, ಕ್ಲೀನರ್‌ಗಳು, ಆಟೊ ಟಿಪ್ಪರ್ ಚಾಲಕರು ಮತ್ತು ಇನ್ನಿತರೆ ಸ್ವಚ್ಛತಾ ಸಿಬ್ಬಂದಿಗಳೊಂದಿಗೆ ಸಂವಾದ ನಡೆಸಿ ಅವರು ಮಾತನಾಡಿದರು.

ಸಂವಾದದ ವೇಳೆ ಸ್ವಚ್ಛತಾ ಕಾರ್ಮಿಕರು ಸೌಲಭ್ಯಗಳ ಕೊರತೆ, ನೇಮಕಾತಿಗೆ ಸಂಬಂಧಿಸಿದ ತೊಂದರೆಗಳು, ಮೃತ ಪೌರ ಕಾರ್ಮಿಕರಿಗೆ ಪರಿಹಾರ ವಿಳಂಬ, ಪಿಎಫ್ ಸಂಬಂಧಿತ ಸಮಸ್ಯೆ, ಬಯೊಮೆಟ್ರಿಕ್ ಹಾಜರಾತಿ, ವೇತನ ಬಾಕಿ, ಶೌಚಾಲಯ ಮತ್ತು ವಿಶ್ರಾಂತಿ ಕೊಠಡಿ ಸಮಸ್ಯೆ ಮುಂತಾದವುಗಳ ಬಗ್ಗೆ ಅಧ್ಯಕ್ಷರ ಗಮನಕ್ಕೆ ತಂದರು. ಪ್ರತಿ ವಿಷಯವನ್ನೂ ಗಂಭೀರವಾಗಿ ಆಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

ಎಲ್‌ಕೆಜಿ ಮಕ್ಕಳಿಗೂ ಮಧ್ಯಾಹ್ನದ ಬಿಸಿಯೂಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿ ಆರಂಭವಾಗಿರುವ ಪೂರ್ವ ಪ್ರಾಥಮಿಕ ತರಗತಿಯ ಮಕ್ಕಳಿಗೂ ಮೊಟ್ಟೆ, ಬಾಳೆಹಣ್ಣು ಸೇರಿದಂತೆ ಮಧ್ಯಾಹ್ನದ ಬಿಸಿಯೂಟ ಸಿಗಲಿದೆ.

2019–20ನೇ ಶೈಕ್ಷಣಿಕ ವರ್ಷದಿಂದಲೇ ಸರ್ಕಾರಿ ಶಾಲೆಗಳಲ್ಲಿ ಎಲ್‌ಕೆಜಿ, ಯುಕೆಜಿ ವಿಭಾಗಗಳನ್ನು ಆರಂಭಿಸಲಾಗಿತ್ತು. ಆದರೆ, ಮಧ್ಯಾಹ್ನದ ಬಿಸಿಯೂಟ ವಿಸ್ತರಣೆ ಆಗಿರಲಿಲ್ಲ. ಪ್ರಧಾನಮಂತ್ರಿ ಪೋಷಣ್ ಶಕ್ತಿ ಅಭಿಯಾನದ ಅನುಮೋದನಾ ಮಂಡಳಿ ಸಭೆಯ ನಿರ್ಧಾರದಂತೆ ಡಿ.1ರಿಂದ ಪೂರ್ವ ಪ್ರಾಥಮಿಕ ತರಗತಿಯ ಮಕ್ಕಳಿಗೂ ವಿಸ್ತರಿಸಲಾಗಿದೆ.

ಪ್ರತಿ ಮಗುವಿಗೆ ಪ್ರತಿದಿನ ಕೇಂದ್ರ ಸರ್ಕಾರ ₹4.07, ರಾಜ್ಯ ಸರ್ಕಾರ ₹2.71 ವೆಚ್ಚ ಮಾಡಲಿವೆ. ಒಟ್ಟು ಆಹಾರ ತಯಾರಿ ವೆಚ್ಚ ₹6.78 ನಿಗದಿ ಮಾಡಲಾಗಿದೆ. ಅದಲ್ಲದೆ, ವಾರದಲ್ಲಿ ನಾಲ್ಕು ದಿನ ಮೊಟ್ಟೆ ಖರೀದಿಗೆ ಅಜೀಂ ಪ್ರೇಮ್‌ಜಿ ಫೌಂಡೇಶನ್ ಹಣಕಾಸಿನ ಸಹಾಯ ಮಾಡಲಿದೆ. ಉಳಿದ ಎರಡು ದಿನಗಳ ವೆಚ್ಚವನ್ನು ಶಾಲಾ ಶಿಕ್ಷಣ ಇಲಾಖೆ ಭರಿಸುತ್ತದೆ.

ಜೆಡಿಎಸ್ ವಿರುದ್ಧ ಕಾಂಗ್ರೆಸ್ ಪ್ರತೀಕಾರ...!

ಶಿಕ್ಷೆ ಅಮಾನತು ಕೋರಿರುವ ಪ್ರಜ್ವಲ್ ರೇವಣ್ಣ ಪರ ಸಿದ್ಧಾರ್ಥ ಲೂಥ್ರಾ ವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮನೆಕೆಲಸದ ಮಹಿಳೆಯ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ವ್ಯವಸ್ಥಿತ ರಾಜಕೀಯ ಪಿತೂರಿ ನಡೆದಿದ್ದು, ಆಡಳಿತಾರೂಢ ಕಾಂಗ್ರೆಸ್ ಸರ್ಕಾರವು ಜೆಡಿಎಸ್ ನಾಯಕರ ವಿರುದ್ಧ ಪ್ರತೀಕಾರ ತೀರಿಸಿಕೊಂಡಿದೆ. ಅದಕ್ಕಾಗಿ ಸಂತ್ರಸ್ತೆಯನ್ನು ಬಳಕೆ ಮಾಡಿಕೊಂಡಿದೆ' ಎಂದು ಪ್ರಕರಣದ ಅಪರಾಧಿಯಾಗಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಪರ ಹಿರಿಯ ವಕೀಲರು ಹೈಕೋರ್ಟ್‌ಗೆ ಅರುಹಿದರು.

'ನನಗೆ ವಿಧಿಸಿರುವ ಶಿಕ್ಷೆಯನ್ನು ಅಮಾನತಿನಲ್ಲಿ ಇರಿಸಿ ಜಾಮೀನು ಮಂಜೂರು ಮಾಡಬೇಕು' ಎಂದು ಕೋರಿ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಕೆ.ಎಸ್.ಮುದಗಲ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಜ್ವಲ್ ಪರ ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಸಿದ್ಧಾರ್ಥ ಲೂಥ್ರಾ ಅವರು, 'ಸಂತ್ರಸ್ತೆ ಮೂರು ವರ್ಷ ಮೌನವಾಗಿದ್ದರು. ನಂತರ ಪ್ರಜ್ವಲ್ ವಿರುದ್ಧ ನಾಲ್ಕು ಅತ್ಯಾಚಾರ ಪ್ರಕರಣಗಳನ್ನು ದಾಖಲಿಸಲಾಗಿದೆ. ಇದೇ ವೇಳೆ ಪ್ರಜ್ವಲ್ ಅವರು ತಮ್ಮ ಮಾಜಿ ಕಾರು ಚಾಲಕ ಕಾರ್ತಿಕ್ ವಿರುದ್ಧ ದೂರು ನೀಡಿದ್ದಾರೆ. ಆದರೆ, ಈ ಪ್ರಕರಣದ ತನಿಖೆಯನ್ನು ಸರ್ಕಾರ ಏಕೆ ನಡೆಸಿಲ್ಲ' ಎಂದು ಪ್ರಶ್ನಿಸಿದರು.

'ಪ್ರಜ್ವಲ್ 2024ರ ಏಪ್ರಿಲ್ 24ರಂದು ದೇಶ ತೊರೆದಿದ್ದರು. ಅವರು ವಿದೇಶಕ್ಕೆ ತೆರಳುವಾಗ ಎಫ್‌ಐಆರ್ ದಾಖಲಾಗಿರಲಿಲ್ಲ. ಏಪ್ರಿಲ್ 28ರಂದು ದಾಖಲಾಗಿದೆ. 2024ರ ಮೇ ನಲ್ಲಿ ಪ್ರಜ್ವಲ್ ಸ್ವದೇಶಕ್ಕೆ ಮರಳಿದಾಗ ಅವರನ್ನು ಬಂಧಿಸಲಾಗಿದೆ. ಅವರು ತಮ್ಮ ಆ್ಯಪಲ್ ಐ ಫೋನ್ ಅನ್ನು ತನಿಖಾಧಿಕಾರಿಗೆ ನೀಡಿಲ್ಲ ಎಂದು ಹೇಳಲಾಗಿದೆ. ಆದರೆ, ಅಪರಾಧ ದಂಡ ಪ್ರಕ್ರಿಯಾ ಸಂಹಿತೆ–1973ರ (ಸಿಆರ್‌ಪಿಸಿ) ಕಲಂ 91ರ ಅಡಿಯಲ್ಲಿ ಮೊಬೈಲ್ ಒಪ್ಪಿಸುವಂತೆ ಪ್ರಜ್ವಲ್‌ಗೆ ಯಾವುದೇ ನೋಟಿಸ್ ನೀಡಿಲ್ಲ. ಐಎಂಇಐ (ಇಂಟರ್‌ನ್ಯಾಷನಲ್ ಮೊಬೈಲ್ ಎಕ್ವಿಪ್‌ಮೆಂಟ್ ಐಡೆಂಟಿಟಿ) ನಂಬರ್ ಆಧರಿಸಿ ಮೊಬೈಲ್ ಕಂಪನಿಯಿಂದ ಮಾಹಿತಿ ಪಡೆಯುವುದಕ್ಕೂ ಪೊಲೀಸರು ಯತ್ನಿಸಿಲ್ಲ' ಎಂದು ಹೇಳಿದರು.

'ಪ್ರಜ್ವಲ್ ಎಸಗಿದ್ದಾರೆ ಎನ್ನಲಾದ ಅಶ್ಲೀಲ ಕೃತ್ಯದ ಆಯ್ದ ವಿಡಿಯೊಗಳನ್ನು ಮಾತ್ರವೇ ಸಾರ್ವಜನಿಕವಾಗಿ ಬಿಡುಗಡೆ ಮಾಡಲಾಗಿದೆ. 2025ರ ಮೇ 2ರಿಂದ ಜೂನ್ 20ರವರೆಗೆ 13 ಸಾಕ್ಷ್ಯಗಳನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಇವುಗಳಲ್ಲಿ ಐದನ್ನು ಪುನರ್ ವಿಚಾರಣೆಗೆ ಒಳಪಡಿಸಲಾಗಿದೆ. ಜುಲೈ 18ರಂದು ಅಂತಿಮ ವಿಚಾರಣೆ ಮುಗಿದಿದೆ. ಒಟ್ಟಾರೆ 90 ದಿನಗಳಲ್ಲಿ ವಿಚಾರಣೆ ಮುಕ್ತಾಯಗೊಳಿಸಲಾಗಿದೆ. ವಿಶೇಷ ನ್ಯಾಯಾಲಯದ ನ್ಯಾಯಾಧೀಶರು 10 ದಿನ ರಜೆ ಇದ್ದರು. 12 ದಿನ ಸಾರ್ವತ್ರಿಕ ರಜೆ ಇತ್ತು. ಹೀಗಿರುವಾಗ, ಪ್ರಜ್ವಲ್ ವಿಚಾರಣೆ ವಿಳಂಬಗೊಳಿಸಿದ್ದಾರೆ ಎಂದು ಹೇಳುವುದು ಎಷ್ಟು ಸರಿ' ಎಂದು ಪ್ರಶ್ನಿಸಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ಕ್ಲುಪ್ತವಾದ ಮತ್ತು ಶಿಕ್ಷೆ ಅಮಾನತು ಕೋರಿಕೆಗೆ ಸೀಮಿತವಾದ ಲಿಖಿತ ಸಾರಾಂಶ ಪ್ರತಿಗಳನ್ನು ಸಲ್ಲಿಸಿ' ಎಂದು ಉಭಯ ಪಕ್ಷಕಾರರಿಗೆ ಸೂಚಿಸಿ, ವಿಚಾರಣೆಯನ್ನು ಇದೇ 3ಕ್ಕೆ ಮುಂದೂಡಿತು.

ಪೆಟ್ಟಿಕೋಟ್ ಸಂತ್ರಸ್ತೆಗೆ ಸೇರಿದ್ದಲ್ಲ..!

'ಮನೆಕೆಲಸದ ಮಹಿಳೆಯ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ತನಿಖಾಧಿಕಾರಿಗಳು ವಶಪಡಿಸಿಕೊಂಡು ಸಾಕ್ಷ್ಯವೆಂದು ಪರಿಗಣಿಸಲಾಗಿರುವ ಪೆಟ್ಟಿಕೋಟ್ (ಒಳಲಂಗ) ಸಂತ್ರಸ್ತೆಗೆ ಸೇರಿದ್ದಲ್ಲ' ಎಂದು ಸಿದ್ಧಾರ್ಥ ಲೂಥ್ರಾ ನ್ಯಾಯಪೀಠಕ್ಕೆ ಅರುಹಿದರು.

'ಗನ್ನಿಕಡದ ಫಾರ್ಮ್ ಹೌಸ್‌ನಲ್ಲಿ ವಶಪಡಿಸಿಕೊಂಡ ಪೆಟ್ಟಿಕೋಟ್ ಸಂತ್ರಸ್ತೆಗೆ ಸೇರಿದ್ದಲ್ಲ. ಪೊಲೀಸರು ಬಟ್ಟೆಯನ್ನು ವಶಕ್ಕೆ ಪಡೆದಿರುವುದೇ ಸಂಶಯಾಸ್ಪದವಾಗಿದೆ' ಎಂದು ಆರೋಪಿಸಿದರು.

ಈ ವಾದವನ್ನು ಅಲ್ಲಗಳೆದ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ರವಿವರ್ಮ ಕುಮಾರ್, 'ಅಶ್ಲೀಲ ವಿಡಿಯೊದಲ್ಲಿರುವ ದೃಶ್ಯಕ್ಕೆ ಪ್ರಜ್ವಲ್ ರೇವಣ್ಣ ಅವರ ಜನನಾಂಗ ಹೊಂದಿಕೆಯಾಗಿದೆ. ಸಂತ್ರಸ್ತೆಯ ಬಟ್ಟೆಯ ಮೇಲಿನ ಡಿಎನ್‌ಎ ಮತ್ತು ಪ್ರಜ್ವಲ್ ಡಿಎನ್‌ಎ ಹೊಂದಾಣಿಕೆ ಆಗಿದೆ. ಕೃತ್ಯ ನಡೆಸಿದ್ದಕ್ಕೆ ಬಲವಾದ ಡಿಜಿಟಲ್ ಸಾಕ್ಷ್ಯವಿದೆ. ಆದರೆ, ಇದ್ಯಾವುದನ್ನೂ ಪ್ರಜ್ವಲ್ ಪರ ವಕೀಲರು ಅಲ್ಲಗಳೆದಿಲ್ಲ' ಎಂದು ಪ್ರತಿಪಾದಿಸಿದರು.

ಹೈಕೋರ್ಟ್ ಸುದ್ದಿ

ಚಿತ್ರಾವಳಿ

ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗ ಹಾಗೂ ಬೆಂಗಳೂರಿನ ಅಭಿನವ ಪ್ರಕಾಶನ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಭಾನುವಾರ ಆಯೋಜಿಸಿದ್ದ ಆನು ಒಲಿದಂತೆ ಆಡುವೆ–3 ಸಮಾರಂಭದಲ್ಲಿ ಸಾಹಿತಿ ಎಂ.ಬಸವಣ್ಣ ಅವರನ್ನು ಸನ್ಮಾನಿಸಲಾಯಿತು. ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಿ.ವಿ.ಪರಮಶಿವಮೂರ್ತಿ, ವಿಮರ್ಶಕರಾದ ಬಸವರಾಜ ಕಲ್ಗುಡಿ, ಸುಭಾಷ್ ರಾಜಮಾನೆ, ಅಭಿನವ ಪ್ರಕಾಶನದ ಎನ್.ರವಿಕುಮಾರ್, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥ ವೆಂಕಟಗಿರಿ ದಳವಾಯಿ, ಗೋವಿಂದ ಉಪಸ್ಥಿತರಿದ್ದರು

ಕಲಾದರ್ಪಣ ಆರ್ಟ್ ರಿಫ್ಲೆಕ್ಟ್ಸ್ ಸಂಸ್ಥೆ ಇತ್ತೀಚೆಗೆ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಹಾಗೂ ಕಲಾ ದರ್ಪಣ ಕನ್ನಡ ಹಬ್ಬದಲ್ಲಿ ಚಿತ್ರಕಲಾವಿದ ಶ್ರೀಕಾಂತ ಹೆಗಡೆ, ಎಟಿಎಸ್ ಗ್ರೂಪ್‌ನ ವ್ಯವಸ್ಥಾಪಕ ನಿರ್ದೇಶಕ ಮೂಂಡಬೈಲ್ ರವಿಶೆಟ್ಟಿ, ಕಿರುತರೆ ನಟ ನಾಗೇಶ್ವರ್ ವಿಜಾಪುರ ಅವರಿಗೆ ಕಲಾದರ್ಪಣ ಕನ್ನಡ ಕಣ್ಮಣಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಬಿಜೆಪಿ ಮುಖಂಡ ಯು.ಎಚ್.ನಿಖಿಲ್ ಗೌಡ, ಚಲನಚಿತ್ರ ನಿರ್ದೇಶಕ ಟಿ.ಎನ್.ನಾಗೇಶ್, ಸಂಸ್ಥೆಯ ಅಧ್ಯಕ್ಷೆ ಹೇಮಾ, ಕಾರ್ಯದರ್ಶಿ ವಿನಾಯಕ ಪಾಟೀಲ್ ಉಪಸ್ಥಿತರಿದ್ದರು

ಅರಿವು ಸಭೆ: 1,250 ಶಾಲಾ ಕಾಲೇಜುಗಳಲ್ಲಿ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ಸುರಕ್ಷತೆ, ಮಾದಕ ವಸ್ತುಗಳ ನಿಯಂತ್ರಣ, ಸೈಬರ್ ಅಪರಾಧ ತಡೆ ಹಾಗೂ ಸಂಚಾರ ನಿರ್ವಹಣೆ ಕುರಿತು ನಗರ ಪೊಲೀಸ್ ಕಮಿಷನ್‌ರೇಟ್ ವ್ಯಾಪ್ತಿಯ 11 ವಿಭಾಗದ ಪೊಲೀಸರು, ಸೋಮವಾರ ವಿವಿಧ ಶಾಲಾ–ಕಾಲೇಜಿಗೆ ಭೇಟಿ ನೀಡಿ ಜಾಗೃತಿ ಮೂಡಿಸಿದರು.

ಪೂರ್ವ, ಪಶ್ಚಿಮ, ಆಗ್ನೇಯ, ವಾಯವ್ಯ, ನೈರುತ್ಯ, ಎಲೆಕ್ಟ್ರಾನಿಕ್ ಸಿಟಿ, ಉತ್ತರ, ದಕ್ಷಿಣ, ಕೇಂದ್ರ, ಈಶಾನ್ಯ ಹಾಗೂ ವೈಟ್‌ಫೀಲ್ಡ್ ವಿಭಾಗದ ಶಾಲಾ–ಕಾಲೇಜುಗಳಲ್ಲಿ ಏಕಕಾಲದಲ್ಲಿ ಜಾಗೃತಿ ಮೂಡಿಸಲಾಯಿತು. 1,250 ಶಾಲಾ–ಕಾಲೇಜುಗಳ ಸುಮಾರು 2.50 ಲಕ್ಷ ವಿದ್ಯಾರ್ಥಿಗಳು ಅರಿವು ಸಭೆಗಳಲ್ಲಿ ಪಾಲ್ಗೊಂಡಿದ್ದರು.

2.50 ಲಕ್ಷ ವಿದ್ಯಾರ್ಥಿಗಳು ಭಾಗಿ

ಆಯಾ ವಿಭಾಗದ ಡಿಸಿಪಿಗಳು, ಎಸಿಪಿಗಳು, ಇನ್‌ಸ್ಪೆಕ್ಟರ್, ಪಿಎಸ್‌ಐ ಹಾಗೂ ಪೊಲೀಸ್ ಸಿಬ್ಬಂದಿ ಅರಿವು ಮೂಡಿಸಿದರು.

ಆಗ್ನೇಯ ವಿಭಾಗದ 59 ಶಾಲೆಗಳು ಹಾಗೂ 24 ಕಾಲೇಜುಗಳಲ್ಲಿ ಜಾಗೃತಿ ಕಾರ್ಯಕ್ರಮ ನಡೆದಿದ್ದು, 11,515 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಮಾದಕ ದ್ರವ್ಯದಿಂದ ಉಂಟಾಗುತ್ತಿರುವ ದುಷ್ಪರಿಣಾಮಗಳ ಕುರಿತು ತಿಳಿಸಲಾಯಿತು. ಮಹಿಳೆ, ಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ 'ರಾಣಿ ಚನ್ನಮ್ಮ ಪಡೆ'ಯಿಂದ ಸ್ವಯಂ ರಕ್ಷಣೆ ತಂತ್ರಗಳ ಬಗ್ಗೆ ತರಬೇತಿ ನೀಡಲಾಯಿತು.

ಮಹಿಳೆಯರು ಹಾಗೂ ಮಕ್ಕಳ ಪರವಾಗಿ ಇರುವ ಕಾನೂನುಗಳ ಬಗ್ಗೆಯೂ ತಿಳಿಸಲಾಯಿತು. ಇಲಾಖೆಯಿಂದ ಸ್ಥಾಪಿಸಲಾಗಿರುವ ಸಹಾಯವಾಣಿ ಬಗ್ಗೆಯೂ ಮಾಹಿತಿ ನೀಡಲಾಯಿತು ಎಂದು ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ ಅವರು ತಿಳಿಸಿದರು.

ಸುದ್ದಗುಂಟೆಪಾಳ್ಯ ಠಾಣೆಯ ಪೊಲೀಸರು ತಮ್ಮ ವ್ಯಾಪ್ತಿಯ ಶಾಲಾ–ಕಾಲೇಜುಗಳಿಗೆ ಭೇಟಿ ನೀಡಿ ಸೈಬರ್ ವಂಚನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಅರಿವು ಮೂಡಿಸಿದರು.

'ಮಾದಕ ವಸ್ತುಗಳ ನಿಯಂತ್ರಣ ಸಮಿತಿ ರಚಿಸುವಂತೆ ಶಾಲಾ–ಕಾಲೇಜುಗಳ ಮುಖ್ಯಸ್ಥರಿಗೆ ಸೂಚನೆ ನೀಡಲಾಗಿದೆ. ಡ್ರಗ್ಸ್ ಫ್ರೀ ಕರ್ನಾಟಕ ಆ್ಯಪ್ ಮೂಲಕ ಮಾದಕ ವಸ್ತುಗಳ ಮಾರಾಟ ಮಾಡುತ್ತಿದ್ದವರ ಬಗ್ಗೆ ದೂರು ನೀಡಬಹುದೆಂದು ಜಾಗೃತಿ ಸಭೆಗಳಲ್ಲಿ ತಿಳಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ತುರ್ತು ಸಹಾಯವಾಣಿ ಸಂಖ್ಯೆಗಳು	
112	ತುರ್ತು ನಿರ್ವಹಣಾ ಸಹಾಯವಾಣಿ (ಇಆರ್‌ಎಸ್‌ಎಸ್)
1930	ಸೈಬರ್ ವಂಚನೆ ಸಹಾಯವಾಣಿ
1933	ರಾಷ್ಟ್ರೀಯ ಮಾದಕ ವಸ್ತು ಸಹಾಯವಾಣಿ
14490	ರಾಷ್ಟ್ರೀಯ ಮಹಿಳಾ ಸಹಾಯವಾಣಿ
1098	ಮಕ್ಕಳ ಸಹಾಯವಾಣಿ

'5 ಜಿಲ್ಲೆಗಳಲ್ಲಿ ಅಂತರ್ಜಲ ವಿಪರೀತ ಬಳಕೆ'

ನವದೆಹಲಿ: ಕರ್ನಾಟಕದ ಐದು ಜಿಲ್ಲೆಗಳಲ್ಲಿ ಅಂತರ್ಜಲದ ವಿಪರೀತ ಬಳಕೆ ಆಗಿದೆ ಎಂದು ಕೇಂದ್ರ ಅಂತರ್ಜಲ ಮಂಡಳಿ ವರದಿ ತಿಳಿಸಿದೆ.

ಮಂಡಳಿಯು 2025ನೇ ಸಾಲಿನ ವರದಿಯನ್ನು ಶುಕ್ರವಾರ ಬಿಡುಗಡೆ ಮಾಡಿದ್ದು, ಕೋಲಾರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ ಜಿಲ್ಲೆಗಳಲ್ಲಿ ವ್ಯಾಪಕ ಪ್ರಮಾಣದಲ್ಲಿ ಅಂತರ್ಜಲ ಬಳಕೆ ಆಗಿದೆ ಎಂದು ತಿಳಿಸಿದೆ.

ಬೆಂಗಳೂರು ದಕ್ಷಿಣ (ರಾಮನಗರ), ತುಮಕೂರು ಜಿಲ್ಲೆಗಳಲ್ಲಿ ಅಂತರ್ಜಲ ಸ್ಥಿತಿ ಗಂಭೀರವಾಗಿದೆ. ವಿಜಯನಗರ, ಬಾಗಲಕೋಟೆ, ಬೆಳಗಾವಿ, ಚಾಮರಾಜನಗರ, ಗದಗ, ದಾವಣಗೆರೆ ಜಿಲ್ಲೆಗಳಲ್ಲಿ ಅಂತರ್ಜಲದ ಅತಿ ಬಳಕೆ ಆಗಿದೆ. ರಾಜ್ಯದಲ್ಲಿ ಅಂತರ್ಜಲ ಬಳಕೆ 2024ರಲ್ಲಿ ಶೇ 68.44 ಇತ್ತು, 2025ರಲ್ಲಿ ಶೇ 66.49ಕ್ಕೆ ಇಳಿದಿದೆ ಎಂದು ವರದಿ ತಿಳಿಸಿದೆ.

'ಭೀಮ ನಡೆ' ಯಶಸ್ವಿ, ಶಾಂತಿಯುತ

ಒಂದನೇ ಪುಟದಿಂದ...

ಬಳಿಕ ಪುಷ್ಪಾಲಂಕೃತ ರಥದಲ್ಲಿ 'ತೆರೆದಿಟ್ಟ ಸಂವಿಧಾನ ಪೀಠಿಕೆ'ಯ ಸ್ತಬ್ಧಚಿತ್ರ ಸಾಗಿತು. ಡಾ.ಬಾಬಾಸಾಹೇಬ್ ಅಂಬೇಡ್ಕರ್, ವಿಶ್ವಗುರು ಬಸವಣ್ಣ, ಅಂಬಿಗರ ಚೌಡಯ್ಯ, ಶಿವಾಜಿ ಮಹಾರಾಜ್, ಟಿಪ್ಪು ಸುಲ್ತಾನ್, ಹರಳಯ್ಯ, ಸರ್ವಜ್ಞ, ಸಂತ ಸೇವಾಲಾಲ್, ವಿಶ್ವಕರ್ಮ ಮಹರ್ಷಿ ಸೇರಿ ವಿವಿಧ ಮಹನೀಯರ ಭಾವಚಿತ್ರಗಳನ್ನು ಹೊತ್ತ ತ್ರಿಚಕ್ರವಾಹನಗಳು ಸಹಿತ ಆಟೊಗಳು ಸಾಗಿದವು. ಬಳಿಕ ಫ್ರೀಡಂ ಪಾರ್ಕ್‌ನ ಬಯಲು ಕಲ್ಯಾಣ ಮಂಟಪದಲ್ಲಿ ಸಮಾವೇಶ ನಡೆಯಿತು. ಸಂವಿಧಾನ ಪರ ಭಾಷಣಗಳು ಅನುರಣಿಸಿದವು. ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

'ಸಂವಿಧಾನ ಒಪ್ಪದವರಿಗೆ ಇಲ್ಲೇನು ಕೆಲಸ?'

'ಸಂವಿಧಾನ ಒಪ್ಪದವರು ಹೇಗೆ ದೇಶಭಕ್ತರಾಗುತ್ತಾರೆ' ಎಂದು ಮೈಸೂರಿನ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಪ್ರಶ್ನಿಸಿದರು. ಇಲ್ಲಿ ನಡೆದ 'ಸಂವಿಧಾನ ಸಮಾವೇಶ' ಉದ್ಘಾಟಿಸಿದ ಅವರು,'ದೇಶದಲ್ಲಿ ಸಂಸ್ಕೃತಿಗಿಂತಲೂ ಸಂವಿಧಾನ ದೊಡ್ಡದು. ಸಂವಿಧಾನ ಒಪ್ಪದವರಿಗೆ ದೇಶದಲ್ಲಿ ಕೆಲಸವೇನಿದೆ' ಎಂದು ಆರ್‌ಎಸ್‌ಎಸ್ ಹೆಸರು ಪ್ರಸ್ತಾಪಿಸದೇ ಪ್ರಶ್ನಿಸಿದರು.

'ಸಂವಿಧಾನದ ಆಶಯ ಸಂಘರ್ಷವಲ್ಲ, ಸಾಮರಸ್ಯ. ಬಹುಸಂಖ್ಯಾತರಿಗೆ ಧರ್ಮವಲ್ಲ, ದೇಶ ಮುಖ್ಯ. ಧರ್ಮ, ಜಾತಿಯ ಹೆಸರಿನಲ್ಲಿ ಬೆಂಕಿ ಹಚ್ಚುವ ಕೆಲಸ ಮಾಡುವವರು ದೇಶಭಕ್ತರಲ್ಲ' ಎಂದೂ ಟೀಕಿಸಿದರು.

'ವೇತನ ಹೆಚ್ಚಿಸಿ, ಸೌಲಭ್ಯ ವಿಸ್ತರಿಸಿ'

ಅಂಗನವಾಡಿ, ಆಶಾ, ಬಿಸಿಯೂಟ ನೌಕರರ ಅನಿರ್ದಿಷ್ಟಾವಧಿ ಧರಣಿ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: '34 ವರ್ಷದಿಂದ ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿರುವೆ. ನಮ್ಮ ಅಂಗನವಾಡಿಯಲ್ಲಿ ಕಲಿತ ಎಷ್ಟೋ ಮಕ್ಕಳು ಒಳ್ಳೆ ಶಿಕ್ಷಣ ಪಡೆದು ಬದುಕು ಕಟ್ಟಿಕೊಂಡಿದ್ದಾರೆ. ನಾವು ಮಾತ್ರ ತಿಂಗಳಿಗೆ ₹12 ಸಾವಿರ ಪಡೆಯಲು ಕಷ್ಟ ಪಡುತ್ತಿದ್ದೇವೆ. ಖರ್ಚುಗಳು ಹೆಚ್ಚಾಗಿವೆ. ಕನಿಷ್ಠ ಸಂಬಳದಲ್ಲಿ ಹೇಗೆ ಬದುಕುವುದು ಹೇಳಿ, ಮೋದಿ ಅವರು ನಮ್ಮ ಸಂಬಳ ಜಾಸ್ತಿ ಮಾಡಲಿ...'

ಇದು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಆರಂಭಗೊಂಡಿರುವ ಅಂಗನವಾಡಿ, ಆಶಾ ಹಾಗೂ ಬಿಸಿಯೂಟ ನೌಕರರ ಅನಿರ್ದಿಷ್ಟಾವಧಿ ಹೋರಾಟದಲ್ಲಿ ಭಾಗಿಯಾಗಿದ್ದ ಹೊಸಕೋಟೆ ತಾಲ್ಲೂಕು ಅಪ್ಪಸಂದ್ರ ಗ್ರಾಮದ ಅಂಗನವಾಡಿ ನೌಕರೆ ಖದೀರಮ್ಮ ಅವರ ನುಡಿ.

'ನಮಗೆ ಕನಿಷ್ಠ ವೇತನವನ್ನಾದರೂ ನೀಡಿ ಎಂದು ಹೋರಾಟ ಮಾಡಿದಾಗ ರಾಜ್ಯ ಸರ್ಕಾರ ₹1 ಸಾವಿರ ಏರಿಕೆ ಮಾಡಿದರೂ ನಮ್ಮ ಪೂರ್ಣ ಬೇಡಿಕೆ ಈಡೇರಿಲ್ಲ. ಕೇಂದ್ರ ಸರ್ಕಾರವಂತೂ 2018ರ ನಂತರ ವೇತನ ಏರಿಕೆ ಮಾಡಿಯೇ ಇಲ್ಲ. ಎಷ್ಟು ದಿನ ಅಂತ ಕಾಯುವುದು. ನಮ್ಮ ಕಷ್ಟವನ್ನು ಜನಪ್ರತಿನಿಧಿಗಳು ಆಲಿಸಿ ಕೇಂದ್ರಕ್ಕೆ ಮುಟ್ಟಿಸಲಿ' ಎಂದವರು ಅದೇ ಗ್ರಾಮದ ಶಾರದಾ.

'ನಮಗೆ ನಾಲ್ಕೈದು ಕೆಲಸ ವಹಿಸಿದ್ದಾರೆ. ಮೊಬೈಲ್‌ನಲ್ಲಿಯೇ ಎಲ್ಲವನ್ನೂ ದಾಖಲಿಸಬೇಕು. ಚೆನ್ನಾಗಿರುವ ಮೊಬೈಲ್ ಕೊಟ್ಟಿಲ್ಲ. ನೆಟ್‌ವರ್ಕ್ ಕೂಡ ಸಿಗುವುದಿಲ್ಲ. ಮುಖ ಆಧಾರಿತ ದಾಖಲು ವ್ಯವಸ್ಥೆ ರದ್ದು ಮಾಡಿ ಇಲ್ಲವೇ ಸರಿಯಾದ ಮೊಬೈಲ್ ಕೊಡಿ' ಎಂದು ಬೀದರ್ ಜಿಲ್ಲೆ ಬಸವಕಲ್ಯಾಣದ ಗಿರಿಜಾ ಅವರ ಬೇಡಿಕೆ.

> ಕರ್ನಾಟಕ ಪ್ರತಿನಿಧಿಸುವ ಕೇಂದ್ರ ಸಚಿವರ ಕಚೇರಿಗಳ ಎದುರು ಪ್ರತಿಭಟನೆ ನಡೆದಿದೆ. ಲೋಕಸಭೆಯಲ್ಲಿ ಚರ್ಚಿಸಿ ಮುಂದಿನ ಬಜೆಟ್‌ನಲ್ಲಿ ಬೇಡಿಕೆ ಈಡೇರಿಸುವ ಭರವಸೆ ನೀಡುವವರೆಗೂ ಹೋರಾಟ ನಿಲ್ಲದು.
> **ಎಸ್.ವರಲಕ್ಷ್ಮಿ**, ಅಧ್ಯಕ್ಷೆ, ಸಿಐಟಿಯು ಕರ್ನಾಟಕ

'ಬೆಳಿಗ್ಗೆ 8 ರಿಂದ ಸಂಜೆ 4ರವರೆಗೂ ಕೆಲಸ ಮಾಡಿದರೂ ಸರಿಯಾಗಿ ಸಂಬಳ ಕೊಡುತ್ತಿಲ್ಲ. ಕೇಳಿದರೆ ಕಾರಣ ಹೇಳಲಾಗುತ್ತದೆ. ಮೂರ್ನಾಲ್ಕು ತಿಂಗಳಿಗೊಮ್ಮೆ ಸಂಬಳ ಬಂದರೆ ನಾವು ಹೇಗೆ ಬದುಕುವುದು ಹೇಳಿ' ಎಂದು ಪ್ರಶ್ನಿಸಿದರು ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕು ಹಗಡನಿನ್ನಿಯ ಬಿಸಿಯೂಟ ಕಾರ್ಯಕರ್ತೆ ರೇಣಮ್ಮ.

ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ್ದ 10 ಸಾವಿರದಷ್ಟು ಅಂಗನವಾಡಿ, ಆಶಾ ಹಾಗೂ ಬಿಸಿಯೂಟ ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ಹೊರ ಹಾಕಿದರು. ವೇತನ ಹೆಚ್ಚಳ, ಆರೋಗ್ಯ ವಿಮೆ, ನಿವೃತ್ತಿ ವೇತನ ಸೇರಿದಂತೆ 20ಕ್ಕೂ ಹೆಚ್ಚು ಬೇಡಿಕೆಗಳನ್ನು ಮಂಡಿಸಿದರು.

'ಸಂಸದರು, ಶಾಸಕರು ಯಾವುದೇ ಚರ್ಚೆಯಿಲ್ಲದೇ ತಮ್ಮ ವೇತನ ಹಾಗೂ ಸೌಲಭ್ಯಗಳನ್ನು ಏರಿಸಿಕೊಳ್ಳುತ್ತಾರೆ. ದಿನವಿಡೀ ದುಡಿಯುವ ನಮ್ಮ ಬೇಡಿಕೆಗಳು ಅವರಿಗೆ ಏಕೆ ಕಾಣುತ್ತಿಲ್ಲ. ಕೆಲವೇ ಕುಟುಂಬಗಳ ₹18 ಲಕ್ಷ ಕೋಟಿ ಕಾರ್ಪೊರೇಟ್ ಸಾಲ ಮನ್ನಾ ಮಾಡಲಾಗಿದೆ. ಅದರ ಬದಲು ನಮಗೆ ನೆರವಾದರೆ 56 ಲಕ್ಷ ಕುಟುಂಬಗಳಿಗೆ ಒಳಿತಾಗುವುದಿಲ್ಲವೇ' ಎಂದರು.

'ಕೇಂದ್ರ ಸರ್ಕಾರ ನಮ್ಮ ಬೇಡಿಕೆ ಈಡೇರಿಸಬೇಕು. ಅಲ್ಲಿಯವರೆಗೂ ಸುತ್ತ ಧರಣಿ ಮುಂದುವರಿಯಲಿದೆ. ಈ ಬಾರಿಯ ಧರಣಿ ನಿಲ್ಲುವುದಿಲ್ಲ. ಕೇಂದ್ರದಲ್ಲಿ ಕರ್ನಾಟಕವನ್ನು ಪ್ರತಿನಿಧಿಸುತ್ತಿರುವ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ, ಪ್ರಲ್ಹಾದ ಜೋಶಿ, ವಿ.ಸೋಮಣ್ಣ, ಶೋಭಾ ಕರಂದ್ಲಾಜೆ ಅವರು ನಮ್ಮ ಪರವಾಗಿ ಗಟ್ಟಿ ದನಿ ಎತ್ತಬೇಕು' ಎಂದು ಪ್ರಮುಖರು ಒತ್ತಾಯಿಸಿದರು.

ಬೇಡಿಕೆಗಳೇನು

- ಕೇಂದ್ರ ಸರ್ಕಾರ ಕನಿಷ್ಠ ₹21 ಸಾವಿರ ವೇತನ ನೀಡಲಿ
- 56 ಲಕ್ಷ ಸ್ಕೀಮ್ ಕಾರ್ಮಿಕರ ಸೇವಾ ಷರತ್ತು ಸುಧಾರಣೆಗೆ ಆಯೋಗ ರಚಿಸಿ
- ಅಂಗನವಾಡಿಗಳಲ್ಲಿ ಎಫ್‌ಆರ್‌ಎಸ್ ರದ್ದು ಮಾಡಿ ಇಲ್ಲವೇ 'ವೈಫೈ' ಕೊಡಿ
- ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರದ್ದು ಮಾಡಿ
- ಅಂಗನವಾಡಿಗಳಲ್ಲಿ ಎಲ್‌ಕೆಜಿ, ಯುಕೆಜಿ ಆರಂಭಿಸಿ
- ನಮಗೂ ಹಬ್ಬ, ಮುಟ್ಟಿನ ರಜೆ ವಿಸ್ತರಿಸಿ
- ಬಿಸಿಯೂಟ ನೌಕರರಿಗೆ ಕೆಲಸದ ಭದ್ರತೆ ನೀಡಿ
- ಆಶಾ ಕಾರ್ಯಕರ್ತರಿಗೆ ನಿಯಮಿತವಾಗಿ ತರಬೇತಿ ಆಯೋಜಿಸಿ

ಬಿಳಿಗೆರೆ: 14 ವರ್ಷದ ಬಳಿಕ ಪೂಜೆ ಗ್ರಾಮ ದೇಗುಲಕ್ಕೆ ದಲಿತರ ಪ್ರವೇಶ

ಪ್ರಜಾವಾಣಿ ವಾರ್ತೆ

ಹುಣಸೂರು (ಮೈಸೂರು ಜಿಲ್ಲೆ): '14 ವರ್ಷಗಳ ಬಳಿಕ ತಾಲ್ಲೂಕಿನ ಬಿಳಿಗೆರೆ ಗ್ರಾಮದ ಬಸವೇಶ್ವರ ಸ್ವಾಮಿ ದೇಗುಲಕ್ಕೆ ದಲಿತರು ಸೋಮವಾರ ಪ್ರವೇಶಿಸಿದರು. ಕುರುಬ, ದಲಿತರ ವೈಮನಸ್ಯ ಮರೆಯಾಗಿ, ಸಾಮರಸ್ಯದ ಸನ್ನಿವೇಶ ನಿರ್ಮಾಣವಾಯಿತು.

ತಹಶೀಲ್ದಾರ್ ಮಂಜುನಾಥ್ ಇದಕ್ಕೆ ಸಾಕ್ಷಿಯಾದರು. ಈ ದೇಗುಲ ಮುಜರಾಯಿ ಇಲಾಖೆಗೆ ಸೇರಿದೆ. ದೇವಾಲಯ ಪ್ರವೇಶ, ಉತ್ಸವದ ದಲಿತ ಕೇರಿಗೆ ಬರುವ ಕುರಿತ ಭಿನ್ನಾಭಿಪ್ರಾಯ ಶಮನಕ್ಕೆ ಹಲವು ಸಭೆಗಳು ನಡೆದಿದ್ದವು. ಜಿಲ್ಲಾಧಿಕಾರಿ ಸಮ್ಮುಖದಲ್ಲಿ ಸಭೆ ನಡೆಸಿದರೂ ಫಲ ಸಿಗದೇ ದೇಗುಲ ಮುಚ್ಚಲಾಗಿತ್ತು.

ತಹಶೀಲ್ದಾರ್, ಶಾಸಕ ಜಿ.ಡಿ.ಹರೀಶ್ ಗೌಡ, ದಲಿತ ಮುಖಂಡರಾದ ನಿಂಗರಾಜ್ ಮಲ್ಲಾಡಿ, ಡಿ.ಕುಮಾರ್ ಅವರ ಪ್ರಯತ್ನದಿಂದ ಇತ್ತೀಚೆಗೆ ನಡೆದ ಸಭೆಯಲ್ಲಿ ಸೌಹಾರ್ದ ಮೂಡಿತ್ತು. ಬಳಿಕ ಬಿಳಿಗೆರೆ ಪಂಚಾಯಿತಿಯಿಂದ ದೇವಾಲಯಕ್ಕೆ ಸುಣ್ಣ ಬಣ್ಣ ಬಳಿದು ಸಿದ್ಧತೆ ಕೈಗೊಳ್ಳಲಾಗಿತ್ತು.

ಈ ವೇಳೆ ಮಾತನಾಡಿದ ಮುಖಂಡ ನಿಂಗರಾಜ್ ಮಲ್ಲಾಡಿ, 'ಯುಗಾದಿಯಲ್ಲಿ ಜಾತ್ರೆಯಂದು ಎರಡೂ ಸಮುದಾಯದವರು ಪಾಲ್ಗೊಳ್ಳುವಂತಾಗಬೇಕು' ಎಂದರು.

'ಶಾಂತಿ ನೆಲೆಸಲು ಸ್ಥಳೀಯರು ಕೈಜೋಡಿಸಿದ್ದರಿಂದ ಸಮಸ್ಯೆ ಬಗೆಹರಿದಿದೆ. ಸಹಕರಿಸಿದ ಮುಖಂಡರು, ಜನಪ್ರತಿನಿಧಿಗಳು ಅಭಿನಂದನಾರ್ಹರು' ಎಂದು ತಹಶೀಲ್ದಾರ್ ಹೇಳಿದರು.

> ಯುಗಾದಿಹಬ್ಬದ ವೇಳೆ ನಡೆಯಲಿರುವ ಉತ್ಸವ ಗ್ರಾಮದ ದಲಿತ ಕೇರಿ ಸೇರಿದಂತೆ ಪ್ರತಿಯೊಂದು ಬೀದಿಗೆ ತೆರಳಿ ಭಕ್ತರಿಂದ ಪೂಜೆ ಸ್ವೀಕರಿಸಲಿದೆ
> **ಮಂಜುನಾಥ್**, ತಹಶೀಲ್ದಾರ್

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಡಿಕೇರಿ, ಕೊಡಗು ಜಿಲ್ಲೆ
(ಕರ್ನಾಟಕ ಸರ್ಕಾರದ ನೋಂದಾಯಿತ ಸ್ವಾಯತ್ತ ಸಂಸ್ಥೆ)
ದೂ: 08272-298220, ವೆಬ್‌ಸೈಟ್: www.kimskodagu.karnataka.gov.in
ಸಂಖ್ಯೆ: DME/2025-26/IND1871, ದಿನಾಂಕ: 28.11.2025

ಇ-ಸಂಗ್ರಹಣ ವೇದಿಕೆ ಮೂಲಕ ಟೆಂಡರ್ ಪ್ರಕಟಣೆ

ಕೊ.ವೈ.ವಿ.ಸಂ. ಬೋಧಕ ಆಸ್ಪತ್ರೆಯ ಅರವಳಿಕೆ ವಿಭಾಗದ ಮುಖ್ಯ ಶಸ್ತ್ರ ಚಿಕಿತ್ಸಾ ಕೊಠಡಿಗೆ ಅಗತ್ಯವಿರುವ ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡುವ ಸಂಬಂಧ ಕೆಪಿಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿದ್ದು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 30.12.2025 ಸಂಜೆ 5.00 ಗಂಟೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ವೆಬ್‌ಸೈಟ್ https://kppp.karnataka.gov.in

ಸಹಿ/– ನಿರ್ದೇಶಕರು ಹಾಗೂ ಡೀನ್, ಕೊ.ವೈ.ವಿ.ಸಂ. ಮಡಿಕೇರಿ

ಕರ್ನಾಟಕ ಸರ್ಕಾರ
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ದಾವಣಗೆರೆ.
ಸಂ:ಕಾಪಾಇಂ/ಪಂರಾಇಂ/ವಿ/ದಾ/ಕಿ.ಇಂ/ಟೆಂಡರ್/2025–26/1862
ದಿನಾಂಕ:–01.12.2025

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
("ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್" ಮೂಲಕ)

ಈ ವಿಭಾಗ ವ್ಯಾಪ್ತಿಯ ವಿವಿಧ ಲೆಕ್ಕ ಶೀರ್ಷಿಕೆ ಯೋಜನೆಯಡಿ ಅನುಮೋದನೆಯಾದ ಕಾಮಗಾರಿಗಳನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಏಕ ಮತ್ತು ದ್ವಿ–ಲಕೋಟೆಯಲ್ಲಿ ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆ–2 ಮತ್ತು 3ರಲ್ಲಿ ಆಹ್ವಾನಿಸಲಾಗಿದೆ. ಒಟ್ಟು ಕಾಮಗಾರಿಗಳ ಸಂಖ್ಯೆ:05 (ಇಂಡೆಂಟ್ ಸಂಖ್ಯೆ: 16332, 16335, 19528, 21170 & 21171) ಟೆಂಡರ್‌ಗಿಟ್ಟ ಮೊತ್ತ ರೂ.29.64 ಲಕ್ಷಗಳಿಂದ 82.49 ಲಕ್ಷಗಳವರೆಗೆ ಇರುತ್ತವೆ. ಕಾಮಗಾರಿ ಸ್ವರೂಪ ರಸ್ತೆ ಮತ್ತು ಕಟ್ಟಡ ನಿರ್ಮಾಣ ಟೆಂಡರ್ ಫಾರಂಗಳನ್ನು ದಿನಾಂಕ: 01/12/2025 ರಿಂದ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ: 10/12/2025 ಸಂಜೆ 4.00 ಗಂಟೆಯವರೆಗೆ ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08192–250156 ಅಥವಾ www.KPPP.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ವಾಸಾಇ/ಡಿವಿಜಿ/519/ ಕೆಎಸ್‌ಎಂಸಿಎ/2025–26
ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ದಾವಣಗೆರೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ : ಬೆಂಗಳೂರು
ಸಂ: ಕರಾಸಾ/ಕೆಂಬನಿ/ವಾ–4/775/2025–26 ದಿನಾಂಕ: 28.11.2025

ಸ್ವಚ್ಛತಾ ಪರವಾನಗಿ ಇ–ಟೆಂಡರ್ ಪ್ರಕಟಣೆ ಸಂಖ್ಯೆ–11/2025–26

ಕೆಂಪೇಗೌಡ ಬಸ್ ನಿಲ್ದಾಣ, ದೇವನಹಳ್ಳಿ ಟ್ರಂಪೆಟ್ ಬಸ್ ನಿಲ್ದಾಣ ಮತ್ತು ಶಾಂತಿನಗರದಲ್ಲಿರುವ ಕ್ರೀಡಾ ಸಂಕೀರ್ಣ ಸೇರಿದಂತೆ ಶೌಚಾಲಯಗಳು ಮತ್ತು ಮೂತ್ರಾಲಯಗಳ ನಿರ್ವಹಣೆ ಹಾಗೂ ಯಾಂತ್ರಿಕ / ಯಾಂತ್ರಿಕ ರಹಿತ ಸ್ವಚ್ಛತಾ ಕಾರ್ಯಕ್ಕಾಗಿ ಸ್ವಚ್ಚತಾ ಪರವಾನಗಿದಾರರನ್ನು ಆಯ್ಕೆ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ (ಕೆ.ಪಿ.ಪಿ ಪೋರ್ಟಲ್) ಅಂತರ್ಜಾಲದ ಮೂಲಕ ಮೂರು ವರ್ಷಗಳ ಅವಧಿಗೆ ಹಾಗೂ ಅತೀ ಹೆಚ್ಚಿನ ಬಿಡ್ ನಿರೀಕ್ಷಿಸಿ, ಆಸಕ್ತಿದಾರರಿಂದ ದಿನಾಂಕ: 02.12.2025 ರಿಂದ 22.12.2025 ರವರೆಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ ವೆಬ್‌ಸೈಟ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಕ.ರಾ.ರ.ಸಾ.ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು–560009, ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ 7760990554, 7760990557, 7760990550 ಮತ್ತು ಕೆಪಿಪಿ ಪೋರ್ಟಲ್ ಸಹಾಯವಾಣಿ ಸಂಖ್ಯೆ 9240214000 /9240214001, 8068948777 / 8046010000, support@eprochelpdesk.com.

ಸಹಿ/–
ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ, ಕೆಂ.ಬ.ನಿ ವಿಭಾಗ, ಬೆಂಗಳೂರು.
DIPR/CP/4141/Zen/2025-26

GULBARGA UNIVERSITY, KALABURGAI 585106
VISION GROUP ON SCIENCE AND TECHNOLOGY(VGST)
Jnana Ganga, Kalaburagi – 585 106, Karnataka, India.
GUK/DAE/2025-26/817(a) Dated:28/11/2025

ಇ–ಟೆಂಡರ್ ಅಧಿಸೂಚನೆ

ಗುಲ್ಬರ್ಗಾ ವಿಶ್ವವಿದ್ಯಾಲಯವು "CST ಸ್ಟುಡಿಯೋ ಸೂಟ್": ವಿದ್ಯುತ್ಕಾಂತೀಯ (EM) ಸಿಮ್ಯುಲೇಶನ್ ಸಾಫ್ಟ್‌ವೇರ್ನ ಪೂರೈಕೆ, ಸ್ಥಾಪನೆ, ತರಬೇತಿ ಮತ್ತು ಕಾರ್ಯಾರಂಭಕ್ಕಾಗಿ ಅರ್ಹ ಟೆಂಡರ್‌ದಾರರಿಂದ ಇ–ಟೆಂಡರ್ ಆಹ್ವಾನಿಸಿದೆ. ಆಸಕ್ತ ಪೂರೈಕೆದಾರರು ಪ್ರಧಾನ ತನಿಖಾಧಿಕಾರಿ (PI), VGST KFIST L1 ಯೋಜನೆ, ಅನ್ವಯಿಕ ಎಲೆಕ್ಟ್ರಾನಿಕ್ಸ್ ವಿಭಾಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ (GUK) ರನ್ನು ಸಂಪರ್ಕಿಸಬಹುದು. ವಿವರವಾದ ತಾಂತ್ರಿಕ ವಿಶೇಷಣಗಳು, ನಿಯಮಗಳು ಮತ್ತು ಷರತ್ತುಗಳಿಗಾಗಿ https://kppp.karnataka.gov.in ಲಾಗಿನ್ ಮಾಡಿ. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ:15/12/2025 ಮತ್ತು ಟೆಂಡರ್ ತೆರೆಯುವ ದಿನಾಂಕ:18/12/2025.

ಸಹಿ/– ಕುಲಸಚಿವರು
ಗುಲಬರ್ಗಾವಿಶ್ವವಿದ್ಯಾಲಯ, ಕಲಬುರಗಿ

Directorate of Economics and Statistics,
1st Gate, 7th Floor, M. S. Building,
Dr. Ambedkar Veedhi, Bangalore-560 001

INVITATION FOR e-PROCUREMENT BID FOR THE SUPPLY OF TABLET PERSONAL COMPUTER TO THE DIRECTORATE OF ECONOMICS AND STATISTICS AND DISTRICT STATISTICAL OFFICES UNDER E-PROCUREMENT SYSTEM (A) SCHEDULE OF EVENTS:

Tender Reference: Notification No. DES/14/Act-Stores/2025-26 (KPP Portal Tender Reference Number: DES/2024-25/IND0002) Dt: 01.12.2025	
Commencement of download of e-tender forms from website: **http://kppp.karnataka.gov.in: 01.12.2025**	
Time & date of Pre-Bid Meeting: **05.12.2025 at 11.30 a.m.**	
Product Demonstration: **09.12.2025 at 3.00 p.m.**	
Last Date for Queries on or before: **15.12.2025 at 5.30 p.m.**	
Last date and time for uploading of tender: **20.12.2025 at 5.30 p.m.**	
Opening of Technical Bid: **22.12.2025 at 11.00 a.m.**	
Opening of Financial Bid: **24.12.2025 at 12.00 Noon**	
EMD Amount: **Rs.1,66,500/-.**	
Approximate Project Amount: **Rs.1,11,00,000/-**	
Venue of opening of tenders & Address for communication contact **O/o Director, Directorate of Economics and Statistics, 1 Gate, 7th Floor, M. S. Building, Bangalore. Contact No.: 080-22353849.**	

Sd/- Director, Directorate of Economics and Statistics, Bengaluru.
DIPR/CP/AAPL/RO4137/25-26

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು
ಸಂ. ಕರಾಸಾ/ಕೆಂಬನಿ/ವಾ–4/777/2025–26 ದಿನಾಂಕ: 28/11/2025

ಸ್ವಚ್ಛತಾ ಪರವಾನಗಿ ಇ–ಟೆಂಡರ್ ಪ್ರಕಟಣೆ ಸಂಖ್ಯೆ–12/2025–26

ಕೆಂಪೇಗೌಡ ಬಸ್ ನಿಲ್ದಾಣ ವಿಭಾಗದ ವ್ಯಾಪ್ತಿಯ ಮೈಸೂರು ರಸ್ತೆ ಬಸ್ ನಿಲ್ದಾಣದ ಯಾಂತ್ರಿಕ / ಯಾಂತ್ರಿಕ ರಹಿತ ಸ್ವಚ್ಛತಾ ಕಾರ್ಯಕ್ಕಾಗಿ ಮೂತ್ರಾಲಯ ಹಾಗೂ ಶೌಚಾಲಯಗಳ ನಿರ್ವಹಣೆಗೆ ಸ್ವಚ್ಚತಾ ಪರವಾನಗಿದಾರರನ್ನು ಆಯ್ಕೆ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ (ಕೆ.ಪಿ.ಪಿ ಪೋರ್ಟಲ್) ಅಂತರ್ಜಾಲದ ಮೂಲಕ **ಮೂರು ವರ್ಷಗಳ ಅವಧಿಗೆ** ಹಾಗೂ **ಅತೀ ಹೆಚ್ಚಿನ ಬಿಡ್ ನಿರೀಕ್ಷಿಸಿ,** ಅಸಕ್ತಿದಾರರಿಂದ ದಿನಾಂಕ: **02.12.2025 ರಿಂದ 22.12.2025 ರವರೆಗೆ** ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಕ.ರಾ.ರ.ಸಾ. ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು–560009, ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ 7760990554, 7760990557 ಮತ್ತು ಕೆಪಿಪಿ ಪೋರ್ಟಲ್ ಸಹಾಯವಾಣಿ ಸಂಖ್ಯೆ 9240214000/9240214001/8068948777/8046010000, supporteprochelpdesk.com.

ಸಹಿ/–
ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ, ಕೆಂ.ಬ.ನಿ ವಿಭಾಗ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/4142/ಆಕಾರ್/2025–26

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.
ಸಂಖ್ಯೆ: ಕಾಇಂ:ಲೋವಿಚಿ:ಜೆಇ–1:ಟೆಂಡರ್–44:2025–26 ದಿನಾಂಕ: 01.12.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಅರ್ಹ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿಗಳ ವಿವರ:– ಕೆಪಿಪಿಪಿ ಪೋರ್ಟಲ್ ಮೂಲಕ– ದ್ವಿ ಲಕೋಟೆ ಪದ್ಧತಿ: ಸಾಮಾನ್ಯ:– ಲೆಕ್ಕ ಶೀರ್ಷಿಕೆ: 5054–03–337–0–17–154 ರಾಜ್ಯ ಹೆದ್ದಾರಿ ರಸ್ತೆ ಕಾಮಗಾರಿಗಳು:– (1) ಚಿತ್ರದುರ್ಗ ತಾಲ್ಲೂಕು ಎನ್.ಹೆಚ್.–307 ಕ್ಯಾದಿಗೆರೆ (ಎನ್.ಹೆಚ್.–48) ರಿಂದ ಸೀಬಾರ ಗ್ರಾಮದ ಹತ್ತಿರ (ಎನ್.ಹೆಚ್.–48) ಸರ್ವೀಸ್ ರಸ್ತೆಯ ಕಿ.ಮೀ. 18.00 ರಲ್ಲಿ ತಡೆಗೋಡೆ, ಚರಂಡಿ ಮತ್ತು ವಿದ್ಯುದ್ದೀಕರಣ ನಿರ್ಮಾಣ ಕಾಮಗಾರಿ (ವ.ಇಂ. 29575) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–125.00

ಕಾಮಗಾರಿ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 06–12–2025 ಸಮಯ 17–30
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 08–12–2025 ಸಮಯ 16–00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 09–12–2025 ಸಮಯ 16–15
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 11–12–2025 ಸಮಯ 11–00
ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

DIPR/CTA/KSMCA/ 502/2025-26
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ.

ಮಕ್ಕಳ ರಕ್ಷಣಾ ನಿರ್ದೇಶನಾಲಯ, ಸರ್ಕಾರಿ ಶಿಶುಮಂದಿರ, ಬೆಂಗಳೂರು ನಗರ,
ಡಾ.ಎಂ.ಹೆಚ್.ಮರಿಗೌಡ ರಸ್ತೆ, ಕಿದ್ವಾಯಿ ಆಸ್ಪತ್ರೆ ಪಕ್ಕ, ಬೆಂಗಳೂರು–29
ದೂ.: 8296072869/7349029350 ಇ–ಮೇಲ್: shishu.mandira@yahoo.in
ಸಂಖ್ಯೆ:ಸ.ಶಿ.ಮಂ(ಬೆಂ)/ಮರನಿ/ಸಿಸಿಸಿಎಫ್/ಅಂಬ್ಯೂಲೆನ್ಸ್/ಖ/2025–26/413
ದಿನಾಂಕ:01.12.2025

ಟೆಂಡರ್ ಪ್ರಕಟಣೆ

Tender No.DCP/2025-26/IND0079/Call-2
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಬೆಂಗಳೂರು ನಗರ ಜಿಲ್ಲೆಯ **ಸರ್ಕಾರಿ ಶಿಶುಮಂದಿರ ಶಿಶುಗೃಹ ಘಟಕ–1, ಶಿಶುಗೃಹ ಘಟಕ–2, ಸರ್ಕಾರಿ ಶಿಶುಮಂದಿರ, ಬೆಂಗಳೂರು ಸಂಸ್ಥೆಯ ಮಕ್ಕಳ ಉಪಯೋಗಕ್ಕಾಗಿ 07 ಸೀಟರ್ ವ್ಯಾನ್ ಹಾಗೂ ಅಂಬ್ಯೂಲೆನ್ಸ್‌ನ್ನು ಖರೀದಿಸಲು** ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿಯಂತೆ https://kppp.karnataka.gov.in ಆನ್‌ಲೈನ್ ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ವಿಳಾಸದಲ್ಲಿ ಸಂಪರ್ಕಿಸಬಹುದು.

ಸಹಿ/– ಅಧೀಕ್ಷಕರು, ಸರ್ಕಾರಿ ಶಿಶು ಮಂದಿರ, ಬೆಂಗಳೂರು
ವಾಸಾಸಂಇ/ಉನಿ–ಸಿ.ಪಿ/4121/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ–581301
ದೂ: 08382–226406, 226471 ಫ್ಯಾಕ್ಸ್: 08382–226603
Email: dckarwar@gmail.com Website: http://uttarakannada.nic.in
ನಂ: ಆರ್.ಕೆ.ಎಲ್/ವಿವ–1/2025–26 ದಿನಾಂಕ: 29–11–2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಉತ್ತರ ಕನ್ನಡ ಜಿಲ್ಲೆಯ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಉತ್ತರ ಕನ್ನಡ ಜಿಲ್ಲಾಧಿಕಾರಿ ಕಛೇರಿ ಹಾಗೂ ಕಾರವಾರ, ಕುಮಟಾ, ಭಟ್ಕಳ ಮತ್ತು ಶಿರಸಿ ಸಹಾಯಕ ಕಮೀಷನರ ಕಚೇರಿಗಳ ಅಭಿಲೇಖಾಲಯದ ದಾಖಲೆಗಳನ್ನು ಭೂಸುರಕ್ಷಾ ಯೋಜನೆಯಡಿಯಲ್ಲಿ ಗಣಕೀಕರಣಗೊಳಿಸುವ ಕಾರ್ಯವನ್ನು ಪ್ರಾರಂಭಿಸಲು ಉತ್ತರ ಕನ್ನಡ ಜಿಲ್ಲಾಧಿಕಾರಿ ಕಛೇರಿ ಹಾಗೂ ಕಾರವಾರ, ಕುಮಟಾ, ಭಟ್ಕಳ ಮತ್ತು ಶಿರಸಿ ಸಹಾಯಕ ಕಮೀಷನರ ಕಚೇರಿಗಳ ಅಭಿಲೇಖಾಲಗಳ 'ಎ' ಮತ್ತು 'ಬಿ' ವರ್ಗದ ದಾಖಲೆ (ಕಡತ ಮತ್ತು ವಹಿ) ಗಳನ್ನು ಗಣಕೀಕರಣ ಮಾಡಲು 29 ಡಾಟಾ ಎಂಟ್ರಿ ಆಪರೇಟರಗಳನ್ನು ದಿನಾಂಕ: 10–12–2025 ರಿಂದ 30–04–2026 ರವರೆಗೆ ಅಥವಾ ಮುಂದಿನ ಆದೇಶದವರೆಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ನಿರ್ಧರಿಸಲಾಗಿದೆ.

ಆಸಕ್ತಿ ಇರುವವರು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ದರವಾರವನ್ನು ದಿನಾಂಕ: 09–12–2025 ರಂದು ಸಾಯಂಕಾಲ 4.00 ಗಂಟೆ ಒಳಗೆ ಸಲ್ಲಿಸಬಹುದಾಗಿದೆ. ಸ್ವೀಕೃತಿಗೊಂಡ ಟೆಂಡರಗಳನ್ನು ದಿನಾಂಕ: 11–12–2025 ರಂದು ಸಾಯಂಕಾಲ 4.30 ಗಂಟೆಗೆ ಟೆಂಡರನ್ನು ಪರಿಶೀಲಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧಿಕಾರಿಗಳ ಕಛೇರಿ ಉತ್ತರ ಕನ್ನಡ ಕಾರವಾರ ಕಛೇರಿಯ ಅಭಿಲೇಖಾಲಯ ಶಾಖೆ ಅಥವಾ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದಾಗಿದೆ.

ಸಹಿ/– ಜಿಲ್ಲಾಧಿಕಾರಿ, ಉತ್ತರ ಕನ್ನಡ ಕಾರವಾರ
DIPR/ADK/KSMCA/787/25-26 Dt. 01.12.2025

ಪೊಲೀಸ್ ಅಧೀಕ್ಷಕರು, ವೈರ್‌ಲೆಸ್ ರವರ ಕಛೇರಿ
ನಂ.1, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು. 560001
ದೂರವಾಣಿ: +91–80–22864626, ಇ–ಮೇಲ್: spwireless@ksp.gov.in
ಸಂ: 10/MDN/STS/W/DIGITALVHF/CHN/2025-26 ದಿನಾಂಕ: 29.11.2025

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮುಖಾಂತರ)

1. ಟೆಂಡರ್ ಸಂಖ್ಯೆ: **KSP/2025-26/IND0434**, ದಿನಾಂಕ: 28/11/2025
   ಕಾಮಗಾರಿಯ ವಿವರ: ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ, ಬೆಂಗಳೂರು ರವರಿಂದ ಕಲಬುರಗಿ ನಗರದ ಡಿಜಿಟಲ್ ವಿ.ಎಚ್.ಎಫ್ ರೇಡಿಯೋ ಕಮ್ಯೂನಿಕೇಷನ್ ನೆಟ್‌ವರ್ಕ್‌ನ ವಿನ್ಯಾಸ, ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೌಲ್ಯ ರೂ. 338.81 ಲಕ್ಷಗಳು, ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ: 10/12/2025 ಸಮಯ ಸಂಜೆ 11.30 ಗಂಟೆ ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 29/12/2025 ಸಮಯ ಸಂಜೆ 17.00 ಗಂಟೆಗಳು.
2. ಟೆಂಡರ್ ಸಂಖ್ಯೆ: **KSP/2025-26/IND0438**, ದಿನಾಂಕ: 28/11/2025
   ಕಾಮಗಾರಿಯ ವಿವರ: ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ, ಬೆಂಗಳೂರು ರವರಿಂದ ಚಾಮರಾಜನಗರ ಜಿಲ್ಲೆಯ ಡಿಜಿಟಲ್ ವಿ.ಎಚ್.ಎಫ್ ರೇಡಿಯೋ ಕಮ್ಯೂನಿಕೇಷನ್ ನೆಟ್‌ವರ್ಕ್‌ನ ವಿನ್ಯಾಸ, ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೌಲ್ಯ ರೂ. 307.17 ಲಕ್ಷಗಳು, ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ: 10/12/2025 ಸಮಯ ಸಂಜೆ 11.30 ಗಂಟೆ ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 29/12/2025 ಸಮಯ ಸಂಜೆ 17.00 ಗಂಟೆಗಳು.
3. ಟೆಂಡರ್ ಸಂಖ್ಯೆ: **KSP/2025-26/IND0439**, ದಿನಾಂಕ: 28/11/2025
   ಕಾಮಗಾರಿಯ ವಿವರ: ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ, ಬೆಂಗಳೂರು ರವರಿಂದ ಗದಗ ಜಿಲ್ಲೆಯ ಡಿಜಿಟಲ್ ವಿ.ಎಚ್.ಎಫ್ ರೇಡಿಯೋ ಕಮ್ಯೂನಿಕೇಷನ್ ನೆಟ್‌ವರ್ಕ್‌ನ ವಿನ್ಯಾಸ, ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೌಲ್ಯ ರೂ. 326.13 ಲಕ್ಷಗಳು, ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ: 10/12/2025 ಸಮಯ ಸಂಜೆ 11.30 ಗಂಟೆ ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 29/12/2025 ಸಮಯ ಸಂಜೆ 17.00 ಗಂಟೆಗಳು.
4. ಟೆಂಡರ್ ಸಂಖ್ಯೆ: **KSP/2025-26/IND0440**, ದಿನಾಂಕ: 28/11/2025
   ಕಾಮಗಾರಿಯ ವಿವರ: ಪೊಲೀಸ್ ಅಧೀಕ್ಷಕರು, ವೈರ್‌ಲೆಸ್, ಬೆಂಗಳೂರು ರವರಿಂದ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಗೆ ಅವಶ್ಯವಿರುವ Dry Chemical Powder - DCP type class ABC Portable Fire Extinguisher 9kg ಸರಬರಾಜಿಗೆ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೌಲ್ಯ ರೂ. 87.50 ಲಕ್ಷಗಳು, ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ: 10/12/2025 ಸಮಯ ಸಂಜೆ 17.00 ಗಂಟೆ ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 29/12/2025 ಸಮಯ ಸಂಜೆ 17.00 ಗಂಟೆಗಳು.

ಇತರೆ ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದು ಹಾಗು ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/–
ಪೊಲೀಸ್ ಅಧೀಕ್ಷಕರು, ವೈರ್‌ಲೆಸ್, ಬೆಂಗಳೂರು
DIPR/CP/4128/SPAN COM/2025-26

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ,
ನಂ.16ಸಿ, ಮೌಲಾನಾ ಅಬುಲ್ ಕಲಾಂ ಅಜಾದ್ ಭವನ,
ಮಿಲ್ಲರ್ ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052.
ದೂರವಾಣಿ: 080–22535902
E-mail: directorgokdom@gmail.com
Website: https://dom.karnataka.gov.in
ಸಂಖ್ಯೆ: ಅಸಂನಿ/ಅ/ಬಿಎಡ್/ಸಿಆರ್–02/2025–26 ದಿನಾಂಕ: 02.12.2025

ಪ್ರಕಟಣೆ

2025–26ನೇ ಸಾಲಿನಲ್ಲಿ ಬಿ.ಎಡ್ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ಧನ ನೀಡಲು ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ.

ದಿನಾಂಕ: 02–12–2025 ರಿಂದ 31–12–2025 ರವರೆಗೆ ಸಂಜೆ 5.30 ಗಂಟೆಯೊಳಗೆ.

2025–26ನೇ ಸಾಲಿನಲ್ಲಿ National Council for Teacher Education ನಿಂದ ಮಾನ್ಯತೆ ಪಡೆದಿರುವ ಸರ್ಕಾರಿ/ಅರೆ ಸರ್ಕಾರಿ/ಅನುದಾನಿತ ಹಾಗೂ ಖಾಸಗಿ ಕಾಲೇಜುಗಳಲ್ಲಿ ದಾಖಲಾತಿ ಹೊಂದಿ ಬಿ.ಎಡ್ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ ಮತ್ತು ಪಾರ್ಸಿ) ವಿದ್ಯಾರ್ಥಿಗಳಿಗೆ ರೂ. 25,000/–ಗಳ ವಿಶೇಷ ಪ್ರೋತ್ಸಾಹಧನವನ್ನು ಸಂಬಂಧಪಟ್ಟ ವಿದ್ಯಾರ್ಥಿಗಳ ಬ್ಯಾಂಕ್‌ಖಾತೆಗೆ DBT ಮುಖಾಂತರ ಜಮಾ ಮಾಡಲಾಗುವುದು. ಈ ಸೌಲಭ್ಯವನ್ನು ಪಡೆದುಕೊಳ್ಳಲು ಅರ್ಜಿಯನ್ನು ಆಹ್ವಾನಿಸಲಾಗಿದೆ.

ಆಸಕ್ತ ಅಲ್ಪಸಂಖ್ಯಾತರ ಸಮುದಾಯದ ಬಿ.ಎಡ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಎಲ್ಲಾ ದಾಖಲೆಗಳ ಸಹಿತ ಸೇವಾಸಿಂಧು ಪೋರ್ಟಲ್ (https://sevasindhu.karnataka.gov.in) ಮುಖಾಂತರ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಇಲಾಖಾ ಸಹಾಯವಾಣಿ ಸಂಖ್ಯೆ:–8277799990
ಇಲಾಖಾ Website:- https://dom.karnataka.gov.in
ಸಂಪರ್ಕಿಸಬಹುದು.

ಸಹಿ/–
ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು
ವಾಸಾಸಂಇ/ವಾಪ್ರ/4132/25–26

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಶಾಂತಿನಗರ ವಿಭಾಗ,
9ನೇ ಮಹಡಿ, ಪಿಯುಬಿ, ಎಂ.ಜಿ. ರಸ್ತೆ, ಬೆಂಗಳೂರು – 560 001
ಸಂಖ್ಯೆ: ಕಾಪಾಅ/ಶಾನ/ಟೆಂಡರ್–08/ತಿದ್ದುಪಡಿ–2/2025–26 ದಿನಾಂಕ: 01–12–2025

ತಿದ್ದುಪಡಿ ಪ್ರಕಟಣೆ–2

ವಿಷಯ: ಟೆಂಡರ್ ನೋಟಿಫಿಕೇಷನ್ ದಿನಾಂಕವನ್ನು ಮುಂದೂಡುವ ಬಗ್ಗೆ.
ಉಲ್ಲೇಖ: 1. ಟೆಂಡರ್ ನೋಟಿಫಿಕೇಷನ್ ಸಂಖ್ಯೆ: ಕಾಪಾಅ/ಶಾನ/ಟೆಂಡರ್/08/2025–26 ದಿನಾಂಕ: 24–09–2025.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರನ್ವಯ ಶಾಂತಿನಗರ ವಿಭಾಗದಿಂದ ಉಲ್ಲೇಖದ ರೀತ್ಯಾ 04 ಕಟ್ಟಡ ಕಾಮಗಾರಿಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (kppp.gov.in) ಮುಖಾಂತರ ಟೆಂಡರ್ ಆಹ್ವಾನಿಸಲಾಗಿತ್ತು.
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಪ್ರದೇಶವೆಂದು ಗೊತ್ತುಪಡಿಸಿ, **ದಿನಾಂಕ: 02–09–2025**ರಂದು ಐದು ನಗರ ಪಾಲಿಕೆಯನ್ನು ಸೃಜಿಸಲಾಗಿದ್ದು, ಕೆಪಿಪಿಪಿ ಪೋರ್ಟಲ್‌ನಲ್ಲಿ ವಲಯವಾರು ಇಲಾಖೆಗಳನ್ನು ಮರು ಸೃಜನೆ ಮಾಡಲು ತಾಂತ್ರಿಕ ಕಾರಣಗಳ ಹಿನ್ನೆಲೆಯಲ್ಲಿ ಸದರಿ ಟೆಂಡರ್ ಪ್ರಚುರಪಡಿಸಲು ಸಾಧ್ಯವಾಗಿರುವುದಿಲ್ಲ ಆದುದರಿಂದ ಸದರಿ ಟೆಂಡರ್ ದಿನಾಂಕಗಳನ್ನು ಮುಂದೂಡಲಾಗಿರುತ್ತದೆ. ಸದರಿ ಟೆಂಡರ್ ನೋಟಿಫಿಕೇಷನ್ ಮುಂದೂಡಲಾದ ದಿನಾಂಕದ ವಿವರಗಳು ಈ ಕೆಳಕಂಡಂತಿರುತ್ತವೆ.

ಪ್ರಸ್ತುತ ಮುಂದೂಡಲಾದ ಟೆಂಡರ್ ವೇಳಾಪಟ್ಟಿಯ ವಿವರ:
(1) ಆರ್‌ಎಫ್‌ಪಿ ದಾಖಲೆಗಳು ದಿನಾಂಕ **08–12–2025**ರಿಂದ ದೊರೆಯುತ್ತವೆ. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **15–12–2025**ರ ಮಧ್ಯಾಹ್ನ **3:30** ಗಂಟೆಗೆ ನಡೆಸಲಾಗುವುದು. (3) ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **31–12–2025**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **02–01–2026**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು.
ಮುಂದುವರೆದಂತೆ ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ಅವಧಿಯಲ್ಲಿ ಪಡೆದುಕೊಳ್ಳಬಹುದು ಮತ್ತು https://kppp.gov.in ವೆಬ್‌ಸೈಟ್‌ನಿಂದಲೂ ಸಹ ಪಡೆದುಕೊಳ್ಳಬಹುದು

ಸಹಿ/– ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ,
ಪ್ರೊ ಯು.ಆರ್. ರಾವ್ ವಿಜ್ಞಾನ ಭವನ, ಮೇ ಸಂದೀಪ್ ಉನ್ನಿಕೃಷ್ಣ ರಸ್ತೆ, ದೊಡ್ಡಬೆಟ್ಟಹಳ್ಳಿ ಬಡಾವಣೆ, ವಿದ್ಯಾರಣ್ಯಪುರ ಅಂಚೆ, ಬೆಂಗಳೂರು–560097, ದೂರವಾಣಿ: 080–29721550,
ಇ–ಮೇಲ್: ksta.gok@gmail.com, Website: www.kstacademy.in
ಸಂ. ಕವಿತಂಅ/ಪ್ರಶಸ್ತಿ/17/2025–26 ದಿನಾಂಕ :01.12.2025

ವಿವಿಧ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

ಅಕಾಡೆಮಿಯು ಈ ಕೆಳಕಂಡ ಪ್ರಶಸ್ತಿಗಳು/ಬಹುಮಾನಗಳಿಗೆ ಅರ್ಹರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

1. **ಭಾರತರತ್ನ ಪ್ರೊ. ಸಿ. ಎನ್. ಆರ್. ರಾವ್ ಕೆ.ಎಸ್.ಟಿ.ಎ. ಜೀವಮಾನ ಸಾಧನೆ ಪ್ರಶಸ್ತಿ**– (Science, Technology, Engineering, Agriculture & Médicine)
2. **ಕನ್ನಡ ಸಂವಹನಕಾರರಿಗೆ ಕೆ.ಎಸ್.ಟಿ.ಎ. ಜೀವಮಾನ ಸಾಧನೆ ಪ್ರಶಸ್ತಿ** (Science, Technology, Engineering, Agriculture & Médicine)
3. **ಕೆ.ಎಸ್.ಟಿ.ಎ. ಫೆಲೋಶಿಪ್**
4. **'ಶ್ರೇಷ್ಠ ಪುಸ್ತಕ ಪ್ರಶಸ್ತಿ'** – ಕೃಷಿ, ವಿಜ್ಞಾನ, ತಂತ್ರಜ್ಞಾನ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಕನ್ನಡದಲ್ಲಿ ಪ್ರಕಟಗೊಂಡ ಪುಸ್ತಕಗಳಿಗೆ
5. **ಪ್ರೊ. ಯು. ಆರ್. ರಾವ್ ಬಹುಮಾನ** – ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ
6. **ಡಾ. ಎಸ್.ಕೆ. ಶಿವಕುಮಾರ್ ಬಹುಮಾನ** – ವಿಜ್ಞಾನ ಪದವಿ ವಿದ್ಯಾರ್ಥಿಗಳಿಗೆ
7. **ಪ್ರೊ. ಎಸ್. ಅಯ್ಯಪ್ಪನ್ ಬಹುಮಾನ** – ಬೋಧಕರು/ಜನಸಾಮಾನ್ಯರಿಗೆ.

- ಕ್ರ. ಸಂ. 1, 2 & 3 ಪ್ರಶಸ್ತಿಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 05.02.2026 ಮತ್ತು ಕ್ರ ಸಂ. 4ರ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 05.01.2026 (offline ಮೂಲಕ) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಮೊ: 9880405181 ಮತ್ತು ಮೊ: 9620767819 / 080–29721550.
- ಕ್ರ. ಸಂ. 5, 6 & 7 ಬಹುಮಾನಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31.12.2025 (Online ಮೂಲಕ) – ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಮೊ: 9686449019 / 080–29721550.

ಮೇಲ್ಕಂಡ ಪ್ರಶಸ್ತಿಗಳು/ಬಹುಮಾನಗಳಿಗೆ ಅಕಾಡೆಮಿಯ ವೆಬ್ ಸೈಟ್: https://kstacademy.in ನಲ್ಲಿ ನೀಡಿರುವ ಮಾನದಂಡಗಳು ಹಾಗೂ ಮಾರ್ಗಸೂಚಿಯನ್ವಯ ಅಗತ್ಯ ದಾಖಲೆಗಳೊಂದಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಸಹಿ/–
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ
ವಾಸಾಸಂಇ/ವಾಪ್ರ/ಶಿರಡಿ ಸಾಯಿ/4130/2025–26

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಆಯುಕ್ತರ ಕಚೇರಿ, ನಂ. 17, ವಾರ್ತಾಸೌಧ, ಭಗವಾನ್ ಮಹಾವೀರ ರಸ್ತೆ, (ಇನ್‌ಫೆಂಟ್ರಿ ರೋಡ್) ಬೆಂಗಳೂರು–560001.
ಸಂ:ವಾಸಾಸಂಇ/ಚಚಿಶಾ/ಎಸ್‌ಸಿಎಸ್‌ಪಿ–ಟಿಎಸ್‌ಪಿ/2025–26 ದಿನಾಂಕ: 29.11.2025

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಚಲನಚಿತ್ರಗಳಿಗೆ ನೀಡುವ ಸಹಾಯಧನಕ್ಕೆ ಅರ್ಹತೆ ಹೊಂದಿರುವ ಚಲನಚಿತ್ರಗಳ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರ್ಮಾಪಕರು ನಿರ್ಮಿಸಿರುವ ಚಲನಚಿತ್ರಗಳಿಗೆ ವಿಶೇಷ ಪ್ರೋತ್ಸಾಹ ಧನ / ಸಹಾಯಧನ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಚಲನಚಿತ್ರಗಳಿಗೆ ನೀಡುವ ಸಹಾಯಧನಕ್ಕಾಗಿ ಅರ್ಹತೆ ಹೊಂದಿರುವ ಅಂದರೆ ಭಾರತೀಯ ಪನೋರಮ ವಿಭಾಗಕ್ಕೆ ಆಯ್ಕೆಯಾದ ಚಿತ್ರಗಳು ಮತ್ತು FIAPF ನಿಂದ ಮನ್ನಣೆ ಪಡೆದ ಯಾವುದೆ ಅಧಿಕೃತ ಅಂತರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಮಾನ್ಯತೆ ನೀಡಿರುವ ಸ್ಪರ್ಧಾತ್ಮಕ ವಿಭಾಗದಲ್ಲಿ ಆಯ್ಕೆಯಾಗಿ ಪ್ರದರ್ಶನಗೊಂಡ/ಪ್ರಶಸ್ತಿ ಪಡೆದ ಚಲನಚಿತ್ರಗಳ ಪೈಕಿ ಇತರೆ ವರ್ಗದವರ ಪಾಲುದಾರಿಕೆ ಇಲ್ಲದೆ, ಸಂಪೂರ್ಣವಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ನಿರ್ಮಾಪಕರ ಒಡೆತನದ ನಿರ್ಮಾಣ ಸಂಸ್ಥೆಗಳಿಂದ ಚಲನಚಿತ್ರಗಳು ನಿರ್ಮಿತವಾಗಿದ್ದಲ್ಲಿ ಅಂತಹ ಚಲನಚಿತ್ರಗಳಿಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೀಡುವ ಸಹಾಯಧನದ ಜೊತೆಗೆ ಹೆಚ್ಚುವರಿಯಾಗಿ ಎಸ್.ಸಿ.ಎಸ್.ಪಿ / ಟಿ.ಎಸ್.ಪಿ. ಯೋಜನೆಯಡಿ **5 ಲಕ್ಷ ರೂ.ಗಳ** ವಿಶೇಷ ಪ್ರೋತ್ಸಾಹಧನ ನೀಡಲಾಗುತ್ತದೆ. ಅದೇ ರೀತಿ ರಾಜ್ಯ ಪ್ರಶಸ್ತಿ/ರಾಷ್ಟ್ರ ಪ್ರಶಸ್ತಿಗೆ ಆಯ್ಕೆಯಾದ ಚಲನಚಿತ್ರಗಳಿಗೆ **ರೂ.10.00 ಲಕ್ಷದಂತೆ** ವಿಶೇಷ ಪ್ರೋತ್ಸಾಹ ಧನ / ಸಹಾಯಧನ ನೀಡಲಾಗುತ್ತದೆ. ಈ ಹಿನ್ನೆಲೆಯಲ್ಲಿ 2017, 2018 2019 ಹಾಗೂ 2020 ನೇ ಕ್ಯಾಲೆಂಡರ್ ವರ್ಷದಲ್ಲಿ ಮೇಲ್ಕಂಡ ಯಾವುದೇ ವಿಭಾಗದಲ್ಲಿ ಸಹಾಯಧನಕ್ಕೆ ಅರ್ಹತೆ ಪಡೆದಿರುವ ಚಲನಚಿತ್ರಗಳ ಪೈಕಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ನಿರ್ಮಾಪಕರು ನಿರ್ಮಿಸಿರುವ ಚಲನಚಿತ್ರಗಳಿಗೆ ಅನ್ವಯಿಸುವಂತೆ, 5 ಲಕ್ಷ ರೂ.ಗಳ ವಿಶೇಷ ಪ್ರೋತ್ಸಾಹ ಧನ/ಸಹಾಯಧನ ಹಾಗೂ ರಾಜ್ಯ ಪ್ರಶಸ್ತಿ / ರಾಷ್ಟ್ರ ಪ್ರಶಸ್ತಿಗೆ ಆಯ್ಕೆಯಾದ ಚಲನಚಿತ್ರಗಳಿಗೆ **ರೂ.10.00 ಲಕ್ಷ ರೂ.ಗಳ** ವಿಶೇಷ ಪ್ರೋತ್ಸಾಹ ಧನ/ಸಹಾಯಧನ ಪಡೆಯಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮೇಲ್ಕಂಡ ಸಾಲಿನಲ್ಲಿ ಈಗಾಗಲೇ ವಿಶೇಷ ಪ್ರೋತ್ಸಾಹ ಧನ / ಸಹಾಯಧನ ಪಡೆದವರು ಅರ್ಜಿ ಸಲ್ಲಿಸುವಂತಿಲ್ಲ.

ಅರ್ಜಿ ನಮೂನೆಗಳನ್ನು ಉಪ ನಿರ್ದೇಶಕರು, ಚಲನಚಿತ್ರ ವಿಭಾಗ, ಇಲ್ಲಿ ಪಡೆಯಬಹುದಾಗಿದೆ. ಅರ್ಜಿಯ ಜೊತೆಗೆ ನಿಗದಿತ ನಮೂನೆಯಲ್ಲಿ ಜಾತಿ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಪಾನ್ ಕಾರ್ಡ್, ಆದಾಯ ತೆರಿಗೆ ಇಲಾಖೆಯಿಂದ ಪಡೆದಿರುವ No Due Certificate ಸೇರಿದಂತೆ ಅಗತ್ಯ ದಾಖಲೆಗಳ ಸಹಿತ ಭರ್ತಿ ಮಾಡಿದ ನಿಗದಿತ ಅರ್ಜಿ ನಮೂನೆಗಳನ್ನು **ದಿನಾಂಕ: 30.12.2025 ರೊಳಗೆ** ಇಲಾಖೆಗೆ, ಕಚೇರಿ ವೇಳೆಯಲ್ಲಿ ಸಲ್ಲಿಸುವಂತೆ ತಿಳಿಸಿದೆ.

ಸಹಿ/– ಆಯುಕ್ತರು
ವಾಸಸಂಇ/ಉನಿ–ಸಿ.ಪಿ/4140/ಕೆಎಸ್‌ಎಂಸಿಎ/2025–26

ಒಂದು ಹಿಡಿ ಗಾತ್ರದಷ್ಟು ಕಡಲೆಬೀಜದಲ್ಲಿ ಸುಮಾರು 7.3.ಗ್ರಾಂ ಪ್ರೋಟೀನ್ ಇರುತ್ತದೆ. ಪ್ರೋಟೀನಿನ ಕೊರತೆಯಾದಲ್ಲಿ ಕಡಲೆಬೀಜದ ಸೇವನೆ ಉತ್ತಮ.

ಈ ಕ್ಷಣದಲ್ಲಿ ಬದುಕೋಣ!

• ಡಾ. ಕೆ. ಎಸ್. ಪವಿತ್ರ

ಈ ಕ್ಷಣದಲ್ಲಿ ಬದುಕುವ ಕೌಶಲವನ್ನು ಆಧುನಿಕ ಮನೋವಿಜ್ಞಾನ ಮತ್ತು ವೈದ್ಯಕೀಯ ಕ್ಷೇತ್ರ ಎರವಲು ತೆಗೆದುಕೊಂಡದ್ದು ಹಿಂದೂ ಮತ್ತು ಬೌದ್ಧ ತತ್ತ್ವಗಳಿಂದಲೇ. ಕ್ರಮೇಣ ವೈಜ್ಞಾನಿಕ ಅಧ್ಯಯನಗಳಿಂದ ಅದನ್ನು ಹಲವು ವಿಧದ ಮನೋಚಿಕಿತ್ಸೆಗಳ ಭಾಗವಾಗಿ, ಇದೀಗ ಅದೊಂದು ಗುಣಮಟ್ಟದ ಜೀವನದ ಕೌಶಲವಾಗಿದೆ. ಈ ಕ್ಷಣದಲ್ಲಿ ಬದುಕುವ ಕೌಶಲಕ್ಕೆ ಎರಡು ಮುಖ್ಯ ಸಾಮರ್ಥ್ಯಗಳು ಬೇಕು. ಮೊದಲನೆಯದು ನಮ್ಮೊಳಗೆ ನಡೆಯುತ್ತಿರುವ ಮಾನಸಿಕ-ಭಾವನಾತ್ಮಕ ಪ್ರಕ್ರಿಯೆಗಳ ಅನುಭವಗಳ ಬಗೆಗಿನ ಅರಿವು. ಎರಡನೆಯದು ಇವುಗಳನ್ನು ಅವಲೋಕಿಸುತ್ತಲೇ ಅದನ್ನು ಒಪ್ಪಿಕೊಳ್ಳುವುದು.

ನಾವು 'ಈ ಕ್ಷಣದಲ್ಲಿ ಬದುಕದಿರುವುದಕ್ಕೆ' ದಿನನಿತ್ಯದ ಬದುಕಿನ ಜಂಜಡಗಳಿಂದ ನೂರಾರು ಉದಾಹರಣೆಗಳನ್ನು ಕೊಡಬಹುದು. ಅವುಗಳಲ್ಲಿ ಕೆಲವು ಬೇರೆಯವರಿಗೆ ಕಿರಿಕಿರಿ ಉಂಟುಮಾಡುವಂತಹವು ಎನಿಸಿದರೆ, ಮತ್ತೆ ಕೆಲವು ನಮಗೇ ಅಚ್ಚರಿ-ಸಮಸ್ಯೆ ಮೂಡಿಸಬಹುದಾದಂತಹವು ಆಗಿರುತ್ತವೆ. ಸ್ನಾನಕ್ಕೆ ಹೋಗಿ ತಲೆಸ್ನಾನವನ್ನು ಮಾಡಿ ಹೊರ ಬಂದಾಗಿದೆ; ಶ್ಯಾಂಪೂ ಹಾಕಿದ ಮೇಲೆ ಕಂಡೀಷನರ್ ಹಾಕಿದ್ದೇವೆಯೆ? ನೆನಪೇ ಆಗುತ್ತಿಲ್ಲ. ಯಾರೊಡನೆಯೋ ಕಳೆದ ಹತ್ತು ನಿಮಿಷದಿಂದ ಮಾತನಾಡುತ್ತಿದ್ದೇವೆ; ಅವರು ಆ ಕಡೆಗೆ ತಿರುಗಿದ ಮೇಲೆ 'ಇವರೊಡನೆ ಮಾತನಾಡಿದ ವಿಷಯ' ನೆನಪಿಸಿಕೊಳ್ಳಲುಹೋದರೆ ನೆನಪೇ ಆಗುತ್ತಿಲ್ಲ! ಕೋಣೆಯಲ್ಲಿ ದೀಪ ಆರಿಸದೇ ಬಿಡುವುದು, ಗೀಸರ್ ಹಾಗೇ ಹಾಕಿಟ್ಟು ಹೊರಬರುವುದು – ಇವೆಲ್ಲವೂ ಬೇರೆಯರಿಗೂ ಕಿರಿಕಿರಿಯುಂಟು ಮಾಡುವಂಥವೇ. ಇವು 'ಅಶಿಸ್ತು' ಎಂದು ಗುರುತಿಸುವುದು ಸಾಮಾನ್ಯವಾದರೂ, ನಿಜವಾಗಿ ನೋಡಿದರೆ ಈ ಅಶಿಸ್ತಿನ ಮೂಲ ಅಲೆದಾಡುವ ಮನಸ್ಸು ಅಥವಾ ಅನ್ಯಮನಸ್ಕತೆಗಳಲ್ಲಿಯೇ ಇರುತ್ತದೆ.

ಆ ಕ್ಷಣದಲ್ಲಿ ಬದುಕದಿರುವುದು, ಅನ್ಯಮನಸ್ಕರಾಗಿ ಕೆಲಸಗಳನ್ನು ಮಾಡುವುದು ತರುವ ಸಮಸ್ಯೆಗಳನ್ನು ನಾವು ಅಧ್ಯಯನಗಳನ್ನು ಗಮನಿಸಿಯೇ ತಿಳಿಯಬೇಕೆಂದಿಲ್ಲ. ನಮ್ಮ ಅನುಭವವೇ ಅದಕ್ಕೆ ಆಧಾರ! ಸಮಯವನ್ನು ಹಾಳು ಮಾಡುವುದು, ಶಕ್ತಿಯ ಖರ್ಚು, ತಪ್ಪುಗಳಾಗಿ ಕೆಲಸಗಳನ್ನು ಮತ್ತೆ ಮತ್ತೆ ಮಾಡಬೇಕಾಗುವುದು, ಮರೆಯುವುದು, ಮಾಡುವ ಕೆಲಸದಲ್ಲಿ ಸಂತಸ-ಉತ್ಸಾಹಗಳು ಕಡಿಮೆಯಾಗುವುದು, ಮತ್ತೊಬ್ಬರೊಂದಿಗಿನ ಸಂವಹನದಲ್ಲಿ ತಪ್ಪು-ಅಪಾರ್ಥಗಳು ನುಸುಳುವುದು, ಹೊಸತನ್ನು ಕಲಿಯುವುದು ನಿಧಾನವಾಗುವುದು – ಇವೆಲ್ಲವೂ ಒಟ್ಟುಗೂಡಿ ಒತ್ತಡ ಹೆಚ್ಚುವುದು, ದೈಹಿಕ-ಮಾನಸಿಕ ಅನಾರೋಗ್ಯದ ಸಾಧ್ಯತೆಯನ್ನು ಹೆಚ್ಚಿಸುವುದು – ಇವು ಅನ್ಯಮನಸ್ಕತೆ, ಆ ಕ್ಷಣದಲ್ಲಿ ಬದುಕುವ ಕೌಶಲದ ಕೊರತೆ ತರಬಹುದಾದ ಸಮಸ್ಯೆಗಳು.

ಅನ್ಯಮನಸ್ಕತೆಯಲ್ಲಿ ನಮ್ಮ ಮಿದುಳು-ಮನಸ್ಸುಗಳು 'ಆಟೋ ಪೈಲಟ್' ಮೋಡ್‌ಗೆ ಹೋಗಿಬಿಡುತ್ತವೆ! ಎಂದರೆ ನಮ್ಮೆದುರು ಏನು ನಡೆಯುತ್ತದೆಯೋ ಅದರಿಂದ ಮನಸ್ಸು ಪೂರ್ತಿ ಕಳಚಿಕೊಂಡು ತನ್ನದೇ ಲೋಕದಲ್ಲಿ ಮುಳುಗಿಬಿಡುತ್ತದೆ. ಹಿಂದಿನದನ್ನು ಮೆಲುಕು ಹಾಕುವುದು, ಚಿಂತೆಯ ಚಕ್ರದಲ್ಲಿ ಸಿಲುಕುವುದು ಅಥವಾ ಮುಂದಿನದನ್ನು ನೆನೆದು ಆತಂಕ ಪಡುತ್ತಿರುವುದು. ಇತ್ತ ದೇಹ ಮಾತ್ರ ಇಂದಿನಲ್ಲಿದ್ದು, ಮನಸ್ಸಿನ ಸಹಕಾರವಿಲ್ಲದೆ ಹೇಗೋ ಪರಿಸ್ಥಿತಿಯನ್ನು ನಿಭಾಯಿಸಬೇಕು! ಹೇಗಿದೆ ಚಿತ್ರ ಊಹಿಸಿಕೊಳ್ಳಿ!

ಅಭ್ಯಾಸವಿರುವ, 'Procedural memory' ಪ್ರಕ್ರಿಯೆಯ ನೆನಪುಗಳಂತಹ ಈಜು, ವಾಹನಚಾಲನೆ, ಮೊದಲಾದವನ್ನು ಸರಿಯಾಗಿಯೇ ಈ 'ಆಟೋ ಪೈಲಟ್' ಮೋಡ್‌ನಲ್ಲಿ ನಾವು ಮಾಡಬಹುದು. ಆದರೆ ಉಳಿದಂತೆ ವ್ಯವಹಾರಗಳು, ಕಲಿಕೆ, ಊಟ ಇವುಗಳಲ್ಲಿ ಸೂಕ್ಷ್ಮತೆಯಾಗಲಿ, ಗುಣಮಟ್ಟವಾಗಲಿ ಮಾಯವಾಗುತ್ತದೆ. ವ್ಯವಹಾರದಲ್ಲಂತೂ ಹಲವು ಅಂಶಗಳು ಕಣ್ಣಿಂದ ಮರೆಯಾಗದೆಯೂ, ಬುದ್ಧಿಗೆ 'ಅಗೋಚರ'ವಾಗುವ ಅಪಾಯಗಳು ಅನ್ಯಮನಸ್ಕತೆಯಿಂದ ಎದುರಾಗುತ್ತದೆ.

ಜನರು ಅಷ್ಟಾಗಿ ಗಮನಿಸದಿರುವ, ಆಧುನಿಕ ವೈಜ್ಞಾನಿಕ ಅಧ್ಯಯನಗಳು ಬಲವಾಗಿ ತೋರಿಸಿರುವ ಸಂಗತಿಯೆಂದರೆ ಅನ್ಯಮನಸ್ಕತೆಯನ್ನು ದೂರವಿರಿಸಿ, ಆ ಕ್ಷಣದಲ್ಲಿ ಮನಸ್ಸನ್ನಿರಿಸುವುದು ಮಿದುಳಿನಲ್ಲಿ ನಿಜವಾಗಿ ರಾಸಾಯನಿಕ ಬದಲಾವಣೆಗಳನ್ನು ತರುತ್ತದೆ ಎಂಬುದು. ಆನಂದ-ಉತ್ಸಾಹಗಳ ರಾಸಾಯನಿಕಗಳಾದ 'ಡೋಪಮೀನ್' ಮತ್ತು 'ಸೆರಟೋನಿನ್'ಗಳನ್ನೂ, ಮನಸ್ಸನ್ನು ಶಾಂತವಾಗಿರಿಸಬಲ್ಲ 'ಗಾಬಾ' ಎಂಬ ರಾಸಾಯನಿಕವನ್ನೂ ಆ ಕ್ಷಣದಲ್ಲಿ ಮುಳುಗುವ ಮನಃಸ್ಥಿತಿ ಹೆಚ್ಚಿಸುತ್ತದೆ. ಧ್ಯಾನ, ಆಟ, ನೃತ್ಯ, ಸಂಗೀತ ಇತ್ಯಾದಿ ಹವ್ಯಾಸಗಳ ಮೂಲಕ ಮನಸ್ಸಿನ ಈ ಸಾಮರ್ಥ್ಯವನ್ನು ಹೆಚ್ಚಿಸುವ ಅಭ್ಯಾಸ ಮಿದುಳಿನ ಹಲವು ಭಾಗಗಳ ರಚನೆಯ ಅಂಶಗಳಲ್ಲಿ ಬದಲಾವಣೆ ತರಬಲ್ಲದು. ಎಂದರೆ ಯಾವುದೇ ಶಬ್ದ-ಸ್ಪರ್ಶ-ವಾಸನೆ-ರುಚಿ-ನೋಟಗಳ ಪ್ರಚೋದನೆಗೆ ಮೊದಲು ಪ್ರತಿಕ್ರಿಯಿಸುವುದು ಮಿದುಳಿನ 'ಅಮಿಗ್ಡಲಾ' ಎಂಬ ಭಾಗ. ವಾತಾವರಣದ ಯಾವುದೇ ಇಂತಹ ಪ್ರಚೋದನೆಯನ್ನೂ ಈ ಭಾಗ ಗ್ರಹಿಸುವುದು 'ಬೆದರಿಕೆ' ಎಂದೇ. ಬೆದರಿಕೆಗೆ ದೇಹ ಹೆದರುವಂತೆ, ಹೋರಾಡುವಂತೆ ಮಾಡುವಂತೆ ಅಮಿಗ್ಡಲಾ ಮಾಡುವುದೇ ನಮ್ಮಲ್ಲಿ ಆತಂಕ-ಭಯಗಳನ್ನು ಸೃಷ್ಟಿಸುತ್ತದೆ. ಧ್ಯಾನ ಮತ್ತು ಧ್ಯಾನದಂತಹ ಸ್ಥಿತಿಗಳನ್ನು ನಿರ್ಮಿಸುವ ಆಟ-ಕಲೆ-ಓದು-ಹವ್ಯಾಸಗಳನ್ನು ನಾವು ಸತತವಾಗಿ ಮಾಡಿದ್ದೇ ಆದರೆ ಅಮಿಗ್ಡಲಾದ ಗಾತ್ರ ಕಡಿಮೆಯಾಗುತ್ತದೆ; ಭಯ-ಆತಂಕಗಳ ಸ್ಥಿತಿಯಲ್ಲಿಯೂ ಹತೋಟಿ ಸುಲಭವಾಗುತ್ತದೆ. ನೆನಪುಗಳ ಕೇಂದ್ರ 'ಹಿಪ್ಪೋಕ್ಯಾಂಪಸ್'ನ ಗಾತ್ರ ಹೆಚ್ಚುತ್ತದೆ; ಮರೆವು ಕಡಿಮೆಯಾಗುತ್ತದೆ.

ಹೀಗೆಂದಾಕ್ಷಣ ಬಹುಜನ ಕೇಳುವ ಪ್ರಶ್ನೆ ಹಾಗಿದ್ದರೆ ಆತಂಕ-ಭಯ-ಖಿನ್ನತೆಗಳ ಮನಃಸ್ಥಿತಿಗೆ ಮಾತ್ರೆಯ ಚಿಕಿತ್ಸೆ ಅವಶ್ಯವಿಲ್ಲವೆ? ಮನಸ್ಸಿನ ಈ ಸ್ಥಿತಿಗಳು ಕಾಯಿಲೆಯ ಹಂತ ತಲುಪಿದಾಗ, ಇಂತಹ 'ಕ್ಷಣದಲ್ಲಿ ಬದುಕುವ ಸಾಮರ್ಥ್ಯ' ಮಾಯವಾಗಿಬಿಟ್ಟಿರುತ್ತದೆ. ಆಗ ಧ್ಯಾನ-ಹವ್ಯಾಸಗಳಲ್ಲಿ ಏಕಾಗ್ರತೆ ಮೂಡುವುದು ಕಷ್ಟದ ಮಾತು. ಈ ಸಂದರ್ಭದಲ್ಲಿ ಸೂಕ್ತ ಚಿಕಿತ್ಸೆ ವೈದ್ಯರ ಸಲಹೆಯೊಂದಿಗೆ ಬೇಕೇ ಬೇಕು. ಆದರೆ ಈ ಹಂತಕ್ಕೆ ಹೋಗುವ ಮುನ್ನವೇ ಒಂದು ಕೌಶಲವಾಗಿ ದೈನಂದಿನ ದಿನಚರಿಯಲ್ಲಿ 'ಆ ಕ್ಷಣದಲ್ಲಿ ಬದುಕುವ' ಸಾಮರ್ಥ್ಯವನ್ನು ರೂಢಿಸಿಕೊಳ್ಳುವುದು ಉಪಯುಕ್ತ. ಹಾಗೆಯೇ ಆತಂಕ-ಭಯ-ಖಿನ್ನತೆಯ ಕಾಯಿಲೆಗಳ ಸ್ಥಿತಿಯಿಂದ ಹೊರಬಂದ ಮೇಲೆ ಮತ್ತೆ ಮರುಕಳಿಸದಿರಲು ಈ ಕೌಶಲವನ್ನು ಕಲಿತು ಬದುಕಿನ ಭಾಗವಾಗಿ ಅಳವಡಿಸಿಕೊಳ್ಳುವುದು ಸೂಕ್ತ.

ಮೈ ಮನಗಳನ್ನು ಸುಡುವ ಟೈಫಾಯ್ಡ್

• ಡಾ. ವೀಣಾ ಎಸ್. ಭಟ್

'ವಿಷಮ ಶೀತಜ್ವರ' ವನ್ನೇ 'ಟೈಫಾಯ್ಡ್' ಜ್ವರ ಎಂದೂ ಕರೆಯಲಾಗುತ್ತದೆ. ಎಲ್ಲೆಲ್ಲಾ ನೈರ್ಮಲ್ಯವನ್ನು ಕಡೆಗಣಿಸಲಾಗಿದೆಯೋ ಅಲ್ಲೆಲ್ಲಾ ಈ ಕಾಯಿಲೆಯ ಹಾವಳಿ ಕಂಡುಬರುತ್ತದೆ. 'ಸಾಲ್ಮೋನೆಲ್ಲ ಟೈಫಿ' ಎಂಬ ಹೆಸರಿನ ಸೂಕ್ಷ್ಮಜೀವಿ, ಸಣ್ಣಕರುಳಿನಲ್ಲಿ ಬೆಳೆದು ಮಲದ ಮೂಲಕ ವಿಸರ್ಜನೆ ಹೊಂದಿ, ಭೂಮಿಯನ್ನು, ನೀರನ್ನು ಸೇರಿ ಮತ್ತೆ ಆಹಾರ, ನೀರು, ಪಾನೀಯಗಳ ಮೂಲಕ ಶರೀರವನ್ನು ಸೇರಿ ಈ ಕಾಯಿಲೆಯನ್ನು ತರುತ್ತದೆ. ವಾತಾವರಣವನ್ನು ಸೇರಿದ ಈ ಸೂಕ್ಷ್ಮಜೀವಿಯು ತಂಪು ವಾತಾವರಣವಿರುವಲ್ಲಿ, ನೀರಿನಲ್ಲಿ, ದೂಳಿನಲ್ಲಿ, ಮಂಜುಗಡ್ಡೆಯಲ್ಲಿ, ಹಾಲಿನಲ್ಲಿ, ಹಾಲಿನ ಅಂಶವಿರುವ ವಸ್ತುಗಳಲ್ಲಿ, ಕೊಳಚೆನೀರಿನಲ್ಲಿ ಅನೇಕ ತಿಂಗಳು ಜೀವಂತ ಇರುವ ಕಾರಣ ಕಾಯಿಲೆ ಹರಡಲು ಕಾರಣವೂ ಆಗುತ್ತದೆ, ಸುಲಭವೂ ಆಗುತ್ತದೆ.

ಶರೀರವನ್ನು ಪ್ರವೇಶಿಸಿದ ಈ ಸೂಕ್ಷ್ಮಜೀವಿ ಕರುಳಿನಲ್ಲಿ ಬೆಳೆಯುತ್ತದೆ; ಮಾತ್ರವಲ್ಲ, ಸಂಖ್ಯೆಯನ್ನು ವೃದ್ಧಿಸಿಕೊಳ್ಳುತ್ತದೆ. ಆದರೆ ಇದು ಸಾಧ್ಯವಾಗುವುದು ಮಾನವನ ದೇಹದ ಒಳಗೆ ಮಾತ್ರ. ಕರುಳಿನ ಗೋಡೆಯ ಮೂಲಕ ರಕ್ತನಾಳವನ್ನು ಪ್ರವೇಶಿಸಿ ಯಕೃತ್ ಗುಲ್ಮಾ ಪಿತ್ತಕೋಶಗಳನ್ನು ಪ್ರವೇಶಿಸುತ್ತದೆ. ಈ ಬ್ಯಾಕ್ಟೀರಿಯಾವನ್ನು ಬಿಳಿರಕ್ತಕಣಗಳು ನುಂಗಿ ಹೋರಾಡುತ್ತವೆ. ಬ್ಯಾಕ್ಟೀರಿಯಾ ದೇಹವನ್ನು ಪ್ರವೇಶಿಸಿ 1-3 ವಾರಗಳಲ್ಲಿ ಕಾಯಿಲೆಯ ಸೂಚನೆಗಳು ಪ್ರಾರಂಭವಾಗುತ್ತವೆ. ನಿಧಾನವಾಗಿ ಏರುವ ಜ್ವರ, ಸಣ್ಣನೆಯ ತಲೆನೋವು, ಹೊಟ್ಟೆನೋವು, ವಿಪರೀತ ಸುಸ್ತು, ಹಸಿವು ಕಡಿಮೆಯಾಗುವುದು ಭೇದಿ ಅಥವಾ ಮಲಬದ್ಧತೆಗಳು ಕಾಣಿಸಿಕೊಳ್ಳುತ್ತವೆ.

ವೈದ್ಯಕೀಯ ಪರೀಕ್ಷೆ ನಡೆಸಿದಾಗ, ಈ ಕೆಲವು ಅಂಶಗಳು ಟೈಫಾಯ್ಡ್ ಕಾಯಿಲೆಯ ಸೂಚನೆಯನ್ನು ಕೊಡಬಹುದು. ನಾಡಿ ಬಡಿತವು ಏರಿದ ದೇಹದ ಉಷ್ಣತೆಗೆ ಅನುಗುಣವಾಗಿ ಹೆಚ್ಚಾಗಿರುವುದಿಲ್ಲ. ಯಕೃತ್ತು ಮತ್ತು ಗುಲ್ಮವು ಸಹ ಸ್ಥಿತಿಗಿಂತ ದೊಡ್ಡದಾಗಿರುತದೆ. ರಕ್ತಪರೀಕ್ಷೆಯನ್ನು ನಡೆಸಿದಾಗ ಬಿಳಿರಕ್ತಕಣಗಳ ಸಂಖ್ಯೆ ಹೆಚ್ಚಾಗಿರುವುದಿಲ್ಲ. (ದೇಹದಲ್ಲಿ ನಂಜು ಉಂಟಾದಾಗ ಬಿಳಿರಕ್ತಕಣಗಳ ಸಂಖ್ಯೆ ಸಾಮಾನ್ಯವಾಗಿ ಹೆಚ್ಚಾಗುತ್ತದೆ.) ವೈಡಾಲ್ ಪರೀಕ್ಷೆಯಲ್ಲಿ. H ಮತ್ತು O 1:160ಗಿಂತ ಹೆಚ್ಚು ಎಂದು ತೋರಿಸಬಹುದು. ಸರಿಯಾದ ಸಮಯದಲ್ಲಿ ಚಿಕಿತ್ಸೆ ದೊರಕದೆ ಇದ್ದಾಗ ಸಣ್ಣಕರುಳಿನಲ್ಲಿ ಹುಣ್ಣು ಆಗಿ, ಮಲದಲ್ಲಿ ರಕ್ತವೂ ಕಾಣಿಸಿಕೊಳ್ಳಬಹುದು. ವಿಪರೀತ ಹಂತದಲ್ಲಿ ಸಣ್ಣ ಕರುಳಿನಲ್ಲಿ ರಂಧ್ರವಾಗಿ ಹೊಟ್ಟೆಯ ಪೂರ್ತಿ ನಂಜು ವ್ಯಾಪಿಸಬಹುದು.

ಚಿಕಿತ್ಸೆ

ಅದೃಷ್ಟವಶಾತ್ ನಮ್ಮಲ್ಲಿ ಟೈಫಾಯ್ಡ್ ಕಾಯಿಲೆಯನ್ನು ಗುಣ ಮಾಡುವ ಉತ್ತಮ ಜೀವಪ್ರತಿರೋಧಕಗಳು (ಆ್ಯಂಟಿಬಯೋಟಿಕ್ಸ್) ಲಭ್ಯವಿವೆ. ಹಾಗಾಗಿ ಈ ಕಾಯಿಲೆಯಿಂದ ವಿಪರೀತ ಪರಿಣಾಮಗಳು ಆಗುವುದನ್ನು ಹೆಚ್ಚಿನ ಮಟ್ಟಿಗೆ ತಡೆಹಿಡಿಯಲಾಗಿದೆ. 1-2 ವಾರಗಳ ಕಾಲ ವಾರಗಳ ಕಾಲ ಆ್ಯಂಟಿಬಯೋಟಿಕ್ ಮಾತ್ರೆಗಳನ್ನು ರೋಗಿಗೆ ಕೊಡಬೇಕಾಗುತ್ತದೆ. ಜ್ವರ ಕಡಿಮೆಯಾಗಲು ಕೆಲವೊಮ್ಮೆ ಒಂದು ವಾರವೂ ಹಿಡಿಯಬಹುದು. ವಾಂತಿ, ಹೊಟ್ಟೆನೋವು ಇದ್ದಾಗ ಮಾತ್ರೆಗಳನ್ನು ಸೇವಿಸಲು ಸಾಧ್ಯವಾಗದೇ ಇದ್ದರೆ ಆಗ, ಚುಚ್ಚುಮದ್ದಿನ ಮೂಲಕ ಆ್ಯಂಟಿಬಯೋಟಿಕನ್ನು ಕೊಡಬೇಕಾದ ಅಗತ್ಯ ಉಂಟಾಗಬಹುದು. ಅಪರೂಪ ಸಂದರ್ಭಗಳಲ್ಲಿ, ಕರುಳಿನ ಹುಣ್ಣು ಒಡೆದು ರಂಧ್ರವಾದಾಗ, ಕರುಳಿನ ನೀರು ಹೊಟ್ಟೆಯಲ್ಲಿ ಸೋರಿ ಹೋಗಿ 'ಪೆರಿಟೋನೈಟಿಸ್' ಎಂಬ ಅಪಾಯಕಾರಿ ಹಂತ ತಲುಪಬಹುದು.

ತಡೆಗಟ್ಟುವುದು ಹೇಗೆ?

ಟೈಫಾಯ್ಡ್ ಹೆಚ್ಚು ಇರುವ ಊರಿಗೆ, ನೈರ್ಮಲ್ಯ ಕಡಿಮೆ ಇರುವ ಊರಿಗೆ ಹೋಗಬೇಕಾದ ಸಂದರ್ಭದಲ್ಲಿ, ಹೋಗುವ ಒಂದು ವಾರಕ್ಕೆ ಮೊದಲು ಲಸಿಕೆಯನ್ನು ತೆಗೆದುಕೊಳ್ಳಬಹುದು.

ವೈಯಕ್ತಿಕ ಹಂತದಲ್ಲಿ

- ಶುದ್ಧಗೊಳಿಸಿದ, ಕುದಿಸಿದ ನೀರನ್ನು ಮಾತ್ರ ಸೇವಿಸುವುದು.
- ಬೀದಿ ಬದಿಯ ಆಹಾರ ಪದಾರ್ಥಗಳನ್ನು ಸೇವಿಸದೆ ಇರುವುದು; ಮಂಜುಗಡ್ಡೆ, ಐಸ್ ಕ್ರೀಂಗಳ ಶುದ್ಧತೆಯ ಬಗ್ಗೆ ಜಾಗ್ರತೆಯನ್ನು ವಹಿಸುವುದು.
- ಹಣ್ಣುಗಳನ್ನು ಸೊಪ್ಪು ತರಕಾರಿಗಳನ್ನು ಚೆನ್ನಾಗಿ ತೊಳೆದು ತಿನ್ನುವುದು. ಆಹಾರವನ್ನು ತಿನ್ನುವ ಮೊದಲು ಮತ್ತು ಶೌಚದ ನಂತರ ಕೈಯನ್ನು ಶುದ್ಧವಾಗಿಟ್ಟುಕೊಳ್ಳುವುದು.

ಸಾರ್ವಜನಿಕವಾಗಿ

- ತ್ಯಾಜ್ಯವಸ್ತುಗಳ ವಿಲೇವಾರಿಯಲ್ಲಿ ಶಿಸ್ತುಬದ್ಧ ಕ್ರಮಗಳನ್ನು ಕೈಗೊಳ್ಳುವುದು.
- ನೀರಿನ ಸಂಸ್ಕರಣೆ.
- ಆಹಾರಪೂರೈಕೆಯಲ್ಲಿ ಮಾಲಿನ್ಯವಾಗದಂತೆ ಕಠಿಣ ಕ್ರಮಗಳನ್ನು ಕೈಗೊಳ್ಳುವುದು
- ಲಸಿಕೆಯ ಪೂರೈಕೆ.
- ಹೋಟೆಲ್–ಹಾಸ್ಟೆಲ್‌ಗಳಂಥ ಸ್ಥಳಗಳಲ್ಲಿ ಆಹಾರವನ್ನು ತಯಾರಿಸುವವರಿಗೆ ನೈರ್ಮಲ್ಯದ ಬಗ್ಗೆ ನಿಗಾ ವಹಿಸುವುದು.
- ಜನರಿಗೆ ಕಾಯಿಲೆಯ ಬಗ್ಗೆ ಅರಿವನ್ನು ಮೂಡಿಸುವುದು.

ಏನು ಮಾಡಬೇಕು?

- ವೈದ್ಯರ ಸಲಹೆ ಮೇರೆಗೆ, ಔಷಧಗಳನ್ನು ಸರಿಯಾಗಿ ತೆಗೆದುಕೊಳ್ಳಬೇಕು.
- ಜ್ವರ, ಹೊಟ್ಟೆನೋವು ಕಡಿಮೆಯಾಗುವವರೆಗೂ ಸಂಪೂರ್ಣ ವಿಶ್ರಾಂತಿಯನ್ನು ಪಡೆಯಬೇಕು.
- ಕರುಳಿನಲ್ಲಿ ಹುಣ್ಣು ಆಗುವ ಸಾಧ್ಯತೆ ಇರುವುದರಿಂದ ಆಹಾರದಲ್ಲಿ ಪಥ್ಯ ಅತಿ ಮುಖ್ಯ. ಹೆಚ್ಚು ಸುಲಭವಾಗಿ ಜೀರ್ಣವಾಗುವ ಲಘು ಆಹಾರ, ದ್ರವ ಆಹಾರ, ಪ್ರೋಟೀನ್ ಇರುವ, ಕಡಿಮೆ ಕೊಬ್ಬು ಇರುವ ಆಹಾರವನ್ನು ಸೇವಿಸಬೇಕು.
- ಎಣ್ಣೆ, ಕೊಬ್ಬು, ಮಸಾಲೆ ಭರಿತ ಆಹಾರಗಳನ್ನು ಸೇವಿಸದೆ ಇರುವುದು.
- ಶೌಚಾಲಯವನ್ನು ಬಳಸಿದ ನಂತರ ಮತ್ತು ಆಹಾರ ತಿನ್ನುವ ಮೊದಲು ಕನಿಷ್ಠ 30 ಸೆಕೆಂಡುಗಳ ಕಾಲ ಕೈಯನ್ನು ಚೆನ್ನಾಗಿ ತೊಳೆಯುವುದು.
- ಕಾಯಿಲೆ ಬಂದವರಿಂದ ಇತರರಿಗೆ ಕಾಯಿಲೆ ಹರಡುವ ಸಾಧ್ಯತೆಗಳಿರುವುದರಿಂದ, ಇತರರು ಸೇವಿಸುವ ಆಹಾರಗಳನ್ನು ಮುಟ್ಟಬಾರದು. ಆದರೆ ಕಾಯಿಲೆಯಿಂದ ಗುಣಮುಖರಾದರೂ, ಈ ಬ್ಯಾಕ್ಟೀರಿಯಾವನ್ನು ಶರೀರದಿಂದ ಮಲದ ಮೂಲಕ ವಿಸರ್ಜನೆ ಮಾಡುವ ವಾಹಕರನ್ನು, ಪತ್ತೆ ಹಚ್ಚುವುದಾಗಲಿ ಅವರಿಂದ ಕಾಯಿಲೆ ಹರಡುವುದನ್ನು ತಡೆಯುವುದಕ್ಕಾಗಲಿ ನಮ್ಮಲ್ಲಿ ಕ್ರಮಗಳಿಲ್ಲ.

ಶೌಚಾಲಯದ ವ್ಯವಸ್ಥೆ, ಶುದ್ಧ ನೀರಿನ ವ್ಯವಸ್ಥೆ, ಚರಂಡಿ ವ್ಯವಸ್ಥೆ – ಇವು ಕ್ರಮಬದ್ಧವಾಗಿ ಆಗುವವರೆಗೆ ನಾವು ನೀವು ಎಲ್ಲರೂ ಟೈಫಾಯಿಡ್ ಕಾಯಿಲೆಯಿಂದ ಒಂದಲ್ಲ ಒಂದು ಬಾರಿ ಖಂಡಿತವಾಗಿ ಬಳಲುತ್ತೇವೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ — ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಗಣಿತ

ಅಧ್ಯಾಯ–5 ಸಮಾಂತರ ಶ್ರೇಢಿ

ಅಭ್ಯಾಸ 5.2

5) ಸಮಾಂತರ ಶ್ರೇಢಿಯಲ್ಲಿರುವ ಪದಗಳ ಸಂಖ್ಯೆ ಕಂಡುಹಿಡಿಯಿರಿ

(i) 7, 13, 19 .... 205 (ii) 18, 1512, 13 47

ಪರಿಹಾರ:– (i) 7, 13, 19 205

ನೀಡಿರುವ ಸಮಾಂತರ ಶ್ರೇಢಿ 7, 13, 19 205

ಇಲ್ಲಿ $a=7$ $d=13-7=6$ $a_n=205$

$$a+(n-1)d=205$$
$$7+(n-1)6=205$$
$$6(n-1)=205-7$$
$$6(n-1)=198$$
$$n-1=\frac{198}{6}$$
$$n-1=33$$
$$n=33+1=34$$

ಸಮಾಂತರ ಶ್ರೇಢಿಯಲ್ಲಿರುವ ಪದಗಳ ಸಂಖ್ಯೆ = 34

(ii) $18,\ 15\frac{1}{2},\ 13 \ldots\ldots -47$

ನೀಡಿರುವ ಸಮಾಂತರ ಶ್ರೇಢಿ $18,\ 15\frac{1}{2},\ 13 \ldots\ldots -47$

ಇಲ್ಲಿ $a=18$,

$$d=15\tfrac{1}{2}-18=\frac{31}{2}-18=-\frac{5}{2}$$

$a_n=-47$, $n=?$

$$a+(n-1)d=-47$$
$$18+(n-1)\left(-\frac{5}{2}\right)=-47$$
$$-\left(\frac{5}{2}\right)(n-1)=-65$$
$$n-1=\frac{65\text{x}2}{5}$$
$$n-1=26 \Rightarrow n=26+1=27 \Rightarrow n=27$$

6) –150 ಇದು 11, 8, 5, 2 ..... ಸಮಾಂತರ ಶ್ರೇಢಿಯ ಪದವಾಗಿದೆಯೇ ಪರೀಕ್ಷಿಸಿ.

ಪರಿಹಾರ: ದತ್ತ ಸಮಾಂತರ ಶ್ರೇಢಿಯ ಪದ 11, 8, 5, 2 .....

$$\Rightarrow a_2-a_1=8-11=-3$$
$$\Rightarrow a_3-a_2=5-8=-3$$
$$\Rightarrow a_4-a_3=2-5=-3$$

ಪ್ರತಿಯೊಂದು ಹಂತದಲ್ಲಿಯೂ $a_{n+1}-a_n$ ಒಂದೇ ಆಗಿದೆ

ಮೇಲೆ ತಿಳಿಸಿದ ಸಂಖ್ಯೆಗಳು $a=11$ ಸಾಮಾನ್ಯ ವ್ಯತ್ಯಾಸ $d=-3$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.

–150 ಈ ಸಮಾಂತರ ಶ್ರೇಢಿಯ ಪದವಾಗಿದ್ದಾಗ ಇದು n ನೇ ಪದವಾಗಿರುತ್ತದೆ

$$a_n=-150$$
$$a_n=a+(n-1)d=-150$$
$$11+(n-1)(-3)=-150$$
$$-3(n-1)=-150-11$$
$$-3(n-1)=-161$$
$$-3(n-1)=-161$$
$$-3(n-1)=-161$$
$$(n-1)=-\frac{161}{3}$$
$$n=\frac{161}{3}+1 \Rightarrow n=\frac{164}{3}$$

ಇಲ್ಲಿ n ಒಂದು ಧನ ಪೂರ್ಣಾಂಕವಲ್ಲ ಆದ್ದರಿಂದ ದತ್ತ –150 ಸಮಾಂತರ ಶ್ರೇಢಿಯ ಪದವಲ್ಲ.

7) ಒಂದು ಸಮಾಂತರ ಶ್ರೇಢಿಯ 11ನೇ ಪದ 38, 16ನೇ ಪದ 73 ಆದರೆ 31ನೇ ಪದವನ್ನು ಕಂಡುಹಿಡಿಯಿರಿ.

ಪರಿಹಾರ:– ಮೊದಲ ಪದ a ಆಗಿರಲಿ, ಸಾಮಾನ್ಯ ವ್ಯತ್ಯಾಸ d ಆಗಿರಲಿ, 11ನೇ ಪದ= 38

$$a+(11-1)d=38 \quad (\because a_n=a+(n-1)d)$$
$$a+10d=38 \ldots\ldots (1)$$

16ನೇ ಪದ= 73

$$a+(16-1)d=73 \ldots\ldots (2)$$

(1) ಮತ್ತು (2)ನ್ನು ಬಿಡಿಸುವುದರಿಂದ

$$a+15d=73$$
$$a+10d=38$$
$$(-)\ (-)\ (-)$$
$$5d=35$$
$$\therefore d=7$$

ಈಗ ಸಮೀಕರಣ 1ನ್ನು ತೆಗೆದುಕೊಂಡು ಅದರಲ್ಲಿ $d=7$ ಆದೇಶಿಸಿದಾಗ

$$a+10d=38 \Rightarrow a+10(7)=38 \Rightarrow a=-32$$

$\therefore a=-32$ $d=7$ ಲಭ್ಯವಾಗುವುದು

ಆದ್ದರಿಂದ 31ನೇ ಪದ= $a+(31-1)d$

$$=a+30d \Rightarrow =-32+(30)(7)$$
$$=-32+210=178$$

ಹೀಗಾಗಿ 31ನೇ ಪದ 178 ಆಗಿದೆ

8) 50 ಪದಗಳನ್ನು ಹೊಂದಿರುವ ಸಮಾಂತರ ಶ್ರೇಢಿಯ 3ನೇ ಪದ 12 ಮತ್ತು ಕೊನೆಯ ಪದ 106 ಆದರೆ 29ನೇ ಪದ ಕಂಡುಹಿಡಿಯಿರಿ

ಪರಿಹಾರ:– ಮೊದಲ ಪದ a ಆಗಿರಲಿ, ಸಾಮಾನ್ಯ ವ್ಯತ್ಯಾಸ d ಆಗಿರಲಿ, 3ನೇ ಪದ = 12

$$a+(3-1)d=12 \quad (\because a_n=a+(n-1)d)$$
$$a+2d=12 \ldots\ldots (1)$$

ಕೊನೆಯ ಪದ ಮತ್ತು 50ನೇ ಪದ = 106

$$a+(50-1)d=106.$$
$$a+(49)d=106 \ldots\ldots (2)$$

(1) ಮತ್ತು (2)ನ್ನು ಬಿಡಿಸುವುದರಿಂದ

$$a+49d=106$$
$$a+2d=12$$
$$(-)\ (-)\ (-)$$
$$47d=94 \qquad \therefore d=2$$

ಈಗ ಸಮೀಕರಣ 1ನ್ನು ತೆಗೆದುಕೊಂಡು ಅದರಲ್ಲಿ $d=2$ ಆದೇಶಿಸಿದಾಗ

$$a+2d=12 \Rightarrow a+2(2)=12 \Rightarrow a=8$$

$\therefore a=8$ $d=2$ ಲಭ್ಯವಾಗುವುದು

ಆದ್ದರಿಂದ 29ನೇ ಪದ =

$$=8+(29-1)d \quad (\because a_n=a+(n-1)d)$$
$$=8+28d \Rightarrow =8+(28)(2) \Rightarrow =8+56=64$$

9) ಒಂದು ಸಮಾಂತರ ಶ್ರೇಢಿಯ 3ನೇ ಮತ್ತು 9ನೇ ಪದಗಳು ಕ್ರಮವಾಗಿ 4 ಮತ್ತು –8 ಆದರೆ ಅದರ ಎಷ್ಟನೇ ಪದ ಸೊನ್ನೆಯಾಗಿದೆ?

ಪರಿಹಾರ:– ಮೊದಲ ಪದ a ಆಗಿರಲಿ, ಸಾಮಾನ್ಯ ವ್ಯತ್ಯಾಸ d ಆಗಿರಲಿ, 3ನೇ ಪದ= 4

$$a+(3-1)d=4 \quad (\because a_n=a+(n-1)d)$$
$$a+2d=4 \ldots\ldots (1)$$

9ನೇ ಪದ = -8

(ಮುಂದಿನ ಸಂಚಿಕೆಯಿಂದ)

MATHS

INTEGRALS

32. What is $\int dx$ equal to?

Ans:- $\int dx = x + c$

33. Evaluate $\int \sin^2 x dx$

Soln :– Consider $\int \sin^2 x dx$

$$=\int \frac{1}{2}(1-\cos 2x)dx$$
$$=\frac{1}{2}\int dx - \frac{1}{2}\int \cos 2x\, dx$$
$$=\frac{1}{2}\left(\int dx - \int \cos 2x\, dx\right)$$
$$=\frac{1}{2}\left[x-\frac{\sin 2x}{2}\right]+c$$

34. Evaluate $\int \cos^2 x dx$

Soln :– Consider $\int \cos^2 x dx$

$$=\int \frac{1}{2}(1+\cos 2x)dx$$
$$=\frac{1}{2}\int dx + \frac{1}{2}\int \cos 2x\, dx$$
$$=\frac{1}{2}\left[x+\frac{\sin 2x}{2}\right]+c$$

35. Evaluate $\int \sin^3 x\, dx$

Soln :– Consider $\int \sin^3 x\, dx$

we know that $\sin 3x = 3\sin x - 4\sin^3 x$

$$\therefore \sin^3 x = \frac{1}{4}(3\sin x - \sin 3x)$$
$$\Rightarrow \int \sin^3 x dx = \int \frac{1}{4}(3\sin x - \sin 3x)dx$$
$$=\frac{1}{4}\int (3\sin x - \sin 3x)dx$$
$$=\frac{1}{4}\left(-3\cos x + \frac{\cos 3x}{3}\right)+c$$

36. Evaluate $\int \cos^3 x\, dx$

Soln :– Consider $\int \cos^3 x dx$

we know that $\cos 3x = 4\cos^3 x - 3\cos x$

$$\therefore \cos^3 x = \frac{1}{4}(\cos 3x + 3\cos x)$$
$$\therefore \int \cos^3 x dx = \int \frac{1}{4}(\cos 3x + 3\cos x)dx$$
$$=\frac{1}{4}\int \cos 3x\, dx + \frac{1}{4}\int 3\cos x\, dx$$
$$=\frac{1}{4}\left(\frac{\sin 3x}{3} + 3\sin x\right)+c$$

37. Integrate $\int \sqrt[4]{x^5}\, dx$ w.r.t 'x'

Soln :– Given $\int \sqrt[4]{x^5}\, dx$

$$=\frac{x^{9/4}}{\frac{9}{4}}=\frac{4x^{9/4}}{9}$$

38. Integrate $\int (x-1)(x-2).dx$ w.r.t 'x'

Soln:- Given $\int (x-1)(x-2).dx$

$$=\int (x^2-x-2x+2).dx$$
$$=\int (x^2-3x+2).dx$$
$$=\frac{x^3}{3}-\frac{3x^2}{2}+2x+c$$

39. Integrate $\int \left(x^2-\frac{1}{x^3}\right)^2 dx$ w.r.t 'x'

Soln: - Given $\int \left(x^2-\frac{1}{x^3}\right)^2 dx$

$$=\int \left(x^4+\frac{1}{x^6}-\frac{2}{x}\right)dx$$
$$=\frac{x^5}{5}-\frac{1}{5x^5}-2\log_e x+c$$

40. Integrate $\int \left(\sqrt{1-\sin 2x}\right)dx$ w.r.t 'x'

Soln: - Given $\int \left(\sqrt{1-\sin 2x}\right)dx$

$$=\int \left(\sqrt{\cos^2 x+\sin^2 x-2\sin x\cos x}\right)dx$$
$$=\int \left(\sqrt{(\cos x-\sin x)^2}\right)dx$$
$$=\int (\cos x-\sin x)dx$$
$$=\sin x+\cos x+c$$

41. Integrate $\int \frac{1}{\sqrt{1-x}}dx$ w.r.t 'x'

Soln: - Given $\int \frac{1}{\sqrt{1-x}}dx$

$$=\int (1-x)^{-1/2}dx$$
$$=\int (-x+1)^{-1/2}dx$$
$$=\frac{(-x+1)^{1/2}}{-\frac{1}{2}}+c$$
$$=-2(1-x)^{1/2}+c$$

42. Integrate $\int \sin^2 3x\, dx$ w.r.t 'x'

Soln: - Given $\int \sin^2 3x\, dx$

$$=\int \left(\frac{1-\cos 6x}{2}\right)dx$$
$$=\frac{1}{2}\int (1-\cos 6x)dx$$
$$=\frac{1}{2}\left(x-\frac{\sin 6x}{6}\right)+c$$

43. Integrate $\int \frac{1}{e^{-2x}}dx$ w.r.t 'x'

Soln:- Given $\int \frac{1}{e^{-2x}}dx$

$$\int e^{-2x}dx=-\frac{e^{-2x}}{2}+c$$

ಜೆಜೆಎಂಗೆ ಹಣ ನೀಡದ ಕೇಂದ್ರ: ಸಿ.ಎಂ

238 ಪಂಚಾಯಿತಿಗಳಿಗೆ 'ಗಾಂಧಿ ಗ್ರಾಮ ಪುರಸ್ಕಾರ';ಇ ಸ್ವತ್ತು–2.0 ತಂತ್ರಾಂಶಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಜಲ ಜೀವನ್ ಮಿಷನ್ (ಜೆಜೆಎಂ) ಯೋಜನೆಗೆ ರಾಜ್ಯದ ಪಾಲೇ ಹೆಚ್ಚು. ಕೇಂದ್ರದಿಂದ ಇನ್ನೂ ₹13 ಸಾವಿರ ಕೋಟಿ ಹಣ ರಾಜ್ಯಕ್ಕೆ ಬರಬೇಕಿದೆ. ಕೇಂದ್ರದ ಅನ್ಯಾಯವನ್ನು ರೈತರು ಮತ್ತು ರಾಜ್ಯದ ಜನರು ವಿರೋಧಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 2023-24ನೇ ಸಾಲಿನಲ್ಲಿ ಆಯ್ಕೆಯಾದ 238 ಗ್ರಾಮ ಪಂಚಾಯಿತಿಗಳಿಗೆ 'ಗಾಂಧಿ ಗ್ರಾಮ ಪುರಸ್ಕಾರ' ವಿತರಿಸಿ ಹಾಗೂ ಇ-ಸ್ವತ್ತು 2.0 ತಂತ್ರಾಂಶಕ್ಕೆ ಚಾಲನೆ ನೀಡಿ ಮಾತನಾಡಿದರು.

'ಪ್ರಧಾನಿ ಅವರ ಹೆಸರಿನಲ್ಲಿರುವ ಜೆಜೆಎಂಗೆ ಖರ್ಚಾಗುವ ಹಣ ₹35,698 ಕೋಟಿ. ರಾಜ್ಯ ಸರ್ಕಾರ ತನ್ನ ಪಾಲಿನ ಹಣ ನೀಡಿದೆ. ಆದರೆ, ಕೇಂದ್ರ ಈವರೆಗೂ ತನ್ನ ಪಾಲಿನ ಹಣ ಬಿಡುಗಡೆ ಮಾಡಿಲ್ಲ. ಈ ಬಗ್ಗೆ ಪತ್ರ ಸಹ ಬರೆಯಲಾಗಿದೆ. ಇದನ್ನು ಜನರು ಅರ್ಥ ಮಾಡಿಕೊಳ್ಳಬೇಕು' ಎಂದು ತಿಳಿಸಿದರು.

'ರಾಜೀವ್ ಗಾಂಧಿ ಅವರು ಪ್ರಧಾನಿಯಾಗಿದ್ದಾಗ ಸಂವಿಧಾನ ಪರಿಚ್ಛೇದ 73, 74 ಕ್ಕೆ ತಿದ್ದುಪಡಿ ತಂದು, ಸ್ಥಳೀಯ ಸಂಸ್ಥೆಗಳಿಗೆ ಮೀಸಲಾತಿ ತಂದರು. ಈ ತಿದ್ದುಪಡಿ ಬರುವವರೆಗೂ ಮಹಿಳೆಯರಿಗೆ, ಹಿಂದುಳಿದವರಿಗೆ ಮೀಸಲಾತಿಯೇ ಇರಲಿಲ್ಲ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ನಾನೂ ತಾಲ್ಲೂಕು ಬೋರ್ಡ್ ಸದಸ್ಯನಾಗಿ ಈಗ ಮುಖ್ಯಮಂತ್ರಿಯವರೆಗೂ ಬೆಳೆದಿದ್ದೇನೆ. ಹೀಗಾಗಿ ಗ್ರಾಮ ಪಂಚಾಯಿತಿಗಳು ಹಾಗೂ ಸ್ಥಳೀಯ ಸಂಸ್ಥೆಗಳು ಶಕ್ತಿಯುತವಾಗಬೇಕು' ಎಂದು ಹೇಳಿದರು.

ಸಚಿವ ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಜೀರ್ ಅಹಮದ್, 5ನೇ ಹಣಕಾಸು ಆಯೋಗದ ಅಧ್ಯಕ್ಷ ನಾರಾಯಣಸ್ವಾಮಿ, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್. ಪಾಟೀಲ ಇದ್ದರು.

ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆಯಾದ ಪಂಚಾಯಿತಿಗಳಿಗೆ ಪ್ರಶಸ್ತಿ ಪ್ರಮಾಣ ಪತ್ರ, ಸ್ಮರಣಿಕೆ ಹಾಗೂ ₹ 5 ಲಕ್ಷ ಪ್ರೋತ್ಸಾಹಧನ ವಿತರಿಸಲಾಯಿತು.

> **ಇ-ಸ್ವತ್ತು ತಂತ್ರಾಂಶದಿಂದ ಗ್ರಾಮೀಣ ಪ್ರದೇಶದ ಆಸ್ತಿ ತೆರಿಗೆ ಆದಾಯವು ₹1,778 ಕೋಟಿಗೆ ಏರಿಕೆಯಾಗುವ ಅಂದಾಜಿದೆ. ಪರಿಣಾಮಕಾರಿ ಜಾರಿಯಿಂದ, ಆದಾಯದ ಪ್ರಮಾಣ ₹2,000 ಕೋಟಿಗೂ ಹೆಚ್ಚುವ ನಿರೀಕ್ಷೆ ಇದೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಕಾರ್ಯಕ್ರಮದಲ್ಲಿ 'ಗಾಂಧಿ ಗ್ರಾಮ ಪುರಸ್ಕಾರ' ಪಡೆದ (ಎಡದಿಂದ) ಮೇಲುಕೋಟೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಭವಾನಿ ಸಿ.ಆರ್, ಆನೂರು ಪಿಡಿಒ ಕಾತ್ಯಾಯಿನಿ, ಪಾಲಹಳ್ಳಿ ಪಿಡಿಒ ಕೆ. ರಾಜೇಶ್ ಕುರ್ಕಿ ಪಿಡಿಒ ಸುರೇಖಾ ಗಿರೀಶ್ ಮತ್ತು ಕೋಳೂರು ಪಿಡಿಒ ತಸ್ಲೀಂ ಬಾನು —ಪ್ರಜಾವಾಣಿ ಚಿತ್ರ

ಗ್ರಾಮೀಣ ಆಸ್ತಿಗಳಿಗೂ 'ಇ-ಸ್ವತ್ತು'

'ಮನೆ ಬಾಗಿಲಿಗೆ ಇ-ಸ್ವತ್ತು ತಂದು ಕೊಡುವ ಕೆಲಸ ಮಾಡಲಾಗುತ್ತಿದೆ. ಇದು ಸರ್ಕಾರದ ಆರನೇ ಗ್ಯಾರಂಟಿ ಆಗಿದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಿಪಾದಿಸಿದರು.

'ಎಲ್ಲ ಪಂಚಾಯ್ತಿ ಆಸ್ತಿ ದಾಖಲೆಗಳಿಗೆ 11 ಬಿ ಖಾತೆಗಳನ್ನು ನೀಡಲಾಗುತ್ತಿದೆ. ಅರ್ಜಿ ಹಾಕಿದ 15 ದಿನದ ಒಳಗೆ ಖಾತೆ ನೀಡಲಾಗುವುದು. ಕಚೇರಿಗಳಿಗೆ ಅಲೆದಾಟ ತಪ್ಪಿಸಲು ಆನ್‌ಲೈನ್ ಹಾಗೂ ಬಾಪೂಜಿ ಕೇಂದ್ರಗಳಲ್ಲಿ ವಿತರಣೆಗೆ ಅವಕಾಶ ನೀಡಲಾಗಿದೆ. ನಮೂನೆ 11ಎ ಮತ್ತು ನಮೂನೆ 11 ಬಿ ಮೂಲಕ ತೆರಿಗೆ ಪಾವತಿಸಿ, ಆಸ್ತಿ ದಾಖಲು ಸರಿಪಡಿಸಿಕೊಳ್ಳಬೇಕು' ಎಂದು ಅವರು ತಿಳಿಸಿದರು.

ಗ್ರಾಮೀಣ ಜನರು ತಮ್ಮ ಆಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಸುಲಭವಾಗಿ ಮತ್ತು ಡಿಜಿಟಲ್ ರೂಪದ ಇ-ಸ್ವತ್ತು ಪಡೆಯಲು ಅವಕಾಶ ಕಲ್ಪಿಸಲಾಗಿದೆ. 2.0 ತಂತ್ರಾಂಶ ಮೂಲಕ ಆಸ್ತಿಗಳಿಗೆ ಇ ಸ್ವತ್ತು ಪ್ರಮಾಣ ಪತ್ರ (ನಮೂನೆ 11ಎ ಮತ್ತು ನಮೂನೆ 11 ಬಿ) ವಿತರಿಸಲಾಗುತ್ತದೆ. 95 ಲಕ್ಷ ಆಸ್ತಿಯನ್ನು ತೆರಿಗೆ ವ್ಯಾಪ್ತಿಗೆ ತರಲು ಪ್ರಯತ್ನಿಸಲಾಗುತ್ತಿದೆ ಎಂದು ಅವರು ಹೇಳಿದರು.

1.48 ಕೋಟಿ ಮನೆಗಳಿದ್ದು, 53 ಲಕ್ಷ ಮನೆಗಳ ಇ- ಸ್ವತ್ತು ಮಾಡಲಾಗಿದೆ. ಸಚಿವ ಪ್ರಿಯಾಂಕ್ ಖರ್ಗೆ ನೇತೃತ್ವದಲ್ಲಿ ₹1,272 ಕೋಟಿ ತೆರಿಗೆ ಸಂಗ್ರಹಿಸಲಾಗಿದೆ ಎಂದರು.

> **ನರೇಗಾದಡಿ 2021ರಲ್ಲಿ 14.65 ಕೋಟಿ ಮಾನವ ದಿನಗಳಿಗೆ ಅವಕಾಶವಿದ್ದು, ₹5,910 ಕೋಟಿ ಅನುದಾನ ಬಂದಿತ್ತು. ಈಗ ಅದನ್ನು 9 ಕೋಟಿ ಮಾನವ ದಿನಗಳಿಗೆ ಇಳಿಸಿದೆ**
> **ಡಿ.ಕೆ. ಶಿವಕುಮಾರ್,** ಉಪ ಮುಖ್ಯಮಂತ್ರಿ

'ಮತಕಳವು: ಪತ್ರ ಬರೆದವರು ಆಳಂದಕ್ಕೆ ಭೇಟಿ ನೀಡಲಿ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಮತಕಳವು ಕುರಿತು ಚುನಾವಣಾ ಆಯೋಗದ ಮೇಲೆ ಆರೋಪ ಸರಿಯಲ್ಲ' ಎಂದು ಪತ್ರ ಬರೆದ 272 ಜನ ಬುದ್ಧಿಜೀವಿಗಳು ಆಳಂದ ಕ್ಷೇತ್ರಕ್ಕೆ ಭೇಟಿ ನೀಡಿ ಪರಿಶೀಲಿಸಲಿ' ಎಂದು ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷ, ಶಾಸಕ ಬಿ.ಆರ್.ಪಾಟೀಲ ಹೇಳಿದ್ದಾರೆ.

ಬಿ.ಆರ್ ಪಾಟೀಲ

ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು, 'ನಿವೃತ್ತ ನ್ಯಾಯಮೂರ್ತಿ ಎಸ್.ಎನ್. ಧಿಂಗ್ರಾ, ನಿರ್ಮಲ್ ಕೌರ್ ಹಾಗೂ ಇತರ ಬುದ್ಧಿಜೀವಿಗಳು ಈಗ ರಾಹುಲ್ ಗಾಂಧಿ ಅವರಿಗೆ ಪತ್ರ ಬರೆದು ಆಕ್ಷೇಪ ವ್ಯಕ್ತಪಡಿಸಿರುವುದು ಖಂಡನೀಯ' ಎಂದರು.

'ಆಳಂದ ಕ್ಷೇತ್ರದ ಮತಕಳವು ಆರೋಪ ಕುರಿತು ಎಸ್‌ಐಟಿ ತನಿಖೆ ಮಾಡುತ್ತಿದ್ದೆ. ಇದೇ ರೀತಿ ವಿವಿಧೆಡೆ ತನಿಖೆ ನಡೆದಿದೆ. ಈಗ ಪತ್ರ ಬರೆದಿರುವುದು ಏಕೆ? ತಮ್ಮ ಅಭಿಪ್ರಾಯ ಹೇಳುವುದಿದ್ದರೆ, ತನಿಖೆ ಮುಗಿದ ಬಳಿಕ ಹೇಳಲಿ' ಎಂದು ಆಗ್ರಹಿಸಿದರು.

ವ್ಯವಸ್ಥೆ ಮಾಡುವೆ: 'ಪತ್ರ ಬರೆದವರು ಆಳಂದ ಕ್ಷೇತ್ರಕ್ಕೆ ಭೇಟಿ ನೀಡಿದಲ್ಲಿ ಉಳಿಯಲು ಸಕಲ ವ್ಯವಸ್ಥೆ ಮಾಡುವೆ. ಕ್ಷೇತ್ರದಲ್ಲಿ ತಿರುಗಾಡಿ ತಂತ್ರ, ಪ್ರತಿತಂತ್ರಗಳ ಬಗ್ಗೆ ಖುದ್ದು ತಿಳಿಯಲಿ' ಎಂದರು.

'ಆಳಂದ ಕ್ಷೇತ್ರದಲ್ಲಿ ಮತಕಳವು ಆಗಿದೆ ಎಂದು ನಾನು ಪೊಲೀಸ್ ಠಾಣೆಗೆ ದೂರು ನೀಡಿಲ್ಲ. ರಾಜ್ಯ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದೆ. ಚುನಾವಣಾ ಅಧಿಕಾರಿ ಪ್ರಾಥಮಿಕ ತನಿಖೆ ನಡೆಸಿ, 5,994 ಮತಗಳ ಅಳಿಸಲು ಅರ್ಜಿ ನೀಡಿರುವುದು ತಿಳಿದು ಬಂದಿತ್ತು. ಅದಾದ ನಂತರ ಸ್ವತಃ ಚುನಾವಣಾ ಅಧಿಕಾರಿಯೇ ಆಳಂದ ಠಾಣೆಯಲ್ಲಿ ದೂರು ನೀಡಿದ್ದಾರೆ. ನಾನು ಕೊಟ್ಟ ದೂರಿನಂತೆ ತನಿಖೆ ನಡೆಯುತ್ತಿಲ್ಲ' ಎಂದು ಪಾಟೀಲ ಸ್ಪಷ್ಟಪಡಿಸಿದರು.

ಜೆಜೆಎಂ ಅಕ್ರಮ: 99 ಗುತ್ತಿಗೆದಾರರ ವಿರುದ್ಧ ಕ್ರಮ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಲಜೀವನ್ ಮಿಷನ್ ಯೋಜನೆಯಲ್ಲಿ ಅಕ್ರಮ ಹಾಗೂ ಕಳಪೆ ಗುಣಮಟ್ಟದ ಕಾಮಗಾರಿ ನಡೆಸಿದ ಕಾರಣಕ್ಕೆ ಕರ್ನಾಟಕದಲ್ಲಿ 99 ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

ಲೋಕಸಭೆಯಲ್ಲಿ ಸೋಮವಾರ ನಡೆದ ಪ್ರಶ್ನೋತ್ತರ ಅವಧಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರ ನೀಡಿದ ಅವರು, 'ಅಕ್ರಮಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ 169 ದೂರುಗಳು ಸಲ್ಲಿಕೆಯಾಗಿವೆ. ಒಂಬತ್ತು ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗಿದೆ. ಒಂದು ಪ್ರಕರಣದ ಬಗ್ಗೆ ಸ್ವತಂತ್ರ ಸಂಸ್ಥೆಯಿಂದ ತನಿಖೆ ನಡೆಸಲಾಗಿದೆ' ಎಂದರು.

ಯೋಜನೆಯ ಅನುಷ್ಠಾನದಲ್ಲಿ ಅಕ್ರಮ ಆಗಿದೆ ಎಂದು ಆರೋಪಿಸಿ 32 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಂದ 17,036 ದೂರುಗಳು ಬಂದಿವೆ. ಈ ಪೈಕಿ ಶೇ 8ರಷ್ಟು ದೂರುಗಳು ಉತ್ತರ ಪ್ರದೇಶದಿಂದಲೇ (14,212) ಸಲ್ಲಿಕೆಯಾಗಿವೆ. ಈ ರಾಜ್ಯದಲ್ಲಿ 171 ಅಧಿಕಾರಿಗಳು ಹಾಗೂ 119 ಗುತ್ತಿಗೆದಾರರ ವಿರುದ್ಧ ಕ್ರಮ ವಹಿಸಲಾಗಿದೆ. 143 ಪ್ರಕರಣಗಳನ್ನು ಸ್ವತಂತ್ರ ಸಂಸ್ಥೆಗಳು ತನಿಖೆ ನಡೆಸಿವೆ ಎಂದು ಅವರು ಮಾಹಿತಿ ನೀಡಿದರು.

'ರಾಜ್ಯಕ್ಕೆ ವಿಶೇಷ ಅನುದಾನ ಬಾಕಿ ಇಲ್ಲ'

ಲೋಕಸಭೆಯಲ್ಲಿ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಲಿಖಿತ ಉತ್ತರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ರಾಜ್ಯಕ್ಕೆ 15ನೇ ಹಣಕಾಸು ಆಯೋಗ ಶಿಫಾರಸು ಮಾಡಿರುವ ಯಾವುದೇ ವಿಶೇಷ ಅನುದಾನವನ್ನು ಬಾಕಿ ಇರಿಸಿಕೊಂಡಿಲ್ಲ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಪಂಕಜ್ ಚೌಧರಿ

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಬಳ್ಳಾರಿ ಸಂಸದ ಇ.ತುಕಾರಾಮ್ ಕೇಳಿದ ಪ್ರಶ್ನೆಗೆ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಸೋಮವಾರ ಲಿಖಿತ ಉತ್ತರ ನೀಡಿದ್ದಾರೆ.

ರಾಜ್ಯಕ್ಕೆ ಆಗಿರುವ ವರಮಾನ ನಷ್ಟಕ್ಕೆ ₹5,495 ಕೋಟಿ ವಿಶೇಷ ಅನುದಾನ ನೀಡಬೇಕು ಎಂದು 15ನೇ ಹಣಕಾಸು ಆಯೋಗವು ಮೊದಲನೇ ವರದಿಯಲ್ಲಿ ಶಿಫಾರಸು ಮಾಡಿತ್ತು. ಬೆಂಗಳೂರು ಹಾಗೂ ಇತರ ಕಡೆಗಳಲ್ಲಿ ಕೆರೆಗಳ ಅಭಿವೃದ್ಧಿಗೆ ₹3,000 ಕೋಟಿ ಹಾಗೂ ಬೆಂಗಳೂರಿನ ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ಯೋಜನೆಗೆ ₹3 ಸಾವಿರ ಕೋಟಿ ವಿಶೇಷ ಅನುದಾನ ನೀಡಬೇಕು ಎಂದು ಆಯೋಗವು ಎರಡನೇ ವರದಿಯಲ್ಲಿ ತಿಳಿಸಿತ್ತು. ರಾಜ್ಯಕ್ಕೆ ಒಟ್ಟು ₹11,495 ಕೋಟಿ ವಿಶೇಷ ಅನುದಾನ ಬಾಕಿ ಇದೆ ಎಂದು ರಾಜ್ಯ ಸರ್ಕಾರವು ಕೇಂದ್ರ ಹಣಕಾಸು ಸಚಿವಾಲಯಕ್ಕೆ ಹಲವು ಸಲ ಪತ್ರ ಬರೆದಿತ್ತು ಹಾಗೂ ಮನವಿ ಸಲ್ಲಿಸಿತ್ತು.

ದೆಹಲಿಗೆ ₹5.56 ಲಕ್ಷ ಕೋಟಿ–ರಾಜ್ಯಕ್ಕೆ ₹₹14,379 ಕೋಟಿ

ಕೇಂದ್ರ ವಲಯ ಯೋಜನೆಗಳ ಅಡಿಯಲ್ಲಿ ದೆಹಲಿಗೆ 2024–25ನೇ ಸಾಲಿನಲ್ಲಿ ₹5.56 ಲಕ್ಷ ಕೋಟಿ ಬಿಡುಗಡೆಯಾಗಿದ್ದರೆ, ರಾಜ್ಯಕ್ಕೆ ಬಂದಿರುವ ಅನುದಾನ ₹14,379 ಕೋಟಿ.

ಲೋಕಸಭೆಗೆ ಕೇಂದ್ರ ಹಣಕಾಸು ಸಚಿವರು ಸೋಮವಾರ ನೀಡಿರುವ ಉತ್ತರದಲ್ಲಿ ಈ ಮಾಹಿತಿ ಇದೆ. ಮಹಾರಾಷ್ಟ್ರಕ್ಕೆ ₹76,787 ಕೋಟಿ ಬಿಡುಗಡೆಯಾಗಿದೆ. ಹರಿಯಾಣಕ್ಕೆ ₹22,970 ಕೋಟಿ, ಒಡಿಶಾಕ್ಕೆ ₹17,408 ಕೋಟಿ, ತೆಲಂಗಾಣಕ್ಕೆ ₹17,795 ಕೋಟಿ ನೀಡಲಾಗಿದೆ. ಸಣ್ಣ ರಾಜ್ಯಗಳಿಗಿಂತಲೂ ರಾಜ್ಯಕ್ಕೆ ಕಡಿಮೆ ಅನುದಾನ ಬಂದಿದೆ.

ಕೇಂದ್ರ ಪ್ರಾಯೋಜಿತ ಯೋಜನೆಗಳಲ್ಲೂ ಕುಸಿತ: ಕೇಂದ್ರ ಸರ್ಕಾರದ ಪ್ರಾಯೋಜಿತ ಯೋಜನೆಗಳಲ್ಲೂ ರಾಜ್ಯಕ್ಕೆ ಬರುತ್ತಿರುವ ಅನುದಾನ ಗಣನೀಯವಾಗಿ ಕುಸಿದಿದೆ. 2021–22ರಲ್ಲಿ ₹18,297 ಕೋಟಿ, 2022–23ರಲ್ಲಿ ₹19,191ಕೋಟಿ ಹಾಗೂ 2023–24ರಲ್ಲಿ ₹19,421 ಕೋಟಿ ಬಂದಿದ್ದರೆ, 2024–25ರಲ್ಲಿ ಕೊಟ್ಟಿರುವುದು ₹14,807 ಕೋಟಿ ಮಾತ್ರ.

ಸಚಿವಾಲಯಗಳ ಮಾರ್ಗಸೂಚಿಗಳು, ರಾಜ್ಯದಿಂದ ಅನುದಾನ ಬೇಡಿಕೆ, ಹಿಂದೆ ಬಿಡುಗಡೆಯಾದ ನಿಧಿಯ ಬಳಕೆಯ ಪ್ರಮಾಣಪತ್ರಗಳ ಸಲ್ಲಿಕೆ ಮತ್ತು ಅದಕ್ಕೆ ಅನುಗುಣವಾಗಿ ರಾಜ್ಯ ಪಾಲಿನ ಮೊತ್ತಕ್ಕೆ ಅನುಗುಣವಾಗಿ ಕೇಂದ್ರ ಪ್ರಾಯೋಜಿತ ಯೋಜನೆಗಳಲ್ಲಿ ಅನುದಾನ ಬಿಡುಗಡೆ ಮಾಡಲಾಗುತ್ತದೆ ಎಂದು ಹಣಕಾಸು ಸಚಿವರು ತಿಳಿಸಿದ್ದಾರೆ.

ರಾಜ್ಯಕ್ಕೆ ಕೇಂದ್ರದಿಂದ ಪಾಲು (₹ಕೋಟಿಗಳಲ್ಲಿ)

ಆರ್ಥಿಕ ವರ್ಷ	ತೆರಿಗೆ ಪಾಲು	ಸಹಾನುಧಾನ	ವಿಶೇಷ ಅನುದಾನ ಯೋಜನೆ
2021-22	33,284	7,862	452
2022-23	34,596	4,435	3,399
2023-24	41,193	3,769	3,879
2024-25	46,933	7,745	5,296
ಒಟ್ಟು	1,56,005	23,811	13,026

ರಾಜ್ಯದಲ್ಲಿ ಜಿಎಸ್‌ಟಿ ಸಂಗ್ರಹ (₹ಕೋಟಿಗಳಲ್ಲಿ)

ಆರ್ಥಿಕ ವರ್ಷ	2021-22	2022-23	2023-24	2024-25
ಸಿಜಿಎಸ್‌ಟಿ	22,697	28,448	33,321	36,905
ಎಸ್‌ಜಿಎಸ್‌ಟಿ	28,660	35,429	40,969	45,314
ಐಜಿಎಸ್‌ಟಿ	35,101	45,602	54,123	59,550
ಸೆಸ್	9,468	13,342	16,852	17,794
ಒಟ್ಟು	95,926	1,22,821	1,45,265	1,59,563

'ಜಿಎಸ್‌ಟಿ ನಷ್ಟಕ್ಕೆ ಪರಿಹಾರ ಇಲ್ಲ'

ಜಿಎಸ್‌ಟಿಯಿಂದ ಆಗುವ ವರಮಾನ ನಷ್ಟ ಸರಿದೂಗಿಸಲು ಈಗಾಗಲೇ ಪರಿಹಾರ ನೀಡಲಾಗಿದೆ. ಹೊಸದಾಗಿ ಯಾವುದೇ ಪರ್ಯಾಯ ವ್ಯವಸ್ಥೆ ರೂಪಿಸಿಲ್ಲ ಎಂದು ಪಂಕಜ್ ಚೌಧರಿ ಸ್ಪಷ್ಟಪಡಿಸಿದ್ದಾರೆ.

ಜಿಎಸ್‌ಟಿ ಜಾರಿಯಾದ ಮೇಲೆ ರಾಜ್ಯಗಳಿಗೆ ಶೇ 14ರಷ್ಟು ನಷ್ಟ ಪರಿಹಾರ ನೀಡುವ ವ್ಯವಸ್ಥೆ 2017ರ ಜುಲೈನಲ್ಲಿ ಆರಂಭವಾಯಿತು. ಹೊಸ ತೆರಿಗೆ ವ್ಯವಸ್ಥೆ ಜಾರಿಯಾದ ಬಳಿಕ ರಾಜ್ಯಗಳಿಗೆ ಆಗುವ ನಷ್ಟವನ್ನು ಭರಿಸಲು ಈ ಯೋಜನೆ ಜಾರಿ ಮಾಡಲಾಗಿತ್ತು. ನಷ್ಟ ಪರಿಹಾರ ವ್ಯವಸ್ಥೆ 2022ರ ಜೂನ್ ಅಂತ್ಯಕ್ಕೆ ಕೊನೆಗೊಂಡಿತ್ತು. ಈ ವ್ಯವಸ್ಥೆಯನ್ನು ಮತ್ತೆ ಐದು ವರ್ಷ ವಿಸ್ತರಿಸಬೇಕು ಎಂದು ರಾಜ್ಯ ಸರ್ಕಾರ ಮನವಿ ಮಾಡಿತ್ತು. ಜತೆಗೆ, ಜಿಎಸ್‌ಟಿ ತೆರಿಗೆ ಹಂತಗಳನ್ನು ಈ ವರ್ಷ ಸರಳೀಕರಣ ಮಾಡಲಾಗಿತ್ತು. ಇದರಿಂದ ರಾಜ್ಯಕ್ಕೆ ವಾರ್ಷಿಕ ₹15 ಸಾವಿರ ಕೋಟಿ ವರಮಾನ ಖೋತಾ ಆಗಲಿದ್ದು, ಇದಕ್ಕೆ ಪರಿಹಾರ ನೀಡಬೇಕು ಎಂದೂ ರಾಜ್ಯ ಸರ್ಕಾರ ಆಗ್ರಹಿಸಿತ್ತು. 'ಅಂತಹ ಯಾವುದೇ ಪ್ರಸ್ತಾವ ಸರ್ಕಾರದ ಮುಂದಿಲ್ಲ' ಎಂದು ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

ಬಸ್ ಚಕ್ರದಡಿ ಸಿಲುಕಿ ನಾಡಬಾಂಬ್ ಸ್ಫೋಟ

ಶಿಕಾರಿಪುರ (ಶಿವಮೊಗ್ಗ): ತಾಲ್ಲೂಕಿನ ಹಿರೇಕಲವತ್ತಿ ಗ್ರಾಮದ ಬಳಿ ಸೋಮವಾರ ರಸ್ತೆ ಮೇಲೆ ಬಿದ್ದಿದ್ದ ನಾಡಬಾಂಬ್ ಕೆಎಸ್‌ಆರ್‌ಟಿಸಿ ಬಸ್ ಚಕ್ರದ ಅಡಿ ಸಿಲುಕಿ ಸ್ಫೋಟಗೊಂಡಿದೆ.

ಸ್ಫೋಟದ ತೀವ್ರತೆ ಕಡಿಮೆ ಇದ್ದುದರಿಂದ ಅವಘಡ ತಪ್ಪಿದೆ. ಬಸ್‌ನಲ್ಲಿ ಅಧಿಕ ಪ್ರಯಾಣಿಕರು ಇರಲಿಲ್ಲ. ಯಾರಿಗೂ ಗಂಭೀರ ಗಾಯಗಳಾಗಿಲ್ಲ.

ಮುಡಬಸಿದ್ದಾಪುರದಿಂದ ಶಿಕಾರಿಪುರಕ್ಕೆ ಹೊರಟಿದ್ದ ಬಸ್ ಹಿರೇಕಲವತ್ತಿ ಬಳಿ ಬಂದಾಗ ಅವಗಢ ಸಂಭವಿಸಿದೆ. ಚಾಲಕನ ನಿಯಂತ್ರಣ ತಪ್ಪಿದ ಬಸ್ ರಸ್ತೆ ಪಕ್ಕದ ಟ್ರಾನ್ಸ್‌ಫಾರ್ಮರ್‌ಗೆ ಡಿಕ್ಕಿ ಹೊಡೆದು ನಿಂತಿದೆ.

ರಸ್ತೆಯಲ್ಲಿ ಉದ್ದೇಶಪೂರ್ವಕವಾಗಿ ನಾಡಬಾಂಬ್ ಇರಿಸಲಾಗಿದೆಯೇ ಅಥವಾ ಯಾರಾದರೂ ಜಮೀನಿನಲ್ಲಿ ಹಂದಿಗಳ ಕಾಟ ತಡೆಗೆ ಒಯ್ಯುವಾಗ ಬೀಳಿಸಿರಬಹುದೇ ಎಂದು ಖಚಿತವಾಗಿಲ್ಲ.

ಈ ಕುರಿತು ಶಿಕಾರಿಪುರ ಗ್ರಾಮಾಂತರ ಪೊಲೀಸರಿಗೆ ಮಾಹಿತಿ ನೀಡಿದ್ದು, ತನಿಖೆ ನಡೆಸಲು ಕೋರಲಾಗಿದೆ ಎಂದು ಬಸ್ ಚಾಲಕ ಬಸವರಾಜ್ ತಿಳಿಸಿದರು.

ಆಕಳಿನ ರುಂಡ, ದೇಹ ಪತ್ತೆ: ಕಿಡಿಗೇಡಿಗಳ ಬಂಧನಕ್ಕೆ ಆಗ್ರಹ

ಗದಗ: ಇಲ್ಲಿನ ಎಪಿಎಂಸಿ ಆವರಣದ ದನದ ಮಾರುಕಟ್ಟೆ ಪ್ರಾಂಗಣದಲ್ಲಿ ಸೋಮವಾರ ಆಕಳಿನ ರುಂಡ, ದೇಹ ಬೇರ್ಪಟ್ಟ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಕಿಡಿಗೇಡಿಗಳ ವಿರುದ್ಧ ಕ್ರಮಕ್ಕೆ ಕರ್ನಾಟಕ ರಾಜ್ಯ ಹಿಂದೂ ಸಂಘಟನೆಗಳ ಒಕ್ಕೂಟದ ಸಂಚಾಲಕ ರಾಜು ಖಾನಪ್ಪನವರ ಆಗ್ರಹಿಸಿದ್ದಾರೆ.

'ಜಿಲ್ಲೆಯಲ್ಲಿ ಅಕ್ರಮವಾಗಿ ಜಾನುವಾರುಗಳನ್ನು ವಧೆ ಮಾಡುವವರ ವಿರುದ್ಧವೂ ಕಠಿಣ ಕ್ರಮ ಕೈಗೊಳ್ಳಬೇಕು. ಅಕ್ರಮವಾಗಿ ವಧೆ ಮಾಡಿದರೂ ಸರ್ಕಾರ ಕ್ರಮ ಜರುಗಿಸುತ್ತಿಲ್ಲ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನೈರುತ್ಯ ರೈಲ್ವೆ; ನವೆಂಬರ್‌ನಲ್ಲಿ ₹790.75 ಕೋಟಿ ವರಮಾನ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಸರಕು ಸಾಗಣೆ ಮತ್ತು ಪ್ರಯಾಣಿಕರ ಸಂಚಾರದಿಂದ ನೈರುತ್ಯ ರೈಲ್ವೆಗೆ ನವೆಂಬರ್ ತಿಂಗಳಲ್ಲಿ ₹790.75 ಕೋಟಿ ವರಮಾನ ಬಂದಿದೆ.

ನವೆಂಬರ್‌ನಲ್ಲಿ 4.469 ದಶಲಕ್ಷ ಟನ್ ಸರಕು ಸಾಗಣೆಯಾಗಿದ್ದು, ₹451 ಕೋಟಿ ವರಮಾನ ಬಂದಿದೆ. ಕಳೆದ ವರ್ಷ ಇದೇ ತಿಂಗಳಲ್ಲಿ 3.941 ದಶಲಕ್ಷ ಟನ್ ಸರಕು ಸಾಗಣೆಯಾಗಿತ್ತು.

ನವೆಂಬರ್‌ನಲ್ಲಿ 14.8 ದಶಲಕ್ಷ ಜನರು ರೈಲಿನಲ್ಲಿ ಪ್ರಯಾಣಿಸಿದ್ದು, ಈ ಮೂಲಕ ₹297 ಕೋಟಿ ಆದಾಯ ಗಳಿಸಿದೆ. ಕಳೆದ ವರ್ಷಕ್ಕಿಂತ ಶೇ 28.01ರಷ್ಟು ಹೆಚ್ಚಾಗಿದೆ.

ಹಣಕಾಸು ವರ್ಷದಲ್ಲಿ ನವೆಂಬರ್‌ವರೆಗೆ 33.292 ದಶಲಕ್ಷ ಟನ್ ಸರಕು ಸಾಗಣೆ ಮಾಡಲಾಗಿದೆ. ಕಳೆದ ವರ್ಷಕ್ಕಿಂತ ಈ ಬಾರಿ ಶೇ 17.5ರಷ್ಟು ಹೆಚ್ಚಾಗಿದೆ.

ನೈರುತ್ಯ ರೈಲ್ವೆಯ ಒಟ್ಟು ಆದಾಯದಲ್ಲೂ ಗಣನೀಯ ಸುಧಾರಣೆ ಆಗಿದೆ. ನವೆಂಬರ್‌ವರೆಗಿನ ಅವಧಿಯಲ್ಲಿ ಪ್ರಯಾಣಿಕರ ಸಂಚಾರದಿಂದ ₹2,247 ಕೋಟಿ, ಸರಕು ಸಾಗಣೆಯಿಂದ ₹3,458 ಕೋಟಿ, ಇತರ ಕೋಚಿಂಗ್ ಆದಾಯದಿಂದ ₹221.96 ಕೋಟಿ, ಇತರ ವರಮಾನದಿಂದ ₹144.54 ಕೋಟಿ ಸೇರಿ ಈ ವರ್ಷ ಏಪ್ರಿಲ್‌ನಿಂದ ನವೆಂಬರ್‌ವರೆಗೆ ಒಟ್ಟು ವರಮಾನ ₹6,072.31 ಕೋಟಿ ಆಗಿದೆ. ಇದು ಹಿಂದಿನ ವರ್ಷಕ್ಕಿಂತ ಶೇ 15.12ರಷ್ಟು ಹೆಚ್ಚು ಎಂದು ನೈರುತ್ಯ ರೈಲ್ವೆ ತಿಳಿಸಿದೆ.

ಸ್ಟ್ಯಾಂಪ್ ವಂಚನೆ, ಭದ್ರತಾ ಲೋಪ ತಡೆಗೆ ಕಂದಾಯ ಇಲಾಖೆ ಹೊಸ ವ್ಯವಸ್ಥೆ

ರಾಜ್ಯದಲ್ಲಿ 'ಡಿಜಿಟಲ್ ಇ- ಸ್ಟ್ಯಾಂಪ್'ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೋಂದಣಿ ಮತ್ತು ನೋಂದಣಿಯೇತರ ಛಾಪಾ ಕಾಗದ ವಹಿವಾಟುಗಳಿಗೆ ಬಳಸುವ 'ಇ-ಸ್ಟ್ಯಾಂಪ್' ಬದಲಿಗೆ 'ಡಿಜಿಟಲ್ ಇ-ಸ್ಟ್ಯಾಂಪ್' ವ್ಯವಸ್ಥೆಯನ್ನು ಕಂದಾಯ ಇಲಾಖೆ ಜಾರಿಗೆ ತಂದಿದೆ.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು, 'ಸ್ಟ್ಯಾಂಪ್ ವಂಚನೆ ಮತ್ತು ಭದ್ರತಾ ಲೋಪವನ್ನು ಸಂಪೂರ್ಣ ತೊಡೆದು ಹಾಕಲು ಈ ಹೊಸ ವ್ಯವಸ್ಥೆ ಪರಿಚಯಿಸಲಾಗಿದೆ. ಈ ವ್ಯವಸ್ಥೆಗೆ ಅಗತ್ಯವಾದ ನಿಯಮಗಳನ್ನು ಪ್ರಕಟಿಸಲಾಗಿದ್ದು, ಮುಂದಿನ ದಿನಗಳಲ್ಲಿ 'ಡಿಜಿಟಲ್ ಇ-ಸ್ಟ್ಯಾಂಪ್' ಕಡ್ಡಾಯಗೊಳಿಸಲಾಗುವುದು' ಎಂದರು.

'ನಾಗರಿಕರು ಮಧ್ಯವರ್ತಿಗಳ ನೆರವಿಲ್ಲದೆ, ಮನೆಯಲ್ಲಿಯೇ ಕುಳಿತು 'ಡಿಜಿಟಲ್ ಇ- ಸ್ಟ್ಯಾಂಪ್' ತಯಾರಿಸಿಕೊಳ್ಳಬಹುದು. ಇಂಟರ್‌ನೆಟ್ ಇದ್ದರೆ 24x7 ಜಗತ್ತಿನಲ್ಲಿ ಎಲ್ಲಿಯೇ ಕುಳಿತು ಈ ಸೇವೆಯನ್ನು ಪಡೆಯಬಹುದು. ಎಲ್ಲ ಸೇವೆಗಳು ಸಂಪೂರ್ಣ ಡಿಜಿಟಲ್ ಆಗಿರಲಿದೆ. ಸುರಕ್ಷಿತ ಮತ್ತು ವೇಗವಾಗಿ ಆನ್‌ಲೈನ್ ಪಾವತಿ ಮಾಡಲು ಕೂಡಾ ಅವಕಾಶವಿದೆ' ಎಂದರು.

'ಹಿಂದೆ ಛಾಪಾ ಕಾಗದಗಳನ್ನು ಮುದ್ರಿಸಲಾಗುತ್ತಿತ್ತು. ನಕಲಿ ಹಾಗೂ ಛಾಪಾ ಕಾಗದಗಳ ಮರುಬಳಕೆಯ ವಂಚನೆ ತೆಲಗಿ ಹಗರಣದಿಂದ ಬಹಿರಂಗವಾಗಿತ್ತು. ಅದನ್ನು ತಡೆಯಲು ಭೌತಿಕ ಸ್ಟಾಂಪ್ ಕಾಗದಗಳ ಬಳಕೆ ನಿಲ್ಲಿಸಿ, 'ಇ-ಸ್ಟ್ಯಾಂಪ್' ವ್ಯವಸ್ಥೆಯನ್ನು ಜಾರಿಗೆ ತರಲಾಗಿತ್ತು' ಎಂದು ಅವರು ವಿವರಿಸಿದರು.

'ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಲಿಮಿಟೆಡ್ (ಎಸ್‌ಎಚ್‌ಸಿಐಎಲ್) ಸಹಯೋಗದಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ಇ- ಸ್ಟ್ಯಾಂಪ್' ಕಾಗದವನ್ನು ಮುದ್ರಿಸುತ್ತಿದೆ. ಆದರೆ, ಝೆರಾಕ್ಸ್ ಯಂತ್ರಗಳ ಮೂಲಕ ಇ-ಸ್ಟ್ಯಾಂಪ್ ಪ್ರಮಾಣಪತ್ರಗಳನ್ನು ನಕಲು ಅಥವಾ ಅವುಗಳಂತೆಯೇ ಕಾಣುವ ಪ್ರತಿಗಳನ್ನು ಸೃಷ್ಟಿಸಲು ಸಾಧ್ಯವಾಗಿತ್ತು. ಇದರಿಂದ ಮೂಲ ಹಾಗೂ ನಕಲಿ ಯಾವುದೆಂದು ಪತ್ತೆ ಮಾಡುವುದೇ ಸವಾಲಾಗಿದೆ. ಒಂದು ಉದ್ದೇಶಕ್ಕೆ ಖರೀದಿಸಿದ ಸ್ಟ್ಯಾಂಪ್ ಕಾಗದವನ್ನು ಬೇರೆ ರೀತಿಯ ದಸ್ತಾವೇಜಿಗೆ ಬಳಸುವ ಪ್ರಸಂಗಗಳೂ ನಡೆದಿವೆ. ನಕಲಿ, ನಕಲು ಪ್ರತಿ ಹಾಗೂ ತಪ್ಪು ವರ್ಗೀಕರಣದಿಂದ ಸರ್ಕಾರಕ್ಕೆ ಸೇರುವ ಸ್ಟ್ಯಾಂಪ್ ಶುಲ್ಕ ತಪ್ಪಿಸಿದ ಹಲವು ಘಟನೆಗಳೂ ನಡೆದಿವೆ' ಎಂದು ಅವರು ತಿಳಿಸಿದರು.

'ಡಿಜಿಟಲ್ ಇ- ಸ್ಟ್ಯಾಂಪ್ ವ್ಯವಸ್ಥೆ ಎಲ್ಲ ರೀತಿಯಲ್ಲೂ ಸುರಕ್ಷಿತವಾಗಿ ಇರಲಿದೆ. ಹೊಸ ವ್ಯವಸ್ಥೆ ಜಾರಿಯಿಂದ ಇ-ಸ್ಟ್ಯಾಂಪ್ ವಿತರಣೆಗಾಗಿ ಎಸ್‌ಎಚ್‌ಸಿಐಎಲ್‌ಗೆ ಸರ್ಕಾರ ನೀಡುವ ಕಮಿಷನ್ ಮೊತ್ತ ಉಳಿತಾಯ ಆಗಲಿದೆ' ಎಂದೂ ತಿಳಿಸಿದರು.

ವಿಶೇಷತೆಗಳೇನು?

- ಮನೆಯಿಂದಲೇ ಸ್ಟ್ಯಾಂಪ್ ಸೃಷ್ಟಿಸಬಹುದು. ಸೇವೆ 24x7 ಲಭ್ಯ
- ಸುರಕ್ಷಿತ ಆನ್‌ಲೈನ್ ಪಾವತಿ, ಹಣ ನೇರವಾಗಿ ಸರ್ಕಾರದ ಖಜಾನೆಗೆ ಸೇರಲಿದೆ
- ಗುರುತಿನ ವಂಚನೆ, ನಕಲಿ ಸಹಿ ತಡೆಯಲು 'ಇ -ಸಹಿ' ವ್ಯವಸ್ಥೆ
- ಕಾಗದರಹಿತ, ಪರಿಸರ ಸ್ನೇಹಿ, ಸುರಕ್ಷಿತ ಮತ್ತು ವಿಶ್ವಾಸಾರ್ಹ
- ಡಿಜಿಟಲ್ ರೂಪದ ದಸ್ತಾವೇಜುಗಳು ಕಾನೂನುಬದ್ಧ

> **ಹೊಸ ವ್ಯವಸ್ಥೆಯಲ್ಲಿ ನಾಗರಿಕರು ಆಧಾರ್ ಆಧಾರಿತ ಇ- ಸಹಿ ಅಥವಾ ಡಿಜಿಟಲ್ ಸಿಗ್ನೇಚರ್ ಸರ್ಟಿಫಿಕೇಟ್ (ಡಿಎಸ್‌ಸಿ) ಬಳಸಿ ದಸ್ತಾವೇಜುಗಳಿಗೆ ಡಿಜಿಟಲ್ ಸಹಿ ಮಾಡಬಹುದು**
> **ಕೃಷ್ಣ ಬೈರೇಗೌಡ,** ಕಂದಾಯ ಸಚಿವ

ಶಿವಮೊಗ್ಗ ಜಿಲ್ಲೆ: ಮತ್ತೆ ಮಂಗನಕಾಯಿಲೆ ಪತ್ತೆ

ಪ್ರಜಾವಾಣಿ ವಾರ್ತೆ

ಹೊಸನಗರ (ಶಿವಮೊಗ್ಗ): ಮಲೆನಾಡಿನಲ್ಲಿ ಮಂಗನ ಕಾಯಿಲೆ (ಕ್ಯಾಸನೂರು ಫಾರೆಸ್ಟ್ ಡಿಸೀಸ್- ಕೆಎಫ್‌ಡಿ) ಮತ್ತೆ ಪತ್ತೆ ಆಗಿದೆ. ಸೊನಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಿಳ್ಕೋಡಿ ಗ್ರಾಮದ 50 ವರ್ಷದ ಮಹಿಳೆಯಲ್ಲಿ ಕೆಎಫ್‌ಡಿ ಲಕ್ಷಣ ಕಂಡು ಬಂದಿದ್ದು, ಸೋಂಕು ದೃಢಪಟ್ಟಿದೆ.

'ಮಹಿಳೆಗೆ ತಲೆ ನೋವು, ಜ್ವರ ಕಾಣಿಸಿಕೊಂಡ ಬಳಿಕ ಸೊನಲೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ಸದ್ಯ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಸುರೇಶ್ ತಿಳಿಸಿದರು.

ಭೀತಿ: ಮಲೆನಾಡಿನಲ್ಲಿ ಮತ್ತೆ ಮಂಗನ ಕಾಯಿಲೆ ಕಾಣಿಸಿರುವುದು ಜನರಲ್ಲಿ ಭೀತಿ ಮೂಡಿಸಿದೆ. ಜಿಲ್ಲೆಯಲ್ಲಿ ಇತ್ತೀಚೆಗೆ ಪತ್ತೆಯಾದ ಮೊದಲ ಪ್ರಕರಣ ಇದಾಗಿದೆ. ಮಹಿಳೆಯು ಕಾಡಿನಲ್ಲಿ ಒಣ ಎಲೆ ತರಲು ಹೋದಾಗ ಉಣ್ಣೆಯಿಂದ ಸೋಂಕು ಹರಡಿರಬಹುದು ಎಂದು ಶಂಕಿಸಲಾಗಿದೆ.

ಕರ್ನಾಟಕ ಸರ್ಕಾರ
(ಧಾರ್ಮಿಕ ದತ್ತಿ ಇಲಾಖೆ)
ಶ್ರೀ ಶ್ರೀಕಂಠೇಶ್ವರಸ್ವಾಮಿ, ದೇವಾಲಯ, ನಂಜನಗೂಡು

ಚಿಕ್ಕಜಾತ್ರಾ ಮಹೋತ್ಸವ – 2025

ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ 2025ರ ಶ್ರೀ ಚಿಕ್ಕಜಾತ್ರಾ ಮಹೋತ್ಸವದ ಪ್ರಯುಕ್ತ ಜರುಗುವ ಪ್ರಮುಖ ಧಾರ್ಮಿಕ ಕಾರ್ಯಕ್ರಮಗಳು:

1.	ದಿ : 01–12–2025 ಸೋಮವಾರ	ಸಂಜೆ : 7.00 ಗಂಟೆಗೆ	"ಶ್ರೀಕಂಠಮುಡಿ ಉತ್ಸವ"
2.	ದಿ : 04–12–2025 ಗುರುವಾರ	ಬೆಳಗ್ಗೆ : 9.00 ರಿಂದ 9.30 ಗಂಟೆಯೊಳಗೆ	"ಶ್ರೀ ಮನ್ಮಹಾರಥಾರೋಹಣ"
3.	ದಿ : 06–12–2025 ಶನಿವಾರ	ಸಂಜೆ : 7.00 ಗಂಟೆಗೆ	"ಕಪಿಲಾ ನದಿಯಲ್ಲಿ ತೆಪ್ಪೋತ್ಸವ"

ಚಿಕ್ಕಜಾತ್ರಾ ಮಹೋತ್ಸವಗಳಿಗೆ ನೀವು ಮತ್ತು ನಿಮ್ಮ ಪುತ್ರ, ಮಿತ್ರ, ಕಳತ್ರ ಬಂಧು ಜನ ಸಮೇತರಾಗಿ ಬಂದು ಶ್ರೀ ಶ್ರೀಯವರ ಸೇವೆಯಂ ಮಾಡಿ ಕೃತಾರ್ಥರಾಗಲು ವಿನಂತಿಸುತ್ತೇವೆ.

ವಿಶೇಷ ಮನವಿ: ದೇವಾಲಯದ ವತಿಯಿಂದ ಪ್ರತಿ ದಿನ ನಡೆಸಲ್ಪಡುತ್ತಿರುವ ಅನ್ನದಾಸೋಹಕ್ಕೆ ಸೇವಾರ್ಥ ರೂಪದಲ್ಲಿ ದವಸ ಧಾನ್ಯ ಮತ್ತು ಇತರೇ ಪದಾರ್ಥಗಳು ಹಾಗೂ ನಗದು ಕಾಣಿಕೆಯನ್ನು ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸಲಾಗುವುದು.

ಜೆ. ನಾಗಚಂದ್ರ ದೀಕ್ಷಿತ್, ಆಗಮಿಕರು,
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು.

ಜಗದೀಶ್ ಕುಮಾರ್ ಎಂ.
ಕಾರ್ಯನಿರ್ವಾಹಕ ಅಧಿಕಾರಿ,
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ
ನಂಜನಗೂಡು.

ಡಾ.ಪಿ. ಶಿವರಾಜು.
(ಸೂಪರ್ ಟೈಂ ಸ್ಕೈಲ್) ಕ.ಆ.ಸೇ
ಆಡಳಿತಾಧಿಕಾರಿ ಹಾಗೂ
ಅಪರ ಜಿಲ್ಲಾಧಿಕಾರಿ,
ಮೈಸೂರು ಜಿಲ್ಲೆ, ಮೈಸೂರು.

ಜಿ. ಲಕ್ಷ್ಮೀಕಾಂತರೆಡ್ಡಿ
ಭಾ.ಆ.ಸೇ
ಮೈಸೂರು ಜಿಲ್ಲೆ
ಮೈಸೂರು.

ಶರತ್ ಬಿ. ಭಾ.ಆ.ಸೇ.
ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ,
ಬೆಂಗಳೂರು.

ಖಾಲಿ ಹುದ್ದೆಗಳ ಭರ್ತಿಗೆ ಆಗ್ರಹ • ಧಾರವಾಡದಲ್ಲಿ ತೀವ್ರ ಪ್ರತಿಭಟನೆ

ಉದ್ಯೋಗಾಕಾಂಕ್ಷಿಗಳ ವಶ, ಬಿಡುಗಡೆ

ಪ್ರಜಾವಾಣಿ ವಾರ್ತೆ

ಧಾರವಾಡ: ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳ ಭರ್ತಿಗೆ ಒತ್ತಾಯಿಸಿ ಸೋಮವಾರ ಪ್ರತಿಭಟಿಸುತ್ತಿದ್ದ ಉದ್ಯೋಗಾಕಾಂಕ್ಷಿಗಳನ್ನು ಪೊಲೀಸರು ವಶಕ್ಕೆ ಪಡೆದು, ಸಂಜೆ ಬಿಡುಗಡೆಗೊಳಿಸಿದರು.

ಜನಸಾಮಾನ್ಯರ ವೇದಿಕೆ, ಉದ್ಯೋಗಾಕಾಂಕ್ಷಿಗಳ ವೇದಿಕೆ ಸೇರಿ ವಿವಿಧ ಸಂಘಟನೆಯವರು ಮತ್ತು ಉದ್ಯೋಗಾಕಾಂಕ್ಷಿಗಳು ಜಿಲ್ಲಾಧಿಕಾರಿ ಕಚೇರಿಯವರೆಗೆ ಪ್ರತಿಭಟನ ಜಾಥಾ ಕೈಗೊಳ್ಳಲು ಶ್ರೀನಗರ ವೃತ್ತದಲ್ಲಿ (ಬಸವರಾಜ ಕಟ್ಟಿಮನಿ ವೃತ್ತ) ಜಮಾಯಿಸಿದ್ದರು.

'ಪ್ರತಿಭಟನ ಜಾಥಾಗೆ ಅನುಮತಿಯಿಲ್ಲ. ಇಲ್ಲಿಯೇ ಮನವಿಪತ್ರ ನೀಡಿದರೆ ಅಥವಾ ನಾಲ್ವರು ಮುಖಂಡರು ಡಿ.ಸಿ ಕಚೇರಿಗೆ ತೆರಳಿ ಸಲ್ಲಿಸಿದರೆ, ಸರ್ಕಾರಕ್ಕೆ ತಲುಪಿಸಲಾಗುವುದು' ಎಂದು ಹುಬ್ಬಳ್ಳಿ–ಧಾರವಾಡ ಮಹಾನಗರ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ ತಿಳಿಸಿದರು.

ಸೋಮವಾರ ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರನ್ನು ಪೊಲೀಸರು ವಶಕ್ಕೆ ಪಡೆದರು–ಪ್ರಜಾವಾಣಿ ಚಿತ್ರ

ಇದಕ್ಕೆ ಪ್ರತಿಭಟನಕಾರರು, 'ಮೆರವಣಿಗೆಗೆ ಅವಕಾಶ ನೀಡಿ. ನಮಗೆ ನ್ಯಾಯ ಬೇಕು' ಎಂದು ಪಟ್ಟು ಹಿಡಿದರು. ಪೊಲೀಸರು 25ಕ್ಕೂ ಹೆಚ್ಚು ಜನರನ್ನು ವಶಕ್ಕೆ ಪಡೆದು ಹುಬ್ಬಳ್ಳಿಗೆ ಕರೆದೊಯ್ದರು.

ಈ ಬೆಳವಣಿಗೆಯಿಂದ ಆಕ್ರೋಶಗೊಂಡ ಇತರರು 'ನೇಮಕಾತಿ ನಡೆಸಲು ಆಗ್ರಹಿಸಿದರೆ, ಪೊಲೀಸರು ಹೋರಾಟ ಹತ್ತಿಕ್ಕುತ್ತಾರೆ' ಎಂದರು. ಈ ಹಂತದಲ್ಲಿ ಜಮಾಯಿಸಿದ್ದ ಪ್ರತಿಭಟನಾಕಾರರು ಮತ್ತು ಉದ್ಯೋಗಾಕಾಂಕ್ಷಿಗಳನ್ನು ಪೊಲೀಸರು ಚದುರಿಸಿದರು.

'ವಶಕ್ಕೆ ಪಡೆದ ಪ್ರತಿಭಟನಕಾರರನ್ನು ಬಿಡುಗಡೆಗೊಳಿಸಿ, ಶ್ರೀನಗರ ವೃತ್ತಕ್ಕೆ ಕರೆತರಬೇಕು' ಎಂದು ರೈತ ಸಂಘಟನೆ, ಕನ್ನಡ ಸಂಘಟನೆ, ಕೃಷಿ ಕಾರ್ಮಿಕರ ಸಂಘಟನೆ (ಎಐಕೆಕೆಎಂಎಸ್), ಮಹಿಳಾ ಸಾಂಸ್ಕೃತಿಕ ಸಂಘಟನೆಯವರು ಸಂಜೆಯವರೆಗೂ ಪ್ರತಿಭಟನೆ ಮುಂದುವರಿಸಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಅವರು ಸಂಜೆ ಪ್ರತಿಭಟನಾ ಸ್ಥಳಕ್ಕೆ ಬಂದು ಮನವಿಪತ್ರ ಸ್ವೀಕರಿಸಿದರು.

> **ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳುವವರೆಗೆ ಹೋರಾಟ ಕೈಬಿಡುವುದಿಲ್ಲ. ಹೋರಾಟವನ್ನು ರಾಜ್ಯವ್ಯಾಪಿ ಆಂದೋಲನವಾಗಿ ವಿಸ್ತರಿಸುತ್ತೇವೆ**
> **ಯಲ್ಲಪ್ಪ ಹೆಗಡೆ,** ಸಂಚಾಲಕ, ಜನಸಾಮಾನ್ಯರ ವೇದಿಕೆ

ಮಳೆ ಮುನ್ಸೂಚನೆ

ಬೆಂಗಳೂರು: ಮೈಸೂರು, ಮಂಡ್ಯ, ಚಾಮರಾಜನಗರ, ಬೆಂಗಳೂರು ದಕ್ಷಿಣ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಮಂಗಳವಾರ (ಡಿ.2) ತುಂತುರು ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

'ಬಳ್ಳಾರಿ, ಬೆಂಗಳೂರು ಗ್ರಾಮೀಣ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಕೋಲಾರ, ಶಿವಮೊಗ್ಗ, ತುಮಕೂರು ಹಾಗೂ ವಿಜಯನಗರ ಜಿಲ್ಲೆಗಳು, ಉತ್ತರ ಒಳನಾಡು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಒಣ ಹವಾಮಾನ ಇರಲಿದೆ' ಎಂದು ಭಾರತೀಯ ಹವಾಮಾನ ಕೇಂದ್ರದ ಪ್ರಕಟಣೆ ತಿಳಿಸಿದೆ.

ಪತ್ರಿಕ ಪ್ರಕಟಣೆ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ ಬೆಂಗಳೂರು ಆದೇಶ ಸಂಖ್ಯೆ: DC/SPS/ MIS/2025-STR ದಿನಾಂಕ: 01.09.2025 ಕಾಲೇಜು ಗ್ರಂಥಾಲಯದಲ್ಲಿ ಹಳೆಯ ಅನುಪಯುಕ್ತ ಪುಸ್ತಕಗಳ ಹರಾಜು ಪ್ರಕ್ರಿಯೆಯನ್ನು **ದಿನಾಂಕ: 11.12.2025ರಂದು** 11.00 ಗಂಟೆಗೆ ನಡೆಸಲಿದ್ದು ಅಸಕ್ತಿಯುಳ್ಳವರು ಟೆಂಡರ್/ಹರಾಜಿನಲ್ಲಿ ಭಾಗವಹಿಸಲು ಕೋರಲಾಗಿದೆ.

ಸಹಿ/– ಪ್ರಾಂಶುಪಾಲರು
ಸರ್ಕಾರಿ ರಾಂನಾರಾಯಣ್ ಚೆಲ್ಲಾರಾಂ ವಾಣಿಜ್ಯ ಮತ್ತು ನಿರ್ವಹಣಾ ಮಹಾವಿದ್ಯಾಲಯ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560001

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಮ್.ಹೆಚ್. ಮರೀಗೌಡ ರಸ್ತೆ, ಬೆಂಗಳೂರು – 560 029
ಫೋನ್: 080–26096839/26096855 ಇಮೇಲ್: purchase@kmf.coop

IFT No. KMF/PUR/CFRM-661/2025-26 ದಿನಾಂಕ: 29.11.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (KPPP GOK Indent No.KMF/2025-26/IND1825)

ಕರ್ನಾಟಕ ಹಾಲು ಮಹಾಮಂಡಳವು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಘಟಕವಾರು ವಿವಿಧ ಪಶು ಆಹಾರ ಕಚ್ಚಾಮಾಲುಗಳನ್ನು ಖರೀದಿಸುವ ಸಂಬಂಧ ಟೆಂಡರ್ ಆಹ್ವಾನಿಸಿದ್ದು, ಆಸಕ್ತಿಯುಳ್ಳ ಟೆಂಡರ್‌ದಾರರು ಭಾಗವಹಿಸಬಹುದಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಹಾಗೂ ಐಟಂವಾರು ಇ.ಎಂ.ಡಿ ವಿವರಗಳನ್ನು KPP Portal https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದ ತಿದ್ದುಪಡಿ/ಟಿಪ್ಪಣಿಗಳೇನಾದರು ಇದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿಯೇ ಪ್ರಕಟಿಸಲಾಗುವುದು.

ಕ್ರ. ಸಂ.	ಕಚ್ಚಾಮಾಲುಗಳು	ಘಟಕವಾರು ಪರಿಮಾಣ ಮೆಟ್ರಿಕ್ ಟನ್‌ಗಳಲ್ಲಿ (MTs)				
		ರಾಜಾನುಕುಂಟೆ	ಗುಬ್ಬಿ	ಧಾರವಾಡ	ಹಾಸನ	ಶಿಕಾರಿಪುರ
1	ಮೊಲಾಸಿಸ್ ಗ್ರೇಡ್–1	4000	4500	2000	6000	3000

ಟೆಂಡರ್ ವೇಳಾಪಟ್ಟಿ: ಟೆಂಡರ್ ಪ್ರಾರಂಭವಾಗುವ ದಿನಾಂಕ: 29-11-2025; ಪೂರ್ವಭಾವಿ ಸಭೆಯ ದಿನಾಂಕ : 03-12-2025 at 11.30AM; ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 06-12-2025 at 05:00PM; ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 08-12-2025 at 03.00PM; ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ: 08-12-2025 at 03.15PM.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಮೈಮರೆಸುವ ಸಂತೋಷ ಸಂಭ್ರಮದಲ್ಲಿ ಪ್ರಮಾದದ ಆಲಸ್ಯಗಳ ಬೀಜಗಳು ಹುದುಗಿಕೊಂಡಿರುತ್ತವೆ.

- ಡಿ.ವಿ. ಗುಂಡಪ್ಪ

ಸಂಪಾದಕೀಯ

ಬಾಲಕಿಯರಿಗೆ ಲೈಂಗಿಕ ಶೋಷಣೆ ಶಿಕ್ಷಣ ವ್ಯವಸ್ಥೆಯ ಹಿಮ್ಮುಖ ಚಲನೆ

ಹದಿನೆಂಟು ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಬಾಲಕಿಯರು ಗರ್ಭ ಧರಿಸುತ್ತಿರುವ ಪ್ರಕರಣಗಳು ಕರ್ನಾಟಕದಲ್ಲಿ ನಿರಂತರವಾಗಿ ಹೆಚ್ಚುತ್ತಿರುವುದು ರಾಜ್ಯದಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿರುವುದರ ಸಂಕೇತವಾಗಿದೆ. ಬಾಲಕಿಯರಿಗೆ ಸುರಕ್ಷತೆ ಹಾಗೂ ಶಿಕ್ಷಣವನ್ನು ಖಾತರಿಪಡಿಸಬೇಕಾದ ಸರ್ಕಾರಿ ಹಾಸ್ಟೆಲ್‌ಗಳಲ್ಲಿಯೇ ಗರ್ಭಧಾರಣೆಯ ಪ್ರಕರಣಗಳು ವರದಿಯಾಗುತ್ತಿವೆ. ಈ ಘಟನೆಗಳು, ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದ ಸರ್ಕಾರಿ ಕಾರ್ಯಕ್ರಮಗಳನ್ನು ಅಣಕ ಮಾಡುವಂತಿವೆ ಹಾಗೂ ಅಪ್ರಾಪ್ತ ವಯಸ್ಸಿನ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯಗಳಿಗೆ ನಿದರ್ಶನದಂತಿವೆ. ದೇವರಾಜ ಅರಸ್ ಮೆಟ್ರಿಕ್‌ಪೂರ್ವ ಬಾಲಕಿಯರ ವಸತಿ ನಿಲಯದ ಶೌಚಾಲಯದಲ್ಲಿ ಹತ್ತನೇ ತರಗತಿಯ ವಿದ್ಯಾರ್ಥಿನಿಯೊಬ್ಬಳು ಮಗುವಿಗೆ ಜನ್ಮನೀಡಿರುವ ಘಟನೆ ಕೊಪ್ಪಳ ಜಿಲ್ಲೆಯ ಕುಕನೂರು ತಾಲ್ಲೂಕಿನ ಗ್ರಾಮವೊಂದರಿಂದ ಇತ್ತೀಚೆಗೆ ವರದಿಯಾಗಿದೆ. ಇಂತಹುದೇ ಮತ್ತೊಂದು ಪ್ರಕರಣದಲ್ಲಿ, ಯಾದಗಿರಿ ಜಿಲ್ಲೆಯ ಶಹಾಪುರದ ವಸತಿ ಶಾಲೆಯೊಂದರ ಶೌಚಾಲಯದಲ್ಲಿ 9ನೇ ತರಗತಿ ವಿದ್ಯಾರ್ಥಿನಿ ಮಗುವಿಗೆ ಜನ್ಮ ನೀಡಿದ್ದಾಳೆ. ಈ ಘಟನೆಗಳು, ಸರ್ಕಾರಿ ವಸತಿಶಾಲೆಗಳು ಹೆಣ್ಣುಮಕ್ಕಳಿಗೆ ಎಷ್ಟು ಸುರಕ್ಷಿತ ಎನ್ನುವ ಪ್ರಶ್ನೆಗೆ ಕಾರಣವಾಗಿವೆ; ಸಿಬ್ಬಂದಿಯ ಹೊಣೆಗೇಡಿತನ ಹಾಗೂ ವ್ಯವಸ್ಥೆಯ ಲೋಪದೋಷಗಳಿಗೆ ಕನ್ನಡಿ ಹಿಡಿಯುವಂತಿವೆ. ಹಾಸ್ಟೆಲ್‌ಗಳಲ್ಲಿ ಸಿಸಿಟಿವಿ ಅಳವಡಿಕೆ, ಮಹಿಳಾ ಸಿಬ್ಬಂದಿ ಕಡ್ಡಾಯವಾಗಿ ಇರುವುದು, ಮಕ್ಕಳ ಸಹಾಯವಾಣಿ ಸಂಖ್ಯೆ 1098ನ್ನು ತಪ್ಪದೆ ಪ್ರದರ್ಶಿಸುವುದು ಸೇರಿದಂತೆ ವಿದ್ಯಾರ್ಥಿನಿಯರ ಸುರಕ್ಷತೆಗೆ ಸಂಬಂಧಿಸಿದಂತೆ ಅನೇಕ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಆದರೆ, ಈ ಎಲ್ಲ ಸುರಕ್ಷತಾ ಕ್ರಮಗಳ ನಡುವೆಯೂ ಬಾಲಕಿಯರು ಸುರಕ್ಷಿತವಾಗಿಲ್ಲ ಎನ್ನುವುದು ಆತಂಕ ಹುಟ್ಟಿಸುವ ಸಂಗತಿ.



ಶಿಕ್ಷಣ ಮತ್ತು ಸುರಕ್ಷತೆ ಖಾತರಿಗೊಳಿಸಬೇಕಾದ ವಸತಿಶಾಲೆಗಳು ಬಾಲಕಿಯರಿಗೆ ಅಸುರಕ್ಷಿತ ತಾಣಗಳಾಗಿ ಪರಿಣಮಿಸುತ್ತಿವೆ. ಇದು ಕಳವಳದ ಸಂಗತಿ ಹಾಗೂ ಮಕ್ಕಳ ಹಕ್ಕುಗಳ ಉಲ್ಲಂಘನೆ.

ಕಳೆದ ಮೂರು ವರ್ಷಗಳಲ್ಲಿ 14ರಿಂದ 18 ವರ್ಷ ವಯಸ್ಸಿನ ಮೂರು ಲಕ್ಷಕ್ಕೂ ಹೆಚ್ಚು ಬಾಲಕಿಯರ ಗರ್ಭ ಧಾರಣೆಯ ಪ್ರಕರಣಗಳು ರಾಜ್ಯದಲ್ಲಿ ಅಧಿಕೃತವಾಗಿ ಬೆಳಕಿಗೆ ಬಂದಿವೆ. ಈ ಘಟನೆಗಳು ಮಕ್ಕಳಿಗೆ ಲೈಂಗಿಕ ಶಿಕ್ಷಣದ ಕೊರತೆ ಇರುವುದನ್ನು ಸೂಚಿಸುವಂತಿವೆ. ದೈಹಿಕ ಬದಲಾವಣೆಯ ಬಗ್ಗೆ ತಿಳಿವಳಿಕೆಯ ಕೊರತೆ ಹಾಗೂ ಓದುವ ವಯಸ್ಸಿನಲ್ಲಿ ಅಪಾಯಕರ ಸಂಬಂಧಗಳಿಗೆತೆರೆದುಕೊಳ್ಳುವುದರಿಂದ ಆಗುವ ಅನಾಹುತಗಳ ಬಗ್ಗೆ ಅರಿವು ಇಲ್ಲದಿರುವುದು ಲೈಂಗಿಕ ಶೋಷಣೆಗೆ ಮುಖ್ಯ ಕಾರಣಗಳಾಗಿವೆ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವನ್ನು ತಡೆಗಟ್ಟುವುದಕ್ಕಾಗಿ ಶಿಕ್ಷಕರು, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು, ಗ್ರಾಮ ಲೆಕ್ಕಾಧಿಕಾರಿ, ಪೊಲೀಸ್ ಇನ್‌ಸ್ಪೆಕ್ಟರ್ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಒಳಗೊಂಡ ಕಾವಲು ಸಮಿತಿಗಳನ್ನು ಗ್ರಾಮ ಪಂಚಾಯಿತಿ ಹಂತದಲ್ಲಿ ರಚಿಸಲಾಗಿದೆ. ಬಾಲಗರ್ಭಿಣಿಯರ ಸಂಖ್ಯೆ ಹೆಚ್ಚುತ್ತಿರುವುದು ಈ ಕಾವಲು ಸಮಿತಿಗಳ ವೈಫಲ್ಯವನ್ನು ಸೂಚಿಸುವಂತಿದೆ. ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆದಾಗ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಬೇಕು. ಕೆಲವೆಡೆ, ಪ್ರಕರಣಗಳನ್ನು ಮುಚ್ಚಿಹಾಕುವ ಪ್ರಯತ್ನಗಳೂ ನಡೆದಿವೆ.

ಅಪ್ರಾಪ್ತ ವಯಸ್ಸಿನ ಬಾಲಕಿಯರ ಗರ್ಭಧಾರಣೆಯ ಪ್ರಕರಣಗಳು ಸಮಾಜದಲ್ಲಿನ ನೈತಿಕತೆ ಕ್ಷೀಣಿಸುತ್ತಿರುವುದರ ಸಂಕೇತವೂ ಹೌದು. ಮಕ್ಕಳ ಬಾಲ್ಯವನ್ನು ನಾಶಗೊಳಿಸುವ ಇಂಥ ಘಟನೆಗಳು, ಸಂತ್ರಸ್ತರನ್ನು ಬದುಕಿನುದ್ದಕ್ಕೂ ಮಾಯದ ಗಾಯದಂತೆ ಕಾಡುತ್ತವೆ. ಮಕ್ಕಳ ಕುಟುಂಬವನ್ನು ಸಂಕಟಕ್ಕೆ ದೂಡುತ್ತವೆ. ಗ್ರಾಮೀಣ ಹೆಣ್ಣುಮಕ್ಕಳು ಇತ್ತೀಚಿನ ವರ್ಷಗಳಲ್ಲಷ್ಟೇ ಶಿಕ್ಷಣಕ್ಕೆ ತೆರೆದುಕೊಳ್ಳುತ್ತಿದ್ದಾರೆ. ಸರ್ಕಾರದ ಹಲವು ಯೋಜನೆಗಳಿಂದಾಗಿ ಅವರು ಶಿಕ್ಷಣದ ಬೆಳಕಿಗೆ ಬರುವುದು ಸಾಧ್ಯವಾಗಿದೆ. ಆದರೆ, ಪ್ರಸ್ತುತ ನಡೆಯುತ್ತಿರುವ ಘಟನೆಗಳು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಿಮ್ಮುಖ ಚಲನೆಗೆ ಕಾರಣ ಆಗುವಂತಿವೆ. ಬಾಲಕಿಯರ ಸುರಕ್ಷತೆಯನ್ನು ಖಾತರಿಗೊಳಿಸದೆ ಹೋದರೆ ಇಡೀ ಶಿಕ್ಷಣವ್ಯವಸ್ಥೆಗೆ ಪೆಟ್ಟು ಬೀಳುತ್ತದೆ; ಅದರ ಪರಿಣಾಮ ಸಮಾಜದ ಮೇಲೂ ಆಗುತ್ತದೆ. ಬಾಲಕಿಯರ ಸುರಕ್ಷತೆಗೆ ಸಂಬಂಧಿಸಿದಂತೆ ಸರ್ಕಾರ ಹಾಗೂ ಸಮಾಜ ಒಟ್ಟಾಗಿ ಕಾರ್ಯ ನಿರ್ವಹಿಸಬೇಕಾಗಿದೆ. ಮುಖ್ಯವಾಗಿ, ದೌರ್ಜನ್ಯಕ್ಕೆ ಕಾರಣವಾಗುವ ಅಪರಾಧಿಗಳಿಗೆ ಕಠಿಣ ಶಿಕ್ಷೆಯಾಗುವಂತೆ ಸರ್ಕಾರ ನೋಡಿಕೊಳ್ಳಬೇಕು. ಲೈಂಗಿಕ ಶಿಕ್ಷಣ ಹಾಗೂ ನೈತಿಕ ಶಿಕ್ಷಣಕ್ಕೆ ಮಕ್ಕಳು ತೆರೆದುಕೊಳ್ಳಲು ವ್ಯಾಪಕ ಅವಕಾಶಗಳನ್ನು ಕಲ್ಪಿಸಬೇಕಾಗಿದೆ. ಕೊಪ್ಪಳ ಹಾಗೂ ಯಾದಗಿರಿ ಜಿಲ್ಲೆಗಳಿಂದ ವರದಿಯಾಗಿರುವ ಪ್ರಕರಣಗಳು, ವಸತಿಶಾಲೆಗಳ ಸುರಕ್ಷತೆಗೆ ಸಂಬಂಧಿಸಿದಂತೆ ಸಮಗ್ರ ಬದಲಾವಣೆಗಳಿಗೆ ಕಾರಣವಾಗಬೇಕು. ಬಾಲಕಿಯರ ಸುರಕ್ಷತೆಗೆ ಸಂಬಂಧಿಸಿದಂತೆ ಯಾವುದೇ ಬಗೆಯ ರಾಜಿಯನ್ನು ನಾಗರಿಕ ಸಮಾಜ ಒಪ್ಪಿಕೊಳ್ಳುವುದು ಸಾಧ್ಯವಿಲ್ಲ. ಮಕ್ಕಳ ಹಕ್ಕುಗಳ ಉಲ್ಲಂಘನೆ ಏರುಗತಿಯಲ್ಲಿರುವುದು ವಿಶ್ವದ ಎದುರು ರಾಜ್ಯದ ಘನತೆಯನ್ನು ಕುಗ್ಗಿಸುವಂತಹದ್ದು.

ಚಾಟಿ

ಅಂತರ ಅಗತ್ಯ

ಸ್ವಾಮಿಗಳು ರಾಜಕಾರಣದಿಂದ ದೂರವಿರಬೇಕು. ರಾಜಕಾರಣಿಗಳು ಧರ್ಮಕಾರಣದಿಂದ ದೂರವಿರಬೇಕು.

ಅಲ್ಲಮಪ್ರಭು ಬೆಟ್ಟದೂರು, ಸಾಹಿತಿ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಎಲ್ಲಾ ಜಾತಿ ಮತ್ತು ಧರ್ಮದ ಬಡವರ ಬದುಕಿನ ಭದ್ರತೆಗಾಗಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಆದರೆ, ಬಿಜೆಪಿಯ ಬುರುಡೆ ಗ್ಯಾಂಗ್ ಇಂತಹ ಯಾವುದೇ ಕಾರ್ಯಕ್ರಮ ನೀಡದೆ ಜನರ ಎದುರು ಬುರುಡೆ ಬಿಡುತ್ತಾ ತಿರುಗುತ್ತಿದೆ.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶನಿವಾರ, 2-12-2000

• ಪ್ರಿಯಾಂಕಾ ಛೋಪ್ರಾ ಭುವನ ಸುಂದರಿ

ಲಂಡನ್, ಡಿ. 1 (ಪಿಟಿಐ)– ಭಾರತದ ಸುಂದರಿ ಪ್ರಿಯಾಂಕಾ ಛೋಪ್ರಾ ಹೊಸ ಸಹಸ್ರಮಾನದ ಮೊದಲ ಭುವನ ಸುಂದರಿ ಕಿರೀಟವನ್ನು ಧರಿಸುವ ಮೂಲಕ ಇತಿಹಾಸ ಸೃಷ್ಟಿಸಿದ್ದಾಳೆ.

ಮಿಸ್ ವರ್ಲ್ಡ್ 2000 ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ ಇತರ 94 ಸ್ಪರ್ಧಿಗಳನ್ನು ಹಿಂದಕ್ಕಟ್ಟಿದ ಪ್ರಿಯಾಂಕಾ, ಭುವನ ಸುಂದರಿ ಕಿರೀಟದೊಂದಿಗೆ 1 ಲಕ್ಷ ಡಾಲರ್‌ಗಳ ನಗದು ಬಹುಮಾನವನ್ನೂ ಪಡೆದುಕೊಂಡಿದ್ದಾಳೆ. ಇಟಲಿಯ ಜಾರ್ಜಿಯಾ ಪಾಮಸ್ ಮತ್ತು ಟರ್ಕಿಯ ಯಕ್ಸೆಲ್ ಅಕ್ ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಗಳಿಸಿದ್ದಾರೆ.

• ಹರಪನಹಳ್ಳಿ ಬಳಿ ಲಾರಿ ಉರುಳಿ ಏಳು ಸಾವು

ಹರಪನಹಳ್ಳಿ, ಡಿ. 1– ಸುಮಾರು 80 ಜನರನ್ನು ತುಂಬಿಕೊಂಡು ಚಿಕ್ಕಮಗಳೂರು ಕಡೆ ಹೋಗುತ್ತಿದ್ದ ಲಾರಿಯೊಂದು ಉರುಳಿ ಇಬ್ಬರು ಮಕ್ಕಳು ಸೇರಿದಂತೆ ಏಳು ಮಂದಿ ಸ್ಥಳದಲ್ಲಿಯೇ ಸತ್ತು 52 ಮಂದಿ ಗಾಯಗೊಂಡ ಘಟನೆ ಇಂದು ಇಲ್ಲಿಗೆ ಸಮೀಪದ ಹಾರಕನಾಳು ಬಳಿ ಸಂಭವಿಸಿದೆ.

75 ವರ್ಷಗಳ ಹಿಂದೆ

ಶನಿವಾರ, 2-12-1950

• ಬೆಲ್ಲದ ಪರಮಾವಧಿ ಬೆಲೆ 19 ರೂಪಾಯಿ

ನವದೆಹಲಿ, ಡಿ. 1– ಹೆಚ್ಚು ಉತ್ಪನ್ನದ ಪ್ರಾಂತ್ಯಗಳ ಒಳ್ಳೆಯ ದರ್ಜೆ ಬೆಲ್ಲದ ಪರಮಾವಧಿ ಬೆಲೆಯನ್ನು (ರೈಲ್ವೆ) ಮಣಕ್ಕೆ 19 ರೂ. ಎಂದು ನಿಷ್ಕರ್ಶಿಸಲಾಗಿದೆ ಎಂಬುದಾಗಿ ಆಹಾರ ಶಾಖಾ ಸಚಿವ ಕೆ.ಎಂ. ಮುನ್ಷಿ ಅವರು, ಇಂದು ಪಾರ್ಲಿಮೆಂಟಿನಲ್ಲಿ ಪ್ರಕಟಿಸಿದರು.

ಕಬ್ಬಿನ ಕನಿಷ್ಠ ಬೆಲೆಯನ್ನು ರೂ. 1.10 ಏರಿಸಲಾಗಿದೆ. ಸಕ್ಕರೆ ಮೇಲಿನ ಹತೋಟಿ ಮುಂದುವರಿಯುವುದು. ಆದರೆ, 1948-49ನೇ ಅಥವಾ 1949-50ನೇ ಸಾಲಿನ ತಯಾರಿಕೆಯ ಶೇ 107ಕ್ಕಿಂತಲೂ ಹೆಚ್ಚು ಉತ್ಪನ್ನ ಮಾಡಿದ ಕಾರ್ಖಾನೆಗಳಿಗೆ, ತಮ್ಮ ಹೆಚ್ಚಿನ ತಯಾರಿಕೆಯನ್ನು ನಿರ್ಬಂಧ ವಿಲ್ಲದೆ ಪೇಟೆಯಲ್ಲಿ ಮಾರಲು ಅವಕಾಶ ಕೊಡಲಾಗುವುದು.

ಸಕ್ಕರೆ ಕಾರ್ಖಾನೆ ಧಾರಣೆಯನ್ನು ರೂ. 28ರಿಂದ ರೂ. 29ಕ್ಕೆ ಏರಿಸಲಾಗಿದೆ.

ಪುಟಿನ್ ಭೇಟಿ, ಸ್ನೇಹಕ್ಕೆ ಪುಷ್ಟಿ?



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಭಾರತ ಹಾಗೂ ರಷ್ಯಾ ನಡುವಿನ ವಾರ್ಷಿಕ ಶೃಂಗಸಭೆಯಲ್ಲಿ ಭಾಗವಹಿಸಲು ಡಿ. 4ರಂದು ವ್ಲಾದಿಮಿರ್ ಪುಟಿನ್ ಭಾರತಕ್ಕೆ ಆಗಮಿಸುತ್ತಿದ್ದಾರೆ. 2021ರಲ್ಲಿ ಭಾರತದಲ್ಲಿ ನಡೆದ ಶೃಂಗಸಭೆಯಲ್ಲಿ ಪುಟಿನ್ ಪಾಲ್ಗೊಂಡಿದ್ದರು. ಈ ನಾಲ್ಕು ವರ್ಷಗಳಲ್ಲಿ ಭಾರತ ಹಾಗೂ ರಷ್ಯಾಗೆ ಸಂಬಂಧಿಸಿದಂತೆ ಅನೇಕ ಬೆಳವಣಿಗೆಗಳು ನಡೆದಿವೆ. ಜಾಗತಿಕ ರಾಜಕೀಯದಲ್ಲಿ ಸಾಕಷ್ಟು ಬದಲಾವಣೆಗಳು ಆಗಿವೆ.

ಉಕ್ರೇನ್ ಹಾಗೂ ರಷ್ಯಾ ನಡುವೆ ಕದನ ಚಾಲ್ತಿಯಲ್ಲಿದೆ. ಚೀನಾ ಹಾಗೂ ರಷ್ಯಾ ನಡುವಿನ ಸಂಬಂಧ ಗಟ್ಟಿಗೊಂಡಿದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ರಷ್ಯಾ ಜೊತೆಗಿನ ವಾಣಿಜ್ಯಿಕ ಸಂಬಂಧದ ಕಾರಣಕ್ಕೆ ಭಾರತದ ಮೇಲೆ ದಂಡನಾಸುಂಕ ಹೇರಿದ್ದಾರೆ. ಭಾರತ ಹಾಗೂ ಪಾಕಿಸ್ತಾನದ ನಡುವಿನ ಘರ್ಷಣೆಯ ವೇಳೆ ರಷ್ಯಾದ ಯುದ್ಧ ಉಪಕರಣಗಳು ಭಾರತದ ಸಹಾಯಕ್ಕೆ ಒದಗಿದ್ದು ಖಾತರಿಯಾಗಿದೆ. ಈ ಎಲ್ಲ ಸಂಗತಿಗಳ ಬೆಳಕಿನಲ್ಲಿಯೇ ಪುಟಿನ್‌ರ ಭಾರತ ಭೇಟಿಯನ್ನು ಮತ್ತು ಈ ಭೇಟಿ ಭಾರತ ಮತ್ತು ಅಮೆರಿಕ ನಡುವಿನ ದ್ವಿಪಕ್ಷೀಯ ಸಂಬಂಧದ ಮೇಲೆ ಉಂಟು ಮಾಡುವ ಪರಿಣಾಮವನ್ನು ಅಂದಾಜಿಸಬೇಕಿದೆ.

ಸ್ವಾತಂತ್ರ್ಯಾನಂತರ ಭಾರತ, ಸೋವಿಯತ್ ಒಕ್ಕೂಟದಿಂದ ಕೈಗಾರಿಕೀಕರಣಕ್ಕೆ ಪ್ರೇರಣೆ ಮತ್ತು ಸಹಕಾರ ಪಡೆದಿತ್ತು. 1951ರಲ್ಲಿ ಕಾಶ್ಮೀರ ವಿವಾದ ವಿಶ್ವಸಂಸ್ಥೆಯಲ್ಲಿ ಚರ್ಚೆಗೊಳಗಾದಾಗ ಭಾರತಕ್ಕೆ ಬೆಂಬಲವಾಗಿ ಸೋವಿಯತ್ ತನ್ನ ವೀಟೊ ಚಲಾಯಿಸಿತ್ತು. 1953ರಲ್ಲಿ ಸೋವಿಯತ್ ನಾಯಕ ಜೋಸೆಫ್ ಸ್ಟಾಲಿನ್, ಭಾರತದ ಉಪರಾಷ್ಟ್ರಪತಿ ಸರ್ವಪಲ್ಲಿ ರಾಧಾಕೃಷ್ಣನ್ ಅವರಿಗೆ, 'ನೀವು ನಮ್ಮ ಶತ್ರುಗಳಲ್ಲ ಎನ್ನುವುದು ನಮ್ಮ ನೀತಿಯಾಗಿ ಮುಂದುವರಿಯುತ್ತದೆ ಮತ್ತು ನೀವು ನಮ್ಮ ಸಹಾಯವನ್ನು ನಂಬಬಹುದು' ಎಂದು ಹೇಳಿದ್ದರು. 1955ರಲ್ಲಿ ಸೋವಿಯತ್ ರಷ್ಯಾಕ್ಕೆ ಪ್ರಧಾನಿ ನೆಹರೂ ಭೇಟಿಯಿತ್ತರು. ಅದೇ ವರ್ಷ ನಿಕಿತಾ ಕ್ರುಶ್ಚೇವ್ ಭಾರತಕ್ಕೆ ಬಂದುಹೋದರು. ಭಿಲಾಯಿಯ ಉಕ್ಕಿನ ಕಾರ್ಖಾನೆ ನಿರ್ಮಾಣಕ್ಕೆ ಸೋವಿಯತ್ ಕೈ ಜೋಡಿಸಿತು.

1970ರ ದಶಕದಲ್ಲಿ ಚೀನಾದ ಜೊತೆಗೆ ಮೈತ್ರಿ ಸಾಧಿಸಲು ಹವಣಿಸುತ್ತಿದ್ದ ಅಮೆರಿಕ, ಅದಕ್ಕೆ ಪೂರಕವಾಗಿ ಪಾಕಿಸ್ತಾನವನ್ನು ಸೇತುವೆಯಾಗಿ ನೋಡುತ್ತಿತ್ತು. 1971ರಲ್ಲಿ ಬಾಂಗ್ಲಾ ವಿಮೋಚನಾ ಯುದ್ಧ ನಡೆದಾಗ, ಪಾಕಿಸ್ತಾನಕ್ಕೆ ಅಮೆರಿಕ ಬೆಂಬಲವಾಗಿ ನಿಂತಿತು. ಯುದ್ಧದಲ್ಲಿ ಭಾರತವನ್ನು ಬೆದರಿಸಲೋ ಎಂಬಂತೆ ಅಮೆರಿಕ ತನ್ನ ಯುಎಸ್‌ಎಸ್ ಎಂಟರ್‌ಪ್ರೈಸ್ ವಿಮಾನವಾಹಕ ನೌಕೆ ಮತ್ತು ಏಳನೇ ಫ್ಲೀಟ್ ಕಾರ್ಯಪಡೆಯನ್ನು ಬಂಗಾಳ ಕೊಲ್ಲಿಗೆ ಕಳುಹಿಸಿತು. ಆಗ ಭಾರತದ ನೆರವಿಗೆ ಬಂದದ್ದು ಸೋವಿಯತ್ ಒಕ್ಕೂಟ!

ಅಮೆರಿಕ ಹಾಗೂ ಪಾಕಿಸ್ತಾನ ನಡುವಿನ ಸಖ್ಯದ ಪರಿಣಾಮಗಳನ್ನು ಅಂದಾಜಿಸಿದ್ದ ಭಾರತದ ಪ್ರಧಾನಿ ಇಂದಿರಾ ಗಾಂಧಿ, ಸೋವಿಯತ್ ಜೊತೆಗೆ ಸ್ನೇಹ ಮತ್ತು ಸಹಕಾರ ಒಪ್ಪಂದಕ್ಕೆ ಸಹಿ ಹಾಕಿದ್ದರು. ಹಾಗಾಗಿ, ಯುಎಸ್‌ಎಸ್ ಎಂಟರ್‌ಪ್ರೈಸ್ ಹಿಂದೂ ಮಹಾಸಾಗರವನ್ನು ಪ್ರವೇಶಿಸಿದಾಗ, ಅಮೆರಿಕದ ಯುದ್ಧನೌಕೆಗಳು ಮತ್ತು ಭಾರತದ ಭೂಪ್ರದೇಶದ ನಡುವೆ ಸೋವಿಯತ್ ನೌಕಾಪಡೆ ನಿಯೋಜನೆಗೊಂಡಿತು. ಇದು ಬಾಂಗ್ಲಾಯುದ್ಧದಲ್ಲಿ ನಿರ್ಣಾಯಕ ಎನಿಸಿತು. ಅಮೆರಿಕ ತನ್ನ ಯುದ್ಧನೌಕೆಯನ್ನು ಹಿಂದಕ್ಕೆ ಕರೆಸಿಕೊಂಡಿತು.

ಆ ಬಳಿಕ ಭಾರತ ಹಾಗೂ ಸೋವಿಯತ್ ಒಕ್ಕೂಟದ ನಡುವಿನ ಸಂಬಂಧ ಅಲಿಪ್ತ ನೀತಿಯ ಚೌಕಟ್ಟನ್ನು ದಾಟಿ ಮತ್ತಷ್ಟು ಗಟ್ಟಿಯಾಯಿತು. ವಿವಿಧ ಕ್ಷೇತ್ರಗಳಲ್ಲಿ ಸೋವಿಯತ್ ಸಹಕಾರ ಪ್ರತಿಫಲಿಸಿತು. 1984ರಲ್ಲಿ ಸೋವಿಯತ್ ಬಾಹ್ಯಾಕಾಶ ನೌಕೆಯಲ್ಲಿ ಭಾರತದ ರಾಕೇಶ್ ಶರ್ಮ ಗಗನಯಾತ್ರೆ ನಡೆಸಿದರು. 1985ರಲ್ಲಿ ಸೋವಿಯತ್ ನೆರವಿನೊಂದಿಗೆ ತಮಿಳುನಾಡಿನ ಕೂಡಂಕುಳಂನಲ್ಲಿ ಪರಮಾಣು ವಿದ್ಯುತ್ ಸ್ಥಾವರ ಆರಂಭಿಸಲಾಯಿತು.

> ಸ್ವಾತಂತ್ರ್ಯೋತ್ತರ ಭಾರತದ ಬಹುಮುಖ್ಯ ಜಾಗತಿಕ ಸಂಗಾತಿ ರಷ್ಯಾ. ಸಂಕಷ್ಟ ಕಾಲದಲ್ಲಿ ನೆರವಿಗೆ ನಿಂತಿರುವ ರಷ್ಯಾದೊಂದಿಗಿನ ಭಾರತದ ಸಂಬಂಧ ಮೋದಿ ಅವರು ಪ್ರಧಾನಿಯಾದ ನಂತರ ಮೊದಲಿನಷ್ಟು ಮಧುರವಾಗಿಲ್ಲ. ಇತ್ತೀಚೆಗೆ ಮರಳಿ ಹಳಿಗೆ ಬರುತ್ತಿರುವ ಉಭಯ ರಾಷ್ಟ್ರಗಳ ನಂಟನ್ನು, ಪುಟಿನ್‌ರ ಭಾರತ ಭೇಟಿ ಮತ್ತಷ್ಟು ಬಲಪಡಿಸುವ ನಿರೀಕ್ಷೆಯಿದೆ.

1991ರಲ್ಲಿ ಸೋವಿಯತ್ ವಿಘಟನೆಯಾದ ಬಳಿಕ ಭಾರತ-ರಷ್ಯಾದ ಸಂಬಂಧ ಮುಂದುವರಿಯಿತು. ಭಾರತದ ವಿದೇಶಾಂಗ ನೀತಿಯಲ್ಲಿ ರಷ್ಯಾಕ್ಕೆ ಆದ್ಯತೆ ದೊರೆಯಿತು. ಸೋವಿಯತ್ ವಿಘಟನೆಯಿಂದಾಗಿ ರಷ್ಯಾ ವಾಣಿಜ್ಯಿಕ ಹಾಗೂ ಆರ್ಥಿಕ ಸವಾಲನ್ನು ಎದುರಿಸುತ್ತಿತ್ತು. 1993ರಲ್ಲಿ ಭಾರತ ಹಾಗೂ ರಷ್ಯಾ ನಡುವಿನ ಸ್ನೇಹ ಮತ್ತು ಸಹಕಾರ ಒಪ್ಪಂದ ನವೀಕರಣಗೊಂಡಿತು. ಮೇ 7, 2000ರಂದು ವ್ಲಾದಿಮಿರ್ ಪುಟಿನ್ ರಷ್ಯಾದ ಅಧ್ಯಕ್ಷರಾದ ಬಳಿಕ ಭಾರತದ ಜೊತೆಗೆ ರಷ್ಯಾ ಮತ್ತಷ್ಟು ಬೆಸೆದುಕೊಂಡಿತು. 2000 ಇಸವಿಯ ಅಕ್ಟೋಬರ್‌ನಲ್ಲಿ ಪುಟಿನ್ ಭಾರತಕ್ಕೆ ಭೇಟಿಯಿತ್ತರು. ಭದ್ರತೆ, ರಕ್ಷಣೆ, ವ್ಯಾಪಾರ ಮತ್ತು ಆರ್ಥಿಕತೆ, ವಿಜ್ಞಾನ ಮತ್ತು ತಂತ್ರಜ್ಞಾನ, ಸಂಸ್ಕೃತಿ, ಹೀಗೆ ವಿವಿಧ ಕ್ಷೇತ್ರಗಳಲ್ಲಿ ಉಭಯ ದೇಶಗಳು ಗೌರವ ಹಾಗೂ ಸಹಕಾರದೊಂದಿಗೆ ಮುಂದುವರಿಯಲು ನಿರ್ಧರಿಸಿದವು. ಜಂಟಿಯಾಗಿ ಬ್ರಹ್ಮೋಸ್ ಕ್ಷಿಪಣಿಯನ್ನು ಅಭಿವೃದ್ಧಿಪಡಿಸಿದವು. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಕಾಯಂ ಸದಸ್ಯತ್ವಕ್ಕೆ ಭಾರತದ ಉಮೇದುವಾರಿಕೆಯನ್ನು ರಷ್ಯಾ ಬೆಂಬಲಿಸಿತು.

2003ರಲ್ಲಿ ಭಾರತದ ನಾಗರಿಕ ಪರಮಾಣು ಕಾರ್ಯಕ್ರಮವನ್ನು ವಿಸ್ತರಿಸುವ ಭಾಗವಾಗಿ 'ಪರಮಾಣು ಸಹಕಾರ ಒಪ್ಪಂದ'ಕ್ಕೆ ರಷ್ಯಾ ಮತ್ತು ಭಾರತ ಸಹಿ ಹಾಕಿದವು. 2010ರ ಡಿಸೆಂಬರ್‌ನಲ್ಲಿ ಪುಟಿನ್ ಭಾರತಕ್ಕೆ ಬಂದಾಗ, ಉಭಯ ದೇಶಗಳ ನಡುವಿನ ಸಂಬಂಧವನ್ನು ಎತ್ತರಿಸುವ ವಿಶೇಷ ಕಾರ್ಯತಾಂತ್ರಿಕ ಸಹಭಾಗಿತ್ವ ಒಪ್ಪಂದಕ್ಕೆ ಅಂಕಿತ ಹಾಕಲಾಯಿತು. 2014ರಲ್ಲಿ ನರೇಂದ್ರ ಮೋದಿ ಅವರು ಪ್ರಧಾನಿಯಾದ ಬಳಿಕ ಅಮೆರಿಕವನ್ನು ಹೆಚ್ಚು ವಿಶ್ವಾಸಕ್ಕೆ ತೆಗೆದುಕೊಳ್ಳುವ ಮತ್ತು ರಷ್ಯಾದ ಜೊತೆಗೆ ಸಮತೋಲನ ಸಾಧಿಸುವ ಹೆಜ್ಜೆ ಇಡಲಾಯಿತು. ರಕ್ಷಣಾ ಸಾಮಗ್ರಿಗಳ ಖರೀದಿಯಲ್ಲಿ ರಷ್ಯಾ ಮೇಲಿನ ಅವಲಂಬನೆಯನ್ನು ಕಡಿತಗೊಳಿಸುವ ಹಾಗೂ ವೈವಿಧ್ಯ ಕಾಯ್ದುಕೊಳ್ಳುವ ಕ್ರಮ ಕೈಗೊಳ್ಳಲಾಯಿತು. ಡೊನಾಲ್ಡ್ ಟ್ರಂಪ್ ಅವರು ಅಮೆರಿಕ ಅಧ್ಯಕ್ಷರಾದ ಬಳಿಕ 2017ರಲ್ಲಿ ಅಮೆರಿಕ, ಭಾರತ, ಜಪಾನ್ ಮತ್ತು ಆಸ್ಟ್ರೇಲಿಯಾ ಒಳಗೊಂಡ 'ಕ್ವಾಡ್' ಹೊಸ ಹುರುಪು ಪಡೆಯಿತು. ಭಾರತದ ಇಂಡೋ–ಪೆಸಿಫಿಕ್ ಕಾರ್ಯತಂತ್ರದಲ್ಲಿ ಬದಲಾವಣೆ ಯಾದಾಗ ಚೀನಾದೊಂದಿಗೆ ರಷ್ಯಾ ಇನ್ನಷ್ಟು ಬೆಸೆದುಕೊಂಡಿತು.

2020ರಲ್ಲಿ ಭಾರತ ಹಾಗೂ ರಷ್ಯಾ ನಡುವಿನ ವಾರ್ಷಿಕ ಶೃಂಗಸಭೆ ರದ್ದಾಯಿತು! ಅದಕ್ಕೆ ಕೋವಿಡ್ ಕಾರಣ ಎನ್ನಲಾಯಿತು. ಆದರೆ, ಇತರ ಶೃಂಗಸಭೆಗಳು ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆದಿದ್ದವು. ಅಸಲಿಗೆ ಭಾರತ ಹಾಗೂ ಅಮೆರಿಕ ನಡುವೆ ಬಿಗಿಯಾದ ಬಂಧ ಹಾಗೂ ಅಮೆರಿಕ ನೇತೃತ್ವದ ಕ್ವಾಡ್‌ನಲ್ಲಿ ಭಾರತ ಭಾಗಿಯಾದದ್ದನ್ನು ವಾರ್ಷಿಕ ಸಭೆಯ ರದ್ದತಿಯ ಮೂಲಕ ರಷ್ಯಾ ವಿರೋಧಿಸಿತ್ತು. ರಷ್ಯಾದ ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ರೊವ್, 'ಪಾಶ್ಚಿಮಾತ್ಯ ರಾಷ್ಟ್ರಗಳು ಭಾರತವನ್ನು ದಾಳವಾಗಿಸಿಕೊಂಡಿವೆ' ಎಂದು ಪ್ರತಿಕ್ರಿಯಿಸಿದ್ದರು. ಆದರೆ, 'ನಾವು ಸ್ವತಂತ್ರ ವಿದೇಶಾಂಗ ನೀತಿಯನ್ನು ಹೊಂದಿದ್ದೇವೆ, ಭಾರತದ ಇಂಡೋ–ಪೆಸಿಫಿಕ್ ಕಾರ್ಯತಂತ್ರ ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾಗಿದೆ, ಯಾವುದೇ ನಿರ್ದಿಷ್ಟ ದೇಶದ ಮೇಲೆ ಕೇಂದ್ರೀಕೃತವಾಗಿಲ್ಲ' ಎಂದು ಭಾರತ ತಾಳ್ಮೆಯಿಂದ ಪ್ರತಿಕ್ರಿಯಿಸಿತು.

ಭಾರತ ತನ್ನ ನಿಲುವಿಗೆ ಬದ್ಧವಾಯಿತು. ಎಸ್–400 ಕ್ಷಿಪಣಿ ರಕ್ಷಣಾ ವ್ಯವಸ್ಥೆಯ ಖರೀದಿಯ ವಿಷಯ ಬಂದಾಗ ಅಮೆರಿಕದ ಒತ್ತಡವನ್ನು ಪಕ್ಕಕ್ಕಿಟ್ಟು ರಷ್ಯಾದ ಜೊತೆಗೆ ಖರೀದಿ ಒಪ್ಪಂದ ಅಂತಿಮಗೊಳಿಸಿತು. ಇದು ಭಾರತ–ರಷ್ಯಾ ನಡುವಿನ ಸಂಬಂಧವನ್ನು ಮತ್ತೊಮ್ಮೆ ಹಳಿಗೆ ತಂದಿತು. 2021ರಲ್ಲಿ ಪುಟಿನ್ ಅವರು ಭಾರತಕ್ಕೆ ಭೇಟಿಯಿತ್ತಾಗ, ಬಾಹ್ಯಾಕಾಶ, ರಕ್ಷಣೆ ಮತ್ತು ಇಂಧನ ಸುರಕ್ಷತೆಯ ಸಹಕಾರ ಸೇರಿದಂತೆ ವಿಭಿನ್ನ ಕ್ಷೇತ್ರಗಳಿಗೆ ಸಂಬಂಧಿಸಿದ 28 ಒಪ್ಪಂದ ಏರ್ಪಟ್ಟಿದ್ದವು.

ನಾಲ್ಕು ವರ್ಷಗಳ ಬಳಿಕ ಪುಟಿನ್ ಇದೀಗ ಮತ್ತೊಮ್ಮೆ ಭಾರತಕ್ಕೆ ಬರುತ್ತಿದ್ದಾರೆ. ರಷ್ಯಾದ ರಕ್ಷಣಾ ಉದ್ಯಮಕ್ಕೆ ಭಾರತ ಎರಡನೇ ಅತಿದೊಡ್ಡ ಮಾರುಕಟ್ಟೆ. ಸುಧಾರಿತ ರಕ್ಷಣಾ ಸಾಮಗ್ರಿಗಳ ಖರೀದಿಯ ಕುರಿತ ಮಾತುಕತೆ, ರಕ್ಷಣೆ, ಭದ್ರತೆ, ಇಂಧನ ಕುರಿತ ಒಪ್ಪಂದಗಳು ನಿರೀಕ್ಷಿತವೇ. ಉಕ್ರೇನ್ ಯುದ್ಧ ಆರಂಭವಾದ ಬಳಿಕ ಮೊದಲ ಬಾರಿಗೆ ಪುಟಿನ್ ಭಾರತಕ್ಕೆ ಆಗಮಿಸುತ್ತಿದ್ದಾರೆ. ಉಕ್ರೇನ್ ಯುದ್ಧ ವಿಷಯದಲ್ಲಿ 'ಇದು ಯುದ್ಧಕ್ಕೆ ಕಾಲವಲ್ಲ' ಎಂದು ಪುಟಿನ್ ಅವರ ಎದುರಿನಲ್ಲಿ ಕೂತು ಪ್ರಧಾನಿ ಮೋದಿ ಹೇಳಿದ್ದರೂ, ಮಾತುಕತೆಯ ಮೂಲಕ ಬಿಕ್ಕಟ್ಟು ಬಗೆಹರಿಸಿಕೊಳ್ಳಿ ಎಂದು ಜಾಗತಿಕ ವೇದಿಕೆಗಳಲ್ಲಿ ಭಾರತ ಸ್ಪಷ್ಟಪಡಿಸಿದ್ದರೂ, ಟ್ರಂಪ್ ಮಾತ್ರ ಉಕ್ರೇನ್ ಯುದ್ಧ ಮುಂದುವರಿದಿದ್ದರೆ ಅದಕ್ಕೆ ಚೀನಾ ಮತ್ತು ಭಾರತ ಕಾರಣ; ರಷ್ಯಾದ ತೈಲ ಖರೀದಿಯನ್ನು ಮುಂದುವರಿಸುವ ಮೂಲಕ ಈ ದೇಶಗಳು ರಷ್ಯಾಕ್ಕೆ ಹಣಕಾಸು ಒದಗಿಸುತ್ತಿವೆ ಎಂದು ಪದೇ ಪದೇ ಹೇಳುತ್ತಿದ್ದಾರೆ.

ಅಮೆರಿಕದ ಸುಂಕ ಸಮರದ ನಡುವೆಯೇ 2025-26ನೇ ಆರ್ಥಿಕ ವರ್ಷದ ಎರಡನೇ ತ್ರೈಮಾಸಿಕದಲ್ಲಿ ಭಾರತದ ಜಿಡಿಪಿ ಶೇ 8.2ರಷ್ಟು ದಾಖಲಾಗಿದೆ. ಹಾಗಾಗಿ, ಅಮೆರಿಕದ ಸುಂಕ ಬೆದರಿಕೆಯ ಕಾರಣದಿಂದ ಅಲ್ಲದಿದ್ದರೂ, ಜಾಗತಿಕ ಶಾಂತಿ ಕುರಿತ ಭಾರತದ ಬದ್ಧತೆಯ ದೃಷ್ಟಿಯಿಂದ ಮತ್ತು ಟ್ರಂಪ್ ಅವರನ್ನು ಸರಿದೂಗಿಸುವ ಸೂತ್ರವಾಗಿ ಉಕ್ರೇನ್ ಯುದ್ಧದ ವಿಷಯ ಪ್ರಸ್ತಾಪವಾಗಬಹುದು. ಭಾರತ ಹಾಗೂ ರಷ್ಯಾ ನಡುವಿನ ದ್ವಿಪಕ್ಷೀಯ ಸಂಬಂಧ ಹಲವು ಪರೀಕ್ಷೆಗಳನ್ನು ಎದುರಿಸಿ ಗಟ್ಟಿಗೊಂಡಿದೆ. ಪುಟಿನ್ ಅವರ ಭಾರತ ಭೇಟಿ ಆ ನಿಟ್ಟಿನಲ್ಲಿ ಮತ್ತೊಂದು ಹೆಜ್ಜೆ ಎನ್ನಬಹುದು.

ವಾಚಕರ ವಾಣಿ

ಹೊಟ್ಟೆಯ ಹಸಿವಿಗೆ ಸಾವಿನ ಶಿಕ್ಷೆಯೆ?

ದೆಹಲಿಯ ಶಾಹದರಾದಲ್ಲಿ ಆಹ್ವಾನವಿಲ್ಲದೆ ಮದುವೆ ಮನೆಗೆ ಊಟಕ್ಕೆಂದು ಹೋಗಿದ್ದ ಯುವಕ ಗುಂಡೇಟಿನಿಂದ ಸಾವಿಗೀಡಾಗಿರುವ ಸುದ್ದಿ ಓದಿ ಮನಸ್ಸಿಗೆ ನೋವಾಯಿತು. ಯಃಕಶ್ಚಿತ್ ಒಂದು ಹೊತ್ತಿನ ಊಟಕ್ಕಿಂತಲೂ ಮನುಷ್ಯನ ಪ್ರಾಣದ ಬೆಲೆ ಅಗ್ಗವಾಗಿ ಹೋಯಿತೆ? ದೇಶದಲ್ಲಿ ಸಭೆ-ಸಮಾರಂಭಗಳಲ್ಲಿ ಸಾವಿರಾರು ಟನ್ ಆಹಾರ ಪ್ರತಿ ದಿನ ಕಸದ ಬುಟ್ಟಿ ಸೇರುತ್ತದೆ. ಮೃತ ಯುವಕನಿಗೆ ಹಸಿವು ನೀಗಿಸಿಕೊಳ್ಳಲು ಅನುವು ಮಾಡಿಕೊಟ್ಟು ಮಾನವೀಯತೆ ಮೆರೆಯುವ ಬದಲು, ಬರ್ಬರವಾಗಿ ಕೊಂದಿರುವುದು ಪಾಶವೀಕೃತ್ಯ. ಹಸಿದವರ ಬಗ್ಗೆ ಸಹಾನುಭೂತಿ, ಮಾನವೀಯ ಮೌಲ್ಯಗಳು ಮರೆಯಾಗುತ್ತಿರುವುದರ ಸೂಚನೆ ಇದಾಗಿದೆ. ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತವು 123 ದೇಶಗಳ ಪಟ್ಟಿಯಲ್ಲಿ 102ನೇ ಸ್ಥಾನದಲ್ಲಿದೆ. ಈ ಘಟನೆಯು ಹಸಿವು ಸೂಚ್ಯಂಕದಲ್ಲಿ ದೇಶದ ಸಾಧನೆಯನ್ನು ಪುಷ್ಟೀಕರಿಸಿದಂತಲ್ಲವೇ?

ಶಾಂತಕುಮಾರ್, ಸರ್ಜಾಪುರ

'ಕೂಸಿನ ಮನೆ' ತಬ್ಬಲಿ ಆಗಬಾರದು

ರಾಜ್ಯ ಸರ್ಕಾರದ 'ಕೂಸಿನ ಮನೆ' ಯೋಜನೆಗೆ ನರೇಗಾದಡಿ ಗೌರವಧನ ಪಾವತಿಗೆ ಅವಕಾಶವಿಲ್ಲ ಎಂದು ಕೇಂದ್ರ ಸರ್ಕಾರ ಆಕ್ಷೇಪಿಸಿರುವುದು ವಿಷಾದನೀಯ. ಕೂಸಿನ ಮನೆ ಕಾರ್ಯಕ್ರಮವನ್ನು ಕೇವಲ ಆರ್ಥಿಕ ಹೊರೆಯ ದೃಷ್ಟಿಯಿಂದ ನೋಡಬಾರದು. ಮಕ್ಕಳ ಪೌಷ್ಟಿಕಾಂಶ, ಲಾಲನೆ-ಪಾಲನೆ ಹಾಗೂ ಮಹಿಳಾ ಸಬಲೀಕರಣದ ದೃಷ್ಟಿಯಲ್ಲಿ ಪರಿಗಣಿಸಬೇಕು. ಗ್ರಾಮೀಣ ಭಾಗದಲ್ಲಿ ದುಡಿಯುವ ಕೈಗಳಿಗೆ ಉದ್ಯೋಗ ನೀಡಬೇಕೆಂಬ ಕೇಂದ್ರದ ಮಹತ್ವಾಕಾಂಕ್ಷೆ ಯೋಜನೆಗಳಿಗೆ ಹಿನ್ನಡೆಯಾಗುತ್ತಿರುವುದಕ್ಕೆ ಪ್ರಮುಖ ಕಾರಣವೇ ಮಕ್ಕಳ ಆರೈಕೆ. ಇಂತಹ ಕ್ಷುಲ್ಲಕ ಸಮಸ್ಯೆಗಳು ದುಡಿಯುವ ಮಹಿಳೆಯರ ಉತ್ಸಾಹವನ್ನು ಕುಂದಿಸಬಾರದು ಎಂಬುದೇ ಕೂಸಿನ ಮನೆಯ ಹಿಂದಿರುವ ಕಳಕಳಿ. ಇದನ್ನು ಪೋಷಿಸಬೇಕಾಗಿರುವುದು ಕೇಂದ್ರದ ಆದ್ಯ ಕರ್ತವ್ಯ.

ನಾಗರಾಜ್ ಗರಗ್, ಹೊಸದುರ್ಗ

ಮೆಟ್ರೊ ಆ್ಯಂಬುಲೆನ್ಸ್ ಆರಂಭಿಸಿ

ಬೆಂಗಳೂರು ಮಹಾನಗರದಲ್ಲಿ ದಿನೇ ದಿನೇ ವಾಹನ ಸಂಚಾರ ದಟ್ಟಣೆ ಹೆಚ್ಚುತ್ತಿದೆ. ವಾರದ ಎಲ್ಲಾ ದಿನಗಳಲ್ಲೂ ದ್ವಿಚಕ್ರ ವಾಹನ ಸೇರಿದಂತೆ ಇತರ ವಾಹನಗಳಲ್ಲಿ ಸಂಚರಿಸುವುದೇ ದುಸ್ತರವಾಗಿದೆ. ಸಂಚಾರ ದಟ್ಟಣೆಯಲ್ಲಿ ಆ್ಯಂಬುಲೆನ್ಸ್ ವಾಹನಗಳ ಪರಿಸ್ಥಿತಿಯಂತೂ ಹೇಳತೀರದು. ಎಷ್ಟೋ ಜೀವಗಳು ಆಸ್ಪತ್ರೆ ಸೇರುವಷ್ಟರಲ್ಲೇ ಇಹಲೋಕ ತ್ಯಜಿಸುತ್ತವೆ. ಹಾಗಾಗಿ, ಮೆಟ್ರೊ ರೈಲುಗಳಲ್ಲಿ 'ಮೆಟ್ರೊ ಆ್ಯಂಬುಲೆನ್ಸ್' ಎಂಬ ಪ್ರತ್ಯೇಕ ಬೋಗಿ ಪರಿಚಯಿಸಿ ಅಮೂಲ್ಯ ಜೀವವನ್ನು ಉಳಿಸಬಹುದಲ್ಲವೇ?

ವಿ.ಎಸ್. ಕುಮಾರ್, ಬೆಂಗಳೂರು

ಪ್ರೀತಿ ಪಾಶಕ್ಕೆ ಮರುಳು, ಜೀವಕ್ಕೆ ಉರುಳು

ಪ್ರೀತಿ, ಪ್ರೇಮದ ಉನ್ಮಾದಕ್ಕೆ ಸಿಲುಕಿದ ಯುವಕರ ಹುಚ್ಚಾಟಕ್ಕೆ ಬಲಿಯಾಗುತ್ತಿರುವ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚುತ್ತಿರುವುದು ಕಳವಳಕಾರಿ. ಮರುಳು ಮಾತಿಗೆ ಸಿಲುಕಿ ಹೆಣ್ಣುಮಕ್ಕಳ ಭವಿಷ್ಯ ದುರಂತ ಅಂತ್ಯ ಕಾಣುತ್ತಿದೆ. ಒಂದಲ್ಲಾ ಒಂದು ರೀತಿಯ ಲೈಂಗಿಕ ಕಿರುಕುಳಕ್ಕೆ ಸಿಕ್ಕಿ ನೋವು ಅನುಭವಿಸುತ್ತಿದ್ದಾರೆ. ಮಾಧ್ಯಮಗಳಲ್ಲಿ ನಿಯಮಿತವಾಗಿ ಇಂಥ ಪ್ರಕರಣಗಳು ವರದಿಯಾಗುತ್ತಿದ್ದರೂ, ಹೆಣ್ಣುಮಕ್ಕಳು ಎಚ್ಚೆತ್ತುಕೊಂಡಂತೆ ಕಾಣುತ್ತಿಲ್ಲ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯೂ ಈ ಬಗ್ಗೆ ಅರಿವು ಮೂಡಿಸಲು ಮುಂದಾಗದಿರುವುದು ದುರದೃಷ್ಟಕರ.

ಪ್ರೊ. ಟಿ. ನಾರಾಯಣಪ್ಪ, ಬೆಂಗಳೂರು

ಮೆಕಾಲೆ ಶಿಕ್ಷಣ ಗುಲಾಮಗಿರಿ ಪದ್ಧತಿಯಲ್ಲ

ಮೆಕಾಲೆ ಶಿಕ್ಷಣ ನೀತಿಯು ಗುಲಾಮಗಿರಿಯಿಂದ ಕೂಡಿದೆ ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆ ಹಾಸ್ಯಾಸ್ಪದ. ದೇಶದ ಬಹುಸಂಖ್ಯಾತ ಜನರಿಗೆ ಶಿಕ್ಷಣವೇ ಗೊತ್ತಿಲ್ಲದ ಕಾಲದಲ್ಲಿ, ದೇಶವನ್ನು ಆಳುತ್ತಿದ್ದ ಅಂದಿನ ಇಂಗ್ಲೆಂಡ್ ಸರ್ಕಾರದ ಸಂಸದರಾಗಿದ್ದ ಥಾಮಸ್ ಬಾಬಿಂಗ್ಟನ್ ಮೆಕಾಲೆಯವರು ಭಾರತಕ್ಕೆ ಬಂದು 1835ರಲ್ಲಿ ಇಂಗ್ಲಿಷ್ ಹಾಗೂ ಸ್ಥಳೀಯ ಪ್ರಾಂತೀಯ ಭಾಷೆಯ ಶಾಲೆಗಳನ್ನು ತೆರೆದರು; ಬಡವ ಬಲ್ಲಿದ ಎನ್ನದೇ ಎಲ್ಲ ವರ್ಗದ ಮಕ್ಕಳಿಗೂ ಶಿಕ್ಷಣ ನೀಡಿದರು. ಮೆಕಾಲೆ ಶಿಕ್ಷಣ ನೀತಿಯು ವೈಜ್ಞಾನಿಕ ತಳಹದಿಯಿಂದ ಕೂಡಿದೆ.

ಮೆಕಾಲೆ ಶಿಕ್ಷಣ ಕ್ರಮ ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳಲ್ಲಿ ಪ್ರಶ್ನೆ ಮಾಡುವ ಚಿಕಿತ್ಸಕ ಮನೋಭಾವ ಬೆಳೆಸುವಂತಿದೆ. ಹಾಗಾಗಿಯೇ ಸ್ವಾತಂತ್ರ್ಯ ಪೂರ್ವದಲ್ಲಿ ಬಹುತೇಕ ಭಾರತೀಯರು ಉನ್ನತ ಶಿಕ್ಷಣ ಪಡೆದು ಬ್ರಿಟಿಷರೊಂದಿಗೆ ವ್ಯವಹರಿಸಲು, ದೇಶ-ವಿದೇಶದಲ್ಲಿ ಉದ್ಯೋಗವಂತರಾಗಲು ಶಕ್ತವಾಯಿತು. ಯಾರನ್ನೋ ಮೆಚ್ಚಿಸಲು ಸತ್ಯ ಮರೆಮಾಚಿ ಮಾತನಾಡುವುದು ಪ್ರಧಾನಿ ಹುದ್ದೆಗೆ ಶೋಭೆ ತರುವುದಿಲ್ಲ.

ಎಸ್.ಎಂ. ನೆರಬೆಂಚಿ, ಮುದ್ದೇಬಿಹಾಳ

ತಾರಸಿ ಸೌರಫಲಕಕ್ಕೆ ಅನುಮತಿ ನೀಡಲಿ

ಗ್ರಾಮೀಣ ಮತ್ತು ನಗರ ಪ್ರದೇಶದ ಕಂದಾಯ ಭೂಮಿಯಲ್ಲಿ ಹಲವು ಮಂದಿ ಮನೆ ನಿರ್ಮಿಸಿಕೊಂಡಿದ್ದಾರೆ. ಆದರೆ, ಸುಪ್ರೀಂ ಕೋರ್ಟ್ ಆದೇಶದನ್ವಯ ಕಟ್ಟಡದ ಸ್ವಾಧೀನಾನುಭವ ಪತ್ರ (ಒಸಿ) ಇಲ್ಲದಿರುವ ಮನೆಗಳಿಗೆ ವಿದ್ಯುತ್ ಸಂಪರ್ಕ ಕೊಡುತ್ತಿಲ್ಲ. ಈ ಸಮಸ್ಯೆ ಬಗೆಹರಿಸುವುದಾಗಿ ಜನಪ್ರತಿನಿಧಿಗಳು ಹೇಳುತ್ತಲೇ ಇದ್ದಾರೆ. ಪರಿಹಾರ ಇನ್ನೂ ಸಿಕ್ಕಿಲ್ಲ. ವಿದ್ಯುತ್‌ಗೆ ಪರ್ಯಾಯವಾಗಿ ಮನೆಯ ತಾರಸಿ ಮೇಲೆ ಸೌರಫಲಕ ಅಳವಡಿಕೊಳ್ಳಬಹುದು. ಆದರೆ, ಇದಕ್ಕೂ ಕಾಯಂ ವಿದ್ಯುತ್ ಸಂಪರ್ಕದ ಮೀಟರ್ ಇರಬೇಕು. ಇದರಿಂದ ಮನೆ ನಿರ್ಮಿಸಿಕೊಂಡವರು ತೊಂದರೆಗೆ ಸಿಲುಕಿದ್ದಾರೆ. ಸೌರಫಲಕ ಅಳವಡಿಸಿಕೊಳ್ಳಲು ಇಂಧನ ಇಲಾಖೆಯು ಅನುಮತಿ ನೀಡಿದರೆ ಅನುಕೂಲವಾಗಲಿದೆ.

ಮಲ್ಲಿಕಾರ್ಜುನ, ಸುರಧೇನುಪುರ

ಚುರುಮುರಿ



ಮೂರು ಕನಸು

• ಲಿಂಗರಾಜು ಡಿ.ಎಸ್.

'**ನನಗೆ** ವಾರಕ್ಕೊಂದೊಂದು ದೇಸ ಸುತ್ತಬೇಕು, ಪುಗಸಟ್ಟೆ ಬಾಡು-ಬಳ್ಳೆ, ಎಣ್ಣೆ ಹೊಡಿಬೇಕು, ದಿನಾ ಕಾಸು-ಕರೆಮಣಿ ಎಣಿಸಿ ಎಣಿಸಿ ಮಡೀಕತ್ತಾ ಇರಬೇಕು ಅನ್ನೋ ಮೂರು ಕನಸುಗಳು ಕಾಲಾಂತರದಿಂದ್ಲೂ ಕಾಡ್ತಾವೆ. ಟೆಂಪಲ್ ರನ್, ಪ್ರಾರ್ಥನೆ, ಪ್ರಯತ್ನ ಯಾವುದೂ ಫಲ ಕೊಡ್ನಿಲ್ಲ ಕನ್ರೋ' ಎಂದು ತುರೇಮಣೆ ತಮ್ಮ ಕನಸಿನ ಗಂಟನ್ನು ಬಿಚ್ಚಿದರು.

'ನೀವು ದೇಸ ದೇಸ ಸುತ್ತಾಡಕ್ಕೆ ವಿಮಾನದ ಪೈಲೆಟ್ ಆಗಬೇಕು ಸಾ. ನಿಮ್ಮ ಯೇಗ್ತೆಗೆ ಇಲ್ಲೀಗಂಟ ಇಮಾನವೂ ಹತ್ತಿಲ್ಲ' ಅಂದುದ್ಕೆ ತುರೇಮಣೆಗೆ ಸಿಟ್ಟು ಬಂತು.

'ಸರಿಕಂಬುಡಿರ್ಲಾ. ಎಣ್ಣೆಗೆ, ಬಾಡು-ಬಳ್ಳೆ, ಕಾಸಿಗೇನಾರಾ ದಾರಿ?' ಅಂದ್ರು.

'ದಿನಾ ದುಡ್ಡು ಎಣಿಸಬೇಕಾದರೆ ನೀವು ಬ್ಯಾಂಕ್ ಮ್ಯಾನೇಜರಾಗಬಕು. ಈ ವಯಸ್ಸಲ್ಲಿ ಅದಾಗ್ಕುಲ್ಲ. ಸಿಎಂಎಸ್ ವ್ಯಾನು ದರೋಡೆ ಮಾಡ್ರಿ. ಹ್ಯಂಗೂ ಜೈಲಿಗೆ ಹೋತಿರ. ಜೈಲಿನ ಕಳ್ಳಬಟ್ಟಿ ಡಿಸ್ಟಿಲರೀಲಿ ಪಾರ್ಟ್ನರ್ ಆಗ್ರಿ. ಇಲ್ಲ ಜೈಲು ಅಡುಗೆಮನೆಯಿಂದ ಬಾಡು-ಬಳ್ಳೆ ಕದ್ದು ಸಪ್ಲೆ ಮಾಡ್ರಿ. ಟೆರರಿಸ್ಟುಗಳು, ಐನಾತಿ ಕಳ್ಳರು, ಸರ್ಕಾರಿ ಖದೀಮರು, ಕುಜ ದೋಷದೋರಿಗೆಲ್ಲಾ ಅನುಕೂಲಾತದೆ' ಅಂತ ಕಾಲೆಳೆದೆ.

'ನೋಡ್ಲಾ ಈಗ ಕಾವೇರಿದ ಚರ್ಚೆ ನಡೀತಾ ಅದೆ. ರೆಸಾರ್ಟು ರಾಜಕೀಯ ಸುರುವಾದ್ರೆ ಬೇಲಿ ಹಾರಿಬರೋ ಕುದುರೆಗಳ ಕಟ್ಟಿಹಾಕೋ ಅಶ್ವಮೇಧಕ್ಕೆ ಸಹಾಯ ಮಾಡಿ ಕಾಸು ದುಡೀಬೈದು' ಯಂಟಪ್ಪಣ್ಣ ಕಿಚಾಯಿಸಿತು.

'ನೀವು ರಾಜಕೀಯಕ್ಕೋಗಿ ಮಂತ್ರಿಯಾಗ್ರಿ. ದೇಸ ಸುತ್ತಬೈದು, ದಿನಾ ಕಾಸು ಎಣಿಸಿಕಬೈದು. ಎಣ್ಣೆ, ಬಾಡು-ಬಳ್ಳೆಗೆ ತೊಂದರೆಯಿಲ್ಲ. ಏನೂ ಗೊತ್ತಿಲ್ಲದಿದ್ರೆ 'ಮಾಹಿತಿ ತಿಳಕಂದು ಕ್ರಮ ತಗತೀವಿ' ಅಂದ್ರಾತು' ಅಂತ ಐಡಿಯಾ ಕೊಟ್ಟೆ.

'ತುರೇಮಣೆ, ಇವರ ಮಾತೆಲ್ಲಾ ಕೇಳಬ್ಯಾಡ. ಈಗ ನಿನಗೆ ಟೈಮುಟೈಮಿಗೆ ಅನ್ನ, ಬಟ್ಟೆ, ಹಾಸಿಗೆ, ಮಂಚ ಸಿಕ್ತಾ ಅದೆ. ಅದರ ಬಾಯಿಗೂ ಮಣ್ಣಾಕ್ಕ ಬ್ಯಾಡ' ಎಂದು ತಿಪ್ಪಣ್ಣ ಬುದ್ಧಿ ಹೇಳಿದ. ಆದರೆ, ತುರೇಮಣೆಯ ಕನಸುಗಳ ನಿಲುವಿನಲ್ಲಿ ಬದಲಾವಣೆ ಕಾಣಲಿಲ್ಲ.

ಸಂಗತ

'ನೈತಿಕಕ್ಷಾಮ'ದ ಸುಳಿಯಲ್ಲಿ ಚಲನಚಿತ್ರ

ರಂಜನೆಯ ಸೂತ್ರಕ್ಕೆ ಜೋತುಬಿದ್ದಿರುವ ಕನ್ನಡ ಸಿನಿಮಾ, ಸಾಮಾಜಿಕ ಹೊಣೆಗಾರಿಕೆ ಮರೆತಿದೆ. ಸಿನಿಮಾಕ್ಕೆ ನೈತಿಕತೆ ಅಗತ್ಯ ಎನ್ನುವ ನಂಬಿಕೆಯಿಂದ ದೂರವಾಗುತ್ತಿದೆ.

• ರಾಜಕುಮಾರ ಕುಲಕರ್ಣಿ

ಗೋವಾದಲ್ಲಿ ಇತ್ತೀಚೆಗೆ ನಡೆದ 56ನೇ ಭಾರತದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ನಟ ಅಮೀರ್‌ಖಾನ್ ತಮ್ಮ ಸಿನಿಮಾಗಳ ಕಥಾವಸ್ತುವಿನ ಕುರಿತು ಹೇಳಿರುವುದು ಹೀಗೆ: 'ನಾನು ಸಿನಿಮಾಕ್ಕಾಗಿ ಆಯ್ದುಕೊಂಡ ಅಸಾಂಪ್ರದಾಯಿಕ ಆಯ್ಕೆಗಳು ಜನರೊಂದಿಗೆ ಸಂಪರ್ಕ ಹೊಂದಿದ್ದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ'. ಈ ಮಾತು ಸಿನಿಮಾದ ಕಥೆ ಜನರ ಬದುಕಿನೊಂದಿಗೆ ಬೆಸೆದುಕೊಂಡಿರಬೇಕು ಎನ್ನುವುದನ್ನು ಧ್ವನಿಸುತ್ತದೆ. ಬದುಕಿನ ಕನ್ನಡಿಯಾಗಿ ಒಂದು ನೈತಿಕ ಚೌಕಟ್ಟಿನಲ್ಲಿ ಸಿನಿಮಾ ರೂಪುಗೊಳ್ಳಬೇಕು. ದುರಂತವೆಂದರೆ, ಇಂದಿನ ಸಿನಿಮಾಗಳಲ್ಲಿ ನೀತಿ ಹಿನ್ನೆಲೆಗೆ ಸರಿದಿದೆ.

ಸಿನಿಮಾಗಳಲ್ಲಿ ನಟರು ಮಚ್ಚು, ಲಾಂಗು, ಬಂದೂಕು ಹಿಡಿದು ರಕ್ತದೋಕುಳಿ ಹರಿಸುತ್ತಿದ್ದಾರೆ. ಏನೆಲ್ಲ ಅಪರಾಧಗಳನ್ನು ಮಾಡಿಯೂ ನಾಯಕ ಅಂತಿಮವಾಗಿ ಆದರ್ಶಪ್ರಾಯನಾಗಿ ಬಿಂಬಿತನಾಗುತ್ತಿದ್ದಾನೆ. ನಾಯಕ ನಟರನ್ನು ಆರಾಧಿಸುವ ಮತ್ತು ಸಿನಿಮಾದ ಕಥೆಯನ್ನೇ ಸತ್ಯವೆಂದು ನಂಬುವ ಪ್ರೇಕ್ಷಕರಿರುವಾಗ, ಸಮಾಜವನ್ನು ಸರಿದಾರಿಯಲ್ಲಿ ಮುನ್ನಡೆಸುವ ಸಿನಿಮಾಗಳು ಬೇಕು.

ಈ ಹಿಂದೆ ನಿರ್ಮಾಣಗೊಳ್ಳುತ್ತಿದ್ದ ಸಿನಿಮಾಗಳಲ್ಲಿ ಒಂದು ಸಂದೇಶವಿರುತ್ತಿತ್ತು. ಕಲಾವಿದರು ಮತ್ತು ತಂತ್ರಜ್ಞರಲ್ಲಿ ಸಿನಿಮಾದ ಮೂಲಕ ಮೌಲ್ಯವನ್ನು ಬೋಧಿಸುವ ಬದ್ಧತೆ ಇರುತ್ತಿತ್ತು. ಕನ್ನಡ ಸಿನಿಮಾರಂಗದಲ್ಲಂತೂ ಅನೇಕ ಕಾದಂಬರಿಗಳು ಕಥಾವಸ್ತುವಾಗಿ, ಮೌಲ್ಯಪ್ರಧಾನ ಸಿನಿಮಾಗಳು ನಿರ್ಮಾಣವಾಗಲು ಕಾರಣವಾದವು. ಸಾಹಿತ್ಯಲೋಕದ ಕೆಲವು ಸೃಜನಶೀಲರು ಸಿನಿಮಾಗಳಿಗೆ ಕಥೆ-ಹಾಡುಗಳನ್ನು ಬರೆದರು. ಕುವೆಂಪು, ಬೇಂದ್ರೆ ಅವರಂಥ ಸಾಹಿತ್ಯಶ್ರೇಷ್ಠರ ಕವಿತೆಗಳು ಸಿನಿಮಾಗಳಲ್ಲಿ ಗೀತೆಗಳಾಗಿವೆ.

ಇಂದಿನ ನಾಯಕ ನಟರು ಏಕಕಾಲಕ್ಕೆ ನಾಯಕ, ಖಳ ಮತ್ತು ವಿದೂಷಕ- ಎಲ್ಲ ಪಾತ್ರಗಳಲ್ಲಿ ಅಭಿನಯಿಸುವ ಸಕಲಕಲಾವಲ್ಲಭರು! ಈ ಬೆಳವಣಿಗೆ ಸಿನಿಮಾಗಳಲ್ಲಿ ಕಥೆ ಮೂಲೆಗುಂಪಾಗಿ ನಾಯಕ ನಟರು ವಿಜೃಂಭಿಸಲು ಕಾರಣವಾಗಿದೆ. ನಾಯಕಪ್ರಧಾನ ಸಿನಿಮಾಗಳಲ್ಲಿ ರಂಜನೆ ಮುನ್ನೆಲೆಗೆ ಬಂದು ನೀತಿ ಹಿನ್ನೆಲೆಗೆ ಸರಿದಿದೆ. ಮನರಂಜನೆಯ ಹೆಸರಿನಲ್ಲಿ ಹಿಂಸೆಯನ್ನು ವೈಭವೀಕರಿಸುವ ಮತ್ತು ಮೈನವಿರೇಳುವ ದೃಶ್ಯಗಳಿಗೆ ಆದ್ಯತೆ ನೀಡಲಾಗುತ್ತಿದೆ. ನಾಯಕ ಮತ್ತು ದೃಶ್ಯ ಪ್ರಧಾನ ಸಿನಿಮಾಗಳಲ್ಲಿ ಉತ್ತಮ ಸಂದೇಶ ಸಾರುವ ಕಥೆಯನ್ನು ಕಣ್ಣಿಗೆ ದುರ್ಬೀನು ಹಾಕಿಕೊಂಡು ಹುಡುಕಬೇಕಾಗಿದೆ. ಕುಡಿತ, ಧೂಮಪಾನ, ಕೊಲೆ, ಅತ್ಯಾಚಾರದಂತಹ ದೃಶ್ಯಗಳು ಸಾಮಾನ್ಯವಾಗಿವೆ. ಇಂತಹ ಸಿನಿಮಾಗಳು ಪ್ರೇಕ್ಷಕರ ಅಭಿರುಚಿಯನ್ನು ಬದಲಿಸಿ ಅವರನ್ನು ತಪ್ಪುದಾರಿಗೆ ಎಳೆಯುತ್ತಿವೆ.

ಪ್ರೇಕ್ಷಕರಿಗೆ ಮನರಂಜನೆಯನ್ನು ಒದಗಿಸುವುದೇ ಆದ್ಯತೆ ಆಗಿರುವುದರಿಂದ ನೈಜತೆಗೆ ದೂರವಾದ ಸಿನಿಮಾಗಳು ನಿರ್ಮಾಣಗೊಳ್ಳುತ್ತಿವೆ. ಸಿನಿಮಾದ ಹಾಡು-ಹೊಡೆದಾಟಗಳಲ್ಲಿ ಕೃತಕತೆ ಎದ್ದು ಕಾಣುತ್ತಿದೆ. ಪ್ರೇಕ್ಷಕರನ್ನು ಆಕರ್ಷಿಸಲೆಂದು ಗ್ರಾಫಿಕ್ಸ್ ತಂತ್ರಜ್ಞಾನದ ಸಹಾಯದಿಂದ ಚೇತೋಹಾರಿ ದೃಶ್ಯಗಳನ್ನು ಸೃಷ್ಟಿಸಲಾಗುತ್ತಿದೆ. ಕೊಲೆಯಂತಹ ಘಾತುಕ ಕೃತ್ಯವನ್ನೂ ಸಿನಿಮಾಗಳಲ್ಲಿ ರಂಜಕ ನೆಲೆಯಲ್ಲಿ ತೋರಿಸಲಾಗುತ್ತಿದೆ. ಸಿನಿಮಾಗಳಲ್ಲಿ ಸಹಜ ಎನ್ನುವಂತೆ ತೋರಿಸುವ ಅಪರಾಧ ಕೃತ್ಯಗಳನ್ನು ನಿಜಜೀವನದಲ್ಲಿ ಅನುಕರಿಸುವವರ ಸಂಖ್ಯೆ ಹೆಚ್ಚುತ್ತಿದೆ. ಒಟ್ಟಾರೆ ಸಿನಿಮಾ ನಿರ್ಮಾಣದ ಹೊಸಸೂತ್ರವನ್ನು ರೂಪಿಸುವ ಧಾವಂತದಲ್ಲಿ ಚಿತ್ರರಂಗದ ಜನ, ಸಿನಿಮಾ ಮಾಧ್ಯಮವನ್ನು ನೀತಿಯ ಚೌಕಟ್ಟಿನಿಂದ ಹೊರಗೆ ತಂದಿರುವರು.

ಮನರಂಜನೆಯನ್ನೇ ಮೂಲ ಉದ್ದೇಶವಾಗಿಟ್ಟುಕೊಂಡು ಸಿನಿಮಾ ತಯಾರಿಸುತ್ತಿರುವ ಸಂದರ್ಭದಲ್ಲೇ, ಈ ಬದಲಾವಣೆಗೆ ಪರ್ಯಾಯವಾಗಿ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಸಿನಿಮಾಗಳು ವಿವಿಧ ಭಾಷೆಗಳಲ್ಲಿ ನಿರ್ಮಾಣಗೊಳ್ಳುತ್ತಿರುವುದು ಸಮಾಧಾನದ ಸಂಗತಿ. ವಿಪರ್ಯಾಸವೆಂದರೆ, ಈ ಪ್ರಕಾರದ ಸಿನಿಮಾಗಳನ್ನು ಮುಖ್ಯಧಾರೆಯಿಂದ ದೂರವಿಟ್ಟು ಅವುಗಳಿಗೆ 'ಕಲಾತ್ಮಕ ಸಿನಿಮಾಗಳು' ಎನ್ನುವ ಹಣೆಪಟ್ಟಿ ಕಟ್ಟಲಾಗಿದೆ. ಇಡೀ ಭಾರತೀಯ ಸಿನಿಮಾರಂಗಕ್ಕೆ ಅನ್ವಯಿಸುವ ದೂರು ಇದು. ಮುಖ್ಯಧಾರೆಯಿಂದ ಹೊರಗಿರುವ ಈ ಸಿನಿಮಾಗಳನ್ನು ಪ್ರದರ್ಶಿಸಲು ಚಿತ್ರಮಂದಿರದ ಸಮಸ್ಯೆ ಎದುರಾಗುತ್ತಿದೆ. ಕಲಾತ್ಮಕ ಸಿನಿಮಾಗಳನ್ನು ವೀಕ್ಷಿಸಿ ಪ್ರೋತ್ಸಾಹಿಸುವ ಸಹೃದಯಿ ಪ್ರೇಕ್ಷಕರ ಸಮೂಹವೊಂದು ರೂಪುಗೊಂಡಿಲ್ಲದಿರುವುದು ಕೂಡ ಸಮಸ್ಯೆಗೆ ಕಾರಣವಾಗಿದೆ.

ಕನ್ನಡ ಸಿನಿಮಾರಂಗದಲ್ಲಿ ಸಿನಿಮಾವನ್ನು ನೀತಿಯ ಚೌಕಟ್ಟಿನೊಳಗೆ ಕಟ್ಟಿಕೊಟ್ಟಿದ್ದು ವರನಟ ರಾಜ್‌ಕುಮಾರ್ ಅವರ ಸಿನಿಮಾಗಳ ಹೆಗ್ಗಳಿಕೆ ಎನ್ನುವ ಮಾತಿನಲ್ಲಿ ಉತ್ಪ್ರೇಕ್ಷೆಯಿಲ್ಲ. ರಾಜ್‌ಕುಮಾರ್ ಅನೇಕ ನೀತಿಬೋಧಕ ಸಿನಿಮಾಗಳಲ್ಲಿ ನಟಿಸುವ ಮೂಲಕ ಸಾಮಾಜಿಕ ಪಲ್ಲಟಗಳಿಗೆ ಕಾರಣರಾದರು. ಉತ್ತಮ ಸಂದೇಶ ಸಾರುವ ಸಿನಿಮಾಗಳ ರಾಯಭಾರಿಯಂತೆ ಅವರು ಕಾಣಿಸುತ್ತಿದ್ದರು. ಅವರ ಯುಗಾಂತ್ಯ, ಕನ್ನಡ ಸಿನಿಮಾರಂಗದಲ್ಲಿ ನೀತಿಗೆ ಒತ್ತುಕೊಡುವ ಸಿನಿಮಾಗಳ ಯುಗಾಂತ್ಯವೂ ಆದಂತಿದೆ.

ಪ್ರೀತಿ ಮತ್ತು ಯುದ್ಧದಲ್ಲಿ ಎಲ್ಲವೂ ನ್ಯಾಯಸಮ್ಮತ ಎನ್ನುವುದು ಈಗ ಸಿನಿಮಾ ಮಾಧ್ಯಮಕ್ಕೂ ಅನ್ವಯಿಸುತ್ತಿದೆ. ಅದಕ್ಕೆಂದೇ ಇಲ್ಲಿ ನೀತಿ ಮುಖ್ಯವಲ್ಲದ ಸಿನಿಮಾಗಳು ನಿರ್ಮಾಣಗೊಳ್ಳುತ್ತಿವೆ. ಗಲ್ಲಾಪೆಟ್ಟಿಗೆಯಲ್ಲಿ ಹಣದ ಹೊಳೆ ಹರಿಸುವ ಯಶಸ್ವಿ ಸಿನಿಮಾಗಳು ಅತ್ಯುತ್ತಮ ಸಿನಿಮಾಗಳೆನಿಸುತ್ತಿವೆ. 'ಮನುಷ್ಯನ ಮನಸ್ಸಿನ ಅನಿರೀಕ್ಷಿತ ಪದರುಗಳಿಗೆ ನಿರ್ದೇಶಕ ತನ್ನ ಒಳನೋಟವನ್ನು ಹರಿಸಿದಾಗ ಮಾತ್ರ ಅತ್ಯುತ್ತಮ ಸಿನಿಮಾಗಳ ಕಾಣ್ಕೆ ಸಾಧ್ಯ' ಎನ್ನುವುದು ಪಿ. ಲಂಕೇಶರ ಮಾತು. ಬದುಕಿನ ವಾಸ್ತವ ಸಂಗತಿಗಳನ್ನು ತೆರೆಯ ಮೇಲೆ ತೋರಿಸುವ ಸಿನಿಮಾಗಳು ಮಾತ್ರ ಚಿತ್ರರಂಗದ ಅತ್ಯುತ್ತಮ ಕಾಣ್ಕೆಗಳಾಗಿ ಬಹುಕಾಲ ಪ್ರೇಕ್ಷಕರ ನೆನಪಿನಲ್ಲಿ ಉಳಿಯಬಲ್ಲವು. ಇದು ಸಿನಿಮಾ ಮಾಧ್ಯಮದವರಿಗೆ ಅರ್ಥವಾಗುವುದು ಯಾವಾಗ?

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಂಜನಾದ್ರಿ: ಪ್ರಮುಖ ಪ್ರವಾಸಿ ಹಾಗೂ ಐತಿಹಾಸಿಕ ತಾಣ; ಮೂಲಸೌಕರ್ಯಗಳು ಗೌಣ

ಹನುಮನ ತವರಲ್ಲಿ ಅಭಿವೃದ್ಧಿಗೆ ಗರ

ಕೊಪ್ಪಳ ಜಿಲ್ಲೆಯಲ್ಲಿರುವ ಅಂಜನಾದ್ರಿ ಬೆಟ್ಟವು ಹನುಮ ಜನಿಸಿದ ಸ್ಥಳ ಎಂದೇ ಪ್ರಸಿದ್ಧವಾಗಿದೆ. ಅಂಜನಾದ್ರಿಯಲ್ಲಿ ಮಂಗಳವಾರ (ಡಿ.2) ಹಾಗೂ ಬುಧವಾರ (ಡಿ.3) ಹನುಮಮಾಲೆ ವಿಸರ್ಜನೆ ನಡೆಯಲಿದೆ. ರಾಜ್ಯ ಹಾಗೂ ಹೊರರಾಜ್ಯಗಳ ಭಕ್ತರು ಬೆಟ್ಟದ ಮೇಲಿನ ಆಂಜನೇಯನ ಸನ್ನಿಧಿಯಲ್ಲಿ ಮಾಲೆ ವಿಸರ್ಜನೆ ಮಾಡುತ್ತಾರೆ. ಉತ್ತರ ಭಾರತದಿಂದಲೂ ಅನೇಕ ಭಕ್ತರು ಬೆಟ್ಟಕ್ಕೆ ಬರುತ್ತಾರೆ. ಆದರೆ, ಐತಿಹಾಸಿಕ ಮಹತ್ವ ಇರುವ, ಪ್ರವಾಸೋದ್ಯಮದ ದೃಷ್ಟಿಯಿಂದಲೂ ಪ್ರಮುಖವಾಗಿರುವ ಅಂಜನಾದ್ರಿಯು ಅಭಿವೃದ್ಧಿಯಲ್ಲಿ ಹಿಂದೆ ಬಿದ್ದಿದೆ. ಸೂಕ್ತ ಸೌಕರ್ಯಗಳನ್ನು ಕಲ್ಪಿಸಿದರೆ, ಅಂಜನಾದ್ರಿಯು ಕಲ್ಯಾಣ ಕರ್ನಾಟಕದ ಪ್ರಮುಖ ಪ್ರವಾಸಿ ಸ್ಥಳವಾಗಿ ಅಭಿವೃದ್ಧಿ ಹೊಂದುವ ಎಲ್ಲ ಸಾಧ್ಯತೆಗಳೂ ಇವೆ

● ಪ್ರಮೋದ ಕುಲಕರ್ಣಿ

ರಾಮಾಯಣದ ಐತಿಹ್ಯ ಹೊಂದಿರುವ ಕಿಷ್ಕಿಂಧೆ ಪ್ರದೇಶದಲ್ಲಿರುವ ಅಂಜನಾದ್ರಿ ಬೆಟ್ಟವು ಹನುಮ ಜನಿಸಿದ ಸ್ಥಳ ಎನ್ನುವ ನಂಬಿಕೆ ಇದೆ. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಚಿಕ್ಕರಾಂಪುರ ಗ್ರಾಮ ಸಮೀಪದ ಅಂಜನಾದ್ರಿ ಬೆಟ್ಟಕ್ಕೆ ಹನುಮಂತನ ತಾಯಿ ಅಂಜನಾದೇವಿಯಿಂದಲೇ ಈ ಹೆಸರು ಬಂದಿದೆ ಎನ್ನುವ ಪ್ರತೀತಿಯಿದೆ. ಜತೆಗೆ, ಬೆಟ್ಟದ ಸುತ್ತಲೂ ಇರುವ ರಮಣೀಯ ಪರಿಸರವು ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದೆ. ಸಮೀಪದಲ್ಲಿಯೇ ವಿಶಾಲವಾಗಿ ಹರಿಯುವ ತುಂಗಭದ್ರಾ ನದಿ, ಹಸಿರಿನಿಂದ ಕಂಗೊಳಿಸುವ ಪ್ರಕೃತಿ, ಬೆಟ್ಟವೇರಿದರೆ ಕಾಣುವ ವಿಶ್ವವಿಖ್ಯಾತ ಹಂಪಿಯ ಸ್ಮಾರಕಗಳು, ವಾನರ ಚಿನ್ನಾಟ, ಸೂರ್ಯೋದಯ, ಸೂರ್ಯಾಸ್ತದ ಸೊಬಗು ಕಣ್ತುಂಬಿಕೊಳ್ಳಲು ಇರುವ ಅವಕಾಶ, ಕಣ್ಣು ಹಾಯಿಸಿದಷ್ಟೂ ದೂರ ಕಾಣುವ ಬೆಟ್ಟಗಳ ಸಾಲು ಜನರನ್ನು ಮತ್ತೆ ಮತ್ತೆ ಅಂಜನಾದ್ರಿಗೆ ಬರುವಂತೆ ಪ್ರೇರೇಪಿಸುತ್ತವೆ.

ಪಂಪಾ ಸರೋವರ, ಆನೆಗೊಂದಿ, ನವವೃಂದಾವನ ಗಡ್ಡೆ, ಋಷ್ಯಮುಖ ಪರ್ವತ, ವಿಜಯನಗರ ಕಾಲದ ಪ್ರಮುಖ ರಾಜ ಕೃಷ್ಣದೇವರಾಯನ ಸಮಾಧಿ ಸ್ಥಳವಾದ 64 ಸಾಲುಗಳ ಕಲ್ಲಿನ ಮಂಟಪ, ಗಗನ್ ಮಹಲ್, ಚಿಂತಾಮಣಿ, ತಳವಾರಘಟ್ಟ, ರಂಗನಾಥಸ್ವಾಮಿ ದೇವಸ್ಥಾನ, ಹುಚ್ಚಪ್ಪನ ಮಠ, ಬಾಳೆನಾರಿನ ಕರಕುಶಲ ಕೇಂದ್ರ, ಸಾಣಾಪುರ ಫಾಲ್ಸ್, ಆನೆಗೊಂದಿ ಕೋಟೆ, ದುರ್ಗಾದೇವಿ ದೇವಸ್ಥಾನ, ಬೆಟ್ಟದ ಮೇಲಿರುವ ಬಾಲಾಂಜನೇಯ ದೇವಸ್ಥಾನ ಹೀಗೆ ಅನೇಕ ಐತಿಹಾಸಿಕ ಸ್ಥಳಗಳು ಅಂಜನಾದ್ರಿ ಸಮೀಪದಲ್ಲಿವೆ. ಇವು ಪ್ರವಾಸಪ್ರಿಯರಿಗೆ ಅಚ್ಚುಮೆಚ್ಚಿನ ಪ್ರದೇಶಗಳಾಗಿವೆ. ಉತ್ತರ ಭಾರತದ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಗೆ ಬರುತ್ತಾರೆ. ಇಷ್ಟೆಲ್ಲ ಮಹತ್ವ ಪಡೆದಿರುವ ಅಂಜನಾದ್ರಿ ಕ್ಷೇತ್ರವು ಮೂಲಸೌಕರ್ಯಗಳ ಕೊರತೆಯಿಂದ ಬಳಲುತ್ತಿದೆ. ದೇವಸ್ಥಾನವು ಧಾರ್ಮಿಕ ದತ್ತಿ ಇಲಾಖೆ ಸುಪರ್ದಿಯಲ್ಲಿದೆ.

ಸೌಲಭ್ಯಗಳ ಕೊರತೆ: ಪ್ರತಿ ವಾರಾಂತ್ಯದ ದಿನಗಳಂದು ಅಂಜನಾದ್ರಿ ಬೆಟ್ಟವೇರಲು 575 ಮೆಟ್ಟಿಲುಗಳ ಮೇಲೂ ಜನ ಸರತಿಯಲ್ಲಿ ನಿಲ್ಲುತ್ತಾರೆ. ಶನಿವಾರ ಭಕ್ತರ ಸಂಖ್ಯೆ ತುಸು ಹೆಚ್ಚೇ ಇರುತ್ತದೆ. ಪ್ರತಿವರ್ಷ ಹನುಮಮಾಲೆ ವಿಸರ್ಜನೆ ಮತ್ತು ಹನುಮ ಜಯಂತಿ ದಿನಗಳಂದು ರಾಜ್ಯ ಹಾಗೂ ಹೊರರಾಜ್ಯಗಳಿಂದ ದೊಡ್ಡ ಸಂಖ್ಯೆಯಲ್ಲಿ ಜನ ಬರುತ್ತಾರೆ. ಬೆಟ್ಟವು ನೆಲಮಟ್ಟದಿಂದ ಸುಮಾರು 550 ಅಡಿ ಎತ್ತರದಲ್ಲಿದ್ದು, ಬೆಟ್ಟದ ಮೇಲಿರುವ ಆಂಜನೇಯನ ಮೂರ್ತಿಯ ದರ್ಶನ ಪಡೆಯಲು ಭಕ್ತರು ಮೆಟ್ಟಿಲುಗಳನ್ನು ಏರುವುದು ಅನಿವಾರ್ಯ. ಬೆಟ್ಟವೇರುವ ಮಾರ್ಗದಲ್ಲಿ ಅಸ್ವಸ್ಥರಾಗಿ ವಯಸ್ಕರೂ ಸೇರಿದಂತೆ ಹಲವರು ಪ್ರಾಣ ಕಳೆದುಕೊಂಡ ಘಟನೆಗಳು ಈ ಹಿಂದೆ ನಡೆದಿವೆ. ಅಂಥ ದುರ್ಘಟನೆಗಳು ನಡೆದಾಗ ತಕ್ಷಣವೇ ತುರ್ತು ಚಿಕಿತ್ಸೆಗೆ ವ್ಯವಸ್ಥೆಯಾಗಬೇಕಿದೆ. ಬೆಟ್ಟವೇರುವ ಮಾರ್ಗದಲ್ಲಿ ಕುಡಿಯುವ ನೀರು, ತುರ್ತು ಚಿಕಿತ್ಸೆಗೆ ವೈದ್ಯಕೀಯ ಸೌಲಭ್ಯ, ಬೆಟ್ಟವೇರಲು ದೈಹಿಕವಾಗಿ ಸಾಧ್ಯವಾಗದಿರುವವರಿಗೆ ರೋಪ್ ವೇ, ಉಳಿದುಕೊಳ್ಳಲು ಕೊಠಡಿಗಳು ತುರ್ತಾಗಿ ನಿರ್ಮಾಣವಾಗಬೇಕಾಗಿವೆ.

ರಾಜ್ಯ ಸರ್ಕಾರ ಪ್ರವಾಸಿಗರ ಅನುಕೂಲಕ್ಕೆ ಅಂಜನಾದ್ರಿ ಬೆಟ್ಟಕ್ಕೆ ಕೇಬಲ್ ಕಾರ್ ಸೌಲಭ್ಯ ಆರಂಭಿಸುವ ಭರವಸೆ ನೀಡಿದ್ದರೂ ಅದಿನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಶೌಚಾಲಯಗಳು, ಯಾತ್ರಿ ನಿವಾಸ, ವಾಣಿಜ್ಯ ಮಳಿಗೆ ಕಾಮಗಾರಿ ಮಾತ್ರ ಪ್ರಗತಿಯಲ್ಲಿವೆ.

ಹಣ ಇದ್ದರೂ, ಆಗಿಲ್ಲ ಪ್ರಗತಿ: ರಾಜ್ಯದ ಹಿಂದಿನ ಬಿಜೆಪಿ ಸರ್ಕಾರ 2022–23ರ ಬಜೆಟ್‌ನಲ್ಲಿ ₹100 ಕೋಟಿ ಘೋಷಣೆ ಮಾಡಿತ್ತು. ಕಾಂಗ್ರೆಸ್ ಸರ್ಕಾರವೂ ಕಳೆದ ವರ್ಷದ ಬಜೆಟ್‌ನಲ್ಲಿ ₹100 ಕೋಟಿ ಘೋಷಣೆ ಮಾಡಿದೆ. 2023ರ ಮಾರ್ಚ್‌ನಲ್ಲಿ ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಭಿವೃದ್ಧಿ ಕಾರ್ಯಗಳಿಗೆ ಅಂಜನಾದ್ರಿಯಲ್ಲಿ ಚಾಲನೆ ಕೊಟ್ಟಿದ್ದರೂ ಪ್ರಸ್ತುತ ₹17.15 ಕೋಟಿ ವೆಚ್ಚದ ಕಾಮಗಾರಿಗಳು ಮಾತ್ರ ನಡೆಯುತ್ತಿದ್ದು, ಅವೂ ಮಂದಗತಿಯಲ್ಲಿ ಸಾಗಿವೆ. ಭಕ್ತರಿಂದ ಸಂಗ್ರಹವಾದ ದೇಣಿಗೆ ಮೊತ್ತವೇ ಪ್ರಸ್ತುತ ₹8.07 ಕೋಟಿ ಇದ್ದರೂ ಭಕ್ತರಿಗೆ ಮೂಲಸೌಲಭ್ಯದ ಕೊರತೆ ಕಾಡುತ್ತಿದೆ.

ವರ್ಷದಿಂದ ವರ್ಷಕ್ಕೆ ಈ ಕ್ಷೇತ್ರದ ಖ್ಯಾತಿ ಹೆಚ್ಚಾಗುತ್ತಲೇ ಸಾಗಿದ್ದು, ಭಕ್ತರ ಸಂಖ್ಯೆ ಏರುತ್ತಲೇ ಇದೆ. ಪ್ರತಿ ಚುನಾವಣೆ ಸಮಯದಲ್ಲಿ ರಾಜಕೀಯ ಪಕ್ಷಗಳಿಗೆ ಅಂಜನಾದ್ರಿಯ ಹನುಮಂತನ ಕ್ಷೇತ್ರವು ಮತಗಳಿಕೆಗೆ ವಸ್ತುವಾಗುತ್ತಿದೆ. ರಾಜಕೀಯ ನಾಯಕರು ಮತಬೇಟೆಯ ಫಸಲು ಗಿಟ್ಟಿಸಿಕೊಳ್ಳಲು 'ಅಂಜನಾದ್ರಿ ಅಭಿವೃದ್ಧಿಗೆ ಆದ್ಯತೆ' ಎನ್ನುವ ಹೇಳಿಕೆಯ ಅಸ್ತ್ರ ಪ್ರಯೋಗಿಸುತ್ತಿದ್ದಾರೆ. ಆದರೆ, ಅಭಿವೃದ್ಧಿ ಮಾತ್ರ ನಿರೀಕ್ಷೆಯಂತೆ ಆಗಿಲ್ಲ ಎನ್ನುವ ಬೇಸರ ಜನರಲ್ಲಿದೆ.



ಅಂಜನಾದ್ರಿ ಬೆಟ್ಟದ ವಿಹಂಗಮ ನೋಟ ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

ಪ್ರಮುಖ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ

- ₹14 ಕೋಟಿ — ದೇವಸ್ಥಾನ ನವೀಕರಣ
- ₹15 ಕೋಟಿ — ಬೆಟ್ಟದ ಹಿಂಭಾಗ ಥೀಮ್ ಆಧಾರಿತ ಮೆಟ್ಟಿಲು
- ₹10 ಕೋಟಿ — ಅಡುಗೆ ಕೊಠಡಿ, ಊಟದ ಕೊಠಡಿ
- ₹5 ಕೋಟಿ — ರಾಮಾಯಣ ಪ್ರದರ್ಶನ ಮತ್ತು ಪೇಂಟಿಂಗ್
- ₹10 ಕೋಟಿ — ಕುಡಿಯುವ ನೀರು, ವೇದಿಕೆ, ಶೌಚಾಲಯ ವ್ಯವಸ್ಥೆ
- ₹5 ಕೋಟಿ — ಸಮುದಾಯ ಭವನ ನಿರ್ಮಾಣ
- ₹5 ಕೋಟಿ — ಬೆಟ್ಟದ ಪ್ರದೇಶದ ತನಕ ರಸ್ತೆ
- ₹5 ಕೋಟಿ — ಧ್ವನಿ ಮತ್ತು ಬೆಳಕು ಕಾರ್ಯಕ್ರಮ

ಮಾಲೆ ವಿಸರ್ಜನೆ: ಇಂದು, ನಾಳೆ

ಅಂಜನಾದ್ರಿ ಮೂರ್ತಿ

ಅಂಜನಾದ್ರಿ ಬೆಟ್ಟದಲ್ಲಿ ಮಂಗಳವಾರ (ಡಿ.2) ಹಾಗೂ ಬುಧವಾರ (ಡಿ.3) ಹನುಮಮಾಲೆ ವಿಸರ್ಜನೆ ನಡೆಯಲಿದೆ. ತಮ್ಮ ಸಂಕಲ್ಪಕ್ಕೆ ಅನುಗುಣವಾಗಿ ಕೇಸರಿ ಬಣ್ಣದ ಬಟ್ಟೆ ಹಾಗೂ ಕೊರಳಲ್ಲಿ ತುಳಸಿ ಮಾಲೆ ಧರಿಸುವ ಭಕ್ತರು ರಾಜ್ಯ ಹಾಗೂ ಹೊರರಾಜ್ಯಗಳಿಂದ ಬಂದು ಬೆಟ್ಟದ ಮೇಲಿನ ಆಂಜನೇಯನ ಸನ್ನಿಧಿಯಲ್ಲಿ ಮಾಲೆ ವಿಸರ್ಜನೆ ಮಾಡುತ್ತಾರೆ. ದೂರದ ಊರುಗಳಿಂದ ಪಾದಯಾತ್ರೆ ಬರುವುದು ಸಾಮಾನ್ಯ.

ಉತ್ತರ ಭಾರತೀಯರಿಗೆ ಯಾಕೆ ಪವಿತ್ರ?

ಮಧ್ಯಪ್ರದೇಶ, ರಾಜಸ್ಥಾನ, ಉತ್ತರ ಪ್ರದೇಶ, ಗುಜರಾತ್ ರಾಜ್ಯಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಕಿಷ್ಕಿಂಧೆ ಪ್ರದೇಶವಾದ ಪಂಪಾ ಸರೋವರ, ಅಂಜನಾದ್ರಿ ಹಾಗೂ ಋಷ್ಯಮುಖ ಪರ್ವತಕ್ಕೆ ಭೇಟಿ ನೀಡುತ್ತಾರೆ. ಆಯೋಧ್ಯೆಯಲ್ಲಿ ರಾಮನ ದರ್ಶನ ಪಡೆದು ಅಂಜನಾದ್ರಿಯಲ್ಲಿ ಹನುಮನ ಸನ್ನಿಧಿಗೆ ಬಂದರಷ್ಟೇ ತೀರ್ಥಯಾತ್ರೆ ಪರಿಪೂರ್ಣ ಎನ್ನುವ ನಂಬಿಕೆ ಆ ರಾಜ್ಯಗಳ ಜನರಲ್ಲಿದೆ.

ತಿರುಪತಿ ತಿರುಮಲ, ಮಹಾರಾಷ್ಟ್ರದ ನಾಸಿಕ್ ಹಾಗೂ ಕೊಪ್ಪಳದ ಅಂಜನಾದ್ರಿ ಹೀಗೆ ಹನುಮಂತ ಎಲ್ಲಿ ಜನಿಸಿದ್ದಾನೆ ಎನ್ನುವ ಚರ್ಚೆ ಹಿಂದೆ ವ್ಯಾಪಕವಾಗಿದ್ದರಿಂದ ಆಯೋಧ್ಯೆಗೆ ತೆರಳಿದ ಭಕ್ತರು ಅಲ್ಲಲ್ಲಿ ಚದುರಿ ಹೋಗುತ್ತಿದ್ದರು. ಇತ್ತೀಚೆಗಿನ ವರ್ಷಗಳಲ್ಲಿ ಅಂಜನಾದ್ರಿಯೇ ಹನುಮನ ಜನ್ಮಸ್ಥಳ ಎನ್ನುವ ನಂಬಿಕೆ ಉತ್ತರ ಭಾರತೀಯರಲ್ಲಿ ಮೂಡಿರುವುದರಿಂದ ಭಕ್ತರ ಸಂಖ್ಯೆ ಹೆಚ್ಚಾಗುತ್ತಿದೆ.

'ಉತ್ತರ ಭಾರತೀಯರ ಮೇಲೆ ಹನುಮಾನ್ ಚಾಲೀಸ ಪ್ರಭಾವ ಬಹಳಷ್ಟಿದೆ. ಭಾರತದ ಶ್ರೇಷ್ಠ ಸರೋವರಗಳಲ್ಲಿ ಅಂಜನಾದ್ರಿ ಸಮೀಪದ ಪಂಪಾ ಸರೋವರವೂ ಒಂದಾಗಿದೆ. ರಾಮ ಪಂಪಾ ಸರೋವರಕ್ಕೆ ಬಂದಿದ್ದ ಐತಿಹ್ಯವಿದೆ. ಆದ್ದರಿಂದ ಬೇರೆ ರಾಜ್ಯಗಳ ಭಕ್ತರು ಪಂಪಾ ಸರೋವರಕ್ಕೆ ಬಂದು ಸ್ನಾನಮಾಡಿ ಅಂಜನಾದ್ರಿಗೆ ಬರುತ್ತಾರೆ. ರಾಮ ಹಾಗೂ ಹನುಮಂತ ಮೊದಲ ಬಾರಿಗೆ ಭೇಟಿಯಾದ ಅಂಜನಾದ್ರಿ ಮುಂಭಾಗದಲ್ಲಿರುವ ಋಷ್ಯಮುಖ ಪರ್ವತಕ್ಕೆ ಭೇಟಿ ನೀಡಿದ ಬಳಿಕವೇ ಉತ್ತರ ಭಾರತದ ಜನರ ತೀರ್ಥಯಾತ್ರೆ ಪೂರ್ಣಗೊಳ್ಳುತ್ತದೆ ಎಂದು ಗಂಗಾವತಿಯ ಉಪನ್ಯಾಸಕ ಗುಂಡೂರು ಪವನಕುಮಾರ್ ತಿಳಿಸಿದರು.

ರಾಷ್ಟ್ರೀಯ

ಸಾಂದರ್ಭಿಕ ಚಿತ್ರ



ನಾಲ್ಕು ಕಾರ್ಮಿಕ ಸಂಹಿತೆಗಳು ಹೊಸ ನಿಯಮಗಳಲ್ಲೇನಿದೆ?

ಬೆಂಗಳೂರು: ಕೇಂದ್ರ ಸರ್ಕಾರವು ಕಾರ್ಮಿಕ ಕಲ್ಯಾಣದ ದೃಷ್ಟಿಯಿಂದ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರೂಪಿಸಿದೆ. ವೇತನ ಸಂಹಿತೆ (2019), ಕೈಗಾರಿಕಾ ಸಂಪರ್ಕ ಸಂಹಿತೆ (2020), ಸಾಮಾಜಿಕ ಭದ್ರತಾ ಸಂಹಿತೆ (2020), ಉದ್ಯೋಗ ಭದ್ರತೆ, ಆರೋಗ್ಯ ಮತ್ತು ಕೆಲಸದ ಸ್ಥಿತಿಗತಿಗಳ ಸಂಹಿತೆ (2020) ಜಾರಿಗೆ ಬಂದಿದ್ದು, ಕಾರ್ಮಿಕರ ಜೀವನ ಮಟ್ಟವನ್ನು ಸುಧಾರಿಸುವ ದಿಸೆಯಲ್ಲಿ ಇವುಗಳನ್ನು ರೂಪಿಸಲಾಗಿದೆ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಪ್ರತಿಪಾದಿಸಿದೆ.

ಇದುವರೆಗೂ ಅಸ್ತಿತ್ವದಲ್ಲಿದ್ದ 29 ಕಾರ್ಮಿಕ ಕಾನೂನುಗಳನ್ನು ಪರಾಮರ್ಶಿಸಿ, ನಿಯಮಾವಳಿಗಳನ್ನು ಆಧುನೀಕರಿಸಿ ಹೊಸ ಸಂಹಿತೆಗಳನ್ನು ರೂಪಿಸಲಾಗಿದೆ. ಪ್ರಗತಿ ಪಥದಲ್ಲಿ ಸಾಗುತ್ತಿರುವ ದೇಶದ ಉದ್ಯಮ ರಂಗಕ್ಕೆ ತಕ್ಕಂತೆ ಕಾರ್ಮಿಕ ವ್ಯವಸ್ಥೆಯನ್ನು ಸಜ್ಜುಗೊಳಿಸುವ ಆಶಯ ಇವುಗಳ ಹಿಂದಿದೆ ಎಂದು ಕೇಂದ್ರವು ಹೇಳಿದೆ.

ಹೊಸ ಕಾರ್ಮಿಕ ಸಂಹಿತೆಗಳ ಅಗತ್ಯವೇನು?

ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಬಹುತೇಕ ಕಾರ್ಮಿಕ ಕಾನೂನುಗಳು ಸ್ವಾತಂತ್ರ್ಯಪೂರ್ವದಲ್ಲಿ ಮತ್ತು ದೇಶದಲ್ಲಿ ಉದ್ಯಮಗಳು ಆರಂಭವಾಗುತ್ತಿದ್ದ ಹಂತದಲ್ಲಿ ರೂಪಿಸಿದಂಥವು. ಜಗತ್ತಿನ ಮುಂದುವರಿದ ಆರ್ಥಿಕತೆಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಕಾರ್ಮಿಕ ಕಾನೂನುಗಳನ್ನು ಬದಲಾಯಿಸಿದ್ದರೂ ಭಾರತದಲ್ಲಿ ಹಳೆಯ ನಿಯಮಗಳೇ ಚಾಲ್ತಿಯಲ್ಲಿದ್ದವು. ವಸಾಹತುಶಾಹಿಯ ನೆರಳಿನಿಂದ ಹೊರಬಂದು, ಉದ್ಯಮ ರಂಗದ ಅಗತ್ಯಕ್ಕೆ ತಕ್ಕಂತೆ, ಉದ್ಯಮಿ ಮತ್ತು ಕಾರ್ಮಿಕ ಇಬ್ಬರ ಹಿತವನ್ನೂ ಕಾಯುವಂತೆ ಹೊಸ ನಿಯಮಗಳನ್ನು ರೂಪಿಸುವುದು ಅಗತ್ಯವಾಗಿತ್ತು. ಈ ದಿಸೆಯಲ್ಲಿ ಕಾರ್ಮಿಕ ಸಂಹಿತೆಗಳನ್ನು ಜಾರಿಗೊಳಿಸಲಾಗಿದೆ. ಸದ್ಯದ ಮತ್ತು ಭವಿಷ್ಯದ ತಾಂತ್ರಿಕ ಹಾಗೂ ಆರ್ಥಿಕ ಬೆಳವಣಿಗೆಗಳನ್ನು ದೃಷ್ಟಿಯಲ್ಲಿರಿಸಿಕೊಂಡು, ಆತ್ಮನಿರ್ಭರ ಭಾರತಕ್ಕಾಗಿ ಕಾರ್ಮಿಕ ಪಡೆಯನ್ನು ಸಿದ್ಧಗೊಳಿಸಲು ಈ ನಾಲ್ಕು ಸಂಹಿತೆಗಳು ನೆರವಾಗಲಿವೆ ಎಂದು ಕೇಂದ್ರವು ಹೇಳಿದೆ.

ಏನು ಬದಲಾವಣೆ?

- **ಉದ್ಯೋಗವನ್ನು ಅಧಿಕೃತಗೊಳಿಸುವುದು:** ಇದುವರೆಗೆ ನೇಮಕಾತಿ ಪತ್ರವು ಕಡ್ಡಾಯವಾಗಿರಲಿಲ್ಲ. ಹೊಸ ಸಂಹಿತೆಯಲ್ಲಿ ಇದು ಕಡ್ಡಾಯವಾಗಿದ್ದು, ಪಾರದರ್ಶಕತೆ, ಉದ್ಯೋಗ ಭದ್ರತೆ ಮತ್ತು ನಿಶ್ಚಿತ ಉದ್ಯೋಗವನ್ನು ಖಾತ್ರಿಪಡಿಸುತ್ತದೆ
- **ಸಾಮಾಜಿಕ ಭದ್ರತೆಯ ವ್ಯಾಪ್ತಿ:** ಇದುವರೆಗೂ ಸಾಮಾಜಿಕ ಭದ್ರತೆಯ ವ್ಯಾಪ್ತಿಯು ಸೀಮಿತವಾಗಿತ್ತು. ಹೊಸ ಸಂಹಿತೆಯಲ್ಲಿ ಎಲ್ಲ ಕಾರ್ಮಿಕರಿಗೂ (ಗಿಗ್ ಮತ್ತು ಫ್ಲಾಟ್‌ಫಾರ್ಮ್ ಕಾರ್ಮಿಕರು ಸೇರಿದಂತೆ) ಸಾಮಾಜಿಕ ಭದ್ರತೆ ಒದಗಿಸಲಾಗಿದೆ. ಪಿಎಫ್, ಇಎಸ್‌ಐಸಿ, ವಿಮೆ ಮತ್ತು ಇತರ ಸಾಮಾಜಿಕ ಭದ್ರತಾ ಸೌಲಭ್ಯಗಳು ಲಭ್ಯ
- **ಕನಿಷ್ಠ ವೇತನ:** ಇದುವರೆಗೆ ನಿರ್ದಿಷ್ಟ ಉದ್ಯಮ/ಕಾರ್ಮಿಕರಿಗೆ ಮಾತ್ರ ಕನಿಷ್ಠ ವೇತನ ನಿಯಮ ಅನ್ವಯವಾಗುತ್ತಿತ್ತು. ಹೆಚ್ಚಿನವರು ನಿಯಮದಿಂದ ಹೊರಗಿದ್ದರು. ನೂತನ ವೇತನ ಸಂಹಿತೆ 2019ರಂತೆ, ಕನಿಷ್ಠ ಮತ್ತು ಸಕಾಲಿಕ ವೇತನವು ಪ್ರತಿಯೊಬ್ಬ ಕಾರ್ಮಿಕನ ಶಾಸನಬದ್ಧ ಹಕ್ಕಾಗಿದೆ
- **ಆರೋಗ್ಯ ರಕ್ಷಣೆ:** ಇದುವರೆಗಿನ ನಿಯಮಗಳಲ್ಲಿ, ವಾರ್ಷಿಕ ಉಚಿತ ಆರೋಗ್ಯ ತಪಾಸಣೆ ಕಡ್ಡಾಯವಾಗಿರಲಿಲ್ಲ. ಪ್ರಸ್ತುತ ಸಂಹಿತೆಯ ಪ್ರಕಾರ, 40 ವರ್ಷ ದಾಟಿದ ಪ್ರತಿಯೊಬ್ಬ ಕಾರ್ಮಿಕನಿಗೂ ವಾರ್ಷಿಕ ಆರೋಗ್ಯ ತಪಾಸಣೆ ಮಾಡಿಸಬೇಕು
- **ಮಹಿಳಾ ಕಾರ್ಮಿಕರ ಪಾಲ್ಗೊಳ್ಳುವಿಕೆ:** ರಾತ್ರಿ ಪಾಳಿಯಲ್ಲಿ ಮತ್ತು ಕೆಲವು ವಲಯಗಳಲ್ಲಿ ಮಹಿಳಾ ಕಾರ್ಮಿಕರು ಕೆಲಸ ಮಾಡುವುದನ್ನು ನಿರ್ಬಂಧಿಸಲಾಗಿತ್ತು. ಪ್ರಸ್ತುತ ಆ ನಿರ್ಬಂಧವನ್ನು ತೆಗೆದುಹಾಕಲಾಗಿದ್ದು, ಎಲ್ಲ ಪಾಳಿಗಳಲ್ಲಿ ಮತ್ತು ಎಲ್ಲ ವಲಯಗಳಲ್ಲಿ (ಮಹಿಳಾ ಕಾರ್ಮಿಕರ ಒಪ್ಪಿಗೆ ಮತ್ತು ಅಗತ್ಯ ಸುರಕ್ಷತೆಯ ಕ್ರಮಗಳಿಗೆ ಒಳಪಟ್ಟು) ಮಹಿಳೆಯರು ಕೆಲಸ ಮಾಡಲು ಅವಕಾಶ ಕಲ್ಪಿಸಲಾಗಿದೆ. ಮಹಿಳಾ ಕಾರ್ಮಿಕರಿಗೆ ಇದು ಸಮಾನ ಅವಕಾಶಗಳನ್ನು ಕಲ್ಪಿಸುತ್ತದೆ
- **ಇಎಸ್‌ಐಸಿ:** ಇದುವರೆಗೆ ನಿರ್ದಿಷ್ಟ ವಲಯಗಳ ಕಾರ್ಮಿಕರಿಗೆ ಮಾತ್ರ ಇಎಸ್‌ಐಸಿ ಸೌಲಭ್ಯ ಇತ್ತು. ಅದನ್ನು ಬದಲಾಯಿಸಲಾಗಿದ್ದು, ದೇಶದಾದ್ಯಂತ ಎಲ್ಲ ವಲಯಗಳ ಕಾರ್ಮಿಕರಿಗೂ (10 ಕಾರ್ಮಿಕರಿಗಿಂತ ಕಡಿಮೆ ಇದ್ದರೂ) ಸೌಲಭ್ಯ ವಿಸ್ತರಿಸಲಾಗಿದೆ
- **ಏಕ, ಸರಳೀಕೃತ ವ್ಯವಸ್ಥೆ:** ಇದುವರೆಗಿನ ನಿಯಮಗಳಲ್ಲಿ ಹಲವು ನೋಂದಣಿಗಳು, ಹಲವು ಪರವಾನಗಿಗಳು ಅಗತ್ಯವಾಗಿದ್ದವು. ಪ್ರಸ್ತುತ ಸಂಹಿತೆಗಳಲ್ಲಿ ಅದನ್ನು ಸರಳೀಕರಿಸಲಾಗಿದ್ದು, ದೇಶದಾದ್ಯಂತ ಒಂದು ನೋಂದಣಿ, ಒಂದು ಪರವಾನಗಿ ಸಾಕು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಾಲಿವುಡ್ ನಟ ಶಾರುಕ್ ಖಾನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಮುಂದೆ ನಿಂತು ಮಾತನಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಜಿಹಾದ್'ನ ಅರ್ಥವೇನು ಎನ್ನುವುದನ್ನು ಶಾರುಕ್ ಅವರು ಪ್ರಧಾನಿಗೆ ವಿವರಿಸಿದರು. 'ನಾನು ಒಬ್ಬ ಮುಸ್ಲಿಂ ಆಗಿದ್ದು, ಇಸ್ಲಾಂನಲ್ಲಿ ನಂಬಿಕೆ ಹೊಂದಿದ್ದೇನೆ' ಎಂದು ಶಾರುಕ್ ಪ್ರಧಾನಿಗೆ ಹೇಳಿದರು ಎಂಬುದಾಗಿ ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊದ ಕೀಫ್ರೇಮ್ ಅನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಅದೇ ವಿಡಿಯೊ 2019ರ ಅಕ್ಟೋಬರ್‌ನಲ್ಲಿ ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಆಗಿರುವುದು ಕಂಡಿತು. ಮಹಾತ್ಮ ಗಾಂಧಿ ಅವರ 150ನೇ ಜನ್ಮದಿನಾಚರಣೆ ಆಚರಣೆ ಸಂಬಂಧ ಪ್ರಧಾನಿ ಮೋದಿ ಅವರು ಚಿತ್ರರಂಗದ ಗಣ್ಯರೊಂದಿಗೆ ಸಂವಾದ ನಡೆಸಿದರು ಎಂದು ಅಡಿಬರಹದಲ್ಲಿ ಉಲ್ಲೇಖಿಸಲಾಗಿದೆ. ವಿಡಿಯೊದಲ್ಲಿ ಶಾರುಕ್ ಅವರು ಎಲ್ಲಿಯೂ 'ಜಿಹಾದ್' ಪದ ಬಳಸಿಲ್ಲ. ಮತ್ತಷ್ಟು ಹುಡುಕಾಟ ನಡೆಸಿದಾಗ, 'ತೇಜ್‌ಗ್ಯಾನ್'ನಲ್ಲಿ ಅಪ್‌ಲೋಡ್ ಆಗಿರುವ ವಿಡಿಯೊ ಕಂಡಿತು. ಅದು ಪುಣೆಯಲ್ಲಿ ನಡೆದಿದ್ದ ಪುಸ್ತಕ ಬಿಡುಗಡೆಯ ಸಮಾರಂಭವೊಂದರ (2011.ನ.14) ವಿಡಿಯೊ. ಅದರಲ್ಲಿ ಶಾರುಕ್ 'ಜಿಹಾದ್' ಪದ ಬಳಸಿದ್ದಾರೆ. 'ಜಿಹಾದ್ ಪದ ತುಂಬಾ ದುರ್ಬಳಕೆಯಾಗುತ್ತಿದೆ. ವಾಸ್ತವವಾಗಿ ಜಿಹಾದ್ ಎಂದರೆ, ನಮ್ಮ ಒಳಗಿನ ಕೇಡಿನ ಆಲೋಚನೆಗಳ ವಿರುದ್ಧ ಹೋರಾಡುವುದು' ಎಂದು ಹೇಳಿದ್ದಾರೆ. ವಿವಿಧ ವಿಡಿಯಯೊಗಳಲ್ಲಿನ ಧ್ವನಿಯನ್ನು ಪ್ರಧಾನಿ ಜತೆಗಿನ ವಿಡಿಯೊದೊಂದಿಗೆ ಸಂಯೋಜಿಸಿ, ತಪ್ಪು ಅರ್ಥ ಬರುವಂತೆ ಹಂಚಿಕೊಳ್ಳಲಾಗುತ್ತಿದೆ ಎಂದು ಫ್ಯಾಕ್ಟ್‌ಲಿ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ದೀಪಾ ಹಿರೇಗುತ್ತಿ

ಸಹಾಯ ಕೇಳುವುದು ಅವಮಾನವಲ್ಲ

ಕಾಡೊಂದರಲ್ಲಿ ಸಿಂಹದ ಮರಿಯೊಂದು ಇತ್ತು. ಬಹಳ ಚುರುಕಿನ, ಬಲಶಾಲಿ ಮರಿಸಿಂಹವದು. ಅದಕ್ಕೆ ತನ್ನ ವೇಗದ ಬಗ್ಗೆ, ಬಲದ ಬಗ್ಗೆ ಬಹಳ ಹೆಮ್ಮೆಯಿತ್ತು. 'ನನಗೆ ಯಾವುದರಲ್ಲೂ ಯಾರ ಸಹಾಯವೂ ಬೇಕಿಲ್ಲ, ನನ್ನಷ್ಟಕ್ಕೆ ನಾನೇ ಎಲ್ಲ ಕೆಲಸ ಮಾಡಿಕೊಳ್ಳಬಲ್ಲೆ' ಎಂದು ಹೇಳಿಕೊಳ್ಳುತ್ತಿತ್ತು. ಬೇರೆ ಪ್ರಾಣಿಗಳಿಗೆ ಈ ಮಾತುಗಳನ್ನು ಕೇಳಿ ಕಿರಿಕಿರಿ ಆದರೂ ಇನ್ನೂ ಕಿರಿಯ ಪ್ರಾಯ ಎಂದು ಸುಮ್ಮನಾಗುತ್ತಿದ್ದವು.

ಒಂದು ದಿನ ಮರಿಸಿಂಹ ಚಿಟ್ಟೆಯೊಂದನ್ನು ಬೆನ್ನಟ್ಟುತ್ತ ಸ್ವಲ್ಪ ದಟ್ಟ ಕಾಡೊಳಗೆ ಬಂದುಬಿಟ್ಟಿತು. ಅಷ್ಟೇ ಅಲ್ಲ, ಓಡುವಾಗ ನೋಡದೇ ಅದರ ಕಾಲು ಎರಡು ಬಂಡೆಗಳ ನಡುವಿರುವ ಪುಟ್ಟ ಬಿರುಕಿನಲ್ಲಿ ಸಿಕ್ಕಿಹಾಕಿಕೊಂಡಿತು. ಎಷ್ಟು ಪ್ರಯತ್ನಪಟ್ಟರೂ ಬಿಡಿಸಿಕೊಳ್ಳಲು ಸಾಧ್ಯವಾಗಲೇ ಇಲ್ಲ. ಸಂಜೆಯಾಗುತ್ತ ಬಂತು. ಮರಿಸಿಂಹಕ್ಕೆ ಸಣ್ಣದಾಗಿ ಭಯ ಶುರುವಾಯಿತು. ಯಾರೂ ಬಾರದೇ ಹೋದರೆ ರಾತ್ರಿಯಿಡೀ ಆ ಕಗ್ಗತ್ತಲ ದಟ್ಟ ಕಾಡಿನಲ್ಲಿ ಕಳೆಯುವ ಯೋಚನೆಯೇ ಅದಕ್ಕೆ ಭೀತಿ ಹುಟ್ಟಿಸಿತು. ತನ್ನ ಸಹಾಯಕ್ಕೆ ಯಾರೂ ಅಗತ್ಯವಿಲ್ಲ ಅಂದುಕೊಂಡಿದ್ದ ಸಿಂಹದ ಮರಿ ಈಗ ಯಾರಾದರೂ ಬಂದರೆ ಸಾಕು ಎಂದು ಕಾಯತೊಡಗಿತು. ಯಾರಿಗಾದರೂ ಕೇಳಲಿ ಎಂದು ಜೋರಾಗಿ ಬೊಬ್ಬಿಡತೊಡಗಿತು.

ಅಷ್ಟು ಹೊತ್ತಿಗೆ ದೊಡ್ಡದಾದ ಕಾಡುಬಾಳೆಯ ಗೊನೆಯೊಂದನ್ನು ಮುರಿದು ತಿನ್ನುತ್ತ ವಾಪಸ್ ಹೊರಟಿದ್ದ ಆನೆಗೆ ಮರಿಸಿಂಹದ ಕೂಗು ಕೇಳಿಸಿತು. ಓಡೋಡಿ ಬಂದು ನೋಡಿದರೆ ಸಿಂಹ ಸಿಕ್ಕಿಹಾಕಿಕೊಂಡಿದೆ. 'ಹೆದರಬೇಡ ನಿನ್ನನ್ನು ಬಿಡಿಸೋಣ' ಎಂದಿತು ಮೃದುವಾಗಿ. ಆನೆಯನ್ನು ನೋಡಿ ಸಿಂಹದ ಮರಿಗೆ ಹೋದ ಜೀವ ಬಂದಂತಾಯಿತು. ಅಷ್ಟು ಹೊತ್ತಿಗೆ ಆಮೆ ಮತ್ತು ಝೀಬ್ರಾ ಕೂಡ ಸೇರಿಕೊಂಡವು. ಆಮೆಯ ಸಲಹೆಯಂತೆ ಆನೆ ನಿಧಾನಕ್ಕೆ ಸಿಂಹದ ಮರಿಯ ಕಾಲನ್ನು ಬಿಡಿಸಿತು. ಝೀಬ್ರಾ ಸಿಂಹದ ಮರಿಗೆ ಸಮಾಧಾನ ಹೇಳುತ್ತ ಆನೆಯನ್ನು ಪ್ರೋತ್ಸಾಹಿಸುತ್ತಿತ್ತು. ಅಂತೂ ಸ್ವಲ್ಪ ಹೊತ್ತು ಪ್ರಯತ್ನಪಟ್ಟ ಮೇಲೆ ಸಿಂಹದ ಮರಿಯನ್ನು ಬಿಡಿಸಲು ಆನೆ ಯಶಸ್ವಿಯಾಯಿತು.

ಮರಿಸಿಂಹಕ್ಕೆ ಖುಷಿಯೋ ಖುಷಿ. ಎಲ್ಲರಿಗೂ ಧನ್ಯವಾದ ಹೇಳಿದ್ದೇ ಹೇಳಿದ್ದು. 'ಬೇರೆಯವರ ಹತ್ತಿರ ಸಹಾಯ ಕೇಳುವುದೆಂದರೆ ಅವಮಾನ ಎಂದುಕೊಂಡಿದ್ದೆ. ಆದರೆ ಅದರಲ್ಲಿ ತಪ್ಪೇನೂ ಇಲ್ಲವೆಂದು ಅರ್ಥವಾಯಿತು' ಅಂದಿತು. ಅಂದಿನಿಂದ ಮರಿಸಿಂಹ ಅಹಂಕಾರ ಬಿಟ್ಟು ತಾನೂ ಆಗಾಗ್ಗೆ ಇತರರ ಸಹಾಯ ಪಡೆದಿದ್ದಲ್ಲದೇ ಬೇರೆಯವರಿಗೂ ಅವಶ್ಯಕತೆ ಬಿದ್ದಾಗ ಸಹಾಯ ಮಾಡತೊಡಗಿತು.

ನಾವೂ ಅಷ್ಟೇ; ಒಂದು ಒಳ್ಳೆಯ ಸಂಬಳ ತರುವ ಕೆಲಸವೋ, ಹಣ ಇರುವ ವ್ಯವಹಾರವೋ ಅಥವಾ ಆಸ್ತಿಯೋ ಇದ್ದುಬಿಟ್ಟರೆ ಬೇರೆ ಯಾರ ಸಹಾಯವೂ ಅಗತ್ಯವಿಲ್ಲ ಎಂದು ತಿಳಿದುಕೊಂಡಿರುತ್ತೇವೆ. ಬದುಕಿನ ಎಲ್ಲ ಸಂದರ್ಭಗಳೂ ಒಂದೇ ರೀತಿ ಇರುವುದಿಲ್ಲ. ನಾವು ಬಳಸುವ ಪೇಸ್ಟ್‌ನಿಂದ ಹಿಡಿದು ಪ್ರತಿಯೊಂದು ವಸ್ತುವಿನ ತಯಾರಿಕೆಯೂ ಬೇರೆಯವರದ್ದೇ ಆಗಿರುವಾಗ ನಮಗೆ ಯಾರ ಸಹಾಯವೂ ಅಗತ್ಯವಿಲ್ಲ ಎಂಬ ಮಾತು ತಮಾಷೆಯೆನಿಸುತ್ತದೆ.

ಇನ್ನು ಬದುಕಿನಲ್ಲಿ ಸಂಕಷ್ಟಗಳು ಬಂದಾಗ ಯಾರ ಹತ್ತಿರವಾದರೂ ಸಹಾಯ ಕೇಳುವುದಕ್ಕೇ ಮುಜುಗರ ಪಟ್ಟು ಬದುಕನ್ನೇ ಕೊನೆಗೊಳಿಸಿಕೊಂಡು ಕುಟುಂಬದವರನ್ನು ಬೀದಿಪಾಲು ಮಾಡುವ ಜನರೂ ಬೇಕಾದಷ್ಟು. ಸಹಾಯ ಕೇಳುವುದರಲ್ಲಿ ಅವಮಾನವೇನಿಲ್ಲ, ಕೇಳದೇ ಇರುವುದರಲ್ಲಿ ದೊಡ್ಡಸ್ತಿಕೆಯೂ ಇಲ್ಲ ಎಂಬುದನ್ನು ಅರ್ಥ ಮಾಡಿಕೊಂಡರೆ ಬದುಕಿನಲ್ಲಿ ಆತ್ಮವಿಶ್ವಾಸದಿಂದ ಮುಂದುವರಿಯಬಹುದು. ❖

ಪದಬಂಧ 6241

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈತ ಕವಿತೆ ಬರೆಯುವವನು (2)
4.ಪಾಯಸ ನೆಕ್ಕುತ್ತಿರುವ ಕಾಗೆ (3)
6.ಈತ ರಗಳೆಯ ಕವಿ! (4)
7.ಗದಾಯುದ್ಧ ಕಾವ್ಯ ರಚಿಸಿದ ಈತ ಶಕ್ತಿ ಕವಿ ಎಂದೇ ಖ್ಯಾತಿ ಪಡೆದಿದ್ದಾನೆ (2)
8.ಶಿಶುನಾಳ ಶರೀಫರಿಗಿರುವ ಬಿರುದು (7)
11.ಶಿವರಾಮಕಾರಂತರ ಹುಟ್ಟೂರು (2)
13.ಒತ್ತಾಯವನ್ನು ಈ ರೀತಿಯೂ ಹೇಳುತ್ತಾರೆ (4)
15.ಕಸ್ತೂರಿ ಕಂಪಿನ ಭಾಷೆ (3)
16.ಕೊಕ್ಕರೆ ಜಾತಿಗೆ ಸೇರಿದ ಜಲಚರ ಪಕ್ಷಿ (2)

ಮೇಲಿಂದ ಕೆಳಕ್ಕೆ
1.ನಮ್ಮ ಭಾಷೆ ಈ ಸುಗಂಧದ್ರವ್ಯದಂತೆ (3)
2.ತುಂಬಿ ಹರಿಯುವಿಕೆ (3)
3.ಪೇಢಾನಗರಿ ಎಂದೇ ಪ್ರಸಿದ್ಧವಾಗಿರುವ ಊರು (4)
5.ಸರ ಹಿಡಿದಿರುವ ಸೈನ್ಯದ ಮುಖ್ಯಸ್ಥ (4)
6.ದನ ಕಟ್ಟುವ ಜಾಗ (2)
8.ದೇವರಾಜ ಅರಸುರವರು ನಮ್ಮ ಕನ್ನಡನಾಡನ್ನು ಹೀಗೆಂದು ಹೆಸರಿಟ್ಟರು (4)
9.ಔಷಧಿ ಅರೆಯಲು ಬಳಸುವ ಸಣ್ಣಒರಳು (4)
10.ಮೂರು ಮಾತ್ರೆಗಳ ಕಾಲವನ್ನು ಹೊಂದಿರುವ ಅಕ್ಷರ (2)
12.ಕೈ ಅಥವಾ ಕಾಲಿಗೆ ಹಾಕಿಕೊಳ್ಳುವ ಬಳೆ (3)
14.ಮೋಸಗಾರ ಇಲ್ಲಿದ್ದಾನೆ (3)



6240ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಕಾಯ 3.ವನಸುಮ 5.ಮತ್ಸರ 6.ತಿರುಕ 8.ವರುಣ 9.ವ್ಯಲತಾ 10.ಕಡಾಣಿ 11.ಹವನ 12.ಸುಮ್ಮಾನ 14.ಕಂಬನಿ 16.ರಸಾಭಾಸ 17.ಜಮಾವಣೆ

ಮೇಲಿಂದ ಕೆಳಕ್ಕೆ:
1.ಪದಾತಿ 2.ಯಮ 3.ವರ 4.ಮರಣ 7.ಕರತಾಡನ 8.ವರ್ಗೀಕರಿಸು 11.ಹಮ್ಮೀರ 13.ನವಣೆ 14.ಕಂಸ 15.ನಿಜ

ಸುಡೊಕು 6625

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

9		5		8		4		
	8		7		5		1	9
7		1		6		2		
							3	2
3	6		5		7	8	9	
		8					4	7
		7		5		1		3
5			9		8		2	4
2		3					8	

6624 ಸುಡೊಕು

6	4	1	8	5	9	7	3	2
2	9	3	6	4	7	5	8	1
8	5	7	1	3	2	6	4	9
3	6	5	2	1	4	8	9	7
7	2	9	5	8	3	4	1	6
1	8	4	7	9	6	3	2	5
9	7	8	3	6	1	2	5	4
5	1	6	4	2	8	9	7	3
4	3	2	9	7	5	1	6	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

02 ಡಿಸೆಂಬರ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ದ್ವಾದಶಿ ಗಂ. 15-58 ನಕ್ಷತ್ರ: ಅಶ್ವಿನಿ ಗಂ. 20-52 ಯೋಗ: ವರಿಯಾನ್ ಗಂ. 21-08 ಕರಣ: ಬಾಲವ ಗಂ. 15-58 ವೃಶ್ಚಿಕ ಮಾಸದ 16 ನೇ ದಿನ. ಮಳೆ ನಕ್ಷತ್ರ : ಅನುರಾಧ 4 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30, ಸೂರ್ಯೋದಯ : 06-42 ಸೂರ್ಯಾಸ್ತ : 05-58, ಮುಸ್ಲಿಂ ದಿನಾಂಕ : 10 ಜುಮಾದುಸ್ಸಾನಿ , ಅದೃಷ್ಟ ಸಂಖ್ಯೆ : 1, 6

ಮೇಷ: ಮಗಳ ಮದುವೆ ವಿಚಾರವಾಗಿ ದೂರದ ಊರಿಗೆ ಪ್ರಯಾಣ ಬೆಳೆಸಬೇಕಾಗುವುದು. ವಾಹನ ಖರೀದಿ ಬೇಡ. ಗಣಪತಿಯ ಅನುಗ್ರಹದಿಂದ ಗೊಂದಲಗಳು ನಿವಾರಣೆಯಾಗಲಿವೆ.

ವೃಷಭ: ಹೊಸ ಉದ್ಯೋಗ ಒಪ್ಪಿಕೊಳ್ಳುವಾಗ ಅಥವಾ ಕರಾರಿಗೆ ಸಹಿ ಮಾಡುವಾಗ ಸಂಪೂರ್ಣವಾಗಿ ಓದಿ ತಿಳಿದು ಒಪ್ಪಿಕೊಳ್ಳಿ. ಭೂಮಿಗೆ ಸಂಬಂಧಿಸಿದ ವ್ಯವಹಾರಗಳಿಂದ ಲಾಭ ಗಳಿಸಬಹುದು.

ಮಿಥುನ: ಜೀವನದ ಅತ್ಯಂತ ಪ್ರಮುಖ ಘಟ್ಟವೊಂದರಲ್ಲಿ ಆ ಕ್ಷಣವನ್ನು ಅನುಭವಿಸಲು ಆಗುವುದಿಲ್ಲ. ಹರಿತವಾದ ಮಾತುಗಳು ತಾಯಿಯ ಮನಸ್ಸನ್ನು ನೋಯಿಸುವ ಸಾಧ್ಯತೆ ಇದೆ.

ಕರ್ಕಾಟಕ: ಭಾಗ್ಯವಂತರಾದ ನಿಮಗೆ ನಿಮ್ಮ ಸಂಸ್ಥೆಯ ಹೊಸ ಯೋಜನೆಯು ಸುಲಭವೆನಿಸಲಿದೆ. ದುರ್ಘಟನೆ ಮತ್ತೆ ಮರುಕಳಿಸದಂತೆ ಎಚ್ಚರ ವಹಿಸುವುದು ಸೂಕ್ತ. ವ್ಯವಸಾಯಕ್ಕೆ ಶ್ರಮ ಪಡುವಂತಾಗಲಿದೆ.

ಸಿಂಹ: ತಂದೆ ತಾಯಿ ಅಥವಾ ಕುಟುಂಬದ ಹಿರಿಯರ ಆರೋಗ್ಯದ ಬಗ್ಗೆ ತಪಾಸಣೆ ಅಗತ್ಯ. ಮಿತ್ರವರ್ಗದಿಂದ ದುಃಖದ ಸಮಾಚಾರಗಳನ್ನು ಕೇಳಬೇಕಾಗಬಹುದು. ದೀರ್ಘ ಪ್ರಯಾಣವನ್ನು ಮುಗಿಸಲಿದ್ದೀರಿ.

ಕನ್ಯಾ: ಷೇರು ಮಾರುಕಟ್ಟೆ ಹಾಗೂ ಕಮಿಷನ್ ವ್ಯಾಪಾರಿಗಳಿಗೆ ಲಾಭಾಂಶ ವೃದ್ಧಿ. ಸರ್ಕಾರ ಅಥವಾ ಸಂಸ್ಥೆಗಳ ನಿಯಮಗಳಿಗೆ ಬೆಲೆ ಕೊಡುವುದನ್ನು ಕಲಿಯಿರಿ. ಉದ್ಯೋಗ ಬದಲಾಗುವ ಸಂಭವವಿದೆ.

ತುಲಾ: ಕೌಟುಂಬಿಕವಾಗಿ ಖರ್ಚುಗಳು ಅಧಿಕವೆನಿಸಿದರೂ ಆದಾಯ ಉತ್ತಮವಾಗಿರುವುದು. ಯಂತ್ರಗಳ ಬಿಡಿಭಾಗಗಳ ಮಾರಾಟಗಾರರಿಗೆ ಅವಕಾಶಗಳು ದೊರಕಲಿವೆ. ಆದಾಯದ ಮೂಲಗಳು ಗೋಚರಿಸಲಿವೆ.

ವೃಶ್ಚಿಕ: ಆಪ್ತಸ್ನೇಹಿತರ ಸಹಾಯದಿಂದ ಗೃಹ ಸಮಸ್ಯೆಗಳನ್ನು ಬಗೆಹರಿಸುವಿರಿ. ಸಮಸ್ಯೆಗಳನ್ನು ಶೀಘ್ರ ಬಗೆಹರಿಸಿಕೊಳ್ಳಲು ಧಾರ್ಮಿಕ ಪ್ರಯತ್ನವನ್ನು ಮಾಡಿ. ರಫ್ತು ಮಾರಾಟದಿಂದ ಆದಾಯ ಹೆಚ್ಚಳ.

ಧನು: ಪಿತ್ರಾರ್ಜಿತ ಆಸ್ತಿಗೆ ಸಂಬಂಧಪಟ್ಟಂತೆ ಕೋರ್ಟಿನಲ್ಲಿರುವ ಹಳೆಯ ವ್ಯಾಜ್ಯಗಳು ಇತ್ಯರ್ಥಗೊಳ್ಳಲಿವೆ. ವ್ಯಾಪಾರ ವ್ಯವಹಾರಗಳಲ್ಲಿ ನಡೆಯುತ್ತಿದ್ದ ಸಣ್ಣ-ಪುಟ್ಟ ಅವ್ಯವಹಾರಗಳು ಹಿಡಿತಕ್ಕೆ ಬರಲಿವೆ.

ಮಕರ: ಸಂಗತಿಗಳನ್ನು ಹಗುರವಾಗಿ ಪರಿಗಣಿಸುವ ಸ್ವಭಾವ ಬದಲಿಸಿಕೊಳ್ಳಿ. ಬಂಧುಮಿತ್ರರೊಂದಿಗೆ ಸಂತೋಷ ಹಂಚಿಕೊಳ್ಳುವಿರಿ. ಲೋಹದ ವಸ್ತು ಮಾರಾಟಗಾರಿಗೆ ದುಪ್ಪಟ್ಟು ಲಾಭ.

ಕುಂಭ: ನಕಾರಾತ್ಮಕ ಚಿಂತನೆಗಳನ್ನು ಅನವಶ್ಯಕವಾಗಿ ಮಾಡದಿರಿ. ಧಾರ್ಮಿಕ ಚಿಂತನೆಯನ್ನು ಮುಂದುವರಿಸಿದರೆ ಶುಭ. ಯಂತ್ರೋಪಕರಣಗಳ ಮಾರಾಟದಿಂದ ಮತ್ತು ಪಶು ಸಂಗೋಪನೆಯಿಂದ ಲಾಭ ಇರುವುದು.

ಮೀನ: ವ್ಯಾಪಾರ, ಕೈಗಾರಿಕೆ, ವಾಣಿಜ್ಯ ಕ್ಷೇತ್ರಗಳಲ್ಲಿನ ಸುಧಾರಣೆಗೆ ಸಾಕಷ್ಟು ಅವಕಾಶವಿದೆ. ಶೀತಬಾಧೆಯಿಂದ ಮುಕ್ತರಾಗಲು ಗಿಡಮೂಲಿಕೆಯ ಕಷಾಯವನ್ನು ಸೇವಿಸಿ. ಮನೆ ಕೊಳ್ಳುವ ವಿಷಯ ಇತ್ಯರ್ಥ.

ಗುಂಡಣ್ಣ



© 2014 by King Features Syndicate, Inc. World Rights reserved

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	26,202
ಇಂದಿನ ಅಂತ್ಯ:	26,175
ದಿನದ ಕನಿಷ್ಠ:	26,124
▼	27

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
100 ಕ್ಕೆ		₹675
12 ಕ್ಕೆ		₹96
ಮೈಸೂರು:	100 ಕ್ಕೆ	₹675

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹182
ಆರ್‌ಎಸ್‌ಎಸ್-5	₹177
ಗುಡ್ ಲಾಟ್	₹164

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹520-755
ದ್ವಿತಳಿ (ಬಿ.ವಿ)	₹350-888

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1200-2400
ಮಧ್ಯಮ	₹600-1200
ಸಣ್ಣ	₹200-600

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1520 (1545)
ಸೋಯಾ (ರಿಫೈನ್ಡ್)	₹1280 (1270)
ಸೂರ್ಯಕಾಂತಿ (ರಿಫೈನ್ಡ್)	₹1480 (1470)
ಪಾಮೋಲಿನ್	₹1245 (1240)

ಜಿಎಸ್‌ಟಿ: ₹1.70 ಲಕ್ಷ ಕೋಟಿ ಸಂಗ್ರಹ

ಜಿಎಸ್‌ಟಿ ದರ ಪರಿಷ್ಕರಣೆಯಿಂದ ವರಮಾನದಲ್ಲಿ ಇಳಿಕೆ: ಕೇಂದ್ರ ಸರ್ಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ನವೆಂಬರ್ ತಿಂಗಳಿನಲ್ಲಿ ₹1.70 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ.

ಇದು ಕಳೆದ ಒಂದು ವರ್ಷದಲ್ಲಿ ದಾಖಲಾದ ಅತ್ಯಂತ ಕಡಿಮೆ ಮಾಸಿಕ ಸಂಗ್ರಹವಾಗಿದೆ ಎಂದು ತಿಳಿಸಿದೆ.

2024ರ ನವೆಂಬರ್‌ನಲ್ಲಿ ₹1.69 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾಗಿತ್ತು. ಇದಕ್ಕೆ ಹೋಲಿಸಿದರೆ ಪ್ರಸಕ್ತ ನವೆಂಬರ್ ವರಮಾನ ಸಂಗ್ರಹದಲ್ಲಿ ಶೇ 0.7ರಷ್ಟು ಮಾತ್ರ ಹೆಚ್ಚಳವಾಗಿದೆ ಎಂದು ತಿಳಿಸಿದೆ. 2025ರ ಅಕ್ಟೋಬರ್‌ನಲ್ಲಿ ₹1.96 ಲಕ್ಷ ಕೋಟಿ ಸಂಗ್ರಹವಾಗಿತ್ತು.

ಜಿಎಸ್‌ಟಿ ಮಂಡಳಿಯು ಸೆಪ್ಟೆಂಬರ್ 22ರಂದು ಜಿಎಸ್‌ಟಿ ದರ ಪರಿಷ್ಕರಣೆ ಮಾಡಿತು. ಇದರಿಂದ ಸರಕುಗಳ ಬೆಲೆ ಕಡಿಮೆ ಆಯಿತು. ಇದೇ ವರಮಾನ ಸಂಗ್ರಹದ ಇಳಿಕೆಗೆ ಕಾರಣ ಎಂದು ತಿಳಿಸಿದೆ. ಆದರೂ, ಜಿಎಸ್‌ಟಿ ಇಳಿಕೆಯ ನಡುವೆಯೂ ಕಳೆದ ನವೆಂಬರ್ ತಿಂಗಳಿಗೆ ಹೋಲಿಸಿದರೆ ಈ ಬಾರಿ ವರಮಾನ ಸಂಗ್ರಹದಲ್ಲಿ ಸ್ವಲ್ಪ ಏರಿಕೆ ಕಂಡು ಬಂದಿದೆ ಎಂದು ತಿಳಿಸಿದೆ.

ಒಟ್ಟು ಜಿಎಸ್‌ಟಿ ಸಂಗ್ರಹದ ಪೈಕಿ, ದೇಶದ ಆಂತರಿಕ ವಹಿವಾಟುಗಳಿಂದ ಬರುವ ಜಿಎಸ್‌ಟಿ ವರಮಾನವು ಶೇ 2.3ರಷ್ಟು ಇಳಿಕೆ ಕಂಡಿದ್ದು, ₹1.24 ಲಕ್ಷ ಕೋಟಿಯಾಗಿದೆ. ಆಮದು ಮಾಡಿಕೊಂಡ ಸರಕುಗಳಿಂದ ಬಂದ ವರಮಾನವು ₹45,976 ಕೋಟಿಯಾಗಿದ್ದು, ಶೇ 10.2ರಷ್ಟು ಏರಿಕೆಯಾಗಿದೆ. ಜಿಎಸ್‌ಟಿ ಮರುಪಾವತಿಯಲ್ಲಿ ಶೇ 4ರಷ್ಟು ಕಡಿಮೆಯಾಗಿದ್ದು, ₹18,196 ಕೋಟಿಯಾಗಿದೆ. ನಿವ್ವಳ ಜಿಎಸ್‌ಟಿ ಸಂಗ್ರಹವು ₹1.52 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

ಕೋವಿಡ್ ಅವಧಿಯಲ್ಲಿ ರಾಜ್ಯಗಳಿಗೆ ವರಮಾನ ನಷ್ಟವನ್ನು ಸರಿದೂಗಿಸಲು ತೆಗೆದುಕೊಂಡ ಸಾಲಗಳನ್ನು ಮರುಪಾವತಿಸುವವರೆಗೆ ಪರಿಹಾರ ಸೆಸ್ ಈಗ ತಾತ್ಕಾಲಿಕ ವ್ಯವಸ್ಥೆಯಾಗಿರುವುದರಿಂದ, ಒಟ್ಟು ಜಿಎಸ್‌ಟಿ ಸಂಗ್ರಹವನ್ನು ಲೆಕ್ಕಾಚಾರ ಮಾಡುವಾಗ ಸೆಸ್ ಅನ್ನು ಸೇರಿಸಲಾಗಿಲ್ಲ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಹರಿಯಾಣ, ಅಸ್ಸಾಂ ಮತ್ತು ಕೇರಳ ಜಿಎಸ್‌ಟಿ ವರಮಾನದಲ್ಲಿ ಕ್ರಮವಾಗಿ ಶೇ 17, ಶೇ 18 ಮತ್ತು ಶೇ 8ರಷ್ಟು ಬೆಳವಣಿಗೆ ಕಂಡಿದ್ದರೆ, ಮಧ್ಯಪ್ರದೇಶ ಮತ್ತು ಒಡಿಶಾ ಕ್ರಮವಾಗಿ ಶೇ 17 ಮತ್ತು ಶೇ 18ರಷ್ಟು ಕುಸಿತ ಕಂಡಿವೆ ಎಂದು ತಿಳಿಸಿದೆ.

ದೇಶದಲ್ಲಿ ಒಟ್ಟು ಜಿಎಸ್‌ಟಿ ಸಂಗ್ರಹ



ಕರ್ನಾಟಕಕ್ಕೆ ಮೂರನೇ ಸ್ಥಾನ

ಜಿಎಸ್‌ಟಿ ಸಂಗ್ರಹದಲ್ಲಿ ಕರ್ನಾಟಕವು ದೇಶದಲ್ಲಿ ಮೂರನೇ ಸ್ಥಾನದಲ್ಲಿದೆ. ಕಳೆದ ವರ್ಷದ ನವೆಂಬರ್‌ನಲ್ಲಿ ₹7,383 ಕೋಟಿ ಜಿಎಸ್‌ಟಿ ಸಂಗ್ರಹವಾಗಿತ್ತು. ಅದು ಈ ವರ್ಷದ ನವೆಂಬರ್‌ನಲ್ಲಿ ₹7,574 ಕೋಟಿಗೆ ಏರಿಕೆಯಾಗಿದ್ದು, ಶೇ 3ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ.

ಮಹಾರಾಷ್ಟ್ರವು ಅತಿ ಹೆಚ್ಚು, ₹16,122 ಕೋಟಿ ಜಿಎಸ್‌ಟಿ ಸಂಗ್ರಹಿಸಿದ ರಾಜ್ಯ ಎನಿಸಿದೆ. ಕಳೆದ ನವೆಂಬರ್‌ಗೆ ಹೋಲಿಸಿದರೆ ಈ ಸಾಲಿನ ನವೆಂಬರ್‌ನಲ್ಲಿ ಜಿಎಸ್‌ಟಿ ಸಂಗ್ರಹ ಬೆಳವಣಿಗೆ ದರ ಶೇ 4ರಷ್ಟಿದೆ. ಉತ್ತರ ಪ್ರದೇಶವು ₹7,667 ಕೋಟಿ ಸಂಗ್ರಹಿಸಿದ್ದು, ಎರಡನೇ ಸ್ಥಾನದಲ್ಲಿದೆ.



ದೆಹಲಿ: ಜಿಎಸ್‌ಟಿ ಸಂಗ್ರಹದಲ್ಲಿ ಕುಸಿತ

ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಲ್ಲಿ ದೆಹಲಿಯಲ್ಲಿ ಜಿಎಸ್‌ಟಿ ಸಂಗ್ರಹವು ₹8,260 ಕೋಟಿಯಷ್ಟಾಗಿತ್ತು. ಕಳೆದ ವರ್ಷದ ಇದೇ ತಿಂಗಳಿಗೆ ಹೋಲಿಸಿದರೆ ಇದು ಶೇ 6ರಷ್ಟು ಏರಿಕೆ. ಆದರೆ, ಜೂನ್ ತಿಂಗಳಿನಿಂದ ದೆಹಲಿಯಲ್ಲಿ ಸಂಗ್ರಹವು ಇಳಿಕೆ ಕಂಡಿದ್ದು, ಸೆಪ್ಟೆಂಬರ್‌ನಿಂದ ಈ ಪ್ರಮಾಣವು ಇನ್ನಷ್ಟು ಕುಸಿದಿದೆ.



ಸುದ್ದಿ 2 ನಿಮಿಷ

ಕೈಗಾರಿಕಾ ಉತ್ಪಾದನೆ ಕುಸಿತ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನೆಯ ಬೆಳವಣಿಗೆ ಅಕ್ಟೋಬರ್ ತಿಂಗಳಿನಲ್ಲಿ 13 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆಯಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಅಂಕಿ–ಅಂಶಗಳು ಸೋಮವಾರ ತಿಳಿಸಿದೆ.

ಪ್ರಸಕ್ತ ವರ್ಷದ ಅಕ್ಟೋಬರ್‌ನಲ್ಲಿ ಕೈಗಾರಿಕಾ ಉತ್ಪಾದನೆಯು ಶೇ 0.4ರಷ್ಟು ಬೆಳವಣಿಗೆ ದಾಖಲಿಸಿದೆ. 2024ರ ಅಕ್ಟೋಬರ್‌ನಲ್ಲಿ ಶೇ 3.7ರಷ್ಟು ದಾಖಲಾಗಿತ್ತು. ಅದೇ ವರ್ಷದ ಸೆಪ್ಟೆಂಬರ್‌ನಲ್ಲಿ ಯಾವುದೇ ಪ್ರಗತಿ ದಾಖಲಿಸಿಲ್ಲ.

ವಿದ್ಯುತ್, ಗಣಿಗಾರಿಕೆ ಮತ್ತು ತಯಾರಿಕಾ ವಲಯದ ಉತ್ಪಾದನೆಯಲ್ಲಿನ ಇಳಿಕೆಯೇ ಬೆಳವಣಿಗೆ ಇಳಿಕೆಗೆ ಕಾರಣ ಎಂದು ತಿಳಿಸಿದೆ. ದಸರಾ, ದೀಪಾವಳಿ, ಛತ್ ಸೇರಿದಂತೆ ಹಲವು ಹಬ್ಬಗಳ ಕಾರಣದಿಂದ ಕೆಲಸದ ದಿನಗಳು ಕಡಿಮೆ ಆಗಿದೆ. ಇದು ಸಹ ಪ್ರಗತಿ ನಿಧಾನವಾಗಲು ಕಾರಣವಾಗಿದೆ ಎಂದು ಹೇಳಿದೆ.

ಕಳೆದ ವರ್ಷದ ಅಕ್ಟೋಬರ್‌ನಲ್ಲಿ ತಯಾರಿಕಾ ವಲಯದ ಉತ್ಪಾದನೆ ಶೇ 4.4ರಷ್ಟಾಗಿತ್ತು. ಅದು ಈ ಬಾರಿ ಶೇ 1.8ಕ್ಕೆ ಇಳಿದಿದೆ. ಗಣಿಗಾರಿಕೆಯು ಶೇ 0.9ರಿಂದ (–) ಶೇ 1.8ರಷ್ಟಾಗಿದೆ. ವಿದ್ಯುತ್ ಉತ್ಪಾದನೆಯು ಶೇ 2ರಿಂದ (–) ಶೇ 6.9ಕ್ಕೆ ಕಡಿಮೆ ಆಗಿದೆ. ಆದರೆ, ಮೂಲಸೌಕರ್ಯ ವಲಯದ ಬೆಳವಣಿಗೆ ಶೇ 4.7ರಿಂದ ಶೇ 7.1ಕ್ಕೆ ಏರಿಕೆಯಾಗಿದೆ.

ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಅಕ್ಟೋಬರ್ ಅವಧಿಯಲ್ಲಿ ಕೈಗಾರಿಕಾ ಉತ್ಪಾದನೆಯ ಬೆಳವಣಿಗೆ ಶೇ 4ರಿಂದ ಶೇ 2.7ಕ್ಕೆ ಕುಸಿದಿದೆ ಎಂದು ತಿಳಿಸಿದೆ. ಕೈಗಾರಿಕಾ ಉತ್ಪಾದನಾ ಸೂಚ್ಯಂಕ (ಐಐಪಿ) ಆಧಾರದ ಮೇಲೆ ಈ ಪ್ರಗತಿಯನ್ನು ಲೆಕ್ಕ ಹಾಕಲಾಗುತ್ತದೆ.

ತಯಾರಿಕಾ ವಲಯದ ಪ್ರಗತಿ ಇಳಿಕೆ

ನವದೆಹಲಿ (ಪಿಟಿಐ): 'ದೇಶದ ತಯಾರಿಕಾ ವಲಯದ ಬೆಳವಣಿಗೆ ನವೆಂಬರ್ ತಿಂಗಳಿನಲ್ಲಿ 9 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಆಗಿದೆ' ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ಸಮೀಕ್ಷೆ ವರದಿ ಸೋಮವಾರ ತಿಳಿಸಿದೆ.

ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯು ನಿರ್ವಹಿಸುವ 'ಎಚ್‌ಎಸ್‌ಬಿಸಿ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕ'ವು (ಪಿಎಂಐ) ಅಕ್ಟೋಬರ್‌ನಲ್ಲಿ 59.2ರಷ್ಟಿತ್ತು. ಆದರೆ, ನವೆಂಬರ್‌ನಲ್ಲಿ 56.6ಕ್ಕೆ ಇಳಿದಿದೆ. ಮಾರಾಟ ಮತ್ತು ಉತ್ಪಾದನೆ ಯಲ್ಲಿನ ಮಂದಗತಿಯೇ ಸೂಚ್ಯಂಕ ಇಳಿಕೆಗೆ ಕಾರಣ ಎಂದು ಹೇಳಿದೆ.

ಈ ಸೂಚ್ಯಂಕವು 50ರ ಮೇಲಿದ್ದರೆ ಸಕಾರಾತ್ಮಕ ಬೆಳವಣಿಗೆ ಎಂದು ಅರ್ಥೈಸಲಾಗುತ್ತದೆ..

'ಅಮೆರಿಕದ ಹೆಚ್ಚುವರಿ ಸುಂಕ ಹೇರಿಕೆಯು ದೇಶದ ತಯಾರಿಕಾ ವಲಯದ ಮೇಲೆ ಪರಿಣಾಮ ಬೀರಿದೆ. ಇದರಿಂದ ವಲಯದ ಚಟುವಟಿಕೆ ನಿಧಾನವಾಗಿದೆ' ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞೆ ಪ್ರಾಂಜುಲ್ ಭಂಡಾರಿ ಹೇಳಿದ್ದಾರೆ.

ಎಫ್‌ಡಿಐ ಶೇ 18ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ ದೇಶದಲ್ಲಿನ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಪ್ರಮಾಣ ಶೇ 18ರಷ್ಟು ಹೆಚ್ಚಳವಾಗಿದ್ದು, ₹3.15 ಲಕ್ಷ ಕೋಟಿಯಷ್ಟಾಗಿದೆ. ಇದೇ ಅವಧಿಯಲ್ಲಿ ಅಮೆರಿಕದಿಂದ ವಿದೇಶಿ ನೇರ ಹೂಡಿಕೆ ಪ್ರಮಾಣದಲ್ಲಿ ದುಪ್ಪಟ್ಟು ಹೆಚ್ಚಾಗಿದ್ದು, ₹59,283 ಕೋಟಿಯಷ್ಟಾಗಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ವಿದೇಶಿ ನೇರ ಹೂಡಿಕೆ ₹2.66 ಲಕ್ಷ ಕೋಟಿಯಷ್ಟಾಗಿತ್ತು ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹1.48 ಲಕ್ಷ ಕೋಟಿ ಒಳಹರಿವು ಆಗಿದೆ. ಕಳೆದ ಸೆಪ್ಟೆಂಬರ್ ತ್ರೈಮಾಸಿಕಕ್ಕೆ ಹೋಲಿಸಿದರೆ ಇದು ಶೇ 21ರಷ್ಟು ಹೆಚ್ಚಳ ಎಂದು ಹೇಳಿದೆ.

ಮುಂಬೈ ಧಾರಣೆ (ಶೇಂಗಾ) 01-12-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8900-9000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1530 (1555)
ಒಂದು ವಾರದ ಡೆಲಿವರಿ	1525 (1550)
ಪಾಮ್ ವಾರದ ಡೆಲಿವರಿ	1243 (1238)
ಸೂರ್ಯಕಾಂತಿ ಎಣ್ಣೆ ಕಚ್ಚಾ	1415 (1405)
ಚಿನ್ನ - ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,28,400 (1,27,600)
ಬೆಳ್ಳಿ ಕೆ.ಜಿಗೆ	1,75,200 (1,72,300)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹15000-19500
ತಿಪಟೂರು	₹27200-28500

ತಮಿಳುನಾಡು, ಪ.ಬಂಗಾಳ ಆರೋಪ ರಾಜಕೀಯ ಪ್ರೇರಿತ: ಆಯೋಗ

ನವದೆಹಲಿ (ಪಿಟಿಐ): ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು(ಎಸ್‌ಐಆರ್) ಕೇಂದ್ರ ಚುನಾವಣಾ ಆಯೋಗ, ಸುಪ್ರೀಂ ಕೋರ್ಟ್‌ನಲ್ಲಿ ಬಲವಾಗಿ ಸಮರ್ಥನೆ ಮಾಡಿಕೊಂಡಿದೆ.

ಯೋಗ್ಯ ಮತದಾರರನ್ನು ಪಟ್ಟಿಯಿಂದ ಸಾಮೂಹಿಕವಾಗಿ ಕಿತ್ತುಹಾಕಲಾಗುತ್ತಿದೆ ಎನ್ನುವ ಆರೋಪಗಳು ಅತ್ಯಂತ ಉತ್ಪ್ರೇಕ್ಷಿತ, ಊಹಾತ್ಮಕ ಮತ್ತು ರಾಜಕೀಯ ಪ್ರೇರಿತ ಎಂದು ಪ್ರಮಾಣಪತ್ರದಲ್ಲಿ ಸ್ಪಷ್ಟಪಡಿಸಿದೆ.

ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರು ಇದ್ದ ಪೀಠವು ಡಿಎಂಕೆ, ಸಿಪಿಎಂ, ಪಶ್ಚಿಮ ಬಂಗಾಳದ ಕಾಂಗ್ರೆಸ್ ಘಟಕ, ತೃಣಮೂಲ ಕಾಂಗ್ರೆಸ್ ನಾಯಕರು ಸಲ್ಲಿಸಿದ್ದ ಅರ್ಜಿ ಸಂಬಂಧ ನವೆಂಬರ್ 11ರಂದು ಚುನಾವಣಾ ಆಯೋಗದ ಪ್ರತಿಕ್ರಿಯೆ ಕೇಳಿತ್ತು. ನ್ಯಾಯಾಲಯದಲ್ಲಿ ಪ್ರತ್ಯೇಕ ಪ್ರಮಾಣಪತ್ರ ಸಲ್ಲಿಸಿರುವ ಆಯೋಗದ ಕಾರ್ಯದರ್ಶಿ ಪವನ್ ದಿವಾನ್, ಎಸ್‌ಐಆರ್ ವಿರುದ್ಧ ಸಲ್ಲಿಸಿರುವ ಅರ್ಜಿಗಳನ್ನು ವಜಾಗೊಳಿಸಲು ಮನವಿ ಮಾಡಿದರು.

ಅಡಿಕೆ ಧಾರಣೆ					
ಕುಮಟಾ		ಚಾಲಿ	32399-42599	**ಸಿದ್ದಾಪುರ**	
ಹೊಸಚಾಲಿ	34029-37515	ಕೋಕ	10022-36399	ರಾಶಿ	55499-57899
ಚಾಲಿ	43099-48509	ಕೆಂಪುಗೋಟು	17009-40899	ಬಿಳಿಗೋಟು	29619-34619
ಚಿಪ್ಪು	24569-34299	ರಾಶಿ	48199-61910	ಚಾಲಿ	41929-46799
ಕೋಕ	11099-30129	ಸಿಪ್ಪೆಗೋಟು	15399-23300	ಕೋಕ	22229-30119
ಫ್ಯಾಕ್ಟರಿ	5069-23389	**ಶಿವಮೊಗ್ಗ**		**ಶಿರಸಿ**	
ಪುತ್ತೂರು		ಬೆಟ್ಟೆ	48100-57599	ಬೆಟ್ಟೆ	41299-53099
ಕೋಕ	20000-35000	ಗೊರಬಲು	19010-43011	ಬಿಳಿಗೋಟು	31618-39418
ಹೊಸತು	26000-41000	ಹೊಸತು	47399-59099	ಚಾಲಿ	38819-48861
ಹಳತು	45000-54000	ರಾಶಿ	43199-59299	ಕೆಂಪುಗೋಟು	24118-33199
ಸಾಗರ		ಸರಕು	63999-76796	ರಾಶಿ	56099-60999
ಬಿಳಿಗೋಟು	19699-34466				

ಪಶು, ಕೋಳಿ ಆಹಾರ ಉತ್ಪಾದಕರಿಗೆ ಮುಖ್ಯಮಂತ್ರಿ ಸೂಚನೆ

'5 ಲಕ್ಷ ಟನ್ ಮೆಕ್ಕೆಜೋಳ ಖರೀದಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರ ನಿಗದಿಪಡಿಸಿರುವ ₹2,400 ಕನಿಷ್ಠ ಬೆಂಬಲ ಬೆಲೆಯಲ್ಲಿ ಪಶು ಹಾಗೂ ಕೋಳಿ ಆಹಾರ ಉತ್ಪಾದಕರು ರೈತರಿಂದ ಮೆಕ್ಕೆಜೋಳ ಖರೀದಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಪಶು ಮತ್ತು ಕೋಳಿ ಆಹಾರ ಉತ್ಪಾದಕರ ಜೊತೆ ಸೋಮವಾರ ಸಭೆ ನಡೆಸಿದ ಅವರು, 'ರಾಜ್ಯದಲ್ಲಿ ಈ ವರ್ಷ ಅತ್ಯಧಿಕ ಪ್ರಮಾಣದಲ್ಲಿ ಮೆಕ್ಕೆಜೋಳ ಉತ್ಪಾದನೆಯಾಗಿದೆ. ಮಾರುಕಟ್ಟೆಯಲ್ಲಿ ಮೆಕ್ಕೆಜೋಳ ದರ ಕುಸಿದಿರುವುದರಿಂದ ರೈತರಿಗೆ ನೆರವಾಗಲು ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ' ಎಂದರು.

'ಡಿಸ್ಟಿಲರಿಗಳು 7 ಲಕ್ಷ ಟನ್ ಮೆಕ್ಕೆಜೋಳ ಖರೀದಿ ಪ್ರಕ್ರಿಯೆಯನ್ನು ಈಗಾಗಲೇ ಆರಂಭಿಸಿವೆ. ಕೆಎಂಎಫ್ 50 ಸಾವಿರ ಟನ್ ಖರೀದಿಸಲಿದೆ. ಪಶು ಮತ್ತು ಕೋಳಿ ಆಹಾರ ಉತ್ಪಾದನಾ ವಲಯ ಕೂಡಾ ತಕ್ಷಣ 5 ಲಕ್ಷ ಟನ್ ಮೆಕ್ಕೆಜೋಳ ಖರೀದಿಸಬೇಕು' ಎಂದು ಸೂಚನೆ ನೀಡಿದರು.

'ಕರ್ನಾಟಕ ಮಾರುಕಟ್ಟೆ ಫೆಡರೇಶನ್ ಮೂಲಕ ರೈತರಿಂದ ಮೆಕ್ಕೆಜೋಳ ಖರೀದಿಸಿ ಸರಬರಾಜು ಮಾಡಲಾಗುವುದು. ಸಾಗಣೆ ವೆಚ್ಚ, ಲೋಡಿಂಗ್, ಅನ್‌ಲೋಡಿಂಗ್ ವೆಚ್ಚವನ್ನು ಸರ್ಕಾರವೇ ಭರಿಸಲಿದೆ. ಕೋಳಿ ಉದ್ಯಮಕ್ಕೆ ಯಾವುದೇ ತೊಂದರೆ ಆಗದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು' ಎಂದರು.

'ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ 17.6 ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬಿತ್ತನೆಯಾಗಿದ್ದು, 53.8 ಲಕ್ಷ ಮೆಕ್ಕೆಜೋಳ ಉತ್ಪಾದನೆ ಅಂದಾಜಿಸಲಾಗಿದೆ. ಇದರಲ್ಲಿ ಶೇ 50ರಿಂದ 60ರಷ್ಟು ಮೆಕ್ಕೆಜೋಳವನ್ನು ಕೋಳಿ ಮತ್ತು ಪಶು ಆಹಾರಕ್ಕೆ ಉಪಯೋಗಿಸಲಾಗುತ್ತದೆ. ಪ್ರತಿವರ್ಷ ಅಂದಾಜು 25.89 ಲಕ್ಷ ಟನ್ ಮೆಕ್ಕೆಜೋಳವನ್ನು ಕೋಳಿ ಮತ್ತು ಪಶು ಆಹಾರಕ್ಕೆ ಬಳಸಲಾಗುತ್ತದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಸಚಿವರಾದ ಕೆ.ಎಚ್. ಮುನಿಯಪ್ಪ, ಕೆ. ವೆಂಕಟೇಶ್, ಆರ್.ಬಿ. ತಿಮ್ಮಾಪುರ, ಎನ್. ಚಲುವರಾಯಸ್ವಾಮಿ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಪಶು ಮತ್ತು ಕುಕ್ಕುಟ ಆಹಾರ ಉತ್ಪಾದಕರ ಸಂಘದ ಪ್ರತಿನಿಧಿಗಳು ಸಭೆಯಲ್ಲಿದ್ದರು.

ಹಾವೇರಿ ಜಿಲ್ಲಾಧಿಕಾರಿ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿರುವ ರೈತರು, ರಾಜ್ಯ ಸರ್ಕಾರದ ಆದೇಶ ಪ್ರತಿ ಸುಟ್ಟು ಹಾಕಿದರು.

ಆದೇಶ ಪ್ರತಿ ಸುಟ್ಟ ರೈತರು

ಪ್ರಜಾವಾಣಿ ವಾರ್ತೆ

ಹಾವೇರಿ/ಗದಗ: 'ಖರೀದಿ ಕೇಂದ್ರಗಳನ್ನು ಆರಂಭಿಸಿ ಬೆಂಬಲ ಬೆಲೆಯಡಿ ಮೆಕ್ಕೆಜೋಳವನ್ನು ಖರೀದಿಸಲು ಆಗ್ರಹಿಸಿ ರೈತರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸೋಮವಾರ ಹಾವೇರಿಯಲ್ಲಿ ಎಂಟನೇ ದಿನಕ್ಕೆ, ಗದಗನಲ್ಲಿ ಹದಿನೇಳನೇ ದಿನಕ್ಕೆ ಕಾಲಿರಿಸಿತು.

'ಪ್ರತಿ ರೈತರಿಂದ ಗರಿಷ್ಠ 5 ಕ್ವಿಂಟಲ್ ಮೆಕ್ಕೆಜೋಳವನ್ನು ಕ್ವಿಂಟಲ್‌ಗೆ ₹ 2,400 ಬೆಂಬಲ ಬೆಲೆಯಡಿ ಖರೀದಿಸಬೇಕು' ಎಂದು ರಾಜ್ಯ ಸರ್ಕಾರ ಹೊರಡಿಸಿದ ಆದೇಶ ಪ್ರತಿಗಳನ್ನು ರೈತರು ಸುಟ್ಟು ಪ್ರತಿಭಟಿಸಿದರು. ಮೆಕ್ಕೆಜೋಳವನ್ನು ಪ್ರತಿ ಕ್ವಿಂಟಲ್‌ಗೆ ₹ 3,000 ದರದಲ್ಲಿ ಖರೀದಿಸಬೇಕು. ಖರೀದಿ ಕೇಂದ್ರಗಳನ್ನು ಆರಂಭಿಸಬೇಕು' ಎಂದು ರೈತರು ಆಗ್ರಹಿಸಿದರು.

'ಹಾವೇರಿ ಜಿಲ್ಲೆಯಲ್ಲಿ ಅಂದಾಜು 11 ಲಕ್ಷಕ್ಕೂ ಹೆಚ್ಚು ಕ್ವಿಂಟಲ್ ಮೆಕ್ಕೆಜೋಳ ಬೆಳೆಯಲಾಗಿದೆ. ಈ ಆದೇಶದಿಂದ ಪ್ರಯೋಜನವಾಗದು' ಎಂದು ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ ರೈತರು ಟಯರ್‌ಗಳಿಗೆ ಬೆಂಕಿ ಹಚ್ಚಿ, ಆಕ್ರೋಶ ವ್ಯಕ್ತಪಡಿಸಿದರು. ಖರೀದಿ ಕೇಂದ್ರ ಆರಂಭಿಸುವವರೆಗೂ ಪ್ರತಿಭಟನೆ ಹಿಂಪಡೆಯಲ್ಲ ಎಂದು ಎಚ್ಚರಿಸಿದರು.

ಖರೀದಿ ಕೇಂದ್ರ ಆರಂಭಿಸುವ ಭರವಸೆ ಸಿಕ್ಕಿದ್ದ ಕಾರಣ, ರೈತರು ಧರಣಿ ಸ್ಥಳದಲ್ಲಿ ವಿಜಯೋತ್ಸವ ಆಚರಿಸಲು ನಿರ್ಧರಿಸಿದ್ದರು. ಆದರೆ, ಖರೀದಿ ಕೇಂದ್ರ ಆರಂಭಗೊಳ್ಳದ ಕಾರಣ ಪಾಲಾ-ಬಾದಾಮಿ ಹೆದ್ದಾರಿಯಲ್ಲಿ ಟಯರ್‌ಗಳಿಗೆ ಬೆಂಕಿ ಹಚ್ಚಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ

ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಾಲಯವು COM.AP. 528/2025, ಶ್ರದ್ಧಾ ರಥಿ ವರ್ಸಸ್ ಲ್ಯಾಂಡ್‌ಮಾರ್ಕ್ ಹೋಮ್ಸ್ ಪ್ರೈವೇಟ್ ಲಿಮಿಟೆಡ್ ವ್ಯಾಜ್ಯಕ್ಕೆ ಸಂಬಂಧಪಟ್ಟಂತೆ, 03.11.2025 ರಂದು ನೀಡಿದ ಆದೇಶದ ಮೂಲಕ, ಬೆಂಗಳೂರು ಉತ್ತರ ತಾಲ್ಲೂಕಿನ ಯಲಹಂಕ ಹೋಬಳಿಯ ಹಾರೋಹಳ್ಳಿ, @ಅವಲಹಳ್ಳಿ ಗ್ರಾಮದ ಗಡಿಯಲ್ಲಿರುವ ಸರ್ವೇ ನಂ. 61/10 ಮತ್ತು 61/11 ರ ಜಮೀನಿನ ಯಾವುದೇ ಭಾಗದ ಮಾರಾಟವನ್ನು ಮಾಡದಂತೆ, ಶ್ರೀ ಮನೀಷ್ ಚಂದಕ್, ಶ್ರೀಮತಿ ಅಂಜನಾ ಚಂದಕ್ ಮತ್ತು ಶ್ರೀ ವದಿತ್ ತಪಾಡಿಯಾರವರಿಗೆ, ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿದೆ ಎಂಬುದನ್ನು ಸಾರ್ವಜನಿಕರ ಗಮನಕ್ಕೆ ತರಲಾಗಿದೆ. ಪಾಲುದಾರಿಕೆ ಸಂಸ್ಥೆಯಾದ ಲ್ಯಾಂಡ್‌ಮಾರ್ಕ್ ಕಾಸಾ–ಹಂಕಾ ಈ ಜಮೀನಿನಲ್ಲಿ ಅಭಿವೃದ್ಧಿ ಮಾಡುತ್ತಿದೆ.

ಯಾವುದೇ ಪ್ರಶ್ನೆಗಳಿಗೆ ದಯವಿಟ್ಟು ಸಂಪರ್ಕಿಸಿ: ಸಂವಾದ್ ಪಾರ್ಟ್‌ನರ್ಸ್, 62/1, ಅರಮನೆ ರಸ್ತೆ, ವಸಂತನಗರ, ಬೆಂಗಳೂರು – 560052 ಅನ್ನು ಸಂಪರ್ಕಿಸಿ.

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ ಶೋರೂಮ್‌ಗಳಿಗೆ ಕಂಪನಿಗಳಿಗೆ Cashier, Receptionist, Account ಕೆಲಸಕ್ಕೆ ತಕ್ಷಣ ಯುವಕ,ಯುವತಿಯರು ಬೇಕಾಗಿದ್ದಾರೆ. 20,000, 35,000. SSLC, Degree. 9916788422, 9916744622

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಗಳಿಗೆಪುರುಷರಿಗೆ, ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಅದ್ಯತೆ. 19,000, 25,000ಸಂಪಾದಿಸಿ. ಕೋರಿಯರ್ ಸೌಲಭ್ಯವಿದೆ. 9019593297, 8095133188

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Hotel

ಪುರುಷ ಸಹಾಯಕರು (45 ವರ್ಷದೊಳಗಿನವರು) ತಕ್ಷಣ ಬೇಕಾಗಿದ್ದಾರೆ. ರಾಮನಗರ ಬಳಿಯಿರುವ ರೆಸಾರ್ಟ್‌ಗೆ ಊಟ ವಸತಿಯೊಂದಿಗೆ. ಉತ್ತಮ ಸಂಬಳ. ಸಂಪರ್ಕಿಸಿ: 9945935638

ರಿಯಲ್ ಎಸ್ಟೇಟ್ ಬೈಯಿಂಗ್

Farm House/ Land/ Resorts

General

ಗೋದಾಮು/ ವೇರ್‌ಹೌಸ್ ಗುತ್ತಿಗೆಗೆ ಬೇಕು ಬೆಂಗಳೂರು ಸುತ್ತಮುತ್ತ 2500 sqft ವಿಸ್ತೀರ್ಣದ, ವಿದ್ಯುತ್, ವೈಯಕ್ತಿಕ ಕಾಂಪೌಂಡ್, ಲಾರಿ ಸಂಚಾರ ರಸ್ತೆ ಸೌಲಭ್ಯ ಬೇಕು. 9003912275

ಪ್ರವಾಸ

Travel

18/13/8 ದಿನಗಳ ಗ್ರಾಂಡ್ ಯುಕೆ ಮತ್ತು ಯುರೋಪ್ 10ದೇಶಗಳು. ಯುಕೆ, ಫ್ರಾನ್ಸ್, ನೆದರ್ಲ್ಯಾಂಡ್, ಬೆಲ್ಜಿಯಂ, ಜರ್ಮನಿ, ಸ್ವಿಜರ್ ಲ್ಯಾಂಡ್, ಲಿಚೆನ್ ಟೆನ್ ಸ್ಟೈನ್, ಇಟಲಿ ಆಸ್ಟ್ರಿಯಾ, ವ್ಯಾಟಿಕನ್ ವಿಮಾನ,ವೀಸಾ,ತೆರಿಗೆ, ಊಟ,ವಸತಿ, ಟಿಪ್ಸ್, ಇನ್ಸೂರೆನ್ಸ್, ಎಲ್ಲಾ ಪ್ರವಾಸದರದಲ್ಲಿ ಒಳಗೊಂಡಿರುತ್ತದೆ. ಸಂಪರ್ಕಿಸಿ. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್, ಬಸವನಗುಡಿ, ಬೆಂಗಳೂರು-04, 9880079644, 9900080793, 9900080794

Holiday Package Tours

24.12.2025, 4 ದಿನಗಳು ಬೀದರ್ ಝರಣಿನರಸಿಂಹಸ್ವಾಮಿ, ಕೂಡಲಸಂಗಮ, ಗಾಣಗಾಪುರ, 108 ಅಡಿ ಬಸವೇಶ್ವರ ಪ್ರತಿಮೆ, ಅನುಭವಮಂಟಪ, ವೈಷ್ಣೋದೇವಿ ಇತ್ಯಾದಿ. 9481433157

ಇಂದಿರಾ ಕಿಟ್‌ಗೆ ಕ್ಯೂಆರ್ ಕೋಡ್

ಒಂದನೇ ಪುಟದಿಂದ...

'ಯಾವುದೇ ರೀತಿಯ ದೂರಿಗೆ ಅವಕಾಶ ಆಗದಂತೆ, ನಾಫೆಡ್, ಎನ್‌ಸಿಎಫ್‌ನಂತಹ ಕೇಂದ್ರ ಸರಬರಾಜು ಸಂಸ್ಥೆಗಳ ಮೂಲಕ ಅಥವಾ ಖರೀದಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ಕೆಟಿಪಿಪಿ ಕಾಯ್ದೆ ಅನ್ವಯ ಕೈಗೊಳ್ಳಲು ಕ್ರಮ ತೆಗೆದುಕೊಳ್ಳಬೇಕು' ಎಂದು ನಿರ್ದೇಶನ ನೀಡಿದರು.

'ಪೂರೈಕೆಯಾದ ಕಿಟ್‌ಗಳನ್ನು ನಿಗಮದ ಗೋದಾಮು ಅಥವಾ ಸಗಟು ಮಳಿಗೆಗಳ ಮೂಲಕ ನ್ಯಾಯಬೆಲೆ ಅಂಗಡಿಗಳಿಗೆ ಪ್ರತಿ ತಿಂಗಳ 10ನೇ ತಾರೀಕಿನ ಒಳಗೆ ವಿತರಿಸಬೇಕು. ಕಿಟ್‌ನಲ್ಲಿ ಪೌಷ್ಟಿಕಾಂಶಗಳಿಂದ ಕೂಡಿರುವ ತೊಗರಿ ಬೇಳೆ ಗರಿಷ್ಠ ಪ್ರಮಾಣದಲ್ಲಿ ನೀಡಲು ಕ್ರಮ ಕೈಗೊಳ್ಳಬೇಕು' ಎಂದೂ ಸೂಚನೆ ನೀಡಿದರು.

ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಇದ್ದರು.

ಜೈಲಿಗೆ ಹಾಕಿದರೂ ರಾಹುಲ್ ಹೆದರುವುದಿಲ್ಲ: ಡಿಕೆಶಿ

ಪ್ರಜಾವಾಣಿ ವಾರ್ತೆ

> **ನ್ಯಾಷನಲ್ ಹೆರಾಲ್ಡ್ ಪ್ರಕರಣ ಮುಂದಿಟ್ಟುಕೊಂಡು ಕಾಂಗ್ರೆಸ್ ವರಿಷ್ಠರಾದ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ವಿರುದ್ಧ ರಾಜಕೀಯ ಸೇಡು ತೀರಿಸಿಕೊಳ್ಳುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಬೆಂಗಳೂರು: 'ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಜೈಲಿಗೆ ಹಾಕಿದರೂ ಹೆದರುವುದಿಲ್ಲ. ಕೇಂದ್ರ ಸರ್ಕಾರದ ದ್ವೇಷ ರಾಜಕಾರಣ ಸರಿಯಲ್ಲ. ಇದರಿಂದ ಅವರಿಗೆ ಯಾವುದೇ ಪ್ರಯೋಜನ ಆಗುವುದಿಲ್ಲ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಯಂಗ್ ಇಂಡಿಯಾ, ನ್ಯಾಷನಲ್ ಹೆರಾಲ್ಡ್‌ಗಳು ಸೋನಿಯಾ, ರಾಹುಲ್ ಗಾಂಧಿ ಅವರ ವೈಯಕ್ತಿಕ ಆಸ್ತಿಯಲ್ಲ, ಅದು ಪಕ್ಷದ ಆಸ್ತಿ. ಇಬ್ಬರೂ ಪಕ್ಷದ ಪಾಲಕರು. ಸಂಸ್ಥೆಯಲ್ಲಿ ಹಲವು ಸದಸ್ಯರು ಇದ್ದಾರೆ. ಮೊರಾರ್ಜಿ ದೇಸಾಯಿ, ಅಹಮದ್ ಪಟೇಲ್ ಅವರ ಕಾಲದಲ್ಲೇ ಕಾಂಗ್ರೆಸ್ ಪಕ್ಷದ ಹಿತಕ್ಕಾಗಿ ಕೆಲವು ನಿರ್ಧಾರ ಕೈಗೊಳ್ಳಲಾಗಿತ್ತು ಎಂದರು.

'ಸೀತಾರಾಮ್ ಕೇಸರಿ ಅವರ ಕಾಲದಲ್ಲಿ ಪಕ್ಷ ಸಂಕಷ್ಟದಲ್ಲಿದ್ದಾಗ, ಕಾಂಗ್ರೆಸ್ ನಾಯಕರಾದ ನಾವು ಸೋನಿಯಾ ಗಾಂಧಿ ಅವರ ಮುಂದೆ ಹೋಗಿ ಪಕ್ಷದ ಜವಾಬ್ದಾರಿ ವಹಿಸಿಕೊಳ್ಳುವಂತೆ ಬೇಡಿಕೊಂಡಿದ್ದೆವು. ಅವರು ನೇತೃತ್ವ ವಹಿಸಿದ ನಂತರ ನಮ್ಮ ಪಕ್ಷ ದೇಶದ ಅತ್ಯುತ್ತಮ ಆರ್ಥಿಕ ತಜ್ಞರ ಮುಂದಾಳತ್ವದಲ್ಲಿ 10 ವರ್ಷ ಆಡಳಿತ ನಡೆಸಿದೆ. ಈಗ ರಾಜಕೀಯವಾಗಿ ಕಿರುಕುಳ ನೀಡಲು ಅವರಿಗೆ ಈ ರೀತಿ ಮಾಡಲಾಗುತ್ತಿದೆ. ಇತಿಹಾಸ ಮುಂದಿನ ದಿನಗಳಲ್ಲಿ ಮರುಕಳಿಸಲಿದೆ' ಎಂದು ಹೇಳಿದರು.

'ರಾಜಕೀಯವನ್ನು ನೇರಾನೇರವಾಗಿ ಜನರ ಮಧ್ಯೆ ಮಾಡಬೇಕು. ಚುನಾವಣೆಯಲ್ಲಿ ಹೋರಾಡೋಣ. ಆದರೆ, ತನಿಖಾ ಸಂಸ್ಥೆಗಳ ದುರ್ಬಳಕೆ ಮಾಡಿಕೊಂಡು ಈ ರೀತಿ ಕಿರುಕುಳ ನೀಡುವುದು ಸರಿಯಲ್ಲ. ನ್ಯಾಷನಲ್ ಹೆರಾಲ್ಡ್ ಪ್ರಕರಣ ಕೇಂದ್ರ ಸರ್ಕಾರದ ನೈತಿಕತೆ ಕುಗ್ಗಿಸಲಿದೆ' ಎಂದರು.

ಉಪಾಹಾರ: ಡಿಕೆಶಿ ಮನೆಗೆ ಸಿದ್ದರಾಮಯ್ಯ

ಒಂದನೇ ಪುಟದಿಂದ...

ನಂತರ ಸಿದ್ದರಾಮಯ್ಯನವರೇ ಶಿವಕುಮಾರ್ ಅವರಿಗೆ ಅಧಿಕೃತ ಆಮಂತ್ರಣ ಕೊಟ್ಟಿದ್ದರು. ಉಪಾಹಾರ ಸವಿದ ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಉಭಯ ನಾಯಕರು ಒಗ್ಗಟ್ಟಿನ ಮಂತ್ರ ಪಠಿಸಿದರು.

ಸೋಮವಾರ ಬೆಳಿಗ್ಗೆಯಷ್ಟೇ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ್ದ ಸಿದ್ದರಾಮಯ್ಯ, 'ಶಿವಕುಮಾರ್ ಅವರು ತಮ್ಮ ಮನೆಗೂ ಉಪಾಹಾರಕ್ಕೆ ಕರೆದರೆ ಖಂಡಿತ ಹೋಗುತ್ತೇನೆ. ನನ್ನ ಮನೆಯಲ್ಲಿ ಉಪಹಾರಕ್ಕೆ ಬಂದಾಗ ತಮ್ಮ ಮನೆಗೂ ಬರುವಂತೆ ಆಹ್ವಾನ ನೀಡಿದ್ದರು. ಈ ಬಗ್ಗೆ ಇರುವರೆಗೂ ದೂರವಾಣಿ ಕರೆ ಬಂದಿಲ್ಲ' ಎಂದು ಹೇಳಿದ್ದರು. ಉಪಹಾರಕ್ಕೆ ಮುಖ್ಯಮಂತ್ರಿಗೆ ಆಹ್ವಾನ ನೀಡಿರುವುದನ್ನು ಶಿವಕುಮಾರ್ ಖಚಿತಪಡಿಸಿದ್ದಾರೆ.

'ನಾವಿಬ್ಬರೂ ಸಹೋದರರು'

'ನಾವಿಬ್ಬರು ಸಹೋದರರಂತೆ ಕೆಲಸ ಮಾಡಿಕೊಂಡು ಹೋಗುತ್ತಿದ್ದೇವೆ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ನೀವುಗಳು ಸದಾ ಗುಂಪು, ಗುಂಪು ಎಂದು ಬಿಂಬಿಸುತ್ತಿದ್ದೀರಿ. ನಮ್ಮಲ್ಲಿ ಯಾವುದೇ ಗುಂಪಿಲ್ಲ' ಎಂದು ಪುನರುಚ್ಚರಿಸಿದರು.

ಸಿದ್ದರಾಮಯ್ಯ ಅವರನ್ನು ಉಪಾಹಾರಕ್ಕೆ ಆಮಂತ್ರಿಸಿದ್ದೀರಾ ಎಂಬ ಪ್ರಶ್ನೆಗೆ 'ಇದು ನನಗೆ ಹಾಗೂ ಮುಖ್ಯಮಂತ್ರಿಗಳಿಗೆ ಸಂಬಂಧಿಸಿದ ವಿಚಾರ. ನಮ್ಮ ಜೊತೆ 140 ಶಾಸಕರಿದ್ದಾರೆ. ನಾವು ಹುಟ್ಟುವಾಗಲೂ ಒಬ್ಬರೇ, ಸಾಯುವಾಗಲೂ ಒಬ್ಬರೇ. ಪಕ್ಷದ ವಿಚಾರ ಬಂದಾಗ ಎಲ್ಲರನ್ನು ಒಟ್ಟಾಗಿ ತೆಗೆದುಕೊಂಡು ಹೋಗುತ್ತೇವೆ' ಎಂದರು.

ಶ್ರೀಲಂಕಾ: 'ಸಾಗರಬಂಧು' ಕಾರ್ಯಾಚರಣೆಯಿಂದ ತಾಯ್ನಾಡಿಗೆ

ಸಂಕಷ್ಟದಲ್ಲಿದ್ದ ಭಾರತೀಯರು ಸ್ವದೇಶಕ್ಕೆ

ಕೊಲಂಬೊ / ಜಕಾರ್ತ (ಪಿಟಿಐ/ ಎಎಫ್‌ಪಿ): 'ದಿತ್ವಾ' ಚಂಡಮಾರುತದಿಂದಾಗಿ ತತ್ತರಿಸಿರುವ ಶ್ರೀಲಂಕಾದಲ್ಲಿ ಸಿಲುಕಿದ್ದ 104 ಭಾರತೀಯರನ್ನು ಶನಿವಾರ ಕರೆತರಲಾಗಿದೆ. ಈ ಮೂಲಕ ಅಪಾಯದಲ್ಲಿದ್ದ ಎಲ್ಲ ಭಾರತೀಯರು ಸ್ವದೇಶಕ್ಕೆ ತಲುಪಿದಂತಾಗಿದೆ.

'ಸಾಗರಬಂಧು ಹೆಸರಿನ ಕಾರ್ಯಾಚರಣೆಯಲ್ಲಿ 104 ಭಾರತೀಯರನ್ನು ವಾಯುಪಡೆಯ ಯುದ್ಧವಿಮಾನದ ಮೂಲಕ ಕೊಲಂಬೊ ಬಂಡಾರನಾಯಿಕೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ತಿರುವನಂತಪುರಕ್ಕೆ ಕರೆತರಲಾಯಿತು' ಎಂದು ಭಾರತದ ಹೈಕಮಿಷನ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದೆ.

ಶ್ರೀಲಂಕಾದ ರಕ್ಷಣ ಕಾರ್ಯಕ್ಕೆ ಮತ್ತಷ್ಟು ನೆರವು ನೀಡುತ್ತಿರುವ ಭಾರತ, ತನ್ನ ಕಾರ್ಯಾಚರಣೆಯನ್ನು ವಿಸ್ತರಿಸಿದೆ. ಭಾರತೀಯ ವಾಯುಪಡೆಯ ಚೇತಕ್ ಯುದ್ಧವಿಮಾನವು ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುತ್ತಿದೆ. ಭೂಕುಸಿತ ಮತ್ತು ಪ್ರವಾಹದಿಂದ ರಸ್ತೆ ಸಂಪರ್ಕ ಕಡಿತಗೊಂಡಿರುವ ಗುಡ್ಡಪ್ರದೇಶ ಕೊಟ್‌ಮಲೆಯಲ್ಲಿಯೂ ಕಾರ್ಯಾಚರಣೆ ನಡೆಸುತ್ತಿದೆ

ಎನ್‌ಡಿಆರ್‌ಎಫ್ ಭಾನುವಾರ ಕೊಲಂಬೊಕ್ಕೆ ತಲುಪಿದ್ದು, ಕೋಚಿಕಡೆಯಲ್ಲಿ ಕಾರ್ಯಾಚರಣೆ ನಡೆಸುತ್ತಿದೆ.

ಹೆಲಿಕಾಪ್ಟರ್ ಪತನ: ವೆನ್ನಪ್ಪುವ ಕರಾವಳಿಯಲ್ಲಿ ಪರಿಹಾರ ಸಾಮಗ್ರಿ ತಲುಪಿಸುತ್ತಿದ್ದ ವೇಳೆ ಹೆಲಿಕಾಪ್ಟರ್‌ವೊಂದು ಪತನಗೊಂಡಿದ್ದು, ಪೈಲಟ್ ಮೃತಪಟ್ಟಿದ್ದಾರೆ. ಐವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ ಎಂದು ಶ್ರೀಲಂಕಾ ವಾಯುಪಡೆ ದೃಢಪಡಿಸಿದೆ.

ರಕ್ಷಣಾ ಕಾರ್ಯಚರಣೆ ನಡೆಸುತ್ತಿದ್ದ ನೌಕಾಪಡೆಯ ಐವರು ನಾವಿಕರ ಮೃತದೇಹ ಪತ್ತೆಯಾಗಿದೆ ಎಂದು ಶ್ರೀಲಂಕಾ ನೌಕಾಪಡೆ ತಿಳಿಸಿದೆ.

ತಮಿಳುನಾಡಿನಲ್ಲಿ ಮುಂದುವರಿದ ಮಳೆ

ಚೆನ್ನೈ (ಪಿಟಿಐ): ದಿತ್ವಾ ಚಂಡಮಾರುತದ ಪರಿಣಾಮವಾಗಿ ಚೆನ್ನೈ, ತಿರುವಲ್ಲೂರು, ಕಾಂಚೀಪುರಂ, ಕಡಲೂರು ಸೇರಿದಂತೆ ತಮಿಳುನಾಡಿನ ಹಲವೆಡೆ ಸೋಮವಾರವೂ ಸಾಧಾರಣ ಮಳೆಯಾಗಿದೆ.

ದಿತ್ವಾ ಚಂಡಮಾರುತವು ದುರ್ಬಲಗೊಂಡಿದ್ದು, ಅದರ ಪರಿಣಾಮವಾಗಿ ವಾಯುಭಾರ ಕುಸಿತವಾಗಿದೆ. ಇದು ತಮಿಳುನಾಡು–ಪಾಂಡಿಚೇರಿ ಕರಾವಳಿಗೆ ಸಮೀಪವಾಗಿರುವುದರಿಂದ ಮಳೆ ಮುಂದುವರಿಯುವ ಸಾಧ್ಯತೆಗಳಿವೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ನಿರಂತರ ಮಳೆಯಿಂದಾಗಿ ಹಲವು ಪ್ರದೇಶಗಳು ಜಲಾವೃತಗೊಂಡಿವೆ. ಕೃಷಿಭೂಮಿಗೆ ಹಾನಿಯಾಗಿದೆ.

ಚೆನ್ನೈನಿಂದ ಪೋರ್ಟ್‌ಬ್ಲೇರ್‌ಗೆ ಹೋಗಬೇಕಾಗಿದ್ದ 10 ವಿಮಾನಗಳ ಸಂಚಾರವನ್ನು ರದ್ದುಗೊಳಿಸಲಾಗಿದೆ ಎಂದು ಚೆನ್ನೈ ವಿಮಾನ ನಿಲ್ದಾಣ ತಿಳಿಸಿದೆ.

ಕಳೆದ ಎರಡು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ತಂಗಾಚಿಮಾಡಂನಲ್ಲಿ 200 ಮನೆಗಳು ಜಲಾವೃತಗೊಂಡಿವೆ. ರಾಮೇಶ್ವರಂನಲ್ಲಿಯೂ ಜನ ಸಂಕಷ್ಟದಲ್ಲಿದ್ದಾರೆ.

ಸಾವಿನ ಸಂಖ್ಯೆ 593ಕ್ಕೆ ಏರಿಕೆ

ಪ್ರವಾಹ ಮತ್ತು ಭೂಕುಸಿತದಿಂದಾಗಿ ಇಂಡೊನೇಷ್ಯಾದಲ್ಲಿ ಮೃತಪಟ್ಟವರ ಸಂಖ್ಯೆ 593ಕ್ಕೆ ಏರಿಕೆಯಾಗಿದೆ.

ಒಟ್ಟು 468 ಜನರು ನಾಪತ್ತೆಯಾಗಿದ್ದು, 5 ಲಕ್ಷದ 78 ಸಾವಿರ ಜನರನ್ನು ಸ್ಥಳಾಂತರಿಸಲಾಗಿದೆ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಸೋಮವಾರ ತಿಳಿಸಿದೆ.

ದರ್ಶನ್, ರಚನಾ ರೈ

ಡಿ.5ಕ್ಕೆ ಡೆವಿಲ್ ಟ್ರೇಲರ್

ಪ್ರಕಾಶ್ ವೀರ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ, ದರ್ಶನ್ ನಟನೆಯ 'ಡೆವಿಲ್–ದಿ ಹೀರೊ' ಚಿತ್ರದ ಟ್ರೇಲರ್ ಡಿ.5ರಂದು ಬಿಡುಗಡೆಯಾಗಲಿದೆ.

ಈ ಬಗ್ಗೆ ಚಿತ್ರತಂಡವು ಸೋಮವಾರ ಘೋಷಿಸಿದ್ದು, 'ನಾನು ಬರ್ತಿದ್ದೀನಿ ಚಿನ್ನ' ಎಂಬ ದರ್ಶನ್ ಡೈಲಾಗ್ ಮೂಲಕ ಟ್ರೇಲರ್ ಬಿಡುಗಡೆಯ ಬಗ್ಗೆ ಚಿತ್ರತಂಡ ತಿಳಿಸಿದೆ. ಸಿನಿಮಾ ಡಿ.11ರಂದು ತೆರೆಕಾಣಲಿದೆ.

'ಇದ್ರೆ ನೆಮ್ದಿಯಾಗ್ ಇರ್ಬೇಕ್..' ಎಂಬ ಹಾಡಿನ ಬಿಡುಗಡೆ ಮೂಲಕ ಚಿತ್ರದ ಪ್ರಚಾರ ಆರಂಭಿಸಿದ್ದ ಚಿತ್ರತಂಡ ಇಲ್ಲಿಯವರೆಗೆ ಮೂರು ಹಾಡುಗಳನ್ನು ರಿಲೀಸ್ ಮಾಡಿದೆ. ಶ್ರೀ ಜೈ ಮಾತ ಕಂಬೈನ್ಸ್ ಲಾಂಛನದಲ್ಲಿ ಜೆ.ಜಯಮ್ಮ ನಿರ್ಮಾಣ ಮಾಡಿರುವ ಈ ಚಿತ್ರವನ್ನು ಬೆಂಗಳೂರು, ರಾಜಸ್ಥಾನ, ಬ್ಯಾಂಕಾಕ್ ಮುಂತಾದ ಕಡೆ ಚಿತ್ರೀಕರಣ ಮಾಡಲಾಗಿದೆ. ಸುಧಾಕರ್ ಎಸ್.ರಾಜ್ ಛಾಯಾಚಿತ್ರಗ್ರಹಣ, ಬಿ.ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ಹರೀಶ್ ಕೊಮ್ಮೆ ಸಂಕಲನ, ಮೋಹನ್ ಬಿ.ಕೆರೆ ಕಲಾ ನಿರ್ದೇಶನ ಹಾಗೂ ರಾಮ್ ಲಕ್ಷ್ಮಣ್ ಸಾಹಸ ನಿರ್ದೇಶನ ಚಿತ್ರಕ್ಕಿದೆ. ದರ್ಶನ್‌ಗೆ ನಾಯಕಿಯಾಗಿ ರಚನ ರೈ ನಟಿಸಿದ್ದು, ತುಳಸಿ, ಅಚ್ಯುತ್ ಕುಮಾರ್, ಮಹೇಶ್ ಮಂಜ್ರೇಕರ್, ಶ್ರೀನಿವಾಸಪ್ರಭು, ಶೋಭರಾಜ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಶೀಘ್ರದಲ್ಲೇ 'ಮಾರ್ಕ್' ಟ್ರೇಲರ್

ಸುದೀಪ್

ನಟ ಸುದೀಪ್ ನಟನೆಯ 47ನೇ ಸಿನಿಮಾ 'ಮಾರ್ಕ್' ಡಿ.25ರಂದು ಬಿಡುಗಡೆಯಾಗುವುದು ಖಚಿತವಾಗಿದ್ದು, ಶೀಘ್ರದಲ್ಲೇ ಸಿನಿಮಾದ ಟ್ರೇಲರ್ ಹಾಗೂ ಹಾಡೊಂದನ್ನು ರಿಲೀಸ್ ಮಾಡುವುದಾಗಿ ಸುದೀಪ್ 'ಎಕ್ಸ್'ನಲ್ಲಿ ತಿಳಿಸಿದ್ದಾರೆ. 'ಮ್ಯಾಕ್ಸ್' ಚಿತ್ರದ ನಿರ್ದೇಶಕ ವಿಜಯ್ ಕಾರ್ತಿಕೇಯ ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾದಲ್ಲಿ ಅಜಯ್ ಮಾರ್ಕಂಡೆ ಎಂಬ ಪಾತ್ರದಲ್ಲಿ ಸುದೀಪ್ ಕಾಣಿಸಿಕೊಳ್ಳುತ್ತಿದ್ದಾರೆ.

ಹಿತಾ ಚಂದ್ರಶೇಖರ್, ರೂಪಾ ಅಯ್ಯರ್

ಜ.2ಕ್ಕೆ 'ಆಜಾದ್ ಭಾರತ್' ರಿಲೀಸ್

ಕನ್ನಡದ ನಟಿ, ನಿರ್ದೇಶಕಿ ರೂಪ ಅಯ್ಯರ್ ನಿರ್ದೇಶನದ 'ಆಜಾದ್ ಭಾರತ್' ಎಂಬ ಹಿಂದಿ ಚಿತ್ರವು ಜ.2ರಂದು ದೇಶದಾದ್ಯಂತ ಬಿಡುಗಡೆಯಾಗಲಿದೆ.

'ನೀರಾ ಆರ್ಯ' ಎಂಬ ಹೆಸರಿನಿಂದ ಶುರುವಾದ ಈ ಚಿತ್ರದ ಶೀರ್ಷಿಕೆಯನ್ನು ಇದೀಗ 'ಆಜಾದ್ ಭಾರತ್' ಎಂದು ಬದಲಿಸಿದೆ ಚಿತ್ರತಂಡ. ಈ ಚಿತ್ರವನ್ನು ನೇತಾಜಿ ಸುಭಾಷಚಂದ್ರ ಬೋಸ್ ಅವರಿಗೆ ಅರ್ಪಣೆ ಮಾಡಿದೆ ಚಿತ್ರತಂಡ. ಸುಭಾಷಚಂದ್ರ ಬೋಸ್ ಸ್ಥಾಪಿಸಿದ್ದ ಮೊದಲ ಮಹಿಳಾ ಸೇನೆಯ ಕಥೆ 'ಆಜಾದ್ ಭಾರತ್' ಚಿತ್ರದಲ್ಲಿದೆ. 'ನೇತಾಜಿ ಪಾತ್ರದಲ್ಲಿ ಬಾಲಿವುಡ್ ನಟ ಶ್ರೇಯಸ್ ತಲ್ಪಡೆ ಬಣ್ಣಹಚ್ಚಿದ್ದಾರೆ. ಈ ಚಿತ್ರದಲ್ಲಿ ಮೂರು ಮಹಿಳಾ ಮುಖ್ಯ ಪಾತ್ರಗಳಿದ್ದು, ನಾನು 'ನೀರಾ ಆರ್ಯ' ಪಾತ್ರದಲ್ಲಿ, ಹಿತಾ ಚಂದ್ರಶೇಖರ್ 'ದುರ್ಗಾ' ಪಾತ್ರದಲ್ಲಿ ನಟಿಸಿದ್ದೇವೆ. ಸರಸ್ವತಿ ರಾಜಾಮಣಿ ಎಂಬ ಪಾತ್ರದಲ್ಲಿ ಜನಪ್ರಿಯ ನಟಿಯೊಬ್ಬರು ಕಾಣಿಸಿಕೊಂಡಿದ್ದಾರೆ. ಸುರೇಶ್ ಒಬೆರಾಯ್, ಬಿರಾದಾರ್, ಸುಚೇಂದ್ರ ಪ್ರಸಾದ್, ಸುಭಾಷ್ ಚಂದ್ರ ಮುಂತಾದವರು ತಾರಾಬಳಗದಲ್ಲಿದ್ದಾರೆ' ಎಂದು ಮಾಹಿತಿ ನೀಡಿದರು ರೂಪಾ ಅಯ್ಯರ್.

'ಗೌತಮ್ ಶ್ರೀವತ್ಸ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ಈ ಚಿತ್ರವನ್ನು ನಿರ್ಮಾಣ ಮಾಡುವ ಮೊದಲು ಸುಭಾಷಚಂದ್ರ ಬೋಸ್ ಅವರ ಕುಟುಂಬದವರನ್ನು ಸಂಪರ್ಕ ಮಾಡಿ ಅನೇಕ ಮಾಹಿತಿ ಪಡೆದುಕೊಂಡಿದ್ದೇನೆ. ವಿವಿಧ ಕ್ಷೇತ್ರಗಳ ಗಣ್ಯರಿಗೆ ಈ ಚಿತ್ರ ತೋರಿಸುವ ಯೋಚನೆ ಇದೆ. ಜೀ ಸ್ಟುಡಿಯೋಸ್ ಮೂಲಕ ಈ ಚಿತ್ರ ಬಿಡುಗಡೆಯಾಗುತ್ತಿದೆ' ಎಂದರು ರೂಪಾ.

'ಚಿತ್ರದಲ್ಲಿ ಏಳು ಹಾಡುಗಳಿವೆ. ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರ ಪತ್ನಿ ಅಮೃತ ಫಡಣವೀಸ್ ಅವರು ನಮ್ಮ ಚಿತ್ರದ ಹಾಡೊಂದನ್ನು ಹಾಡಿದ್ದಾರೆ. ಯಶ್ ರಾಜ್ ಸ್ಟುಡಿಯೊದಲ್ಲಿ ರೀರೆಕಾರ್ಡಿಂಗ್ ನಡೆದಿದೆ' ಎಂದರು ಸಂಗೀತ ನಿರ್ದೇಶಕ ಗೌತಮ್ ಶ್ರೀವತ್ಸ.

ಚಮ್ಮಮ್ಮ ಹಾಗೂ ಲಕ್ಷ್ಮಮ್ಮ ಜೊತೆ ನವೀನ್ ಸಜ್ಜು

ಜನಪದ ಶೈಲಿಯಲ್ಲಿ 'ಲೋ ನವೀನ' ಹಾಡು

ಮಲಯಾಳದ 'ಅಯ್ಯಪ್ಪನುಂ ಕೋಶಿಯುಂ' ಚಿತ್ರದಲ್ಲಿ 'ಕಲಕಾತ..' ಎಂಬ ಹಾಡೊಂದನ್ನು ಹಳ್ಳಿಯೊಂದರ ವೃದ್ಧೆ ನಂಜಿಯಮ್ಮ ಹಾಡಿದ್ದರು. ಇದು ಸಾಕಷ್ಟು ಜನಪ್ರಿಯವಾಗಿತ್ತು. ಇದೀಗ ಕನ್ನಡದಲ್ಲೂ ಇಂತಹ ಪ್ರಯತ್ನವೊಂದು ನಡೆದಿದೆ.

ಗಾಯಕನಾಗಿ ಗುರುತಿಸಿಕೊಂಡಿರುವ ನವೀನ್ ಸಜ್ಜು ನಾಯಕನಾಗಿ ನಟಿಸಿರುವ ಮೊದಲ ಚಿತ್ರ 'ಲೋ ನವೀನ' ರಿಲೀಸ್‌ಗೆ ಸಜ್ಜಾಗುತ್ತಿದೆ. ಇತ್ತೀಚೆಗೆ ಈ ಚಿತ್ರದ 'ಕೋಣಾಣೆ' ಎಂಬ ಹಾಡು ಬಿಡುಗಡೆಯಾಗಿದೆ. ಅಪ್ಪಟ ಜನಪದ ಶೈಲಿಯ ಈ ಹಾಡನ್ನು ಮೈಸೂರಿನ ಎಚ್.ಡಿ.ಕೋಟೆಯ ಚಮ್ಮಮ್ಮ ಹಾಗೂ ಲಕ್ಷ್ಮಮ್ಮ ಎಂಬುವವರು ಹಾಡಿದ್ದಾರೆ. ನವೀನ್ ಸಜ್ಜು ಕೂಡಾ ಈ ಹಾಡಿಗೆ ದನಿಯಾಗಿದ್ದಾರೆ.

'ಮೂಲತಃ ಮಳವಳ್ಳಿಯವನಾದ ನಾನು, ಆರ್ಕೆಸ್ಟ್ರಾದಲ್ಲಿ ಹಾಡುತ್ತಿದ್ದೆ. ನಾನು, ಸುನೀಲ್ ಮೈಸೂರು ಹಾಗೂ ಅನೇಕ ಸ್ನೇಹಿತರು ಸೇರಿ ಮನರಂಜನೆ ಪ್ರಧಾನವಾಗಿರುವ ಈ ಚಿತ್ರದ ಕಥೆ ಬರೆದಿದ್ದೇವೆ. ಚಿತ್ರ ಬಿಡುಗಡೆ ಹಂತಕ್ಕೆ ಬಂದಿದೆ. ನಾನೇ ಸಂಗೀತ ಸಂಯೋಜಿಸಿರುವ ಐದು ಹಾಡುಗಳು ಈ ಚಿತ್ರದಲ್ಲಿದ್ದು, ಮೊದಲ ಹಾಡಾಗಿ 'ಕೋಣಾಣೆ' ಬಿಡುಗಡೆಯಾಗಿದೆ. ಚಿತ್ರೀಕರಣಕ್ಕಾಗಿ ಸುತ್ತಾಡುತ್ತಿದ್ದಾಗ, ಎಚ್.ಡಿ.ಕೋಟೆಯ ಹಿರೇನಂದಿ ಗ್ರಾಮಕ್ಕೆ ಹೋಗಿದ್ದೆವು. ಅಲ್ಲಿ ಚಮ್ಮಮ್ಮ ಹಾಗೂ ಲಕ್ಷ್ಮಮ್ಮ ಅವರು ಹೊಲದಲ್ಲಿ ಕೆಲಸ ಮಾಡುತ್ತಾ ಹಾಡುತ್ತಿದ್ದುದ್ದನ್ನು ನೋಡಿದೆ. ಇವರಿಂದ ನಮ್ಮ ಚಿತ್ರದ ಹಾಡೊಂದನ್ನು ಹಾಡಿಸಬೇಕು ಎಂದು ನಿರ್ಧರಿಸಿದೆ. ಅಂದುಕೊಂಡಂತೆ ಅವರಿಂದಲೇ ಈ ಹಾಡು ಹಾಡಿಸಿದ್ದೇನೆ' ಎಂದರು ನವೀನ್ ಸಜ್ಜು.

ಅನಿವಾಸಿ ಭಾರತೀಯರಾದ ಬೆನ್ ಚಿಕ್ಕಸ್ವಾಮಿ ಅರ್ಪಿಸುವ, ಕೀರ್ತಿಸ್ವಾಮಿ ನಿರ್ಮಿಸಿರುವ ಈ ಚಿತ್ರವನ್ನು ಧನುರ್ಧಾರಿ ಪವನ್ ನಿರ್ದೇಶಿಸಿದ್ದಾರೆ. ಇದು ಇವರು ನಿರ್ದೇಶಿಸಿರುವ ಮೊದಲ ಸಿನಿಮಾ. ರಿಷಿಕೇಶ್ ಛಾಯಾಚಿತ್ರಗ್ರಹಣ ಸಿನಿಮಾಗಿದೆ.

ರಾಜ್, ಸಮಂತಾ

ರಾಜ್ ಕೈಹಿಡಿದ ಸಮಂತಾ

ನಿರ್ದೇಶಕ ರಾಜ್ ನಿಧಿಮೋರು ಜೊತೆ ನಟಿ ಸಮಂತಾ ರುತ್ ಪ್ರಭು ಮದುವೆ ಸೋಮವಾರ (ಡಿ.1) ನಡೆದಿದೆ. ಮದುವೆಯ ಚಿತ್ರಗಳನ್ನು ಸಮಂತಾ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

'ಈಗ', 'ರಂಗಸ್ಥಳಂ', 'ಸೂಪರ್ ಡಿಲಕ್ಸ್', 'ದೂಕುಡು', 'ಅತ್ತರಿಂಟಿಕಿ ದಾರಿದಿ', 'ಥೆರಿ' ಹೀಗೆ ತೆಲುಗು ಹಾಗೂ ತಮಿಳು ಚಿತ್ರರಂಗದಲ್ಲಿ ಗುರುತಿಸಿಕೊಂಡಿರುವ ಸಮಂತಾ, ರಾಜ್ ಮತ್ತು ಡಿಕೆ(ಕೃಷ್ಣ ದಾಸರಕೊತ್ತಪಲ್ಲಿ) ನಿರ್ದೇಶನದ 'ಫ್ಯಾಮಿಲಿ ಮ್ಯಾನ್–2' ವೆಬ್ ಸರಣಿಯಲ್ಲಿ ನಟಿಸಿದ್ದರು. ರಾಜ್ 'ಗೋ ಗೋವಾ ಗಾನ್' ಹಾಗೂ 'ಎ ಜೆಂಟಲ್‌ಮ್ಯಾನ್' ಸಿನಿಮಾ ನಿರ್ದೇಶಿಸಿದ್ದಾರೆ. ನಿರ್ಮಾಪಕರಾಗಿಯೂ ಗುರುತಿಸಿಕೊಂಡಿದ್ದಾರೆ. ಈ ಹಿಂದೆ ಹಲವು ಬಾರಿ ಇವರಿಬ್ಬರೂ ಜೊತೆಯಾಗಿ ಕಾಣಿಸಿಕೊಂಡಿದ್ದರೂ ತಮ್ಮ ಸಂಬಂಧವನ್ನು ಗುಟ್ಟಾಗಿ ಇರಿಸಿದ್ದರು. 2017ರಲ್ಲಿ ನಟ ನಾಗ ಚೈತನ್ಯ ಅವರ ಜೊತೆ ಸಮಂತಾ ವಿವಾಹ ನಡೆದಿತ್ತು. 2021ರಲ್ಲಿ ಈ ಜೋಡಿಯು ವಿಚ್ಛೇದನ ಪಡೆದಿತ್ತು. ರಾಜ್ ಅವರಿಗೂ ಇದು ಎರಡನೇ ಮದುವೆಯಾಗಿದ್ದು, 2015ರಲ್ಲಿ ಶ್ಯಾಮಲಿ ಡೇ ಜೊತೆಗೆ ರಾಜ್ ಮದುವೆಯಾಗಿತ್ತು. 2022ರಲ್ಲಿ ಈ ಜೋಡಿ ವಿಚ್ಛೇದನ ಪಡೆದಿತ್ತು.

ಧನಕರ್ ಹಠಾತ್ ನಿರ್ಗಮನ: ಚರ್ಚೆ

ಮಲ್ಲಿಕಾರ್ಜುನ ಖರ್ಗೆ ಮಾತಿಗೆ ಕೇಂದ್ರ ಸಚಿವ ಕಿರಣ್ ರಿಜಿಜು ತೀವ್ರ ಆಕ್ಷೇಪ

ನವದೆಹಲಿ (ಪಿಟಿಐ): ಸೋಮವಾರದಿಂದ ಆರಂಭಗೊಂಡ ಚಳಿಗಾಲದ ಅಧಿವೇಶನದಲ್ಲಿ ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರನ್ನು ಸ್ವಾಗತಿಸುವ ವೇಳೆ ಮಾಜಿ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರ ಹಠಾತ್ ನಿರ್ಗಮನವನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಸ್ತಾಪಿಸಿದರು. ಇದಕ್ಕೆ ಆಡಳಿತ ಪಕ್ಷದ ಮುಂದಿನ ಸಾಲಿನಲ್ಲಿ ಕುಳಿತಿದ್ದ ಸಚಿವರು ತೀವ್ರ ಆಕ್ಷೇಪ ವ್ಯಕ್ತಪಡಿಸಿ, ಈ ಸಂದರ್ಭಕ್ಕೆ ಔಚಿತ್ಯಪೂರ್ಣವಾದ ಮಾತಲ್ಲ ಎಂದು ನೆನಪಿಸಿದರು.

ವಿರೋಧ ಪಕ್ಷಗಳ ಪರವಾಗಿ ರಾಧಾಕೃಷ್ಣನ್ ಅವರನ್ನು ಸ್ವಾಗತಿಸಿದ ಖರ್ಗೆ, ಪ್ರಧಾನಿ ಮೋದಿ ಅವರ ಹೇಳಿಕೆಯ ನಂತರ ಪ್ರತಿಕ್ರಿಯೆ ನೀಡುವುದಾಗಿ ತಿಳಿಸಿದರು.

'ಸಾಂವಿಧಾನಿಕ ಮೌಲ್ಯಗಳು ಹಾಗೂ ಸಂಸತ್‌ನ ಸಂಪ್ರದಾಯಗಳನ್ನು ಕಾಂಗ್ರೆಸ್ ಪಕ್ಷವು ಸದಾ ಗೌರವಿಸುತ್ತದೆ. ಸುಗಮ ಕಲಾಪ ನಡೆಸಲು ನಮ್ಮ ಕಡೆಯಿಂದ ಸಂಪೂರ್ಣ ಸಹಕಾರ ದೊರಕಲಿದೆ' ಎಂದು ಅವರು ತಿಳಿಸಿದರು.

ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯಸಭೆಯಲ್ಲಿ ಮಾತನಾಡಿದರು

ಅನಾರೋಗ್ಯದ ಕಾರಣ ನೀಡಿ ಜುಲೈ 21ರಂದು ಧನಕರ್ ಅವರು ಹಠಾತ್ ನಿರ್ಗಮಿಸಿದ್ದನ್ನು ಪ್ರಸ್ತಾಪಿಸಿದರು.

'ರಾಜ್ಯಸಭೆಯ ಹಿಂದಿನ ಅಧ್ಯಕ್ಷರು ಅನಿರೀಕ್ಷಿತ ಹಾಗೂ ಹಠಾತ್ ಆಗಿ ನಿರ್ಗಮಿಸುವ ಮೂಲಕ ಸಂಸತ್‌ನ ಇತಿಹಾಸದಲ್ಲಿ ಅಭೂತಪೂರ್ವ ದಾಖಲೆಗೆ ಕಾರಣರಾದರು. ರಾಜ್ಯಸಭೆಯ ಅಧ್ಯಕ್ಷರು ಸದನದ ಮೇಲ್ವಿಚಾರಕರಾಗಿದ್ದು, ಆಡಳಿತ ಹಾಗೂ ವಿರೋಧ ಪಕ್ಷಗಳಿಗೂ ಸೇರಿದವರಾಗಿದ್ದಾರೆ' ಎಂದು ತಿಳಿಸಿದರು.

'ಈ ಸದನಕ್ಕೆ ಅವರನ್ನು ಬೀಳ್ಕೊಡಲು ಸಾಧ್ಯವಾಗಲಿಲ್ಲ ಎಂಬುದು ನನಗೆ ಬೇಸರವಾಗಿದೆ. ಕಾಂಗ್ರೆಸ್‌ನಿಂದ ಮೂರು ಬಾರಿ ಸಂಸದರಾಗಿದ್ದ ಸಿ.ಕೆ.ಕುಪ್ಪುಸ್ವಾಮಿ ಅವರು ರಾಧಾಕೃಷ್ಣನ್ ಸಂಬಂಧಿ' ಎಂದು ಖರ್ಗೆ ಪ್ರಸ್ತಾಪಿಸಿದರು.

'ನೀವು ಎರಡೂ ಕಡೆ ಸರಿದೂಗಿಸಿಕೊಂಡು ಹೋಗುವುದು ಉತ್ತಮ. ನಿಮ್ಮ ಅವಧಿಯಲ್ಲಿ ಯಶಸ್ಸು ಸಿಗಲಿ. ನೀವು ಮಾತನಾಡುವ ವೇಳೆ ಪ್ರಧಾನಿ (ನರೇಂದ್ರ ಮೋದಿ) ಹೆಸರನ್ನು ಉಲ್ಲೇಖಿಸಿದ್ದೀರಿ. ಆದರೆ, ನೀವು ಕಾಂಗ್ರೆಸ್ ಕುಟುಂಬದಿಂದ ಬಂದಿದ್ದೀರಿ ಎಂಬುದನ್ನು ಮರೆಯಬೇಡಿ' ಎಂದರು.

'ಸಂಸತ್‌ನ ಹೊರಭಾಗದಲ್ಲಿ ಪ್ರಧಾನಿ ಅವರು ಹೇಳಿಕೆ ನೀಡಿದರು. ಒಳಗಡೆ ಪರೋಕ್ಷವಾಗಿ ಟೀಕಿಸಿದರು. ನಾವು ಇಲ್ಲಿಯೇ ಉತ್ತರ ನೀಡುತ್ತೇವೆ' ಎಂದು ಖರ್ಗೆ ಅವರು ಸ್ವಾಗತ ಭಾಷಣದಲ್ಲಿ ಪ್ರಸ್ತಾಪಿಸಿದರು.

ಆಕ್ಷೇಪ: ಖರ್ಗೆ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, 'ಇದು ಗಂಭೀರವಾದ ಸಂದರ್ಭವಾಗಿದೆ. ಸ್ವಾಗತ ಕೋರುವ ವೇಳೆ ಪ್ರಧಾನಿ ಅವರು ಅತ್ಯಂತ ಗೌರವಯುತವಾಗಿ ಮಾತನಾಡಿದ್ದಾರೆ. ಆದರೆ, ಗೌರವಾನ್ವಿತ ವಿರೋಧ ಪಕ್ಷದ ನಾಯಕರು ಅನಗತ್ಯ ವಿಚಾರವನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ' ಎಂದರು.

'ಮಾಜಿ ಉಪರಾಷ್ಟ್ರಪತಿ ಬಗ್ಗೆ ನೀವು ಸಲ್ಲದ ಭಾಷೆ ಬಳಸುವ ಮೂಲಕ ಅವರನ್ನು ಅವಮಾನಿಸಿದ್ದೀರಿ. ನೀವು ಸಲ್ಲಿಸಿದ ಪ್ರಸ್ತಾವನೆಯ ಪ್ರತಿ ಈಗಲೂ ನಮ್ಮ ಬಳಿಯಿದೆ' ಎಂದು ಹೇಳಿದರು.

ಮಧ್ಯ ಪ್ರವೇಶಿಸಿ ಮಾತನಾಡಿದ ರಾಜ್ಯಸಭೆಯ ಆಡಳಿತ ಪಕ್ಷದ ನಾಯಕ ಜೆ.ಪಿ.ನಡ್ಡಾ, 'ಈ ಸಂದರ್ಭದ ಘನತೆಯನ್ನು ಪ್ರತಿಯೊಬ್ಬ ಸದಸ್ಯರು ಕಾಪಾಡಿಕೊಳ್ಳಬೇಕು. ಇತ್ತೀಚೆಗೆ ನಡೆದ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳು ತೀವ್ರ ಮುಖಭಂಗ ಅನುಭವಿಸಿವೆ' ಎಂದು ಪ್ರಸ್ತಾಪಿಸಿದರು.

ಸಂಸತ್ತಿಗೆ ಬೀದಿನಾಯಿ ತಂದ ರೇಣುಕಾ

ನವದೆಹಲಿ (ಪಿಟಿಐ): ಕಾಂಗ್ರೆಸ್ ಸಂಸದೆ ರೇಣುಕಾ ಚೌಧರಿ ಅವರು ಸೋಮವಾರ ಸಂಸತ್ತಿಗೆ ಆಗಮಿಸುವಾಗ ತಾವು ರಕ್ಷಿಸಿದ್ದ ಬೀದಿ ನಾಯಿಯನ್ನು ಕಾರಿನಲ್ಲಿ ಕರೆತಂದಿದ್ದು ವಿವಾದಕ್ಕೆ ಕಾರಣವಾಯಿತು.

ರೇಣುಕಾ ಅವರು ನಾಟಕ ಮಾಡುತ್ತಿದ್ದಾರೆ ಎಂದು ಆಡಳಿತ ಪಕ್ಷದ ಕೆಲವು ಸದಸ್ಯರು ಆರೋಪಿಸಿದರು. ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ರೇಣುಕಾ ಅವರು, 'ನಾಯಿಗಳು ಕಚ್ಚುವುದಿಲ್ಲ, ಕಚ್ಚುವವರು ಸಂಸತ್ತಿನಲ್ಲಿಯೇ ಇದ್ದಾರೆ' ಎಂದು ಕುಟುಕಿದರು. 'ಸರ್ಕಾರಕ್ಕೆ ಪ್ರಾಣಿಗಳು ಇಷ್ಟವಾಗುವುದಿಲ್ಲ. ಪ್ರಾಣಿಗಳಿಗೆ ಮಾತು ಬರುವುದಿಲ್ಲ. ನಾಯಿಯು ಕಾರಿನಲ್ಲಿ ಇದ್ದರೆ ಏನು ಸಮಸ್ಯೆ? ಇದೊಂದು ಚಿಕ್ಕ ನಾಯಿ, ಅದು ಕಚ್ಚುವ ರೀತಿ ಕಾಣುತ್ತದೆಯೇ?' ಎಂದು ಹೇಳಿದರು.

ಆಡಳಿತ ಪಕ್ಷದ ಸದಸ್ಯರ ಆಕ್ಷೇಪವನ್ನು ಪ್ರಶ್ನಿಸಿದ ಅವರು, 'ಬೀದಿ ನಾಯಿಗಳನ್ನು ರಕ್ಷಿಸಬಾರದೆಂಬ ಯಾವುದೇ ಕಾನೂನು ಇಲ್ಲ' ಎಂದು ತಿರುಗೇಟು ನೀಡಿದರು. ಈ ಮಧ್ಯೆ ಬಿಜೆಪಿ ಸಂಸದ ಜಗದಾಂಬಿಕಾ ಪಾಲ್, 'ರೇಣುಕಾ ಅವರು ನಾಟಕ ಮಾಡುತ್ತಿದ್ದಾರೆ ಮತ್ತು ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಸಂಸತ್ತಿಗೆ ನಾಯಿಯನ್ನು ಕರೆತಂದಿದ್ದಾರೆ' ಎಂದು ಹೇಳಿದರು.

ಪಿಣರಾಯಿಗೆ ಇ.ಡಿ ನೋಟಿಸ್

ನವದೆಹಲಿ/ ತಿರುವನಂತಪುರ: ಕೆಐಐಎಫ್‌ಬಿ ಮಸಾಲಾ ಬಾಂಡ್ ಪ್ರಕರಣಕ್ಕೆ ಸಂಬಂಧಿಸಿ, ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಮಾಜಿ ಹಣಕಾಸು ಸಚಿವ ಥಾಮಸ್ ಐಸಾಕ್ ಮತ್ತು ಅಧಿಕಾರಿಯೊಬ್ಬರಿಗೆ ಜಾರಿ ನಿರ್ದೇಶನಾಲಯ ಷೋಕಾಸ್ ನೋಟಿಸ್ ನೀಡಿದೆ.

ಪಿಣರಾಯಿ ವಿಜಯನ್

ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ(ಎಫ್‌ಇಎಂಎ) ಅಡಿ ಸ್ಥಾಪಿತವಾಗಿರುವ ಜಾರಿ ನಿರ್ದೇಶನಾಲಯದ ನ್ಯಾಯನಿರ್ಣಯ ಪ್ರಾಧಿಕಾರವು ನವೆಂಬರ್ 12ರಂದು ನೋಟಿಸ್ ಜಾರಿಗೊಳಿಸಿದೆ.

'ಬಾಹ್ಯ ವಾಣಿಜ್ಯ ಸಾಲ(ಇಸಿಬಿ) ಅಡಿಯಲ್ಲಿ ರೂಪಾಯಿ ಮೌಲ್ಯದ ಬಾಂಡ್‌ಗಳ ಮೂಲಕ ₹2,672.80 ಸಂಗ್ರಹಿಸಲು ಲಂಡನ್ ಮತ್ತು ಸಿಂಗಪುರ ವಿನಿಮಯ ಕೇಂದ್ರಗಳಲ್ಲಿ 'ಮಸಾಲ ಬಾಂಡ್' ಅನ್ನು ಕೇರಳ ಮೂಲಸೌಕರ್ಯ ಹೂಡಿಕೆ ನಿಧಿ ಮಂಡಳಿ(ಕೆಐಐಎಫ್‌ಬಿ) 2019ರಲ್ಲಿ ಬಿಡುಗಡೆಗೊಳಿಸಿತ್ತು. ಈ ನಿಧಿಯಲ್ಲಿ ₹466.91 ಕೋಟಿಯನ್ನು ಭೂಮಿ ಖರೀದಿಗೆ ಬಳಸುವ ಮೂಲಕ ಆರ್‌ಬಿಐ ನಿರ್ದೇಶನಗಳನ್ನು ಉಲ್ಲಂಘಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರ್‌ಬಿಐ ನಿಯಮಗಳನ್ನು ಉಲ್ಲಂಘಿಸಿದ ಆರೋಪದಡಿ ಕೆಐಐಎಫ್‌ಬಿ ಅಧ್ಯಕ್ಷರೂ ಆಗಿರುವ ಪಿಣರಾಯಿ ವಿಜಯನ್, ಉಪಾಧ್ಯಕ್ಷರಾಗಿರುವ ಮಾಜಿ ಸಚಿವ ಐಸಾಕ್ ಮತ್ತು ಸಿಇಒ ಆಗಿರುವ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ ಅಬ್ರಹಂ ಅವರಿಗೆ ನೋಟಿಸ್ ನೀಡಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿ ಇ.ಡಿ ಜೂನ್ 27ರಂದು ಪ್ರಕರಣ ದಾಖಲಿಸಿಕೊಂಡಿತ್ತು.

ಸಿಬಿಐ ತನಿಖೆ ಕೋರಿ ಹೈಕೋರ್ಟ್‌ಗೆ ಅರ್ಜಿ

ಕೊಚ್ಚಿ (ಪಿಟಿಐ): ಶಬರಿಮಲೆ ದೇವಸ್ಥಾನದಿಂದ ಚಿನ್ನ ಕಳವು ಪ್ರಕರಣದ ತನಿಖೆಯನ್ನು ಕೇಂದ್ರೀಯ ತನಿಖಾ ಸಂಸ್ಥೆಯಿಂದ (ಸಿಬಿಐ) ನಡೆಸಬೇಕು ಎಂದು ಕೋರಿ ಕೇರಳ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ರಾಜೀವ್ ಚಂದ್ರಶೇಖರ್ ಇಲ್ಲಿನ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

'ನಾಪತ್ತೆ ಪ್ರಕರಣದ ಕೂಲಂಕಷ ತನಿಖೆ ನಡೆಸುವ ಅಗತ್ಯವಿದೆ. ದೇವಾಲಯಕ್ಕೆ ಸೇರಿದ ಚಿನ್ನವನ್ನು ವಿವಿಧ ರಾಜ್ಯಗಳಿಗೆ ಹಂಚಲಾಗಿದ್ದು, ಕೇರಳದ ಹೊರಗಿನ ವ್ಯಕ್ತಿಗಳು ಕೂಡ ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ. ಸಿಬಿಐನಿಂದ ಮಾತ್ರ ಸಮಗ್ರ ತನಿಖೆ ನಡೆಸಲು ಸಾಧ್ಯ' ಎಂದು ಅವರು ಅರ್ಜಿಯಲ್ಲಿ ತಿಳಿಸಿದ್ದಾರೆ. ಮುಂದಿನ ವಾರ ಅರ್ಜಿಯನ್ನು ಮತ್ತೆ ವಿಚಾರಣೆ ನಡೆಸುವುದಾಗಿ ತಿಳಿಸಿದೆ.

ಮಲಬಾರ್ 'ಬ್ರೈಡ್ ಆಫ್ ಇಂಡಿಯಾ' 15ನೇ ಆವೃತ್ತಿಗೆ ಚಾಲನೆ

ಬೆಂಗಳೂರು : ವಿಶ್ವದ ಅತಿದೊಡ್ಡ ಚಿನ್ನ ಮತ್ತು ವಜ್ರಾಭರಣಗಳ ರೀಟೇಲ್ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿರುವ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್' ಅತ್ಯಂತ ಜನಮೆಚ್ಚುಗೆಯ 'ಬ್ರೈಡ್ ಆಫ್ ಇಂಡಿಯಾ' 15ನೇ ಆವೃತ್ತಿಗೆ ಚಾಲನೆ ನೀಡಿದೆ. ಈ ಆವೃತ್ತಿಯನ್ನು ವಿಶೇಷ ಮೈಲಿಗಲ್ಲಾಗಿ ಪರಿಗಣಿಸಿರುವ ಮಲಬಾರ್, ಅತ್ಯಂತ ಆಕರ್ಷಕ ವಿನ್ಯಾಸಗಳ ಆಭರಣಗಳ ಸಂಗ್ರಹವನ್ನು ಗ್ರಾಹಕರಿಗೆ ನೀಡುತ್ತಿದೆ. ಜತೆಗೆ, ಈ ವರ್ಷದ ಆವೃತ್ತಿಯು 22 ವಧುಗಳು ಮತ್ತು 10 ತಾರಾ ನಟಮಣಿಗಳನ್ನು ಒಂದೆಡೆ ಸೇರಿಸಲಿದೆ. ಇವರಲ್ಲಿ ಶ್ರೀನಿಧಿಶೆಟ್ಟಿ, ಕಾರ್ತಿ, ಎನ್‌ಟಿಆರ್, ಆಲಿಯಾ ಭಟ್, ಕರೀನಾ ಕಪೂರ್ ಖಾನ್, ಅನಿಲ್ ಕಪೂರ್, ರುಕ್ಮಿಣಿ ಮೈತ್ರಾ, ಸವ್ಯಸಾಚಿ ಮಿಶ್ರಾ, ಪ್ರಾರ್ಥನಾ ಬೆಹೆರೆ ಮತ್ತು ಮಾನಸಿ ಪಾರೇಖ್ ಮತ್ತಿತರರು ಸೇರಿದ್ದಾರೆ.

15ನೇ ಆವೃತ್ತಿಗೆ ಚಾಲನೆ ನೀಡಿರುವ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಅಧ್ಯಕ್ಷ ಎಂ.ಪಿ. ಅಹಮ್ಮದ್ ಮಾತನಾಡಿ, 'ಪ್ರತಿ ವರ್ಷ ನಡೆಯುವ ಬ್ರೈಡ್ಸ್ ಆಫ್ ಇಂಡಿಯಾ ಅಭಿಯಾನವು ಭಾರತದ ವಿವಿಧ ರಾಜ್ಯಗಳ ಸಂಸ್ಕೃತಿ, ಪರಂಪರೆಯ ಪ್ರತೀಕವಾಗಿರುವ ವಧುಗಳಿಗೆ ನಾವು ಸಲ್ಲಿಸುವ ಗೌರವವಾಗಿದೆ. 15ನೇ ಆವೃತ್ತಿಯು ನಮ್ಮ ಪಾಲಿನ ಅತ್ಯಂತ ಮಹತ್ವದ ಮೈಲಿಗಲ್ಲಾಗಿದೆ. ವಧುಗಳು ಸಂಪ್ರದಾಯಗಳ ಬಗೆಗಿನ ತಮ್ಮ ಅಭಿಮಾನ ಹಾಗೂ ಗೌರವವನ್ನು ಹೇಗೆ ಅಭಿವ್ಯಕ್ತಪಡಿಸುತ್ತಾರೆ ಎಂಬುದರ ಮೇಲೆ ನಾವಿಲ್ಲಿ ಬೆಳಕು ಚೆಲ್ಲುತ್ತೇವೆ. ಈ ಆವೃತ್ತಿಯು ಆ ಸಂಪ್ರದಾಯಗಳ ಮಹತ್ವವನ್ನು ಬಿಂಬಿಸುತ್ತದೆ' ಎಂದಿದ್ದಾರೆ.

15ನೇ ಆವೃತ್ತಿಯ ಬ್ರ್ಯಾಂಡ್ ಫಿಲ್ಮ್

ಮಲಬಾರ್‌ನ 15ನೇ ಆವೃತ್ತಿಗೆಂದು ಪ್ರತ್ಯೇಕ ಬ್ರ್ಯಾಂಡ್ ಫಿಲ್ಮ್ ಸಿದ್ಧಪಡಿಸಲಾಗಿದೆ. ಯೂಟ್ಯೂಬ್‌ನ ಮಲಬಾರ್ ಚಾನೆಲ್‌ನಲ್ಲಿ ಈ ಫಿಲ್ಮ್ ಲಭ್ಯವಿದ್ದು, ಭಾರತೀಯ ಸಿನಿ ರಂಗದ ಖ್ಯಾತ ನಟ, ನಟಿಯರ ಸಮಾಗಮ ಇದರಲ್ಲಿದೆ. ಶ್ರೀನಿಧಿ ಶೆಟ್ಟಿ, ಕಾರ್ತಿ, ಎನ್‌ಟಿಆರ್, ಆಲಿಯಾ ಭಟ್, ಕರೀನಾ ಕಪೂರ್ ಖಾನ್, ಅನಿಲ್ ಕಪೂರ್, ರುಕ್ಮಿಣಿ ಮೈತ್ರಾ, ಸವ್ಯಸಾಚಿ ಮಿಶ್ರಾ, ಪ್ರಾರ್ಥನಾ ಬೆಹೆರೆ ಮತ್ತು ಮಾನಸಿ ಪಾರೇಖ್ ಸೇರಿದಂತೆ ಖ್ಯಾತ ನಟ, ನಟಿಯರು ದೇಶದ ದಕ್ಷಿಣ ಭಾರತೀಯ, ಉತ್ತರ ಭಾರತದ ರಾಜಸ್ಥಾನಿ ಸೇರಿದಂತೆ ವಿವಿಧ ಸಾಂಪ್ರದಾಯಿಕ ಮದುವೆಗಳ ಸಡಗರದಲ್ಲಿ ಪಾಲ್ಗೊಂಡಿರುವ ದೃಶ್ಯಗಳು ಮನಮೋಹವಾಗಿವೆ. ಜತೆಗೆ, 'ಬ್ರೈಡ್ ಆಫ್ ಇಂಡಿಯಾ' ಅಭಿಯಾನದ ಭಾಗವಾಗಿರುವ ಈ ವಿಡಿಯೋ ಅತ್ಯಂತ ಆಕರ್ಷಕವಾಗಿ ಮೂಡಿಬಂದಿದೆ. ಈ ಚಿತ್ರವನ್ನು ಅಭಿಷೇಕ್ ವರ್ಮನ್ ನಿರ್ದೇಶಿಸಿದ್ದಾರೆ. ಶುಭಜಿತ್ ಮುಖರ್ಜಿ ಸಂಗೀತ ಸಂಯೋಜಿಸಿದ್ದಾರೆ.

ಸಿನಿ ತಾರೆಯರ ಮನದಾಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನ 'ಬ್ರೈಡ್ಸ್ ಆಫ್ ಇಂಡಿಯಾ' ಆವೃತ್ತಿಯ ಕುರಿತು ಸಿನಿ ತಾರೆಯರು ತಮ್ಮ ಮನದಾಳದ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ. ಖ್ಯಾತ ನಟಿ ಶ್ರೀನಿಧಿ ಶೆಟ್ಟಿ, 'ಕರುನಾಡಿನ ಮದುವೆ ಸಂಭ್ರಮಗಳು ಆಯಾ ಭಾಗದ ಸಾಂಸ್ಕೃತಿಕ ಸೊಬಗಿನ ಕನ್ನಡಿಗಂತಿರುತ್ತವೆ. ಅತ್ಯಂತ ಸುಂದರ, ಆಕರ್ಷಕ ಮೆರುಗಿನ ಸಂಪ್ರದಾಯಗಳು ವಿಶೇಷ ಸಂಭ್ರಮವನ್ನು ಹೊಂದಿರುತ್ತವೆ. ಇಲ್ಲಿನ ವಿಶಿಷ್ಟ ಆಚರಣೆಗಳು, ಮದುವೆ ಮನೆಯಲ್ಲಿ ಎಲ್ಲೆಡೆ ಪಸರಿಸಿರುವ ಮಲ್ಲಿಗೆ ಹೂವಿನ ಸುವಾಸನೆ, ನಾದಸ್ವರ ದಿನದ ಸಂಭ್ರಮಾಚರಣೆಗೆ ಮುನ್ನುಡಿ ಬರೆಯುತ್ತವೆ. ಈ ಶಾಂತ ಮತ್ತು ಸಾಂಸ್ಕೃತಿಕ ಆಳದ ಅರ್ಥವನ್ನು 'ಬ್ರೈಡ್ಸ್ ಆಫ್ ಇಂಡಿಯಾ' ಅತ್ಯಂತ ಸುಂದರವಾಗಿ ಸೆರೆಹಿಡಿಯಲಿದೆ ಎನ್ನುವುದೇ ಮೆಚ್ಚುಗೆಯಾದ ಸಂಗತಿ. ಈ ಅಭಿಯಾನವು ನಮ್ಮ ಸಂಪ್ರದಾಯಗಳ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳದೆ, ಕನ್ನಡ ನಾಡಿನ ವಧುವಿನ ಸೊಬಗು ಮತ್ತು ಆತ್ಮವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ' ಎಂದಿದ್ದಾರೆ. ತಮಿಳಿನ ಖ್ಯಾತ ನಟ ಕಾರ್ತಿ ಮಾತನಾಡಿ, 'ತಮಿಳು ವಧುವಿನ ಪಾಲಿಗೆ ಚಿನ್ನಾಭರಣಗಳು ತಮ್ಮದೇ ಆದ ಭಾಷೆ ಮಾತನಾಡುತ್ತವೆ. ದೇವಸ್ಥಾನದ ವಾಸ್ತುಶಿಲ್ಪದ ಕಲಾತ್ಮಕ ವಿನ್ಯಾಸದಿಂದ ಪ್ರೇರಣೆ ಪಡೆದಿರುವುದರೊಂದಿಗೆ ಸಾಂಪ್ರದಾಯಿಕ ಚಿನ್ನದ ಆಭರಣಗಳ ಪ್ರತಿಯೊಂದು ವಿನ್ಯಾಸವು ಒಂದೊಂದು ಉದ್ದೇಶ ಮತ್ತು ಇತಿಹಾಸ ಹೊಂದಿದೆ. ನಮ್ಮ ವಧುಗಳು ಆ ಪರಂಪರೆಯೊಳಗೆ ತಮಿಳು ಕರಕುಶಲತೆಯ ಸೌಂದರ್ಯವನ್ನು ಗಮನಕ್ಕೆ ತರುವ ಮೂಲಕ 'ಬ್ರೈಡ್ಸ್ ಆಫ್ ಇಂಡಿಯಾ' ಸುಂದರವಾಗಿ ಸೆರೆಹಿಡಿಯುತ್ತದೆ' ಎಂದಿದ್ದಾರೆ. ತೆಲುಗು ಖ್ಯಾತ ನಟ ಎನ್‌ಟಿಆರ್ ಮಾತನಾಡಿ, 'ತೆಲುಗು ವಿವಾಹಗಳು ಭವ್ಯತೆ ಮತ್ತು ಭಾವನೆಯನ್ನು ಒಟ್ಟುಗೂಡಿಸುತ್ತವೆ. ದೇವಾಲಯದ ಗಂಟೆ ಸದ್ದು, ಚಿನ್ನದ ಆಭರಣಗಳ ಶ್ರೀಮಂತಿಕೆ ಮತ್ತು ಹೆಮ್ಮೆಯ ಕುಟುಂಬಗಳು ಅತ್ಯಂತ ಮುಖ್ಯವಾಗುತ್ತವೆ. ಪ್ರತಿಯೊಂದು ಸಂಭ್ರಮದ ಮದುವೆ ಒಂದೊಂದು ಪರಂಪರೆಯ ಕೈಗನ್ನಡಿಯಾಗಿರುತ್ತದೆ. ಈ ಪರಂಪರೆಯ ಪ್ರತೀಕವನ್ನು ನಮ್ಮ ಹೆಮ್ಮೆಯ ವಧುಗಳು ಹೊತ್ತು ಸಾಗುತ್ತಾರೆ. 'ಬ್ರೈಡ್ಸ್ ಆಫ್ ಇಂಡಿಯಾ'ಈ ಭಾವನೆಯನ್ನು ಸಂಪೂರ್ಣವಾಗಿ ಪ್ರತಿಬಿಂಬಿಸುತ್ತದೆ. ಆ ಮೂಲಕ ಕುಟುಂಬಗಳ ಭಾವನಾತ್ಮಕ ಸಂಬಂಧಗಳನ್ನು ಬೆಸೆಯುವ ಅರ್ಥಪೂರ್ಣ ಸೇತುವೆಯಾಗಲಿದೆ ಎಂದಿದ್ದಾರೆ.

ಪ್ರಸ್ತುತಿ: ಪಿಪಿ ಬ್ರ್ಯಾಂಡ್ ಸ್ಪಾಟ್

ಮೋದಿ ಅತಿದೊಡ್ಡ ನಾಟಕಕಾರ: ಕಾಂಗ್ರೆಸ್

ನವದೆಹಲಿ(ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರೇ 'ದೊಡ್ಡ ನಾಟಕಕಾರ' ಎಂದು ಕಾಂಗ್ರೆಸ್ ಹರಿಹಾಯ್ದಿದೆ.

'ಸಂಸತ್ತಿನಲ್ಲಿ ವಿರೋಧ ಪಕ್ಷಗಳು ನಾಟಕ ಮಾಡುತ್ತಿವೆ ಎಂಬ ಅವರ ಆರೋಪವು 'ಬೂಟಾಟಿಕೆ'ಯಲ್ಲದೆ ಮತ್ತೇನೂ ಅಲ್ಲ' ಎಂದು ಅದು ಕಿಡಿಕಾರಿದೆ.

'ಪ್ರಧಾನಿ ಮೋದಿ ಅವರು ನೈಜ ವಿಚಾರಗಳ ಬಗ್ಗೆ ಧ್ವನಿ ಎತ್ತುವುದನ್ನು ಬಿಟ್ಟು, ಮತ್ತೆ ಅದೇ ರೀತಿ ಹಳೆಯ ನಾಟಕದ ಮಾತುಗಳನ್ನಾಡುತ್ತಿದ್ದಾರೆ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು 'ಎಕ್ಸ್'ನಲ್ಲಿ ಆರೋಪಿಸಿದರು. 'ಸರ್ಕಾರವು ಕಳೆದ 11 ವರ್ಷಗಳಿಂದ ನಿರಂತರವಾಗಿ ಸಂಸದೀಯ ಶಿಷ್ಟಾಚಾರ ಮತ್ತು ವ್ಯವಸ್ಥೆಯನ್ನು ಹಾಳುಮಾಡುತ್ತಿದೆ. ಇಂಥ ಪ್ರಕರಣಗಳ ಪಟ್ಟಿಯೇ ಇದೆ' ಎಂದು ಹೇಳಿದರು.

'ಜನರ ಗಮನವನ್ನು ಬೇರೆಡೆ ಸೆಳೆಯುವ ನಾಟಕವನ್ನು ಬಿಜೆಪಿಯು ನಿಲ್ಲಿಸಬೇಕು. ನೈಜ ವಿಚಾರಗಳ ಕುರಿತು ಸಂಸತ್‌ನಲ್ಲಿ ಚರ್ಚೆ ನಡೆಸುವ ಮೂಲಕ ಜನರನ್ನು ಎದುರಿಸಬೇಕು' ಎಂದರು.

'ಕಳೆದ ಮುಂಗಾರು ಅಧಿವೇಶನದಲ್ಲಿ ಕನಿಷ್ಠ 12 ಮಸೂದೆಗಳನ್ನು ತರಾತುರಿಯಲ್ಲಿ ಅಂಗೀಕರಿಸಲಾಯಿತು. ಕೆಲವು ಮಸೂದೆಗಳ ಬಗ್ಗೆ ಚರ್ಚೆಯನ್ನೂ ನಡೆಸಿಲ್ಲ' ಎಂದು ಹೇಳಿದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, 'ಸಾರ್ವಜನಿಕ ಮಹತ್ವ ಇರುವ ವಿಷಯಗಳ ಬಗ್ಗೆ ಧ್ವನಿ ಎತ್ತಲು ವಿರೋಧ ಪಕ್ಷಗಳಿಗೆ ಅವಕಾಶ ನೀಡದಿರುವ ಪ್ರಧಾನಿ ಅವರ ಹಟಮಾರಿತನದಿಂದಲೇ ಸುಗಮ ಕಲಾಪ ಸಾಧ್ಯವಾಗುತ್ತಿಲ್ಲ' ಎಂದರು.

ಚರ್ಚೆಗೆ ಪಟ್ಟು: ಕಲಾಪ ಮುಂದೂಡಿಕೆ

ಸಂಸತ್ತಿನ ಚಳಿಗಾಲದ ಅಧಿವೇಶನದ ಮೊದಲ ದಿನದ ಕಲಾಪ ಆರಂಭವಾಗುತ್ತಿದ್ದಂತೆಯೇ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಸಂಬಂಧಿಸಿದಂತೆ ಚರ್ಚೆಗೆ ಆಗ್ರಹಿಸಿ ಲೋಕಸಭೆಯಲ್ಲಿ ವಿರೋಧ ಪಕ್ಷಗಳು ತೀವ್ರ ಪ್ರತಿಭಟನೆ ನಡೆಸಿದವು.

ಪ್ರತಿಪಕ್ಷಗಳ ಗದ್ದಲ ತೀವ್ರವಾದ ಬಳಿಕ ಕಲಾಪವನ್ನು ಒಂದು ದಿನ ಮುಂದೂಡಲಾಯಿತು. ಇದಕ್ಕೂ ಮುನ್ನ ಎರಡು ಬಾರಿ ಕಲಾಪವನ್ನು ಮುಂದೂಡಲಾಗಿತ್ತು. ವಿಪಕ್ಷಗಳ ಹಲವು ನಾಯಕರು ಸ್ಪೀಕರ್ ಪೀಠದ ಸಮೀಪ ತೆರಳಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಎಸ್‌ಐಆರ್ ಕುರಿತ ಚರ್ಚೆಗೆ ಪಟ್ಟು ಹಿಡಿದು ಪ್ರತಿಭಟಿಸಿದರು.

ಅಂಡಮಾನ್ ನಿಕೋಬಾರ್ ದ್ವೀಪಗಳು, ಲಕ್ಷದ್ವೀಪ, ಛತ್ತೀಸಗಢ, ಗೋವಾ, ಗುಜರಾತ್, ಕೇರಳ, ಮಧ್ಯಪ್ರದೇಶ, ಪುದುಚೇರಿ, ರಾಜಸ್ಥಾನ, ತಮಿಳುನಾಡು, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ನಡೆಸುವುದಾಗಿ ಚುನಾವಣಾ ಆಯೋಗ ಘೋಷಿಸಿದೆ. ತಮಿಳುನಾಡು, ಪುದುಚೇರಿ, ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ 2026ರಲ್ಲಿ ಚುನಾವಣೆ ನಡೆಯಲಿದೆ.

ಒಂದೇ ಮಸೂದೆಗೆ ಅಂಗೀಕಾರ: ಆಡಳಿತ ಮತ್ತು ವಿಪಕ್ಷಗಳ ಜಟಾಪಟಿ ಮಧ್ಯೆಯೇ ಮಣಿಪುರದಲ್ಲಿ ಜಿಎಸ್‌ಟಿ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಲಾಯಿತು.

12 ನಿಮಿಷಗಳ ಶೂನ್ಯ ಅವಧಿಯಲ್ಲಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಕೇಂದ್ರ ಅಬಕಾರಿ ತಿದ್ದುಪಡಿ ಮಸೂದೆ 2025 ಮತ್ತು ಆರೋಗ್ಯ ಮತ್ತು ರಾಷ್ಟ್ರೀಯ ಭದ್ರತೆ ಸೆಸ್ ಮಸೂದೆ 2025 ಮಂಡಿಸಿದರು. ಇವರೆಡು ಮಸೂದೆಗಳು ಮುಖ್ಯವಾಗಿ 'ಅನಾರೋಗ್ಯಕಾರಿ ಸರಕು'ಗಳ ಮೇಲೆ ಹೆಚ್ಚುವರಿ ತೆರಿಗೆ ವಿಧಿಸುವುದಕ್ಕೆ ಸಂಬಂಧಿಸಿದ್ದಾಗಿವೆ.

ಇಬ್ಬರು ಸಂಸದರ ಆಯ್ಕೆಗೆ ಚುನಾವಣೆ

ನವದೆಹಲಿ: ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಸಿ) ಮಂಡಳಿಗೆ ಸಂಸತ್ತಿನಿಂದ ಇಬ್ಬರು ಸದಸ್ಯರನ್ನು ಆಯ್ಕೆ ಮಾಡಲು ಚುನಾವಣೆ ನಡೆಸುವ ನಿರ್ಣಯಕ್ಕೆ ಲೋಕಸಭೆಯು ಸೋಮವಾರ ಅಂಗೀಕಾರ ನೀಡಿತು. ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಮಂಡಿಸಿದ ನಿರ್ಣಯವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

ಎಸ್‌ಐಆರ್ ಕುರಿತ ಚರ್ಚೆಗೆ ಸರ್ಕಾರವು ಸಿದ್ಧವಿದೆ. ಆದರೆ, ಹೇಳಿದ ಸಮಯಕ್ಕೇ ಚರ್ಚೆ ಆಗಬೇಕು ಎಂದು ವಿರೋಧ ಪಕ್ಷಗಳು ಪಟ್ಟು ಹಿಡಿಯುವುದು ಸರಿಯಲ್ಲ
ಕಿರಣ್ ರಿಜಿಜು
ಸಂಸದೀಯ ವ್ಯವಹಾರಗಳ ಸಚಿವ

ಜಟಾಪಟಿ ಜೋರು

ಒಂದನೇ ಪುಟದಿಂದ...

'ನಾಟಕಕ್ಕೆ ಸಾಕಷ್ಟು ವೇದಿಕೆಗಳಿವೆ. ದೇಶದಾದ್ಯಂತ ಘೋಷಣೆಗಳನ್ನು ಕೂಗಬಹುದು. ಸೋತ ಜಾಗದಲ್ಲಿ, ಮುಂದೆ ಸೋಲುವ ಜಾಗಗಳಲ್ಲಿಯೂ ಘೋಷಣೆ ಕೂಗಬಹುದು. ಆದರೆ, ಸಂಸತ್ತಿನಲ್ಲಿ ನೀತಿಗಳ ಬಗ್ಗೆ ಮಾತ್ರ ಲಕ್ಷ್ಯ ಇರಬೇಕು' ಎಂದು ಕುಟುಕಿದರು.

ಬಿಹಾರ ವಿಧಾನಸಭೆ ಚುನಾವಣೆಯನ್ನು ಉಲ್ಲೇಖಿಸಿ ಮಾತನಾಡಿದ ಅವರು, 'ಬಿಹಾರ ಚುನಾವಣೆಯ ಹೀನಾಯ ಸೋಲಿನಿಂದ ವಿರೋಧ ಪಕ್ಷಗಳು ಹತಾಶೆಗೊಂಡಿವೆ. ವೈಫಲ್ಯವನ್ನು ಅರಗಿಸಿಕೊಳ್ಳಲು ಅವುಗಳಿಗೆ ಸಾಧ್ಯವಾಗುತ್ತಿಲ್ಲ. ಆದರೆ, ಸೋಲು ಹತಾಶೆಗೆ ಕಾರಣವಾಗಬಾರದು. ಅದೇ ರೀತಿ, ಗೆಲುವು ಸಹ ದುರಹಂಕಾರದ ವರ್ತನೆಗೆ ಎಡೆ ಮಾಡಿಕೊಡಬಾರದು' ಎಂದರು.

ರುಬೈಯಾ ಅಪಹರಣ ಪ್ರಕರಣ: ಶಂಕಿತ ಸೆರೆ

ನವದೆಹಲಿ (ಪಿಟಿಐ): ಕೇಂದ್ರದ ಮಾಜಿ ಗೃಹ ಸಚಿವ ಮುಫ್ತಿ ಮೊಹಮ್ಮದ್ ಸಯೀದ್ ಅವರ ಪುತ್ರಿ ರುಬೈಯಾ ಸಯೀದ್ ಅವರ ಅಪಹರಣ ಪ್ರಕರಣದಲ್ಲಿ ಭಾಗಿಯಾಗಿದ್ದ ಶಂಕಿತ ವ್ಯಕ್ತಿಯನ್ನು ಕೇಂದ್ರೀಯ ತನಿಖಾ ದಳ (ಸಿಬಿಐ) ಬಂಧಿಸಿದೆ.

1989ರ ಡಿಸೆಂಬರ್‌ನಲ್ಲಿ ರುಬೈಯಾ ಸಯೀದ್ ಅವರನ್ನು ಜೆಕೆಎಲ್‌ಎಫ್ ಉಗ್ರರು ಅಪಹರಿಸಿದ್ದರು. ಆಗ ಮುಫ್ತಿ ಮೊಹಮ್ಮದ್ ಅವರು ಗೃಹ ಸಚಿವರಾಗಿದ್ದರು. 36 ವರ್ಷಗಳ ಹಿಂದೆ ನಡೆದ ಅಪರಾಧದಲ್ಲಿ ಭಾಗಿಯಾಗಿದ್ದ, ಶ್ರೀನಗರದ ಇಶ್ಬರ್ ನಿಶಾತ್‌ನ ನಿವಾಸಿಯನ್ನು ಸಿಬಿಐ ಬಂಧಿಸಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಕೇರಳ, ತಮಿಳುನಾಡು 'ಲೋಕಭವನ' ಅಧಿಕೃತ

ತಿರುವನಂತಪುರ/ಚೆನ್ನೈ (ಪಿಟಿಐ): ಕೇರಳ ಮತ್ತು ತಮಿಳುನಾಡಿನ 'ರಾಜಭವನ'ವನ್ನು 'ಲೋಕಭವನ' ಎಂದು ಸೋಮವಾರ ಅಧಿಕೃತವಾಗಿ ಮರುನಾಮಕರಣ ಮಾಡಲಾಯಿತು.

ದೇಶದ ಎಲ್ಲ ರಾಜಭವನಗಳನ್ನು ಲೋಕಭವನ ಹಾಗೂ ರಾಜ್ಯನಿವಾಸವನ್ನು 'ಲೋಕನಿವಾಸ' (ಲೆಫ್ಟಿನೆಂಟ್ ಗವರ್ನರ್ ಅಧಿಕೃತ ನಿವಾಸ) ಎಂದು ಮರುನಾಮಕರಣ ಮಾಡಬೇಕು ಎಂದು ಕೇಂದ್ರ ಗೃಹ ಸಚಿವಾಲಯ ನೀಡಿರುವ ನಿರ್ದೇಶನದಂತೆ ಹೆಸರು ಬದಲಾವಣೆ ಮಾಡಲಾಗಿದೆ.

ರೋ–ಕೊ ಭವಿಷ್ಯ: ಸಂದೇಹ 'ತೆರೆಗೆ'

ದಕ್ಷಿಣ ಆಫ್ರಿಕಾ ವಿರುದ್ಧದ ಮೊದಲ ಏಕದಿನ ಪಂದ್ಯದಲ್ಲಿ ಶತಕದ ಜತೆಯಾಟ ಆಡಿದ್ದ ದಿಗ್ಗಜ ಜೋಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೋಹಿತ್ ಶರ್ಮಾ ಅವರು ಭಾನುವಾರ ರಾಂಚಿಯಲ್ಲಿ ಏಕದಿನ ಪಂದ್ಯಗಳಲ್ಲಿ 60ನೇ ಅರ್ಧಶತಕ ಬಾರಿಸಿದ ವೇಳೆ ವಿರಾಟ್ ಕೊಹ್ಲಿ ಅವರು ಡ್ರೆಸಿಂಗ್ ರೂಮ್‌ನತ್ತ ಸಿಟ್ಟಿನ ನೋಟ ಬೀರಿದರು. ವಿರಾಟ್ 52ನೇ ಏಕದಿನ ಶತಕ ಬಾರಿಸಿದಾಗ, ರೋಹಿತ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಚಪ್ಪಾಳೆ ತಟ್ಟಿ ಹಿಂದಿ ಭಾಷೆಯಲ್ಲಿ ಆ ಸಂದರ್ಭಕ್ಕೆ ನಾನಾ ಅರ್ಥ ಬರುವ ಮಾತನ್ನು ಹರಿಬಿಟ್ಟರು.

ಎರಡು ಮಾದರಿಗಳಿಂದ ನಿವೃತ್ತರಾದ ಮೇಲೆ ಏಕದಿನ ಮಾದರಿಯಲ್ಲಿ ತಮ್ಮ ಸಾಮರ್ಥ್ಯ ಅನುಮಾನಿಸುವವರಿಗೆ ಈ ಇಬ್ಬರು ಅನುಭವಿಗಳ ಪ್ರತಿಕ್ರಿಯೆ ಸಂದೇಶದಂತಿತ್ತು. ಈ ಹಿಂದೆ ತಮ್ಮ ಕ್ರೀಡಾಜೀವನದುದ್ದಕ್ಕೂ ಈ ಅನುಭವಿ ತಾರೆಗಳ ವೈಯಕ್ತಿಕ ಸಂಬಂಧ ತಂಡದ ಸಹ ಆಟಗಾರರ ಜೊತೆ ಇರುವುದಕ್ಕಿಂತ ಹೆಚ್ಚಿಗೆ ಇರಲಿಲ್ಲ. ಈಗ ಇವರು ಒಬ್ಬರಿಗೊಬ್ಬರು ಅರ್ಥಪೂರ್ಣ ಬೆಂಬಲ ನೀಡುತ್ತಿದ್ದಾರೆ.

ರೋಹಿತ್ ಎಂದಿನಂತೆ ತಂಡಕ್ಕೆ ಉತ್ತಮ ಆರಂಭ ನೀಡುತ್ತಿದ್ದಾರೆ. ವಯಸ್ಸಾಗುತ್ತಿದ್ದರೂ ಕೊಹ್ಲಿ ಅವರು ಸಂದರ್ಭಕ್ಕೆ ಹೊಂದಿಕೊಂಡು ಆಡುವ ಸರಾಗ ಆಟವು ಸ್ವಲ್ಪವೂ ಕಳೆಗುಂದಿಲ್ಲ.

ಕೊಹ್ಲಿ ಮತ್ತು ರೋಹಿತ್ ಅವರಿಬ್ಬರೂ ವೃತ್ತಿಜೀವನದ ಸಂಧ್ಯಾಕಾಲದಲ್ಲಿದ್ದಾರೆ. ಅವರ ವಯಸ್ಸು ಕ್ರಮವಾಗಿ 37 ಮತ್ತು 38. ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ 2027ರ ವಿಶ್ವಕಪ್‌ಗೆ ಅವರಿಬ್ಬರೂ ಪ್ರಸ್ತುತವಾಗಲಿದ್ದಾರೆಯೇ? ಈ ಬಗ್ಗೆ ಬಿಸಿಸಿಐ ಅಧಿಕಾರಿಗಳು, ಮುಖ್ಯ ಕೋಚ್, ಮುಖ್ಯ ಆಯ್ಕೆಗಾರ ಅವರನ್ನು ಒಳಗೊಂಡ ಸಭೆ ನಡೆಯಲಿದೆ ಎನ್ನುವ ವರದಿಗಳ ಮಧ್ಯೆಯೇ ತಂಡದ ಮಾಜಿ ನಾಯಕರು ಅಮೋಘವಾಗಿ ಆಡಿದ್ದಾರೆ.

ಇತ್ತೀಚಿನ ಪಂದ್ಯಗಳಲ್ಲಿ ಅವರ ಆಟದ ಪ್ರದರ್ಶನ ಸದ್ಯೋಭವಿಷ್ಯದಲ್ಲಿ ಅವರ ಏಕದಿನ ಭವಿಷ್ಯದ ಪ್ರಶ್ನೆಗಳಿಗೆ ತೆರೆಹಾಡಿದಂತಿದೆ. ರೋಹಿತ್ ಕೊನೆಯ ನಾಲ್ಕು ಪಂದ್ಯಗಳಲ್ಲಿ ಕ್ರಮವಾಗಿ 0, 73, 121 (ಅಜೇಯ) ಮತ್ತು 57 ರನ್ ಬಾರಿಸಿದ್ದಾರೆ. ಕೊಹ್ಲಿ, 0,0, 74 (ಅಜೇಯ) ಮತ್ತು 135 ರನ್ ಹೊಡೆದಿದ್ದಾರೆ. ರೋಹಿತ್ ಎಂದಿನ ರೀತಿಯಲ್ಲಿ ಆಕ್ರಮಣಕಾರಿಯಾಗಿದ್ದರೆ, ಕೊಹ್ಲಿ ಹಳೆಯ ಲಯದಲ್ಲೇ ರನ್ ಹರಿಸುತ್ತಿದ್ದಾರೆ. ತಂಡದಲ್ಲಿ ತಮ್ಮ ಸ್ಥಾನದ ಬಗ್ಗೆ ಇರುವ ಅನುಮಾನಗಳಿಗೆ ಬ್ಯಾಟಿಂಗ್ ಮೂಲಕ ಉತ್ತರ ನೀಡಿದ್ದಾರೆ.

ಮೊದಲ ಪಂದ್ಯದಲ್ಲಿ ಭಾರತ 17 ರನ್‌ಗಳಿಂದ ಗೆದ್ದ ನಂತರ ತಂಡದ ಸಹಾಯಕ ಕೋಚ್ ಸಿತಾಂಶು ಕೊಟಕ್ ಅವರ ಮಾತಿನಲ್ಲೂ ಇಂಥದ್ದೇ ಧ್ವನಿ ಕಾಣಿಸಿತು. 'ಇಂಥ ಮಾತುಗಳು ನಮಗೆ ಏಕೆ ಅಗತ್ಯವಿದೆಯೋ ಅರ್ಥವಾಗುತ್ತಿಲ್ಲ. ಅವರು (ಕೊಹ್ಲಿ) ಚೆನ್ನಾಗಿಯೇ ಬ್ಯಾಟಿಂಗ್ ಮಾಡಿದ್ದಾರೆ. ಅವರ ಭವಿಷ್ಯದ ಬಗ್ಗೆ ಮಾತನಾಡುವ ಅಗತ್ಯವೇನಿದೆ? ಅವರ ಆಡುವ ರೀತಿ ನೋಡಿದರೆ, ಅವರ ಫಿಟ್ನೆಸ್ ನೋಡಿದರೆ... ಯಾವುದೇ ರೀತಿಯ ಪ್ರಶ್ನೆ ಉದ್ಭವಿಸುವುದಿಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ.

'ತಂಡದ ಚಿಂತಕರ ಚಾವಡಿ 2027ರ ವಿಶ್ವಕಪ್‌ನಷ್ಟು ದೂರ ಈಗ ಯೋಚಿಸುತ್ತಿಲ್ಲ. ರೋಹಿತ್ ಮತ್ತು ಕೊಹ್ಲಿ ಅವರ ಸುತ್ತ ಯಾವುದೇ ಚರ್ಚೆ ನಡೆದಿಲ್ಲ' ಎಂದು ಬ್ಯಾಟಿಂಗ್ ಕೋಚ್ ಸಹ ಆಗಿರುವ ಕೊಟಕ್ ಹೇಳಿದ್ದಾರೆ.

'ಇಂಥ ವಿಷಯಗಳು (ಭವಿಷ್ಯದ ಚರ್ಚೆ) ನಡೆಯಲೇಬಾರದಿತ್ತು. ಅವರಿಬ್ಬರೂ ಅಮೋಘ ಆಟಗಾರರು. ಉತ್ತಮವಾಗಿ ಆಡುತ್ತಿದ್ದಾರೆ. ತಂಡಕ್ಕೆ ಕೊಡುಗೆ ನೀಡುತ್ತಿದ್ದಾರೆ. 2027ರ ವಿಶ್ವಕಪ್ ಬಗ್ಗೆ ಮಾತನಾಡುತ್ತೇವೆ ಎಂಬ ಯೋಚನೆಯನ್ನೂ ಮಾಡಿಲ್ಲ' ಎಂದಿದ್ದಾರೆ.

ಕೊಟಕ್ ಹೇಳಿಕೆಗಳು ಸತ್ಯಕ್ಕೆ ಹತ್ತಿರವಾಗಿಯೇ ಇದೆ. ಸದ್ಯ ತಂಡದ ಚಿತ್ತ ಭಾರತ ಮತ್ತು ಶ್ರೀಲಂಕಾದಲ್ಲಿ ಫೆಬ್ರುವರಿಯಲ್ಲಿ ನಡೆಯಲಿರುವ ಟಿ20 ವಿಶ್ವಕಪ್‌ನತ್ತ ನೆಟ್ಟಿದೆ. ಅದಕ್ಕೆ ಮೊದಲು ಭಾರತದ ಮುಂದೆ ಐದು ಏಕದಿನ ಪಂದ್ಯಗಳು ಇವೆ. ದಕ್ಷಿಣ ಆಫ್ರಿಕಾ ವಿರುದ್ಧ ಎರಡು ಮತ್ತು ನ್ಯೂಜಿಲೆಂಡ್ ವಿರುದ್ಧ ಮೂರು ಪಂದ್ಯಗಳು. ಜುಲೈನಲ್ಲಿ ತಂಡವು ಇಂಗ್ಲೆಂಡ್ ವಿರುದ್ಧ 50 ಓವರುಗಳ ಮೂರು ಪಂದ್ಯಗಳನ್ನು ಆಡಲಿದೆ.

ಸದ್ಯಕ್ಕಂತೂ ಕೊಹ್ಲಿ, ರೋಹಿತ್ ಅವರ ಆಯ್ಕೆಯ ಬಗೆಗಿನ ಚರ್ಚೆಗಳು ಬದಿಗೆಸರಿದಿವೆ. ವಿಶೇಷವಾಗಿ ಇತ್ತೀಚಿನ ಪಂದ್ಯಗಳಲ್ಲಿ ಅವರು ಆಡಿದ ರೀತಿಯಿಂದ. ಆಟದಲ್ಲಾಗಲಿ, ವೃತ್ತಿಪರತೆಯಲ್ಲಾಗಲಿ ಅವರು ತಮ್ಮ ಸಾಮರ್ಥ್ಯ ಸಾಬೀತುಪಡಿಸಿದ್ದಾರೆ.

ವಿರಾಟ್ ಕೊಹ್ಲಿ – ರೋಹಿತ್ ಶರ್ಮಾ ಸಂಭಾಷಣೆ ಪಿಟಿಐ ಚಿತ್ರ

ಫಿಟ್ನೆಸ್ ಪರೀಕ್ಷೆ: ಹಾರ್ದಿಕ್ ಪಾಂಡ್ಯ ತೇರ್ಗಡೆ

ನವದೆಹಲಿ (ಪಿಟಿಐ): ಭಾರತ ತಂಡದ ಅನುಭವಿ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಫಿಟ್ನೆಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದು, ಮಂಗಳವಾರ ಹೈದರಾಬಾದ್‌ನಲ್ಲಿ ನಡೆಯಲಿರುವ ಸೈಯದ್ ಮುಷ್ತಾಕ್ ಅಲಿ ಟ್ರೋಫಿಯ ಪಂದ್ಯದಲ್ಲಿ ಬರೋಡಾ ತಂಡದ ಪರ ಕಣಕ್ಕಿಳಿಯಲಿದ್ದಾರೆ.

ತೊಡೆಯ ಗಾಯದಿಂದ ಗುಣಮುಖವಾಗಿರುವ ಹಾರ್ದಿಕ್ ಅವರು ಎರಡೂವರೆ ತಿಂಗಳ ನಂತರ ತಮ್ಮ ಮೊದಲ ಪಂದ್ಯವನ್ನು ಪಂಜಾಬ್ ವಿರುದ್ಧ ಆಡಲಿದ್ದಾರೆ. ಇದೇ 4ರಂದು ಗುಜರಾತ್ ವಿರುದ್ಧದ ಪಂದದಲ್ಲೂ ಅವರು ಆಡುವರು. ಈ ಎರಡೂ ಪಂದ್ಯಗಳಲ್ಲಿ ರಾಷ್ಟ್ರೀಯ ಆಯ್ಕೆ ಸಮಿತಿಯ ಪ್ರಗ್ಯಾನ್ ಓಜಾ ಹಾಜರಿದ್ದು, ದಕ್ಷಿಣ ಆಫ್ರಿಕಾ ವಿರುದ್ಧದ ಟಿ20 ಸರಣಿಗೆ ತಂಡವನ್ನು ಘೋಷಿಸುವ ಮೊದಲು ಹಾರ್ದಿಕ್ ಅವರ ಒಟ್ಟಾರೆ ಫಿಟ್ನೆಸ್ ಅನ್ನು ಪರಿಶೀಲಿಸಲಿದ್ದಾರೆ. ಇದೇ 9ರಿಂದ ಐದು ಪಂದ್ಯಗಳ ಟಿ20 ಸರಣಿ ನಡೆಯಲಿದೆ.

'ಅಕ್ಟೋಬರ್ 21ರಿಂದ ನವೆಂಬರ್ 30ರವರೆಗೆ ಹಾರ್ದಿಕ್ ಅವರು ಬೆಂಗಳೂರಿನ ಬಿಸಿಸಿಐ ಉತ್ಕೃಷ್ಟತಾ ಕೇಂದ್ರದಲ್ಲಿ ಪುನಶ್ಚೇತನ ಶಿಬಿರದಲ್ಲಿ ಭಾಗಿಯಾಗಿ ಚೇತರಿಸಿಕೊಂಡಿದ್ದಾರೆ. ಅವರು ಟಿ20 ಪಂದ್ಯಗಳಲ್ಲಿ ಬ್ಯಾಟಿಂಗ್ ಮತ್ತು ಬೌಲಿಂಗ್ ಮಾಡಲು ಫಿಟ್ನೆಸ್ ಪಡೆದಿದ್ದಾರೆ. ಅವರು ಪಂಜಾಬ್ ಮತ್ತು ಗುಜರಾತ್ ವಿರುದ್ಧದ ಪಂದ್ಯವನ್ನು ಆಡಲಿದ್ದಾರೆ. ಬಿಸಿಸಿಐನಿಂದ ಆಹ್ವಾನ ಬರದಿದ್ದರೆ ಡಿಸೆಂಬರ್ 6ರಂದು ಹರಿಯಾಣ ವಿರುದ್ಧದ ಪಂದ್ಯವನ್ನೂ ಆಡಲು ಯೋಜಿಸಿದ್ದಾರೆ' ಮೂಲಗಳು ತಿಳಿಸಿವೆ.

ಗಿಲ್‌ಗೆ ಫಿಟ್ನೆಸ್ ಪರೀಕ್ಷೆ: ಭಾರತ ಟಿ20 ಕ್ರಿಕೆಟ್ ತಂಡದ ಉಪ ನಾಯಕ ಶುಭಮನ್ ಗಿಲ್ ಅವರು ಸೋಮವಾರ ಬೆಂಗಳೂರಿನ ಬಿಸಿಸಿಐ ಉತ್ಕೃಷ್ಟತಾ ಕೇಂದ್ರದಲ್ಲಿ ಫಿಟ್ನೆಸ್ ಪರೀಕ್ಷೆ ಎದುರಿಸಿದ್ದಾರೆ.

ಕೋಲ್ಕತ್ತದಲ್ಲಿ ನಡೆದ ದಕ್ಷಿಣ ಆಫ್ರಿಕಾ ಎದುರಿನ ಮೊದಲ ಟೆಸ್ಟ್ ಪಂದ್ಯದಲ್ಲಿ ಗಿಲ್ ಅವರು ಬ್ಯಾಟಿಂಗ್ ಮಾಡುವಾಗ ಕುತ್ತಿಗೆಯ ಸ್ನಾಯುಸೆಳೆತಕ್ಕೊಳಗಾಗಿದ್ದರು. ಅದರಿಂದಾಗಿ ಅವರು ಮೈದಾನ ತೊರೆದು ಚಿಕಿತ್ಸೆಗಾಗಿ ತೆರಳಿದ್ದರು.

ಎಫ್‌ಐಎಚ್ ಜೂನಿಯರ್ ಪುರುಷರ ಹಾಕಿ ವಿಶ್ವಕಪ್

ಭಾರತಕ್ಕೆ ಇಂದು ಸ್ವಿಟ್ಜರ್ಲೆಂಡ್ ಸವಾಲು

ಮದುರೈ (ಪಿಟಿಐ): ಸತತ ಎರಡು ಪಂದ್ಯಗಳನ್ನು ಗೆದ್ದು ಆತ್ಮವಿಶ್ವಾಸದಲ್ಲಿರುವ ಭಾರತ ತಂಡವು ಎಫ್‌ಐಎಚ್ ಜೂನಿಯರ್ ಪುರುಷರ ಹಾಕಿ ವಿಶ್ವಕಪ್‌ನ ನಾಕೌಟ್ ಹಂತಕ್ಕೂ ಮುನ್ನ ಗುಂಪಿನ ಅಂತಿಮ ಲೀಗ್ ಪಂದ್ಯದಲ್ಲಿ ಮಂಗಳವಾರ ಸ್ವಿಟ್ಜರ್ಲೆಂಡ್ ತಂಡವನ್ನು ಎದುರಿಸಲಿದೆ.

ಬಿ ಗುಂಪಿನಲ್ಲಿರುವ ಉಭಯ ತಂಡಗಳು ತಲಾ ಎರಡು ಪಂದ್ಯಗಳನ್ನು ಆಡಿ, ಅಜೇಯವಾಗಿ ಉಳಿದಿವೆ. ಆತಿಥೇಯ ತಂಡವು ಗೋಲುಗಳ ಲೆಕ್ಕಾಚಾರದಲ್ಲಿ ಗುಂಪಿನಲ್ಲಿ ಅಗ್ರಸ್ಥಾನದಲ್ಲಿದ್ದರೆ, ಸ್ವಿಟ್ಜರ್ಲೆಂಡ್ ಎರಡನೇ ಸ್ಥಾನದಲ್ಲಿದೆ.

ಚೆನ್ನೈನಲ್ಲಿ ನಡೆದ ಮೊದಲ ಪಂದ್ಯದಲ್ಲಿ ಭಾರತ ತಂಡವು 7–0 ಅಂತರದಿಂದ ಚಿಲಿಯನ್ನು ಮಣಿಸಿ, ಅಭಿಯಾನ ಆರಂಭಿಸಿತ್ತು. ತನ್ನ ಎರಡನೇ ಪಂದ್ಯದಲ್ಲಿ 17-0 ಅಂತರದಿಂದ ಒಮಾನ್ ತಂಡವನ್ನು ಸದೆಬಡಿದಿತ್ತು. ಅಜೇಯವಾಗಿ ಕ್ವಾರ್ಟರ್ ಫೈನಲ್ ಪ್ರವೇಶಿಸುವ ಛಲದಲ್ಲಿರುವ ಆತಿಥೇಯ ತಂಡವು ಹಿಂದಿನ ಪಂದ್ಯಗಳ ಲೋಪಗಳನ್ನು ಸುಧಾರಿಸಿಕೊಳ್ಳುವತ್ತ ಗಮನ ಹರಿಸಿದೆ.

ಮತ್ತೊಂದೆಡೆ ಸ್ವಿಟ್ಜರ್ಲೆಂಡ್ ತಂಡವು 4–0ಯಿಂದ ಒಮಾನ್ ತಂಡದ ವಿರುದ್ಧ; ನಂತರದಲ್ಲಿ 3–2ರಿಂದ ಚಿಲಿ ವಿರುದ್ಧ ಗೆಲುವು ಸಾಧಿಸಿದೆ. ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ ಭಾರತ ತನ್ನ ಎರಡೂ ಪಂದ್ಯಗಳಲ್ಲಿ ಎದುರಾಳಿಗೆ ಒಂದೂ ಗೋಲು ಬಿಟ್ಟುಕೊಟ್ಟಿಲ್ಲ.

ತಮಿಳುನಾಡಿನ ಚೆನ್ನೈನ ಮೇಯರ್ ರಾಧಾಕೃಷ್ಣನ್ ಹಾಕಿ ಕ್ರೀಡಾಂಗಣದಲ್ಲಿ ಸೋಮವಾರ ಎಫ್‌ಐಎಚ್ ಪುರುಷರ ಜೂನಿಯರ್ ಹಾಕಿ ವಿಶ್ವಕಪ್ ಪಂದ್ಯದ ಮೊದಲು ಅಂಕಣದಲ್ಲಿ ಸಂಗ್ರಹವಾದ ಮಳೆಯ ನೀರನ್ನು ಮೈದಾನದ ಸಿಬ್ಬಂದಿ ತೆರವುಗೊಳಿಸಿದರು ಪಿಟಿಐ ಚಿತ್ರ

ಹೀಗಾಗಿ, ಸ್ವಿಟ್ಜರ್ಲೆಂಡ್ ವಿರುದ್ಧವೂ ಗೆಲ್ಲುವ ನೆಚ್ಚಿನ ತಂಡ ಎನಿಸಿದೆ.

ಆದರೆ, ಕೆಲವೊಂದು ದೌರ್ಬಲ್ಯಗಳನ್ನು ಸರಿಪಡಿಸಿಕೊಳ್ಳಬೇಕಿದೆ. ಮೊದಲೆರಡು ಪಂದ್ಯಗಳಲ್ಲಿ ದುರ್ಬಲ ತಂಡಗಳ ಎದುರು ಭಾರತದ ರಕ್ಷಣಾ ವಿಭಾಗವು ಅಷ್ಟೇನೂ ಪರೀಕ್ಷೆಗೆ ಒಳಗಾಗಿರಲಿಲ್ಲ. ಈಗ ರಕ್ಷಣಾ ವಿಭಾಗದ ಮೇಲೆ ಹೆಚ್ಚಿನ ಒತ್ತಡವಿದೆ.

ಮತ್ತೊಂದು ಕಳವಳಕಾರಿ ಅಂಶವೆಂದರೆ ಪೆನಾಲ್ಟಿ ಕಾರ್ನರ್‌ಗಳಿಂದ ಡ್ರ್ಯಾಗ್‌ಫ್ಲಿಕ್ ಮೂಲಕ ಗೋಲುಗಳನ್ನು ಪರಿವರ್ತಿಸುವುದು. ತಂಡದ ಪ್ರಮುಖ ಡ್ರ್ಯಾಗ್‌ಫ್ಲಿಕ್ಕರ್ ಆಗಿರುವ ನಾಯಕ ರೋಹಿತ್ ಅವರು ತನ್ನ ಆಟದ ಮೇಲೆ ಹೆಚ್ಚಿನ ಗಮನ ಹರಿಸಬೇಕಾಗಿದೆ. ಹಿಂದಿನ ಪಂದ್ಯಗಳಲ್ಲಿ ಗೋಲು ಅವಕಾಶವನ್ನು ಅವರು ಕೈಚೆಲ್ಲಿದ್ದರು.

ಕ್ವಾರ್ಟರ್‌ಗೆ ಅರ್ಜೆಂಟೀನಾ, ಜರ್ಮನಿ: ಅರ್ಜೆಂಟೀನಾ ಮತ್ತು ಜರ್ಮನಿ ತಂಡಗಳು ಗುಂಪು ಹಂತದಲ್ಲಿ ಅಜೇಯವಾಗಿ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದವು.

ಸೋಮವಾರ ನಡೆದ ಪಂದ್ಯದಲ್ಲಿ ಅರ್ಜೆಂಟೀನಾ 3–1ರಿಂದ ಚೀನಾ ವಿರುದ್ಧ ಗೆಲುವು ಸಾಧಿಸಿ, ಸಿ ಗುಂಪಿನ ಅಗ್ರಸ್ಥಾನ ಪಡೆಯಿತು. ಜರ್ಮನಿ 5–1ರಿಂದ ಐರ್ಲೆಂಡ್ ವಿರುದ್ಧ ಜಯ ಗಳಿಸಿ, ಎ ಗುಂಪಿನಲ್ಲಿ ಅಗ್ರಸ್ಥಾನದೊಂದಿಗೆ ನಾಕೌಟ್ ಪ್ರವೇಶಿಸಿತು. ಕೆಲ ಪಂದ್ಯಗಳಿಗೆ ಮಳೆಯಿಂದಾಗಿ ಅಡಚಣೆ ಉಂಟಾಯಿತು.

ಜೂನಿಯರ್ ಮಹಿಳೆಯರ ಹಾಕಿ ವಿಶ್ವಕಪ್: ಭಾರತ ಶುಭಾರಂಭ

ಸ್ಯಾಂಟಿಯಾಗೊ (ಚಿಲಿ) (ಪಿಟಿಐ): ಹಿನಾ ಬಾನೊ ಮತ್ತು ಕನಿಕಾ ಸಿವಾಚ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಭಾರತ ತಂಡವು ಸೋಮವಾರ ಎಫ್‌ಐಎಚ್ ಜೂನಿಯರ್ ಮಹಿಳೆಯರ ಹಾಕಿ ವಿಶ್ವಕಪ್‌ನಲ್ಲಿ 13–0ಯಿಂದ ನಮೀಬಿಯಾ ತಂಡವನ್ನು ಮಣಿಸಿ ತನ್ನ ಅಭಿಯಾನ ಆರಂಭಿಸಿತು.

ಭಾರತದ ಪರ ಹಿನಾ (35ನೇ, 35ನೇ, 45ನೇ) ಮತ್ತು ಕನಿಕಾ (12ನೇ, 30ನೇ, 45ನೇ) ತಲಾ ಮೂರು ಗೋಲು ಗಳಿಸಿದರೆ, ಸಾಕ್ಷಿ ರಾಣಾ (10ನೇ, 23ನೇ) ತಲಾ ಎರಡು ಗೋಲು ದಾಖಲಿಸಿದರು. ಬಿನಿಮಾ ಧನ್ (14ನೇ), ಸೋನಮ್ (14ನೇ), ಸಾಕ್ಷಿ ಶುಕ್ಲಾ (27ನೇ), ಇಶಿಕಾ (36ನೇ), ಮತ್ತು ಮನೀಷಾ (60ನೇ) ತಲಾ ಒಂದೊಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಭಾರತದ ವನಿತೆಯರು ಮೊದಲ ಕ್ವಾರ್ಟರ್‌ನಲ್ಲೇ 4–0 ಮುನ್ನಡೆಯೊಂದಿಗೆ ಉತ್ತಮ ಆರಂಭ ಪಡೆದರು. ಮಧ್ಯಂತರದ ವೇಳೆಗೆ ಅಂತರವನ್ನು 7–0 ವಿಸ್ತರಿಸಿ, ಉತ್ತರಾರ್ಧದಲ್ಲೂ ಪಾರಮ್ಯ ಮೆರೆದರು. ಮೂರನೇ ಕ್ವಾರ್ಟರ್‌ನಲ್ಲಿ ಭಾರತದ ಪರ ಮತ್ತೆ ಐದು ಗೋಲುಗಳು ದಾಖಲಾದವು. ಕೊನೆಯ ಕ್ವಾರ್ಟರ್‌ನಲ್ಲಿ ಉಭಯ ತಂಡಗಳ ಆಟಗಾರ್ತಿಯರು ರಕ್ಷಣಾತ್ಮಕ ಆಟಕ್ಕೆ ಒತ್ತು ನೀಡಿದರು. ಕೊನೆಯ ನಿಮಿಷದಲ್ಲಿ ಮನೀಷಾ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಗೋಲು ದಾಖಲಿಸಿ, ಭಾರತದ ಗೆಲುವಿನ ಅಂತರವನ್ನು ಹೆಚ್ಚಿಸಿದರು.

ಮಹಿಳಾ ಹಾಕಿ ಕೋಚ್ ಹರೇಂದ್ರ ರಾಜೀನಾಮೆ

ನವದೆಹಲಿ (ಪಿಟಿಐ): ಭಾರತ ಮಹಿಳಾ ಹಾಕಿ ತಂಡದ ಮುಖ್ಯ ಕೋಚ್ ಹರೇಂದ್ರ ಸಿಂಗ್ ಅವರು ವೈಯಕ್ತಿಕ ಕಾರಣಗಳನ್ನು ಉಲ್ಲೇಖಿಸಿ ತಕ್ಷಣದಿಂದ ಜಾರಿಗೆ ಬರುವಂತೆ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ.

ಹರೇಂದ್ರ ಸಿಂಗ್

2021ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದ ಸಂದರ್ಭದಲ್ಲಿ ಭಾರತ ಮಹಿಳಾ ತಂಡದ ಮುಖ್ಯ ಕೋಚ್ ಆಗಿದ್ದ ನೆದರ್ಲೆಂಡ್ಸ್‌ನ ಶ್ಯೂರ್ಡ್ ಮರಾಯ್ನೆ ಅವರು ಹರೇಂದ್ರ ಅವರಿಂದ ತೆರವಾದ ಸ್ಥಾನಕ್ಕೆ ಮರಳಬಹುದು ಎಂದು ಮೂಲಗಳು ತಿಳಿಸಿವೆ.

ಮರಾಯ್ನೆ ಅವರು 2021ರ ಆಗಸ್ಟ್‌ನಲ್ಲಿ ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದರು.

ಈ ಹಿಂದೆ ಅಮೆರಿಕ ಪುರುಷರ ಹಾಕಿ ತಂಡದ ಕೋಚ್ ಆಗಿದ್ದ ಹರೇಂದ್ರ ಅವರು 2024ರ ಏಪ್ರಿಲ್‌ನಲ್ಲಿ ಭಾರತ ತಂಡದ ಮುಖ್ಯ ಕೋಚ್ ಹುದ್ದೆಯನ್ನು ವಹಿಸಿಕೊಂಡಿದ್ದರು. ಅವರು ಸೋಮವಾರ ಹಾಕಿ ಇಂಡಿಯಾಕ್ಕೆ ಇ-ಮೇಲ್ ಮೂಲಕ ರಾಜೀನಾಮೆ ಪತ್ರ ರವಾನಿಸಿದ್ದಾರೆ.

ಕಳೆದ ವರ್ಷದಿಂದ ಭಾರತ ಮಹಿಳಾ ಹಾಕಿ ತಂಡದ ಪ್ರದರ್ಶನ ನಿರಾಶಾದಾಯಕವಾಗಿದೆ. 2024-25ರ ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ತಂಡವು 16 ಪಂದ್ಯಗಳಲ್ಲಿ ಕೇವಲ ಎರಡು ಗೆಲುವುಗಳನ್ನು ದಾಖಲಿಸಿದೆ. ಅಲ್ಲದೆ, ಮುಂದಿನ ಋತುವಿಗೆ ಅರ್ಹತೆ ಪಡೆಯಲು ವಿಫಲವಾಗಿದೆ.

ಫುಟ್‌ಬಾಲ್ ಬಿಕ್ಕಟ್ಟು: ಭಾಗೀದಾರರ ಜತೆ ಕ್ರೀಡಾ ಸಚಿವ ಮಾಂಡವೀಯ ಸಭೆ ನಾಳೆ

ನವದೆಹಲಿ (ಪಿಟಿಐ): ಭಾರತ ಫುಟ್‌ಬಾಲ್ ಈಗ ಎದುರಿಸುತ್ತಿರುವ ಬಿಕ್ಕಟ್ಟಿಗೆ ಪರಿಹಾರದ ಮಾರ್ಗ ಕಂಡುಕೊಳ್ಳಲು, ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರು, ಸಂಬಂಧಪಟ್ಟ ಎಲ್ಲ ಭಾಗೀದಾರರ ಸಭೆಯನ್ನು ಇದೇ 3ರಂದು ಕರೆದಿದ್ದಾರೆ.

ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್), ಅದರ ಮಾಜಿ ವಾಣಿಜ್ಯ ಪಾಲುದಾರ, ಐಎಸ್‌ಎಲ್ ಕ್ಲಬ್‌ಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಇಂಡಿಯನ್ ಸೂಪರ್ ಲೀಗ್ ಸೇರಿದಂತೆ ದೇಶಿ ಲೀಗ್‌ಗಳನ್ನು ನಡೆಸಲು ಎಐಎಫ್‌ಎಫ್‌ಗೆ ವಾಣಿಜ್ಯ ಪಾಲುದಾರ ಸಿಗದಿರುವುದು ಬಿಕ್ಕಟ್ಟು ಬಿಗಡಾಯಿಸಿದೆ.

'ಪರಿಹಾರವೊಂದನ್ನು ಕಂಡುಕೊಳ್ಳುವಂತೆ ಸಚಿವಾಲಯಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಇದು ತಾನು ನೀಡಿದ ನಿರ್ದೇಶನಗಳಿಗೆ ಅನುಗುಣವಾಗಿರಬೇಕೆಂದೂ ಹೇಳಿದೆ. ಭಾರತದ ಫುಟ್‌ಬಾಲ್‌ನ ವಿವಿಧ ಭಾಗೀದಾರ ಪ್ರತಿನಿಧಿಗಳ ಜೊತೆ ದಿನವಿಡೀ ನಡೆಯುವ ಸರಣಿ ಸಭೆ ಇದಾಗಿವೆ. ಅವರು ತಮ್ಮ ಕಳವಳದ ಬಗ್ಗೆ ಹೇಳಿಕೊಳ್ಳಬಹುದು. ಸಚಿವರು ಅದಕ್ಕೆ ಸಲಹೆಗಳನ್ನು ನೀಡಬಹುದು' ಎಂದು ಸಚಿವಾಲಯದ ಮೂಲ ತಿಳಿಸಿದೆ.

15 ವರ್ಷಗಳ ಮಾಸ್ಟರ್ ರೈಟ್ಸ್ ಒಪ್ಪಂದ (ಎಂಆರ್‌ಎ)ಕ್ಕೆ ಸಂಬಂಧಿಸಿ ಸ್ಪಷ್ಟತೆಯಿಲ್ಲದ ಕಾರಣ ತಾನು ಐಎಸ್‌ಎಲ್ ಆಯೋಜನೆ ತಡೆಹಿಡಿಯುವುದಾಗಿ ಅದನ್ನು ನಿರ್ವಹಿಸುತ್ತಿದ್ದ ಫೆಡರೇಷನ್‌ನ ವಾಣಿಜ್ಯ ಪಾಲುದಾರ ಫುಟ್‌ಬಾಲ್ ಸ್ಪೋರ್ಟ್ಸ್ ಡೆವಲಪ್‌ಮೆಂಟ್ ಲಿಮಿಟೆಡ್ ಜುಲೈನಲ್ಲಿ ಫೆಡರೇಷನ್‌ಗೆ ತಿಳಿಸಿದ್ದರಿಂದ ಬಿಕ್ಕಟ್ಟು ಕಾಣಿಸಿಕೊಂಡಿತ್ತು. ಎಫ್‌ಎಸ್‌ಡಿಎಲ್ ಜೊತೆಗಿನ ಒಪ್ಪಂದದ ಅವಧಿ ಇದೇ 8ರಂದು ಕೊನೆಗೊಳ್ಳಲಿದೆ.

ಕ್ರೀಡಾ ಸಾಧಕರಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ

ಆಯಾ ವರ್ಷವೇ ಏಕಲವ್ಯ ಪ್ರಶಸ್ತಿ ಪ್ರದಾನ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಏಕಲವ್ಯ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಪ್ರಿಯಾ ಎಚ್. ಮೋಹನ್, ಮಿಥುನ್ ಮಂಜುನಾಥ್, ಪ್ರತ್ಯನುಷ್ ತೋಮರ್, ಸಂಪತ್ ಪಾಸ್ಮೆಲ್, ಮೊಹಮ್ಮದ್ ರಾಹಿಲ್ (ಪರವಾಗಿ ತಂದೆ ನಾಸಿರುದ್ದೀನ್), ಧನಲಕ್ಷ್ಮೀ ಎ., ಅದಿತಿ ಅಶೋಕ್ (ಪರವಾಗಿ ತಾಯಿ ಮಹೇಶ್ವರಿ) ಮತ್ತು ಪ್ರಜ್ವಲ್ ದೇವ್ ಚಿತ್ರದಲ್ಲಿದ್ದಾರೆ. ಹಿಂದಿನ ಸಾಲಿನಲ್ಲಿ ಇರುವವರು– ಡಿವೈಇಎಸ್ ಆಯುಕ್ತ ಆರ್.ಚೇತನ್, ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಅರುಣ್ ಮಾಚಯ್ಯ, ಶಾಸಕ ರಿಜ್ವಾನ್ ಅರ್ಷದ್, ಕೆಒಎ ಅಧ್ಯಕ್ಷ ಕೆ. ಗೋವಿಂದರಾಜ್, ಸಚಿವ ರಾಮಲಿಂಗಾರೆಡ್ಡಿ, ಸಿ.ಎಂ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಡಿವೈಇಎಸ್ ಪ್ರಧಾನ ಕಾರ್ಯದರ್ಶಿ ನವೀನರಾಜ್ ಸಿಂಗ್ ಚಿತ್ರ: ಪ್ರಶಾಂತ್ ಎಚ್.ಜಿ.

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇನ್ನು ಮುಂದೆ ಆಯಾಯ ವರ್ಷವೇ ಏಕಲವ್ಯ ಪ್ರಶಸ್ತಿ ನೀಡಲಾಗುವುದು. ಈ ಬಗ್ಗೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಇಲ್ಲಿ ಹೇಳಿದರು.

ಯವನಿಕಾದಲ್ಲಿ 2022 ಮತ್ತು 2023ನೇ ಸಾಲಿನ ಏಕಲವ್ಯ, ಜೀವಮಾನ ಸಾಧನೆ ಪ್ರಶಸ್ತಿ, ಕರ್ನಾಟಕ ಕ್ರೀಡಾ ರತ್ನ ಮತ್ತು ಕ್ರೀಡಾ ಪೋಷಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ತಡವಾಗಿ ಪ್ರಶಸ್ತಿ ಕೊಟ್ಟರೆ ಹಳೆಯದಾಗುತ್ತದೆ. ಕೆಲವರು ನಿವೃತ್ತರಾದರೂ ಆಗಿರಬಹುದು' ಎಂದಾಗ ಸಭೆಯಲ್ಲಿ ನಗೆಯ ಅಲೆಗಳೆದ್ದವು.

'ಅಂದೂ ಜಾತಿ ವ್ಯವಸ್ಥೆ ಇತ್ತು...'

'ಏಕಲವ್ಯನ ಕಥೆ ಕೇಳಿದ್ದೀರಾ' ಎಂದು ಹೆಚ್ಚಿನ ಸಂಖ್ಯೆಯಲ್ಲಿ ಯುವ ಕ್ರೀಡಾಪಟುಗಳಿಗೆ ಕೇಳಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 'ಏಕಲವ್ಯ ಗುರುಗಳಿಲ್ಲದೇ ತರಬೇತಿ ಪಡೆದವನು. ಗುರುಗಳ ಮಣ್ಣಿನ ವಿಗ್ರಹ ಮಾಡಿ ಪೂಜಿಸಿ ಸ್ವಯಂ ಪರಿಶ್ರಮದಿಂದ ಅಭ್ಯಾಸ ಮಾಡಿದವನು. ದ್ರೋಣರು ಗುರುದಕ್ಷಿಣೆಯಾಗಿ ಏಕಲವ್ಯನ ಹೆಬ್ಬೆರಳನ್ನು ಕೇಳಿದರು. ಬಿಲ್ಗಾರರಿಗೆ ಹೆಬ್ಬೆರಳೇ ಮುಖ್ಯ. ಅರ್ಜುನ ರಾಜಕುಮಾರ. ಏಕಲವ್ಯ ಬೇಡ ಜನಾಂಗ. ಈಗ ಎಸ್‌ಟಿ ಸಮುದಾಯ. ಆ ಕಾಲದಲ್ಲೂ ಜಾತಿ ವ್ಯವಸ್ಥೆಯಿತ್ತು' ಎಂದು ಹೇಳಿದರು.

'ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದವರಿಗೆ ₹6 ಕೋಟಿ ನೀಡಲಾಗುವುದು. ಗ್ರೂಪ್ 'ಎ' ಮತ್ತು 'ಬಿ' ವೃಂದದ ಸರ್ಕಾರಿ ಉದ್ಯೋಗವನ್ನೂ ನೀಡಲಾಗುವುದು, ಬೆಳ್ಳಿ ಗೆದ್ದವರಿಗೆ ₹4 ಕೋಟಿ ಮತ್ತು ಕಂಚು ಗೆದ್ದವರಿಗೆ ₹3 ಕೋಟಿ ನಗದು ಪುರಸ್ಕಾರ ನೀಡಲಾಗುವುದು' ಎಂದು ಪುನರುಚ್ಚರಿಸಿದ ಸಿದ್ದರಾಮಯ್ಯ ಅವರು, 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗಾಗಿ 60 ಮಂದಿಯನ್ನು ಆಯ್ಕೆ ಮಾಡಿ ತರಬೇತಿ ನೀಡಲಾಗುತ್ತಿದೆ. ತರಬೇತಿಯ ವೇಳೆ ಪ್ರತಿ ವರ್ಷ ಪ್ರತಿ ಕ್ರೀಡಾಪಟುವಿಗೆ ₹10 ಲಕ್ಷ ನೀಡಲಾಗುತ್ತದೆ ಎಂದರು.

ಪ್ರಶಸ್ತಿ ಪುರಸ್ಕೃತರು

2022ನೇ ಸಾಲಿನ ಏಕಲವ್ಯ ಪುರಸ್ಕೃತರು: ಪ್ರಿಯಾ ಎಚ್. ಮೋಹನ್ (ಅಥ್ಲೆಟಿಕ್ಸ್), ಮಿಥುನ್ ಮಂಜುನಾಥ್ (ಬ್ಯಾಡ್ಮಿಂಟನ್), ಪ್ರತ್ಯನುಷ್ ತೋಮರ್, ಸಂಪತ್ ವಿ.ಪಾಸ್ಮೆಲ್ (ಸೈಕ್ಲಿಂಗ್), ಮೊಹಮ್ಮದ್ ರಾಹಿಲ್ (ಹಾಕಿ/ ಪರ ತಂದೆ ನಾಸಿರುದ್ದೀನ್ ಸ್ವೀಕರಿಸಿದರು), ಧನಲಕ್ಷ್ಮಿ (ಕಯಾಕಿಂಗ್ ಮತ್ತು ಕೆನೊಯಿಂಗ್), ಅದಿತಿ ಅಶೋಕ್ (ಗಾಲ್ಫ್), ಎಸ್.ಡಿ.ಪ್ರಜ್ವಲ್ ದೇವ್ (ಟೆನಿಸ್), ಯುಕ್ತಿ ರಾಜೇಂದ್ರ (ಶೂಟಿಂಗ್), ರಿಧಿಮಾ ವೀರೇಂದ್ರಕುಮಾರ್ (ಈಜು), ಮಣಿಕಂದನ್ ಕೆ (ಪ್ಯಾರಾ ಕ್ಲೈಂಬಿಂಗ್), ಎಲ್.ಎಂ.ಮನೋಜ್ (ವಾಲಿಬಾಲ್), ಪ್ರವಲಿಕಾ ವಿ.ಕುಷ್ಟಗಿ (ಟೇಕ್ವಾಂಡೊ), ನಿಂಗಪ್ಪ ಪಿ.ಗೇಣೆನ್ನವರ (ಕುಸ್ತಿ), ರಕ್ಷಿತಾ ಆರ್. (ಪ್ಯಾರಾ ಅಥ್ಲೆಟಿಕ್ಸ್).

2023: ನಿಹಾಲ್ ಜೋಯೆಲ್ (ಅಥ್ಲೆಟಿಕ್ಸ್), ಕೆ.ಸಾಯಿ ಪ್ರತೀಕ್, ಆರ್. ಸಂಜನಾ (ಬ್ಯಾಸ್ಕೆಟ್‌ಬಾಲ್), ಅನುಪಮಾ ಗುಳೇದ (ಸೈಕ್ಲಿಂಗ್), ನೈದಿಲೆ ಬಿ (ಫೆನ್ಸಿಂಗ್), ಉಜ್ವಲ್ ನಾಯ್ಡು (ಜಿಮ್ನಾಸ್ಟಿಕ್ಸ್), ಬಿ.ಆಭರಣ ಸುದೇವ್ (ಹಾಕಿ), ದಾದಾಪೀರ್ (ಕಯಾಕಿಂಗ್/ ಕೆನೋಯಿಂಗ್), ದಿವ್ಯಾ ಟಿ.ಎಸ್. (ಶೂಟಿಂಗ್), ಅನೀಶ್ ಎಸ್.ಗೌಡ (ಈಜು), ಪ್ರಿಯಾಂಕಾ ಎಸ್. (ವಾಲಿಬಾಲ್), ಐಶ್ವರ್ಯ ಪಿ.ಕರಿಗಾರ (ಕುಸ್ತಿ), ಉಷಾ ಬಿ.ಎನ್. (ವೇಟ್ ಲಿಫ್ಟಿಂಗ್), ಶ್ರೀಧರ ನಾಗಪ್ಪ ಮಾಳಗಿ (ಪ್ಯಾರಾ ಈಜು), ಅಮ್ಮು ಮೋಹನ್ (ಪ್ಯಾರಾ ಬ್ಯಾಡ್ಮಿಂಟನ್).
(ಪ್ರಶಸ್ತಿಯು ₹4ಲಕ್ಷ ನಗದು, ಏಕಲವ್ಯ ಪ್ರತಿಮೆ, ಪ್ರಮಾಣಪತ್ರ ಒಳಗೊಂಡಿದೆ)

ತರಬೇತಿಗಾಗಿ ಜೀವಮಾನ ಸಾಧನೆ

2022 ಬಿ.ಎನ್.ಸುಧಾಕರ್ (ಬ್ಯಾಡ್ಮಿಂಟನ್), ಆರ್.ರಾಜನ್ (ಬ್ಯಾಸ್ಕೆಟ್‌ಬಾಲ್), ಕೃಷ್ಣ (ಫುಟ್‌ಬಾಲ್), ಕಬಡ್ಡಿ (ಈಶ್ವರ ಅಂಗಡಿ), ಉಮೇಶ ಕಲಘಟಗಿ (ಈಜು). **2023:** ರಾಹುಲ್ ಬಿ. (ಪ್ಯಾರಾ ಅಥ್ಲೆಟಿಕ್ಸ್), ಎಚ್.ಎನ್.ಕೃಷ್ಣಮೂರ್ತಿ (ಕಬಡ್ಡಿ), ಕೆ.ಸತ್ಯನಾರಾಯಣ (ಬ್ಯಾಸ್ಕೆಟ್‌ಬಾಲ್), ಎಚ್.ಬಿ.ರವೀಶ್ (ಹಾಕಿ).
(₹3 ಲಕ್ಷ ನಗದು, ಪ್ರತಿಮೆ, ಪ್ರಶಂಸಾ ಪತ್ರ)

ಕರ್ನಾಟಕ ಕ್ರೀಡಾ ರತ್ನ: 2022: ದಿವ್ಯಾ ಎಂ.ಎಸ್. (ಬಾಲ್ ಬ್ಯಾಡ್ಮಿಂಟನ್), ಭಾಸ್ಕರ ದೇವಾಡಿಗ (ಕಂಬಳ), ರಾಯಪ್ಪ ಧರೆಪ್ಪ ಅಬ್ಬುನವರ (ಸಂಗ್ರಾಣಿ ಕಲ್ಲು ಎತ್ತುವುದು), ಚೈತ್ರಾ ಬಿ. (ಕೊಕ್ಕೊ), ವಿಠಲ್ ಮೇಟಿ (ಕಬಡ್ಡಿ), ಶಂಕರಪ್ಪ ಕೆ. (ಮಲ್ಲಕಂಬ), ಗೋಪವ್ವ ಮಂಜುನಾಥ ಖೋಡ್ಕಿ (ಕುಸ್ತಿ), ಮೊಹಮ್ಮದ್ ಫಿರೋಜ್ ಶೇಖ್ (ಯೋಗ). **2023:** ಗೌತಮ್ ಎಂ.ಕೆ. (ಕೊಕ್ಕೊ), ಸುನಿಲ್ ಬಿ.ಪಡತಾರೆ (ಕುಸ್ತಿ), ವಿನಾಯಕ ಎಂ.ಕೊಂಗಿ (ಯೋಗ), ಮೇಘನಾ ಎಚ್.ಎಂ. (ಬಾಲ್‌ಬ್ಯಾಡ್ಮಿಂಟನ್), ಆತ್ಮೀಯಾ ಎಂ.ಬಿ. (ಕಬಡ್ಡಿ), ಮಂಜುಳಾ ಹಣಮಂತ ಹುಲಗಣ್ಣವರ (ಮಲ್ಲಕಂಬ). **(₹2 ಲಕ್ಷ ನಗದು, ಪ್ರತಿಮೆ ಮತ್ತು ಪ್ರಶಂಸಾಪತ್ರ)**
2023: ಕ್ರೀಡಾ ಪೋಷಕ ಪ್ರಶಸ್ತಿ: ಶೇಷಾದ್ರಿಪುರಂ ಶಿಕ್ಷಣ ದತ್ತಿ, ಬೆಂಗಳೂರು. **(₹10 ಲಕ್ಷ ನಗದು, ಪ್ರಶಂಸಾಪತ್ರ).**

'ನಾನು ಬಾಲ್ಯದಲ್ಲಿ ಎಲ್ಲ ಆಟಗಳಲ್ಲಿ ಭಾಗವಹಿಸುತ್ತಿದ್ದೆ. ಹೈಸ್ಕೂಲ್‌ನಲ್ಲಿ ಜಗಳಗಂಟನಾಗಿದ್ದೆ. ಎಲ್ಲದರಲ್ಲೂ ಭಾಗವಹಿಸುತ್ತಿದ್ದ ಕಾರಣ ಯಾವುದರಲ್ಲೂ ಉತ್ತಮ ಕ್ರೀಡಾಪಟುವಾಗಲು ಸಾಧ್ಯವಾಗಲಿಲ್ಲ. ನೀವೆಲ್ಲ ಒಂದೇ ಕ್ರೀಡೆ ಆಯ್ಕೆ ಮಾಡಿ ಅದರಲ್ಲಿ ಸಾಧನೆಗೆ ಶ್ರಮಿಸಿ' ಎಂದು ಕಿವಿಮಾತು ಹೇಳಿದರು.

ನಾಕೌಟ್‌ಗೆ ರಾಜ್ಯ ವನಿತೆಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ತಂಡವು ಬಿಸಿಸಿಐ 23 ವರ್ಷದೊಳಗಿನ ಮಹಿಳೆಯರ ಟಿ20 ಟ್ರೋಫಿ ಟೂರ್ನಿಯಲ್ಲಿ ಪ್ರಿಕ್ವಾರ್ಟರ್‌ಫೈನಲ್ ಪ್ರವೇಶಿಸಿತು.

ಹರಿಯಾಣದ ಸುಲ್ತಾನಪುರದಲ್ಲಿ ಸೋಮವಾರ ನಡೆದ ಎಲೀಟ್ ಗ್ರೂಪ್ ಸಿ ಪಂದ್ಯದಲ್ಲಿ ಕರ್ನಾಟಕ ತಂಡವು 5 ವಿಕೆಟ್‌ಗಳಿಂದ ತಮಿಳುನಾಡು ಕ್ರಿಕೆಟ್ ಸಂಸ್ಥೆಯ ವಿರುದ್ಧ ಪರಾಭವಗೊಂಡಿತು.

ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ರಾಜ್ಯ ತಂಡವು ಐಶ್ವರ್ಯ ಲಕ್ಷ್ಮಿ ಆರ್. (14ಕ್ಕೆ3) ಅವರ ಪರಿಣಾಮಕಾರಿ ಬೌಲಿಂಗ್ ಎದುರು ನಿಗದಿತ ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 110 ರನ್ ಗಳಿಸಿತು. ಸಾಧಾರಣ ಗುರಿ ಬೆನ್ನಟ್ಟಿದ ತಮಿಳುನಾಡು ತಂಡವು 19.1 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 113 ರನ್ ಗಳಿಸಿ, ಗೆಲುವಿನ ನಗೆ ಬೀರಿತು.

ಗುಂಪು ಹಂತದ ಎಲ್ಲ 5 ಪಂದ್ಯಗಳಲ್ಲಿ ಗೆಲುವು ಸಾಧಿಸಿದ ತಮಿಳುನಾಡು ತಂಡವು (20 ಪಾಯಿಂಟ್ಸ್) ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಪಡೆದರೆ, ಮೂರು ಪಂದ್ಯ ಗೆದ್ದು ಎರಡರಲ್ಲಿ ಸೋತ ರೋಷಿಣಿ ಕಿರಣ್ ಪಡೆಯು (12 ಅಂಕ) ಎರಡನೇ ಸ್ಥಾನ ಪಡೆಯಿತು.

ಈ ಎರಡೂ ತಂಡಗಳು ಇದೇ 5ರಿಂದ ಗುಜರಾತ್‌ನ ಅಹಮದಾಬಾದ್‌ನಲ್ಲಿ ನಡೆಯಲಿರುವ ಪ್ರಿಕ್ವಾರ್ಟರ್ ಸುತ್ತಿಗೆ ಅರ್ಹತೆ ಪಡೆದುಕೊಂಡವು. ರಾಜ್ಯ ತಂಡವು ನಾಕೌಟ್ ಸುತ್ತಿನಲ್ಲಿ ಪಂಜಾಬ್ ವಿರುದ್ಧ ಆಡಲಿದೆ.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 110 (ನಿಕಿ ಪ್ರಸಾದ್ 37, ಪ್ರೇರಣಾ ಜಿ.ಆರ್. 31; ಐಶ್ವರ್ಯ ಲಕ್ಷ್ಮಿ ಆರ್. 14ಕ್ಕೆ3). ತಮಿಳುನಾಡು: 19.1 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 113 (ಎನ್.ಎಸ್.ಸುಬ್ಬಲಕ್ಷ್ಮಿ 32, ಸಿ.ಶುಶಾಂಧಿಕಾ 25; ಅನನ್ಯಾ ಹೆಗ್ಡೆ 17ಕ್ಕೆ1).

ಪ್ರತಿಕಾ ರಾವಲ್

ರೇಣುಕಾ ಸಿಂಗ್

ವಿಶ್ವಕಪ್ ಗೆದ್ದ ಮೂವರು ಆಟಗಾರ್ತಿಯರಿಗೆ ಬಡ್ತಿ

ನವದೆಹಲಿ (ಪಿಟಿಐ): ಏಕದಿನ ವಿಶ್ವಕಪ್ ವಿಜೇತ ಭಾರತ ಮಹಿಳಾ ಕ್ರಿಕೆಟ್ ತಂಡದಲ್ಲಿದ್ದ ಪ್ರತಿಕಾ ರಾವಲ್, ಸ್ನೇಹ ರಾಣಾ ಮತ್ತು ರೇಣುಕಾ ಸಿಂಗ್ ಠಾಕೂರ್ ಅವರು ಭಾರತೀಯ ರೈಲ್ವೆಯಲ್ಲಿ ವಿಶೇಷ ಕರ್ತವ್ಯಾಧಿಕಾರಿಗಳಾಗಿ (ಒಎಸ್‌ಡಿ) ಬಡ್ತಿ ಪಡೆದಿದ್ದಾರೆ.

ಸ್ನೇಹ ರಾಣಾ

ಈ ಮೂವರು ಆಟಗಾರ್ತಿಯರಿಗೆ ರೈಲ್ವೆ ವಿಶೇಷ ಮುಂಬಡ್ತಿ ನೀಡಿದೆ.

ಇದಕ್ಕೂ ಮೊದಲು ರಾವಲ್ ಅವರು ರೈಲ್ವೆನಲ್ಲಿ ಹಿರಿಯ ಗುಮಾಸ್ತರಾಗಿ, ರೇಣುಕಾ ಮತ್ತು ರಾಣಾ ಅವರು ಕ್ರಮವಾಗಿ ಉತ್ತರ ರೈಲ್ವೆಯಲ್ಲಿ ಜೂನಿಯರ್ ಗುಮಾಸ್ತ ಮತ್ತು ಟಿಕೆಟ್ ಗುಮಾಸ್ತ ಹುದ್ದೆಯಲ್ಲಿದ್ದರು.

ಡುಪ್ಲಾಂಟಿಸ್ 'ವರ್ಷದ ಅಥ್ಲೀಟ್'

ಮೊನಾಕೊ (ಎಎಫ್‌ಪಿ): ಸ್ವೀಡನ್‌ನ ಪೋಲ್‌ವಾಲ್ಟ್ ತಾರೆ ಅರ್ಮಾಂಡ್ ಡುಪ್ಲಾಂಟಿಸ್ ಹಾಗೂ ಅಮೆರಿಕದ ಸಿಡ್ನಿ ಮೆಕ್‌ಲಾಫ್ಲಿನ್ ಲೆವ್ರೊನ್ ಅವರು ವಿಶ್ವ ಅಥ್ಲೆಟಿಕ್ಸ್ ಕೊಡಮಾಡುವ 2025ನೇ ಸಾಲಿನ 'ವರ್ಷದ ಅಥ್ಲೀಟ್' ಗೌರವಕ್ಕೆ ಪಾತ್ರರಾಗಿದ್ದಾರೆ.

ಭಾನುವಾರ ಮೊನಾಕೊದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಿತು. 'ಸೋಲಿಲ್ಲದ ಸರದಾರ' ಡುಪ್ಲಾಂಟಿಸ್ ಅವರು ಟೋಕಿಯೊದಲ್ಲಿ ಈ ವರ್ಷದ ಸೆಪ್ಟೆಂಬರ್ ನಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ 6.30ಮೀ. ಜಿಗಿದು 14ನೇ ಬಾರಿಗೆ ವಿಶ್ವ ದಾಖಲೆ ಸ್ಥಾಪಿಸಿದ್ದಾರೆ.

ಪ್ರಶಸ್ತಿಯೊಂದಿಗೆ ಅರ್ಮಾಂಡ್ ಡುಪ್ಲಾಂಟಿಸ್

26 ವರ್ಷ ವಯಸ್ಸಿನ ಡುಪ್ಲಾಂಟಿಸ್ ಅವರು ಈ ವರ್ಷದಲ್ಲಿ ಪೋಲ್‌ವಾಲ್ಟ್ ಹೊರಾಂಗಣ ಮತ್ತು ಒಳಾಂಗಣ ಸ್ಪರ್ಧೆಗಳಲ್ಲಿ ವಿಶ್ವ ಚಾಂಪಿಯನ್ ಆಗಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ 16 ಕೂಟಗಳಲ್ಲಿ ಚಿನ್ನ ಜಯಿಸಿದ್ದು, ಅಜೇಯರಾಗಿ ಉಳಿದಿದ್ದಾರೆ.

ವರ್ಷದ ಅಥ್ಲೀಟ್ ಜೊತೆಗೆ ವರ್ಷದ 'ಶ್ರೇಷ್ಠ ಫೀಲ್ಡ್ ಅಥ್ಲೀಟ್' ಗೌರವಕ್ಕೂ ಅವರು ಭಾಜನರಾಗಿದ್ದಾರೆ ಅವರು 2020 ಮತ್ತು 2022ರಲ್ಲಿಯೂ ವರ್ಷದ ಅಥ್ಲೀಟ್ ಗೌರವಕ್ಕೆ ಭಾಜನರಾಗಿದ್ದರು.

ಎರಡು ಬಾರಿಯ ಒಲಿಂಪಿಕ್ ಚಾಂಪಿಯನ್ ಹಾಗೂ ವಿಶ್ವದಾಖಲೆ ಹೊಂದಿರುವ ಅಮೆರಿಕದ ಓಟಗಾರ್ತಿ ಲೆವ್ರೊನ್ ಅವರು ಮಹಿಳಾ ವಿಭಾಗದಲ್ಲಿ ಈ ಗೌರವಕ್ಕೆ ಭಾಜನರಾಗಿದ್ದಾರೆ. 26 ವರ್ಷ ವಯಸ್ಸಿನ ಲೆವ್ರೊನ್ ಅವರು ವಿಶ್ವ ಚಾಂಪಿಯನ್‌ಷಿಪ್‌ನ 400 ಮೀ. ಓಟ ಹಾಗೂ 400 ಮೀ. ಹರ್ಡಲ್ಸ್ ಸ್ಪರ್ಧೆಗಳೆರಡರಲ್ಲೂ ಚಿನ್ನ ಗೆದ್ದ ಮೊದಲ ಅಥ್ಲೀಟ್ ಆಗಿದ್ದಾರೆ. ಕಳೆದೆರಡು ವರ್ಷಗಳಲ್ಲಿ ಸ್ಪರ್ಧಿಸಿದ ಎಲ್ಲ ಸ್ಪರ್ಧೆಗಳಲ್ಲಿಯೂ ಅವರು ಸ್ವರ್ಣ ಜಯಿಸಿದ್ದಾರೆ.